ಶುಕ್ರವಾರ, ಡಿಸೆಂಬರ್ 17, 2021 | ₹ 6.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಒಮೈಕ್ರಾನ್: ರಾಜ್ಯದಲ್ಲಿ ಪ್ರಕರಣಗಳ ಸಂಖ್ಯೆ 8ಕ್ಕೆ ಏರಿಕೆ

ಒಂದೇ ದಿನ ಐವರಿಗೆ ಸೋಂಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಐವರು ಕೊರೊನಾ ವೈರಾಣುವಿನ ರೂಪಾಂತರ ತಳಿ ಓಮೈಕ್ರಾನ್ ಸೋಂಕು ಹೊಂದಿರುವುದು ಗುರುವಾರ ಪತ್ತೆಯಾಗಿದೆ. ಇದರಿಂದ ರಾಜ್ಯದಲ್ಲಿ ಪತ್ತೆಯಾದ ಓಮೈಕ್ರಾನ್ ಪ್ರಕರಣಗಳ ಸಂಖ್ಯೆ ಎಂಟಕ್ಕೆ ಏರಿಕೆಯಾಗಿದೆ.

ಬ್ರಿಟನ್‌ನಿಂದ ಡಿ.13ರಂದು ಬಂದಿದ್ದ 19 ವರ್ಷದ ಯುವತಿ, ನೈಜೀರಿಯಾದಿಂದ ಬೆಂಗಳೂರಿಗೆ ಬಂದಿದ್ದ 52 ವರ್ಷದ ವ್ಯಕ್ತಿಯೂ ಓಮೈಕ್ರಾನ್ ಸೋಂಕಿತರಾಗಿದ್ದಾರೆ. ಈ ವ್ಯಕ್ತಿಯು ನಗರದ ವಿಮಾನನಿಲ್ದಾಣದ ಮೂಲಕ ಬೆಳಗಾವಿಗೆ ಡಿ. 14ರಂದು ತೆರಳಿದ್ದರು.

ದೆಹಲಿಯಿಂದ ಬಂದಿದ್ದ 70 ವರ್ಷದ ಮಹಿಳೆ, 36 ವರ್ಷದ ವ್ಯಕ್ತಿ ಹಾಗೂ ದಕ್ಷಿಣ ಆಫ್ರಿಕಾದಿಂದ ಮರಳಿರುವ 33 ವರ್ಷದ ವ್ಯಕ್ತಿ ಓಮೈಕ್ರಾನ್ ಸೋಂಕು ಹೊಂದಿರುವುದು ದೃಢಪಟ್ಟಿದೆ.

12 ನೇರ, 27 ಪರೋಕ್ಷ ಸಂಪರ್ಕಿತರು

ಬೆಂಗಳೂರು: ಕೊರೊನಾ ವೈರಾಣುವಿನ ರೂಪಾಂತರ ತಳಿ ಓಮೈಕ್ರಾನ್ ಸೋಂಕು ದೃಢಪಟ್ಟಿರುವ ಐದು ಮಂದಿಗೆ ಒಟ್ಟು 12 ನೇರ ಸಂಪರ್ಕಿತರು ಮತ್ತು 27 ಪರೋಕ್ಷ ಸಂಪರ್ಕಿತರಿದ್ದಾರೆ.



ಬ್ರಿಟನ್‌ನಿಂದ ಕೋವಿಡ್ ನೆಗೆಟಿವ್ ವರದಿ ಪಡೆದು ಡಿ.13ರಂದು ನಗರಕ್ಕೆ ಬಂದಿದ್ದ 19 ವರ್ಷದ ಯುವತಿಯನ್ನು (ರೋಗಿ ಸಂಖ್ಯೆ-4) ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಕೋವಿಡ್ ಪರೀಕ್ಷೆಗೆ ಒಳಪಡಿಸಿದಾಗ ಸೋಂಕು ದೃಢಪಟ್ಟಿದೆ. ಕೂಡಲೇ ಅವರನ್ನು ನಗರದ ಬೌರಿಂಗ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಳಿಕ ಅವರ ಮನವಿಯಂತೆ ಖಾಸಗಿ ಆಸ್ಪತ್ರೆಗೆ ಸ್ಥಳಾಂತರ ಮಾಡಲಾಗಿದ್ದು, ಇವರಿಗೆ ನೇರ ಅಥವಾ ಪರೋಕ್ಷ ಸಂಪರ್ಕಿತರಿಲ್ಲ.

ನೈಜೀರಿಯಾದಿಂದ ಡಿ.13ರಂದು ನೆಗೆಟಿವ್ ವರದಿ ಜೊತೆ ಬಂದಿದ್ದ 52 ವರ್ಷದ ವ್ಯಕ್ತಿಯನ್ನು(ರೋಗಿ ಸಂಖ್ಯೆ-5) ಕೆಐಎ ವಿಮಾನ ನಿಲ್ದಾಣದಲ್ಲಿ ಪರೀಕ್ಷೆಗೆ ಒಳಪಡಿಸಲಾಗಿದೆ. ಅಲ್ಲಿಂದ ಬೆಳಗಾವಿಗೆ ಬೇರೆ ವಿಮಾನದಲ್ಲಿ ಅವರು ಪ್ರಯಾಣ ಬೆಳಸಿದರು. ಮರುದಿನ ಅವರಿಗೆ ಕೋವಿಡ್ ದೃಢಪಟ್ಟಿರುವ ವರದಿ ದೊರೆಯಿತು. ಕೂಡಲೇ ಅವರನ್ನು ಪ್ರತ್ಯೇಕ ಮನೆಯಲ್ಲಿ ಇರಿಸಲಾಯಿತು. ಬಳಿಕ ಬೆಳಗಾವಿ ಜಿಲ್ಲಾಸ್ಪತ್ರೆಯಲ್ಲಿ ಪ್ರತ್ಯೇಕವಾಗಿ ಇರಿಸಲಾಗಿದೆ. ಇವರಿಗೆ ಇಬ್ಬರು ನೇರ ಸಂಪರ್ಕಿತರಿದ್ದು, ಅವರನ್ನು ಪ್ರತ್ಯೇಕವಾಗಿ ಇರಿಸಲಾಗಿದೆ.

ನವದೆಹಲಿಯಲ್ಲಿ ಮದುವೆ ಮುಗಿಸಿಕೊಂಡು ಡಿ.3ರಂದು ಬಂದಿದ್ದ 70 ವರ್ಷದ ಮಹಿಳೆ (ರೋಗಿ ಸಂಖ್ಯೆ-6) ಮತ್ತು 36 ವರ್ಷದ ವ್ಯಕ್ತಿ (ರೋಗಿ ಸಂಖ್ಯೆ-7) ಮಹದೇವಪುರದ ಖಾಸಗಿ ಪ್ರಯೋಗಾಲಯದಲ್ಲಿ ಪರೀಕ್ಷೆ ಮಾಡಿಸಿದ್ದರು. ದೆಹಲಿಯಲ್ಲಿ ಓಮೈಕ್ರಾನ್ ಸೋಂಕಿತರಿಗೆ ಇವರು ನೇರ ಸಂಪರ್ಕಿತರಾಗಿದ್ದರು. ಮೂವರು ಪ್ರಾಥಮಿಕ (ಇಬ್ಬರು ಪಾಸಿಟಿವ್) ಮತ್ತು ಇಬ್ಬರು ಪರೋಕ್ಷ ಸಂಪರ್ಕಿತರಿದ್ದಾರೆ.

ದಕ್ಷಿಣ ಆಫ್ರಿಕಾದಿಂದ ಡಿ.8ರಂದು ದೆಹಲಿಗೆ ಬಂದು ಅಲ್ಲಿಂದ ಅದೇ ದಿನ ಬೆಂಗಳೂರಿಗೆ ಬಂದಿದ್ದ 33 ವರ್ಷದ ವ್ಯಕ್ತಿ (ರೋಗಿ ಸಂಖ್ಯೆ-8) ದೆಹಲಿಯಲ್ಲೇ ಕೋವಿಡ್ ಪರೀಕ್ಷೆಗೆ ಒಳಗಾಗಿದ್ದರು. ನೆಗೆಟಿವ್ ವರದಿ ಹಿಡಿದು ಬಂದಿದ್ದರು. ಡಿ.10ರಂದು ರೋಗ ಲಕ್ಷಣಗಳು ಕಾಣಿಸಿಕೊಂಡಿದ್ದರಿಂದ ಖಾಸಗಿ ಪ್ರಯೋಗಾಲಯದಲ್ಲಿ ಪರೀಕ್ಷೆ ಮಾಡಿಸಿಕೊಂಡರು. ಡಿ.11ರಂದು ಪಾಸಿಟಿವ್ ವರದಿ ಬಂದಿದ್ದರಿಂದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ನಾಲ್ವರು ನೇರ ಸಂಪರ್ಕಿತರು ಮತ್ತು 25 ಮಂದಿ ಪರೋಕ್ಷ ಸಂಪರ್ಕಿತರನ್ನು ಅವರು ಹೊಂದಿದ್ದಾರೆ.

ಓಮೈಕ್ರಾನ್: ಮತ್ತಷ್ಟು ಮುನ್ನೆಚ್ಚರಿಕೆ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮತ್ತೆ ಐದು ಓಮೈಕ್ರಾನ್ ಸೋಂಕು ಪ್ರಕರಣಗಳು ಗುರುವಾರ ಪತ್ತೆಯಾಗಿರುವುದರಿಂದ, ಸೋಂಕಿತರನ್ನು ಪ್ರತ್ಯೇಕಿಸಿದರಷ್ಟೇ ಸಾಲದು, ಸೋಂಕು ಹರಡದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ತುರ್ತಾಗಿ ಅನುಸರಿಸಬೇಕು ಎಂದು ತಜ್ಞರು ಸಲಹೆ ನೀಡಿದ್ದಾರೆ.

ಗುರುವಾರ ರೂಪಾಂತರಿ ತಳಿಯ ಸೋಂಕು ಪತ್ತೆಯಾಗಿರುವ ಐವರೂ ವಿಮಾನದಲ್ಲಿ ಪ್ರಯಾಣಿಸಿದವರು. ಅವರಲ್ಲಿ ಇಬ್ಬರು ಆಫ್ರಿಕಾ ಖಂಡಕ್ಕೆ ಹಾಗೂ ಒಬ್ಬರು ಬ್ರಿಟನ್‌ಗೆ ಪ್ರಯಾಣ ಬೆಳೆಸಿದ್ದವರು. ಇಬ್ಬರು ದೆಹಲಿಯಿಂದ ಬಂದವರು. ಇವರಷ್ಟೇ ಅಲ್ಲದೇ ಬೌರಿಂಗ್ ಮತ್ತು ಲೇಡಿ ಕರ್ಜನ್ ವೈದ್ಯಕೀಯ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿರುವ ಓಮೈಕ್ರಾನ್ ವಾರ್ಡ್‌ನಲ್ಲಿರುವ 10 ಮಂದಿ ಈ ಸೋಂಕು ಹೊಂದಿರುವ ಶಂಕೆ ಇದೆ. ಅವರಿಂದ ಸಂಗ್ರಹಿಸಿರುವ ಮಾದರಿಯನ್ನು ವೈರಾಣು ವಂಶವಾಹಿ ಸಂರಚನೆ ವಿಶ್ಲೇಷಣೆಗೆ (ಜಿನೋಮ್ ಸೀಕ್ವೆನ್ಸಿಂಗ್) ಕಳುಹಿಸಲಾಗಿದ್ದು, ಫಲಿತಾಂಶ ಇನ್ನೂ ಬಂದಿಲ್ಲ.

ಐದು ಹೊಸ ಪ್ರಕರಣಗಳು ಪತ್ತೆಯಾದರೂ ಗಾಬರಿ ಆಗಬೇಕಿಲ್ಲ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಸೋಂಕು ನಿಯಂತ್ರಣಕ್ಕೆ ಈಗ ಜಾರಿಯಲ್ಲಿರುವ ಸೋಂಕು ನಿಯಂತ್ರಣ ಕ್ರಮಗಳಲ್ಲೂ ಕೆಲವೊಂದು ಲೋಪಗಳಿರುವುದು ಕಂಡುಬಂದಿದೆ. ಸೋಂಕು ದೃಢಪಟ್ಟ 52 ವರ್ಷದ ವ್ಯಕ್ತಿಯು ನೈಜೀರಿಯಾದಿಂದ ಡಿ. 13ರಂದು ನಗರಕ್ಕೆ ಬಂದಿದ್ದರು. ಅವರಿಗೆ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಕೋವಿಡ್ ಪರೀಕ್ಷೆ ನಡೆಸಲಾಗಿತ್ತು. ವರದಿ ಬರುವ ಮುನ್ನವೇ ಅಲ್ಲಿಂದ ಬೆಳಗಾವಿಗೆ ಹೋಗಲು ಎರಡೇ ಗಂಟೆಯಲ್ಲಿ ಅನುಮತಿ ನೀಡಲಾಗಿತ್ತು. ಬಳಿಕ ಅವರಲ್ಲಿ ಸೋಂಕು ಇರುವುದು ದೃಢಪಟ್ಟಿತ್ತು.

ತಾಂತ್ರಿಕ ಸಲಹಾ ಸಮಿತಿಯು ರೋಗ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಹಾಗೂ ಮಾದರಿ ಕಾರ್ಯವಿಧಾನಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆಗೆ ನಿರ್ಬಂಧ ಹೇರುವಂತೆ ಸಮಿತಿ ಶಿಫಾರಸು ಮಾಡಿದೆ.

ರಾಜ್ಯ ಕೋವಿಡ್ ಕಾರ್ಯಪಡೆಯ ಸದಸ್ಯ ಡಾ.ಸಿ.ಎನ್.ಮಂಜುನಾಥ್ ಅವರ ಪ್ರಕಾರ, ಕೋವಿಡ್‌ನ ಮೊದಲ ಹಾಗೂ ಎರಡನೇ ಅಲೆ ಆರಂಭವಾದ ಕೆಲ ವಾರ ಮೊದಲು ಕಂಡುಬಂದ ಬೆಳವಣಿಗೆಗಳು ಮತ್ತೆ ಮರುಕಳಿಸುತ್ತಿವೆ. 'ಡಿಸೆಂಬರ್ ಮತ್ತು ಫೆಬ್ರುವರಿ ನಡುವೆ ರೂಪಾಂತರ ತಳಿಗಳಿಂದ ಕೋವಿಡ್ ಹರಡುವುದು ಹೆಚ್ಚಳವಾಗಿತ್ತು' ಎಂದು ಅವರು ತಿಳಿಸಿದರು.

ಕಳೆದ ವರ್ಷ ಬ್ರಿಟನ್‌ನಲ್ಲಿ ವೈರಾಣು (ಬಿ.1.1.7) ಕೂಡಾ 2020-21ರ ಚಳಿಗಾಲದಲ್ಲೇ ಕಾಣಿಸಿಕೊಂಡಿತ್ತು ಎಂಬುದನ್ನು ಅವರು ನೆನಪಿಸಿದರು. 'ಈ ಸೋಂಕು ಅಂತರರಾಷ್ಟ್ರೀಯ ಪ್ರವಾಸಿಗರಿಗೆ ಸೀಮಿತವಾಗಿಲ್ಲ. ಇದು ಈಗಾಗಲೇ ಸಮುದಾಯದಲ್ಲಿ ಹರಡಿದೆ. ಹಾಗಾಗಿ ಒಳಾಂಗಣಗಳಲ್ಲಿ ನಡೆಯುವ ಸಮಾರಂಭಗಳಲ್ಲಿ ಜನ ಜಂಗುಳಿ ಉಂಟಾಗುವುದನ್ನು ನಿಯಂತ್ರಿಸಬೇಕು' ಎಂದರು.

ವರದಿಗಳ ಪ್ರಕಾರ ಓಮೈಕ್ರಾನ್ ಪ್ರಕರಣಗಳು ಪ್ರಸ್ತುತ ಪ್ರತಿ 1.9 ದಿನಗಳಿಗೆ ದ್ವಿಗುಣಗೊಳ್ಳುತ್ತಿವೆ. ನವೆಂಬರ್ 30ರ ವೇಳೆಗೆ ಪ್ರತಿ 2.5 ದಿನಗಳಲ್ಲಿ ದ್ವಿಗುಣಗೊಳ್ಳುತ್ತಿದ್ದವು.

ಪುಸ್ತಕ ಖರೀದಿ: ಸಂಕಷ್ಟಕ್ಕೆ ಸಿಲುಕಿದ ಪ್ರಕಾಶಕರು

ಅನುದಾನ ನೀಡದ ಸರ್ಕಾರ

• ವರುಣ ಹೆಗಡೆ

ಬೆಂಗಳೂರು: ಗ್ರಂಥಾಲಯಗಳ ಹೆಸರಿನಲ್ಲಿ ಪ್ರತಿವರ್ಷ ನೂರಾರು ಕೋಟಿ ರೂಪಾಯಿ ಕರ ಸಂಗ್ರಹಿಸುವ ಸರ್ಕಾರ, ಏಕಗವಾಕ್ಷಿ ಯೋಜನೆಯಡಿ ಖರೀದಿಸಲಾದ 2018ನೇ ಸಾಲಿನ ಪುಸ್ತಕಗಳ ಪೂರ್ಣ ಮೊತ್ತವನ್ನು ಇನ್ನೂ ಪಾವತಿಸಿಲ್ಲ. 2019ನೇ ಸಾಲಿನ ಪುಸ್ತಕಗಳ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದ್ದರೂ ಅನುದಾನ ಬಿಡುಗಡೆ ಮಾಡಿಲ್ಲ. ಇದರಿಂದ ಪ್ರಕಾಶಕರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ರಾಜ್ಯದಲ್ಲಿ ಸುಮಾರು 500 ಪ್ರಕಾಶನ ಸಂಸ್ಥೆಗಳಿವೆ. ಕೆಲವು ಲೇಖಕರು ಕೂಡ ಪ್ರಕಾಶನ ಕಾರ್ಯದಲ್ಲಿ ನಿರತರಾಗಿದ್ದಾರೆ. ಪ್ರತಿ ವರ್ಷ ಸುಮಾರು 8 ಸಾವಿರ ಪುಸ್ತಕಗಳು ಪ್ರಕಟವಾಗುತ್ತಿವೆ. ಬಹುತೇಕ ಪ್ರಕಾಶಕರು ಗ್ರಂಥಾಲಯ ಇಲಾಖೆಯ ಸಗಟು ಖರೀದಿಯನ್ನೇ ಅವಲಂಬಿಸಿದ್ದಾರೆ. ಏಕಗವಾಕ್ಷಿ ಯೋಜನೆಯಡಿ ಆಯ್ಕೆಯಾದ ಪ್ರತಿ ಶೀರ್ಷಿಕೆಯ 300 ಪ್ರತಿಗಳನ್ನು ಇಲಾಖೆಯು ಖರೀದಿಸಲಿದೆ. ಇದಕ್ಕಾಗಿ ಪ್ರತಿವರ್ಷ ₹ 15 ಕೋಟಿ ವೆಚ್ಚ ಮಾಡಲಾಗುತ್ತಿದೆ.

2018ನೇ ಸಾಲಿನ ಪುಸ್ತಕಗಳ ಖರೀದಿ ಪ್ರಕ್ರಿಯೆ ಪೂರ್ಣಗೊಂಡು ವರ್ಷ ಕಳೆದಿದೆ. ಆದರೆ, ಇಲಾಖೆಯು ಅರ್ಧದಷ್ಟು ಹಣ ಮಾತ್ರ ಪಾವತಿಸಿದೆ. ಸರ್ಕಾರ ಅನುದಾನ ಬಿಡುಗಡೆ ಮಾಡಿಲ್ಲ ಎಂಬ ಕಾರಣಕ್ಕೆ ಪ್ರಕಾಶಕರಿಗೆ ₹ 7.88 ಕೋಟಿ ಬಾಕಿ ಉಳಿಸಿಕೊಂಡಿದೆ. 2019ನೇ ಸಾಲಿನ ಪುಸ್ತಕಗಳ ಖರೀದಿಯೂ ಕುಂಟುತ್ತಾ ಸಾಗುತ್ತಿದ್ದು, ಪುಸ್ತಕಗಳ ಖರೀದಿಗೆ ಅಗತ್ಯವಿರುವ ₹ 15 ಕೋಟಿ ಅನುದಾನಕ್ಕೆ ಇನ್ನೂ ಅನುಮೋದನೆ ದೊರೆತಿಲ್ಲ. ಲಕ್ಷಾಂತರ ರೂಪಾಯಿ ಬಂಡವಾಳ ಹೂಡಿ, ಪುಸ್ತಕ ಮುದ್ರಿಸುವ ಪ್ರಕಾಶಕರು ಇದರಿಂದ ಸಮಸ್ಯೆಗೆ ಒಳಗಾಗಿದ್ದಾರೆ.

ಪ್ರಕ್ರಿಯೆ ವಿಳಂಬದಿಂದ ಸಮಸ್ಯೆ: 'ಪುಸ್ತಕಗಳ ಖರೀದಿಗೆ ಸಂಬಂಧಿಸಿದಂತೆ ಈ ವರ್ಷ ಇನ್ನೂ ಬಜೆಟ್ ರೂಪಿಸಿಲ್ಲ. ಎರಡು ವರ್ಷಗಳಿಂದ ಖರೀದಿಯ ಪ್ರಕ್ರಿಯೆಗಳು ವಿಳಂಬ ಆಗುತ್ತಿವೆ. ಸದ್ಯದ ಪರಿಸ್ಥಿತಿಯಲ್ಲಿ ಹಾಕಿದ ಬಂಡವಾಳ ವರ್ಷಗಳ ಬಳಿಕ ಆದಾಯವಾಗಿ ಮರಳಿ ಬಂದರೆ ಪುಣ್ಯ ಎಂಬ ವಾತಾವರಣವಿದೆ. ಬಹುತೇಕ ಪ್ರಕಾಶಕರು ಗ್ರಂಥಾಲಯ ಇಲಾಖೆಯ ಖರೀದಿಯನ್ನೇ ಅವಲಂಬಿಸಿದ್ದಾರೆ. ಈ ರೀತಿ ಹಣವನ್ನು ಬಾಕಿ ಉಳಿಸಿಕೊಂಡಲ್ಲಿ ಪುಸ್ತಕೋದ್ಯಮ ಇನ್ನಷ್ಟು ಸಂಕಷ್ಟಕ್ಕೆ ಸಿಲುಕಲಿದೆ' ಎಂದು ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷ ಪ್ರಕಾಶ್ ಕಂಬತ್ತಳ್ಳಿ ಬೇಸರ ವ್ಯಕ್ತಪಡಿಸಿದರು.

'ಏಕಗವಾಕ್ಷಿ ಯೋಜನೆಯಡಿ ನಡೆಯುತ್ತಿರುವ ಪುಸ್ತಕಗಳ ಖರೀದಿಯು ನಾಲ್ಕು ವರ್ಷಗಳಷ್ಟು ಹಿಂದೆ ಉಳಿದಿದೆ. ಇದರಿಂದಾಗಿಯೇ ಹೊಸ ಪ್ರಕಟಣೆಗಳು ಗ್ರಂಥಾಲಯಗಳಲ್ಲಿ ಓದುಗರ ಕೈಸೇರುತ್ತಿಲ್ಲ. ಸಾಹಿತ್ಯದ ಬೆಳವಣಿಗೆಗೂ ಸರ್ಕಾರದ ಈ ನಡೆ ತೊಡಕಾಗಿದೆ. ಖರೀದಿಸಿದ ಪುಸ್ತಕಗಳ ಹಣ ಪಾವತಿಸದಿರುವುದರಿಂದ ಸಣ್ಣ ಪ್ರಕಾಶನ ಸಂಸ್ಥೆಗಳು ಹಾಗೂ ಲೇಖಕ ಪ್ರಕಾಶಕರು ಸಮಸ್ಯೆ ಎದುರಿಸಲಿದ್ದಾರೆ. ಈಗಾಗಲೇ ಕೋವಿಡ್ ಪುಸ್ತಕೋದ್ಯಮಕ್ಕೂ ದೊಡ್ಡ ಹೊಡೆತ ನೀಡಿದೆ' ಎಂದು ನವಕರ್ನಾಟಕ ಪ್ರಕಾಶನದ ವ್ಯವಸ್ಥಾಪಕ ರಮೇಶ್ ಉಡುಪ ತಿಳಿಸಿದರು.

ನಾಲ್ಕು ವರ್ಷ ಹಿಂದೆ

ಏಕಗವಾಕ್ಷಿ ಯೋಜನೆಯಡಿ ಪುಸ್ತಕಗಳ ಸಗಟು ಖರೀದಿಗೆ ಪ್ರತಿ ವರ್ಷ ಪುಸ್ತಕಗಳನ್ನು ಆಹ್ವಾನಿಸಿ, ಆಯ್ಕೆ ಮಾಡಲಾಗುತ್ತದೆ. ಸಾಹಿತಿಗಳು, ಪ್ರಕಾಶಕರು ಒಳಗೊಂಡಂತೆ ಪುಸ್ತಕೋದ್ಯಮದ ಪ್ರಮುಖರನ್ನು ಒಳಗೊಂಡ ಸಮಿತಿಯು ಆಯ್ಕೆ ಪ್ರಕ್ರಿಯೆಯನ್ನು ನಡೆಸುತ್ತದೆ. 2018ನೇ ಸಾಲಿನ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡು, ಇಲಾಖೆ ಖರೀದಿಸಿದ್ದರೂ ಪುಸ್ತಕಗಳು ರಾಜ್ಯದ ಗ್ರಂಥಾಲಯಗಳಿಗೆ ಇನ್ನೂ ತಲುಪಿಲ್ಲ. ಇದರಿಂದಾಗಿ ಪುಸ್ತಕ ಖರೀದಿಯಲ್ಲಿ ಇಲಾಖೆಯು ನಾಲ್ಕು ವರ್ಷಗಳು ಹಿಂದೆ ಬಿದ್ದಂತಾಗಿದೆ.

'ಈಗ ಮುದ್ರಣ ವೆಚ್ಚ ಶೇ 20 ರಷ್ಟು ಹೆಚ್ಚಾಗಿದೆ. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಕೂಡ ಶೇ 12ರಿಂದ 18ಕ್ಕೆ ಏರಿಕೆಯಾಗಿದೆ. ಇದರಿಂದಾಗಿ ಪ್ರಕಾಶಕರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸರ್ಕಾರದಿಂದ ನಾವು ವಿಶೇಷ ಸೌಲಭ್ಯ, ನೆರವನ್ನು ಕೇಳುತ್ತಿಲ್ಲ. ಈಗಾಗಲೇ ಇರುವ ಯೋಜನೆಯಡಿ ಪುಸ್ತಕಗಳ ಖರೀದಿಸಿಗೆ ನಿಯಮಿತವಾಗಿ ಅನುದಾನ ಬಿಡುಗಡೆ ಮಾಡಬೇಕು' ಎಂದು ಸೃಷ್ಟಿ ಪ್ರಕಾಶನದ ಸೃಷ್ಟಿ ನಾಗೇಶ್ ಆಗ್ರಹಿಸಿದರು.



ಪುಸ್ತಕ ಖರೀದಿಗೆ ಸಂಬಂಧಿಸಿದಂತೆ ಅಗತ್ಯ ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದಷ್ಟು ಬೇಗ ಬಿಡುಗಡೆಯಾಗುವ ವಿಶ್ವಾಸವಿದೆ

ಸತೀಶ್ ಕುಮಾರ್ ಹೊಸಮನಿ
ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ

ಪ್ರಜಾವಾಣಿ ವಿಶೇಷ

ವರುಣ್ ಸಿಂಗ್ ಮೃತದೇಹ ಭೋಪಾಲ್‌ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿನ ಕೂನೂರಿನಲ್ಲಿ ನಡೆದಿದ್ದ ವಾಯುಪಡೆ ಹೆಲಿಕಾಪ್ಟರ್ ಪತನದಲ್ಲಿ ಬದುಕುಳಿದು, ಬುಧವಾರ ನಿಧನರಾದ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರ ಮೃತದೇಹವನ್ನು ಅವರ ತವರೂರಾದ ಭೋಪಾಲ್‌ಗೆ ಗುರುವಾರ ಸ್ಥಳಾಂತರಿಸಲಾಯಿತು.

ಯಲಹಂಕ ವಾಯುನೆಲೆಯಲ್ಲಿ ಮೃತದೇಹಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು. ಅವರ ಕುಟುಂಬ ಸದಸ್ಯರು ಈ ಸಂದರ್ಭದಲ್ಲಿ ಹಾಜರಿದ್ದರು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಅಂತಿಮ ನಮನ ಸಲ್ಲಿಸಿದರು.

ವರುಣ್ ಸಿಂಗ್ ಅವರ ತಂದೆ ಕರ್ನಲ್ (ನಿವೃತ್ತ) ಕೆ.ಪಿ. ಸಿಂಗ್, ತಾಯಿ ಉಮಾಸಿಂಗ್, ಪತ್ನಿ ಗೀತಾಂಜಲಿ ಸಿಂಗ್, ಮಗ ರದ್ದುಮಾನ್ ಸಿಂಗ್ ಮತ್ತು ಮಗಳು ಆರಾಧ್ಯ ಸಿಂಗ್ ಭಾಗವಹಿಸಿದ್ದರು. ನಂತರ ಮೃತದೇಹ ಹೊತ್ತ ಎಎನ್–32 ವಿಮಾನ ಮಧ್ಯಾಹ್ನ 12.30ರ ಸುಮಾರಿಗೆ ಕೆಂಪೇಗೌಡ ವಿಮಾನನಿಲ್ದಾಣದಿಂದ ಹೊರಟಿತು. ಭೋಪಾಲ್‌ನಲ್ಲಿ ಶುಕ್ರವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬ ಸದಸ್ಯರು ತಿಳಿಸಿದರು.



ವರುಣ್ ಸಿಂಗ್ ಅವರ ಮೃತದೇಹಕ್ಕೆ ಅವರ ತಂದೆ ಪಿ.ಕೆ.ಸಿಂಗ್, ತಾಯಿ ಉಮಾ ಸಿಂಗ್, ಪತ್ನಿ ಗೀತಾಂಜಲಿ ಸಿಂಗ್, ಮಗಳು ಆರಾಧ್ಯ ಸಿಂಗ್ ನಮನ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

'ಕನ್ನಡ ಕಲಿಕೆ ಕಡ್ಡಾಯ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಕಲಿಯಲು ಇಚ್ಛಿಸದ ವಿದ್ಯಾರ್ಥಿಗಳಿಗೆ ಬಲವಂತ ಮಾಡಬೇಡಿ' ಎಂದು ರಾಜ್ಯ ಸರ್ಕಾರಕ್ಕೆ ಸೂಚಿಸಿರುವ ಹೈಕೋರ್ಟ್, ರಾಜ್ಯದ ಪದವಿ ಕಾಲೇಜುಗಳಲ್ಲಿ ಕನ್ನಡ ಭಾಷೆ ಕಲಿಕೆ ಕಡ್ಡಾಯಗೊಳಿಸುವ ಸರ್ಕಾರದ ನಿರ್ಣಯಕ್ಕೆ ಮತ್ತೊಮ್ಮೆ ಆಕ್ಷೇಪ ವ್ಯಕ್ತಪಡಿಸಿದೆ.

ರಾಜ್ಯದ ಪದವಿ ಕಾಲೇಜುಗಳಲ್ಲಿ ಕನ್ನಡ ಕಲಿಕೆ ಕಡ್ಡಾಯಗೊಳಿಸಿರುವ ಸರ್ಕಾರದ ಆದೇಶ ರದ್ದು ಕೋರಿ, 'ಸಂಸ್ಕೃತ ಭಾರತಿ ಟ್ರಸ್ಟ್' ಹಾಗೂ 'ಸಂಸ್ಕೃತ ಪ್ರಾಧ್ಯಾಪಕರ ಸಂಘ' ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಕೇಂದ್ರ ಮತ್ತು ರಾಜ್ಯದ ಪರ ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ರಾಜ್ಯದ ಪದವಿ ಕಾಲೇಜುಗಳಲ್ಲಿ ಕನ್ನಡ ಭಾಷೆ ಕಲಿಕೆಯನ್ನು ಕಡ್ಡಾಯಗೊಳಿಸಬಾರದು. ಕನ್ನಡ ಕಲಿತ ವಿದ್ಯಾರ್ಥಿಗಳಿಗೆ ಅಡ್ಡಿಯಿಲ್ಲ. ಆದರೆ, ಕನ್ನಡ ಕಲಿಯಲು ಬಯಸದೇ ಇರುವ ವಿದ್ಯಾರ್ಥಿಗಳಿಗೆ ಮುಂದಿನ ಆದೇಶದವರೆಗೂ ಕಡ್ಡಾಯಗೊಳಿಸುವುದು ಬೇಡ' ಎಂದು ಹೇಳಿ ವಿಚಾರಣೆ ಮುಂದೂಡಿದೆ.

ಭೀಮಪಲಾಸ ಸಂಗೀತೋತ್ಸವ 19ಕ್ಕೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಪಂಡಿತ ಭೀಮಸೇನ ಜೋಶಿ ಜನ್ಮಶತಮಾನೋತ್ಸವದ ಪ್ರಯುಕ್ತ ಧಾರವಾಡದ ಜಿ.ಬಿ.ಜೋಶಿ ಮೆಮೋರಿಯಲ್ ಟ್ರಸ್ಟ್ ಹಾಗೂ ಹುಬ್ಬಳ್ಳಿಯ ಕ್ಷಮತಾ ಸಂಸ್ಥೆ ಇದೇ 19ರಂದು ನಗರದ ಚೌಡಯ್ಯ ಸ್ಮಾರಕ ಸಭಾಭವನದಲ್ಲಿ 'ಭೀಮಪಲಾಸ' ಸಂಗೀತೋತ್ಸವವನ್ನು ಜಂಟಿಯಾಗಿ ಆಯೋಜಿಸಿವೆ.

ಸಂಗೀತೋತ್ಸವವನ್ನು ಬೆಂಗಳೂರು ಸಂಚಾರ ವಿಭಾಗದ ಜಂಟಿ ಕಮಿಷನರ್ ಡಾ.ಬಿ.ಆರ್. ರವಿಕಾಂತೇಗೌಡ ಉದ್ಘಾಟಿಸಲಿದ್ದು, ಮುಂಬೈ ಎಲ್‌ಐಸಿಯ ಹೌಸಿಂಗ್ ಫೈನಾನ್ಸ್ ವ್ಯವಸ್ಥಾಪಕ ನಿರ್ದೇಶಕ ವಿಶ್ವನಾಥ ಗೌಡ, ಜಂಟಿ ಪ್ರಧಾನ ವ್ಯವಸ್ಥಾಪಕ ಎನ್.ಮಹೇಶ ಮತ್ತು ಎಲ್‌ಐಸಿ ಹೈದರಾಬಾದ್ ವಲಯ ವ್ಯವಸ್ಥಾಪಕ ಎಂ. ಜಗನ್ನಾಥ ಮುಖ್ಯ ಅತಿಥಿಗಳಾಗಿ ಭಾಗವಹಿಲಿದ್ದಾರೆ.

ಪಂ. ಪ್ರವೀಣ್ ಗೋಡಖಿಂಡಿ ಮತ್ತು ಷಡಜ್ ಗೋಡಖಿಂಡಿ ಅವರ ಬಾನ್ಸುರಿ ಕಾರ್ಯಕ್ರಮದೊಂದಿಗೆ ಸಂಗೀತೋತ್ಸವಕ್ಕೆ ಚಾಲನೆ ಸಿಗಲಿದೆ. ಸಿದ್ಧಾರ್ಥ ಬೆಳ್ಮಣ್ಣು ಬೆಳಗಿನ ರಾಗಗಳನ್ನು, ಪುಣೆಯ ಪಂ.ಆನಂದ ಭಾಟೆ ಹಾಗೂ ಸರೋದ್ ವಾದಕ ತೇಜೆಂದರ್ ಮಜುಮದಾರ್ ಮಧ್ಯಾಹ್ನದ ರಾಗಗಳನ್ನು, ವಿದುಷಿ ಸಾವನಿ ಶೇಂಡೆ ಸಂಜೆ ರಾಗಗಳನ್ನು ಪ್ರಸ್ತುತಪಡಿಸಲಿದ್ದಾರೆ. ಧಾರವಾಡದ ಪಂ.ಎಂ.ವೆಂಕಟೇಶ ಕುಮಾರ ಗಾಯನದೊಂದಿಗೆ ಸಂಗೀತೋತ್ಸವ ಸಂಪನ್ನಗೊಳ್ಳಲಿದೆ.

ಪಂ.ರವೀಂದ್ರ ಯಾವಗಲ್, ಪಂ.ರಾಜೇಂದ್ರ ನಾಕೋಡ, ಪಂ.ಓಜಸ್ ಅಧಿಯಾ, ರೂಪಕ ಕಲ್ಲೂರಕರ ತಬಲಾ ವಾದನ ನಡೆಸಿಕೊಡಲಿದ್ದಾರೆ. ವೆಂಕಟೇಶ ಪುರೋಹಿತ ತಾಳದಲ್ಲಿ, ಪಂ.ರವೀಂದ್ರ ಕಾತೋಟಿ ಮತ್ತು ಪಂ.ವ್ಯಾಸಮೂರ್ತಿ ಕಟ್ಟಿ ಹಾರ್ಮೋನಿಯಂ ಸಾಥ್ ನೀಡಲಿದ್ದಾರೆ.

ಧಾರವಾಡದ ವಿವಿಡ್‌ಲಿಪಿ ಸಂಸ್ಥೆಯು ಕಾರ್ಯಕ್ರಮವನ್ನು ನೇರ ಪ್ರಸಾರ (ಕೊಂಡಿ: http://www.youtube.com/vividlipi/live) ಮಾಡಲಿದೆ. ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳ ಅನುಸಾರ ನಡೆಯುವ ಈ ಕಾರ್ಯಕ್ರಮಕ್ಕೆ ಎರಡೂ ಲಸಿಕೆಗಳನ್ನು ಹಾಕಿಸಿಕೊಂಡಿರುವ ಪ್ರಮಾಣಪತ್ರ ಒದಗಿಸಿದವರಿಗೆ ಮಾತ್ರ ಪ್ರವೇಶಾವಕಾಶ ಇದೆ.



ಪ್ರವೀಣ್ ಗೋಡಖಿಂಡಿ



ಎಂ.ವೆಂಕಟೇಶ ಕುಮಾರ್

ಲಸಿಕೆ: 3 ಜಿಲ್ಲೆಗಳು ಮಾತ್ರ ಶೇ 100 ರಷ್ಟು ಸಾಧನೆ

ಬೆಂಗಳೂರು: ಕೋವಿಡ್ ಲಸಿಕೆಯ ಮೊದಲ ಡೋಸ್ ವಿತರಣೆಯಲ್ಲಿ ಬೆಂಗಳೂರು ನಗರ ಸೇರಿದಂತೆ ಮೂರು ಜಿಲ್ಲೆಗಳು ಮಾತ್ರ ಶೇ 100 ರಷ್ಟು ಗುರಿ ಸಾಧಿಸಿದ್ದು, ರಾಜ್ಯದ ಸರಾಸರಿ ಶೇ 96 ರಷ್ಟು ಇದೆ.

ಬೆಂಗಳೂರು ನಗರ (ಶೇ 127), ಗದಗ (ಶೇ 102) ಹಾಗೂ ವಿಜಯಪುರ (ಶೇ 101) ನಿಗದಿತ ಗುರಿ ದಾಟಿದೆ. ಇದರೊಂದಿಗೆ ಶೇ 100ಕ್ಕೂ ಅಧಿಕ ಸಾಧನೆ ಮಾಡಿವೆ.

ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲ: ದೇಶದಲ್ಲೇ ಮೊದಲ ವ್ಯವಸ್ಥೆ: ಶೀಘ್ರ ಆರಂಭ

ದತ್ತಾಂಶ ಹಂಚಿಕೊಳ್ಳುವ 'ಇ–ಸಹಮತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಅಧಿಕೃತ ದತ್ತಾಂಶವನ್ನು ತ್ವರಿತಗತಿಯಲ್ಲಿ ಹಂಚಿಕೊಳ್ಳಲು 'ಇ–ಸಹಮತಿ' ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲಾಗಿದೆ. ಈ ವ್ಯವಸ್ಥೆ ದೇಶದಲ್ಲಿ ಪ್ರಥಮ ಬಾರಿಗೆ ರಾಜ್ಯದಲ್ಲಿ ಜಾರಿಗೊಳ್ಳುತ್ತಿದೆ.

'ನ್ಯಾಷನಲ್ ಇನ್ಫಾರ್ಮೆಟಿಕ್ಸ್ ಸೆಂಟರ್' (ಎನ್‌ಐಸಿ) ಅಭಿವೃದ್ಧಿಪಡಿಸಿರುವ ಈ ತಂತ್ರಾಂಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅನುಷ್ಠಾನಗೊಳಿಸುತ್ತಿದೆ. ನಾಗರಿಕರ ಬಳಕೆಗೆ ಅವಕಾಶ ಕಲ್ಪಿಸುವ ಮೊಬೈಲ್ ಆ್ಯಪ್ ಸಹ ಶೀಘ್ರ ಲಭ್ಯವಾಗಲಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಇ– ಆಡಳಿತ) ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೀವ್ ಚಾವ್ಲಾ ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಈ ಕುರಿತ ವಿವರ ನೀಡಿದರು.

'ವಿದ್ಯಾರ್ಥಿಗಳಿಗೆ ಈ ಸಾಫ್ಟ್‌ವೇರ್‌ನಿಂದ ಅತಿ ಹೆಚ್ಚು ಅನುಕೂಲ. ಈ ವ್ಯವಸ್ಥೆಯ ಮಾಹಿತಿಯ ಮೇಲೆ ನಾಗರಿಕರೇ ಸಂಪೂರ್ಣ ನಿಯಂತ್ರಣ ಹೊಂದಿರುತ್ತಾರೆ. ಇದರಲ್ಲಿ ಸರ್ಕಾರದ ಪಾತ್ರ ಇರುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ವಿವಿಧ ಕಂಪನಿಗಳು ನೇಮಕಾತಿಯ ಸಂದರ್ಭದಲ್ಲಿ ಅಭ್ಯರ್ಥಿಗಳ ಶೈಕ್ಷಣಿಕ ವಿವರಗಳ ದಾಖಲೆಗಳನ್ನು ಪರಿಶೀಲಿಸಲು ಬಯಸುತ್ತವೆ. ಅಂತಹ ಕಂಪನಿಗಳು, ವಿಶ್ವವಿದ್ಯಾಲಯಗಳು ಅಥವಾ ಪರೀಕ್ಷಾ ಮಂಡಳಿಗಳಿಂದ ಲಭ್ಯವಿರುವ ವಿವಿಧ ವಿಷಯಗಳ ಅಂಕಗಳ ಮಾಹಿತಿಯನ್ನು ಇ–ಸಹಮತಿ ಮೂಲಕ ಪಡೆಯಬಹುದು. ಇಲ್ಲಿ ಇ–ಸಹಮತಿ ಮಧ್ಯವರ್ತಿಯಾಗಿ ಕಾರ್ಯ-ನಿರ್ವಹಿಸುತ್ತದೆ. ಆದರೆ, ಇದಕ್ಕೆ ವಿದ್ಯಾರ್ಥಿಗಳ ಒಪ್ಪಿಗೆ ಕಡ್ಡಾಯ' ಎಂದು ತಿಳಿಸಿದರು.

'ಅಧಿಕೃತ ಕಂಪನಿಗಳಿಗೆ ಮಾತ್ರ ಇ–ಸಹಮತಿಯಲ್ಲಿ ನೋಂದಣಿ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ. ಕಂಪನಿಗಳು ₹50 ಸಾವಿರ ಶುಲ್ಕ ಪಾವತಿಸಿ ನೋಂದಾಯಿಸಿಕೊಳ್ಳಬಹುದು. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದ ಸಮಿತಿಯು ಅನುಮೋದನೆ ನೀಡಿದರೆ ಮಾತ್ರ ಕಂಪನಿಗಳ ನೋಂದಣಿಗೆ ಅವಕಾಶ ಇದೆ. ಇದರಿಂದ, ನಕಲಿ ಕಂಪನಿಗಳಿಗೆ ಮತ್ತು ದತ್ತಾಂಶ ದುರುಪಯೋಗಪಡಿಸಿಕೊಳ್ಳುವವರಿಗೆ ಅವಕಾಶ ಇರುವುದಿಲ್ಲ' ಎಂದು ವಿವರಿಸಿದರು.

'ರಾಜ್ಯದ 63 ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳು ಈಗಾಗಲೇ ಇ–ಸಹಮತಿ ವೇದಿಕೆಯಲ್ಲಿ ನೋಂದಾಯಿಸಿಕೊಂಡಿವೆ. ಧಾರವಾಡದ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಐಐಐಟಿ) ಮತ್ತು ಬೆಂಗಳೂರಿನ ಭಾರತೀಯ ನಿರ್ವಹಣಾ ಸಂಸ್ಥೆ (ಐಐಎಂ) ನೋಂದಾಯಿಸಿಕೊಂಡಿಲ್ಲ. ಶೀಘ್ರದಲ್ಲಿ ಈ ಎರಡು ಸಂಸ್ಥೆಗಳು ಸಹ ನೋಂದಾಯಿಸಿಕೊಳ್ಳಲಿವೆ' ಎಂದು ತಿಳಿಸಿದರು.

'ಈ ವ್ಯವಸ್ಥೆಯಿಂದ ಕಾಗದ ರೂಪದ ಬದಲು ಡಿಜಿಟಲ್ ವ್ಯವಸ್ಥೆಯ ಮೂಲಕ ಮಾಹಿತಿ ಪಡೆದುಕೊಳ್ಳಬಹುದು. ಇದರಿಂದ ದಾಖಲೆಗಳನ್ನು ತಿರುಚಲು ಅವಕಾಶ ಇರುವುದಿಲ್ಲ. ಕಂಪನಿಗಳಿಗೂ ಪ್ರತಿಗಳನ್ನು ಸಲ್ಲಿಸುವ ಅಗತ್ಯವೇ ಬೀಳುವುದಿಲ್ಲ. ಹಂತ ಹಂತವಾಗಿ ಎಲ್ಲ ಇಲಾಖೆಗಳೂ ಈ ವೇದಿಕೆ ವ್ಯಾಪ್ತಿಯಲ್ಲಿ ಸೇರಿಕೊಳ್ಳಲಿವೆ. ಈ ಸಾಫ್ಟ್‌ವೇರ್ ಅಳವಡಿಸಿಕೊಳ್ಳಲು ತೆಲಂಗಾಣ ಸರ್ಕಾರವೂ ಆಸಕ್ತಿ ತೋರಿದ್ದು, ನಮ್ಮನ್ನು ಸಂಪರ್ಕಿಸಿದೆ' ಎಂದು ತಿಳಿಸಿದರು.

ಕಾರ್ಯನಿರ್ವಹಣೆ ಹೇಗೆ?

ವಿದ್ಯಾರ್ಥಿಯ ಒಪ್ಪಿಗೆ ಅನ್ವಯ, 'ಆಧಾರ್' ಸಂಖ್ಯೆಯ ದೃಢೀಕರಣ ಮೂಲಕ ದತ್ತಾಂಶ ಪಡೆಯಬಹುದು.

ವಿದ್ಯಾರ್ಥಿಯು ಲಾಗಿನ್ ಆದ ಬಳಿಕ 'ಆಧಾರ್' ಸಂಖ್ಯೆ ನಮೂದಿಸಬೇಕು. ಬಳಿಕ, 'ಒಟಿಪಿ' ಸಂದೇಶ ರವಾನೆಯಾಗುತ್ತದೆ. ವಿದ್ಯಾರ್ಥಿಯು 'ಒಟಿಪಿ' ದಾಖಲಿಸಿದಾಗ ಮಾತ್ರ ನೋಂದಾಯಿಸಿಕೊಂಡಿರುವ ಕಂಪನಿಯು ಆಯಾ ಪರೀಕ್ಷಾ ಮಂಡಳಿ ಅಥವಾ ಶಿಕ್ಷಣ ಸಂಸ್ಥೆಗಳಿಂದ ದತ್ತಾಂಶ ಪಡೆಯಬಹುದು. ಕಂಪನಿಗಳು ಗರಿಷ್ಠ ಎರಡು ವರ್ಷಗಳವರೆಗೆ ಮಾತ್ರ ಈ ದತ್ತಾಂಶವನ್ನು ನೋಡಬಹುದು.

'ಸದ್ಯ ಎಸ್ಸೆಸ್ಸೆಲ್ಸಿ ಪರೀಕ್ಷೆಗಳಿಗೆ ಸಂಬಂಧಿಸಿದ 2003ರ ನಂತರದ ಮಾಹಿತಿ ಮತ್ತು ಪಿಯು ಪರೀಕ್ಷೆಗಳ 2008ರ ನಂತರದ ವಿವರಗಳನ್ನು ಸಂಗ್ರಹಿಸಲಾಗಿದೆ. ಇತರ ಶಿಕ್ಷಣ ಸಂಸ್ಥೆಗಳ ಹತ್ತು ವರ್ಷಗಳ ಮಾಹಿತಿಯೂ ನಮ್ಮ ಬಳಿ ಇದೆ' ಎಂದು ರಾಜೀವ್ ಚಾವ್ಲಾ ತಿಳಿಸಿದರು.

'ಇ– ಸಹಮತಿ' ವಿಶೇಷಗಳು

- ವಿದ್ಯಾರ್ಥಿಗಳಿಗೆ ಉಚಿತ
- ನಕಲಿ ದಾಖಲೆಗಳನ್ನು ತಡೆಯಬಹುದು.
- ಕಂಪನಿಗಳಿಗೆ ಪ್ರತ್ಯೇಕ ನಿಯಮಾವಳಿ
- ಕಂಪನಿಗಳು ಕಾರ್ಯಾರಂಭ ಮಾಡಿ ಐದು ವರ್ಷಗಳಾಗಿರಬೇಕು.
- ಸದ್ಯಕ್ಕೆ ದೇಶದ ವ್ಯಾಪ್ತಿಯಲ್ಲಿ ಮಾತ್ರ ಬಳಕೆಗೆ ಅವಕಾಶ
- ಭವಿಷ್ಯದಲ್ಲಿ ವಿದೇಶಿ ವಿಶ್ವವಿದ್ಯಾಲಯಗಳು ಸೇರ್ಪಡೆ
- ನಿರ್ದಿಷ್ಟ ಮಾಹಿತಿಯನ್ನು ಮಾತ್ರ ಹಂಚಿಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶ
- ಕಂಪನಿಗಳ ಪರಿಶೀಲನೆಗೆ ಮತ್ತು ಮಾರ್ಗಸೂಚಿ ರೂಪಿಸಲು ಎಸಿಎಸ್ ನೇತೃತ್ವದ ಸಮಿತಿ

ಶುಕ್ರವಾರ, ಡಿಸೆಂಬರ್ 17, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 348 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಚಿತ್ತೂರಿನ 'ಶ್ರೀವಲ್ಲಿ'ಯಾಗಿ ಮಿಂಚಿರುವ ಕೊಡಗಿನ ಬೆಡಗಿ ರಶ್ಮಿಕಾ ಮಂದಣ್ಣ ಅವರ ಸಿನಿಬದುಕಿನ ಪುಟ್ಟ ಝಲಕ್



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,901 ▲	17,248 ▲	₹49,810 (ಬೆಂಗಳೂರು)	₹62,600 (ಬೆಂಗಳೂರು)	76.09 ▲

ಮಹಿಳೆಯರ ವಿವಾಹದ ಕನಿಷ್ಠ ವಯಸ್ಸು ಹೆಚ್ಚಳ: ಕೇಂದ್ರ ಸಂಪುಟ ಒಪ್ಪಿಗೆ

ಮದುವೆ ವಯಸ್ಸು 21ಕ್ಕೆ?

ನವದೆಹಲಿ (ಪಿಟಿಐ): ಮಹಿಳೆಯರ ಮದುವೆಯ ಕನಿಷ್ಠ ವಯಸ್ಸನ್ನು ಈಗಿನ 18 ವರ್ಷದಿಂದ 21 ವರ್ಷಕ್ಕೆ ಏರಿಸುವುದಕ್ಕಾಗಿ ಕಾಯ್ದೆ ರೂಪಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಪುರುಷರ ಮದುವೆಯ ಕನಿಷ್ಠ ವಯಸ್ಸು ಈಗ 21 ವರ್ಷವೇ ಇದೆ.

ಮಹಿಳೆಯರ ಮದುವೆಯ ಕನಿಷ್ಠ ವಯಸ್ಸನ್ನು 21ಕ್ಕೆ ಏರಿಸುವ ಪ್ರಸ್ತಾವಕ್ಕೆ ಕೇಂದ್ರ ಸಚಿವ ಸಂಪುಟ ಸಭೆಯು ಬುಧವಾರ ಒಪ್ಪಿಗೆ ನೀಡಿದೆ.

ಸಮತಾ ಪಾರ್ಟಿಯ ಮುಖ್ಯಸ್ಥೆಯಾಗಿದ್ದ ಜಯಾ ಜೇಟ್ಲಿ ಅವರ ನೇತೃತ್ವದಲ್ಲಿ ನೀತಿ ಆಯೋಗವು 2020ರ ಜೂನ್‌ನಲ್ಲಿ ಕಾರ್ಯಪಡೆಯೊಂದನ್ನು ರಚಿಸಿತ್ತು. ತಾಯಿಯಾಗುವ ವಯಸ್ಸು, ಹೆರಿಗೆ ಸಂದರ್ಭದಲ್ಲಿ ತಾಯಿಯಂದಿರ ಸಾವಿನ ಪ್ರಮಾಣ ತಗ್ಗಿಸುವುದು, ಮಹಿಳೆಯರು ಮತ್ತು ಮಕ್ಕಳ ಪೌಷ್ಟಿಕತೆ ಹೆಚ್ಚಳದಂತಹ ವಿಚಾರಗಳ ಬಗ್ಗೆ ಶಿಫಾರಸುಗಳನ್ನು ಸಲ್ಲಿಸುವುದು ಈ ಕಾರ್ಯಪಡೆಯ ಹೊಣೆಯಾಗಿತ್ತು.

'ಕಾರ್ಯಪಡೆಯು ಯುವ ಜನರು ಮತ್ತು ಸಂಘಟನೆಗಳ ಜತೆಗೆ ಸಮಾಲೋಚನೆ ನಡೆಸಿತ್ತು. ದೇಶದ ಎಲ್ಲ ಪ್ರದೇಶಗಳ 16 ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಪ್ರಶ್ನಾವಳಿ ಕೊಟ್ಟು ಪ್ರತಿಕ್ರಿಯೆ ಪಡೆದುಕೊಳ್ಳಲಾಗಿತ್ತು. ಮದುವೆಯ ಕನಿಷ್ಠ ವಯಸ್ಸನ್ನು 22 ಅಥವಾ 23 ವರ್ಷಕ್ಕೆ ಹೆಚ್ಚಿಸಬೇಕು ಎಂದು ಹೆಚ್ಚಿನವರು ಹೇಳಿದ್ದರು. ಆದರೆ, ನಾವು ಮದುವೆಯ ಕನಿಷ್ಠ ವಯಸ್ಸನ್ನು 21 ವರ್ಷಕ್ಕೆ ಏರಿಸಲು ಶಿಫಾರಸು ಮಾಡಿದ್ದೆವು' ಎಂದು ಜಯಾ ಜೇಟ್ಲಿ ಹೇಳಿದ್ದಾರೆ.

ತಾಯಂದಿರು ಮತ್ತು ನವಜಾತ ಶಿಶುಗಳು ಅಪೌಷ್ಟಿಕತೆಯಿಂದ ಬಳಲದಂತೆ ನೋಡಿಕೊಳ್ಳಬೇಕು, ಹೆಣ್ಣು ಮಕ್ಕಳ ಆರೋಗ್ಯ ತಪಾಸಣೆಯನ್ನು ಶಾಲೆಯಲ್ಲಿ ಪ್ರತಿ ತಿಂಗಳು ನಡೆಸಲು ವ್ಯವಸ್ಥೆ ಮಾಡಬೇಕು ಎಂಬುದು ಈ ಶಿಫಾರಸುಗಳಲ್ಲಿ ಸೇರಿವೆ. ಶಾಲಾ ಪಠ್ಯಕ್ರಮದಲ್ಲಿ ಲೈಂಗಿಕ ಶಿಕ್ಷಣವನ್ನೂ ಸೇರಿಸಬೇಕು ಎಂಬ ಸಲಹೆಯನ್ನೂ ನೀಡಲಾಗಿದೆ.

'ಶೇ 50ರಿಂದ ಶೇ 60ರಷ್ಟು ಹೆಣ್ಣು ಮಕ್ಕಳಿಗೆ 21 ವರ್ಷಕ್ಕೆ ಮೊದಲೇ ಮದುವೆ ಆಗುತ್ತಿದೆ. ಕಾಯ್ದೆಗೆ ತಿದ್ದುಪಡಿ ಆದರೆ, ಇಂತಹ ಎಲ್ಲ ಮದುವೆಯು ಅಪರಾಧ ಎಂದು ಪರಿಗಣಿತವಾಗುತ್ತದೆ. ಕಾಯ್ದೆಯೊಂದರಿಂದ ಮಾತ್ರ ಬದಲಾವಣೆ ಸಾಧ್ಯವಿಲ್ಲ. ಮೇಲ್ಮಧ್ಯಮ ಮತ್ತು ಮಧ್ಯಮ ವರ್ಗದ ಕುಟುಂಬಗಳಲ್ಲಿ ಹೆಣ್ಣು ಮಕ್ಕಳ ಮದುವೆ 21 ವರ್ಷಗಳಿಗಿಂತಲೂ ಬಹಳ ತಡವಾಗಿಯೇ ಆಗುತ್ತದೆ. ಕಾಯ್ದೆಯ ನಿರ್ಬಂಧ ಇಲ್ಲದೆಯೇ ಇದು ಸಾಧ್ಯವಾಗಿದೆ' ಎಂದು ಆಕ್ಸ್‌ಫ್ಯಾಮ್ ಇಂಡಿಯಾದ ಲಿಂಗತ್ವ ನ್ಯಾಯ ಘಟಕದ ಪ್ರಧಾನ ತಜ್ಞೆ ಅಮಿತಾ ಪಿತ್ರೆ ಹೇಳಿದ್ದಾರೆ.

ಹೆಣ್ಣು ಮಕ್ಕಳ ಮದುವೆಯ ಕನಿಷ್ಠ ವಯಸ್ಸನ್ನು ಹೆಚ್ಚಿಸುವ ಉದ್ದೇಶ ಸರ್ಕಾರಕ್ಕೆ ಇದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ವರ್ಷದ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಹೇಳಿದ್ದರು.

43 ವರ್ಷದ ಬಳಿಕ ಬದಲಾವಣೆ



ಮದುವೆಯ ಕನಿಷ್ಠ ವಯಸ್ಸು 43 ವರ್ಷದ ಬಳಿಕ ಬದಲಾವಣೆಯಾಗಿದೆ. ಬಾಲ್ಯವಿವಾಹ ನಿರ್ಬಂಧ ಕಾಯ್ದೆ 1929ಕ್ಕೆ 1978ರಲ್ಲಿ ತಿದ್ದುಪಡಿ ತಂದು ಹೆಣ್ಣು ಮಕ್ಕಳ ಮದುವೆಯ ಕನಿಷ್ಠ ವಯಸ್ಸನ್ನು 15ರಿಂದ 18ಕ್ಕೆ ಏರಿಸಲಾಗಿತ್ತು. ಬಾಲ್ಯವಿವಾಹ ನಿರ್ಬಂಧ ಕಾಯ್ದೆ 1929ರ ಬದಲಿಗೆ ಬಾಲ್ಯವಿವಾಹ ತಡೆ ಕಾಯ್ದೆಯನ್ನು 2006ರಲ್ಲಿ ತರಲಾಗಿತ್ತು.

ಮೊದಲಿಗೆ ಬಾಲ್ಯ ವಿವಾಹ ತಡೆ ಕಾಯ್ದೆ 2006ಕ್ಕೆ ತಿದ್ದುಪಡಿ ಮಾಡಬೇಕಾಗುತ್ತದೆ. ನಂತರ, ವಿಶೇಷ ವಿವಾಹ ಕಾಯ್ದೆ, ಹಿಂದೂ ವಿವಾಹ ಕಾಯ್ದೆ 1955ರಂತಹ ವೈಯಕ್ತಿಕ ಕಾನೂನುಗಳಿಗೂ ತಿದ್ದುಪಡಿ ತರಬೇಕಾಗುತ್ತದೆ. ಈ ಎಲ್ಲ ಕಾಯ್ದೆಗಳಲ್ಲಿ ಹೆಣ್ಣಿನ ಮದುವೆಯ ಕನಿಷ್ಠ ವಯಸ್ಸು 18 ಮತ್ತು ಗಂಡಿನ ಮದುವೆಯ ಕನಿಷ್ಠ ವಯಸ್ಸು 21 ಎಂದು ಇದೆ.

ಮುಖ್ಯಾಂಶಗಳು

- ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿಯೇ ಕಾಯ್ದೆ ತಿದ್ದುಪಡಿ ಸಾಧ್ಯತೆ
- ಮಹಿಳೆ, ಪುರುಷರ ಮದುವೆಯ ಕನಿಷ್ಠ ವಯಸ್ಸಿನಲ್ಲಿ ಏಕರೂಪತೆ ಬರಲಿದೆ

ಕನ್ನಡ ಬಾವುಟಕ್ಕೆ ಬೆಂಕಿ: ಖಂಡನಾ ನಿರ್ಣಯಕ್ಕೆ ನಿರ್ಧಾರ

ಬೆಳಗಾವಿ(ಸುವರ್ಣ ವಿಧಾನಸೌಧ): ಮಹಾರಾಷ್ಟ್ರದ ಕೊಲ್ಲಾಪುರದಲ್ಲಿ ಶಿವಸೇನೆ ಕಾರ್ಯಕರ್ತರು ಕನ್ನಡದ ಬಾವುಟ ಸುಟ್ಟ ಘಟನೆಗೆ ಸಂಬಂಧಿಸಿದಂತೆ ವಿಧಾನಸಭೆಯಲ್ಲಿ ಖಂಡನಾ ನಿರ್ಣಯ ಮಂಡಿಸಿ ಮಹಾರಾಷ್ಟ್ರ ಸರ್ಕಾರಕ್ಕೆ ಕಳುಹಿಸುವುದಾಗಿ ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು 8

ಓಮೈಕ್ರಾನ್: ಅಮೆರಿಕ, ಇಂಗ್ಲೆಂಡ್‌ನಲ್ಲಿ ಹೆಚ್ಚುತ್ತಿದೆ ಭೀತಿ

ವಾಷಿಂಗ್ಟನ್ (ಎ.ಪಿ): ಕೋವಿಡ್‌ನ ರೂಪಾಂತರ ತಳಿ ಓಮೈಕ್ರಾನ್ ವಿವಿಧ ರಾಷ್ಟ್ರಗಳಲ್ಲಿ ತ್ವರಿತಗತಿಯಲ್ಲಿ ಏರುತ್ತಿದೆ. ಡೆಲ್ಟಾ ಪ್ರಕರಣಗಳಿಂದ ಈಗಾಗಲೇ ತತ್ತರಿಸಿರುವ ವೈದ್ಯಕೀಯ ಕ್ಷೇತ್ರದ ಸಿಬ್ಬಂದಿ ಸತತ ಎರಡನೇ ವರ್ಷವೂ ಒತ್ತಡ ಎದುರಿಸುವ ಸ್ಥಿತಿಯಲ್ಲಿದ್ದಾರೆ. 11

'ಶೀನಾ ಬೋರಾ ಬದುಕಿದ್ದಾಳೆ!'

ಮುಂಬೈ: ತೀವ್ರ ಕುತೂಹಲ ಕೆರಳಿಸಿದ್ದ ಶೀನಾ ಬೋರಾ ಹತ್ಯೆ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದೆ. ಅಚ್ಚರಿಯ ಬೆಳವಣಿಗೆಯಲ್ಲಿ 'ಶೀನಾ ಬೋರಾ ಜೀವಂತವಾಗಿದ್ದಾಳೆ, ಕಾಶ್ಮೀರದಲ್ಲಿ ಇದ್ದಾಳೆ' ಎಂದು ಆಕೆಯ ತಾಯಿ ಇಂದ್ರಾಣಿ ಮುಖರ್ಜಿ ಹೇಳಿದ್ದಾರೆ. 11

ಇಂದಿರಾಗಾಂಧಿ ಕಡೆಗಣನೆಗೆ ಆಕ್ರೋಶ

ನವದೆಹಲಿ (ಪಿಟಿಐ): ಪಾಕಿಸ್ತಾನ ವಿರುದ್ಧದ 1971ರ ಯುದ್ಧದ ಗೆಲುವಿನ 50ನೇ ವರ್ಷಾಚರಣೆ 'ವಿಜಯ್ ದಿವಸ್' ಸಂದರ್ಭದಲ್ಲಿ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರನ್ನು ಸ್ಮರಿಸದಿರುವುದು ವಿವಾದಕ್ಕೆ ಕಾರಣವಾಗಿದೆ. 11

ಶೇ 40ರಷ್ಟು ಲಂಚ, ರಾಜ್ಯ ಸರ್ಕಾರದ ಆಡಳಿತ ವೈಫಲ್ಯದ ಆರೋಪ

ಕಾಂಗ್ರೆಸ್ ಶಾಸಕರಿಂದ ಟ್ರ್ಯಾಕ್ಟರ್ ರ‍್ಯಾಲಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ರಾಜ್ಯ ಸರ್ಕಾರವು ಎಲ್ಲ ರಂಗಗಳಲ್ಲೂ ವಿಫಲವಾಗಿದೆ ಮತ್ತು ಕಾಮಗಾರಿಗಳಿಗೆ ಟೆಂಡರ್ ನೀಡಲು ಶೇ 40ರಷ್ಟು ಲಂಚ ಪಡೆಯಲಾಗುತ್ತಿದೆ' ಎಂದು ಆರೋಪಿಸಿ, ಕಾಂಗ್ರೆಸ್ ಶಾಸಕರು ಗುರುವಾರ ಸುವರ್ಣ ವಿಧಾನಸೌಧಕ್ಕೆ ಟ್ರ್ಯಾಕ್ಟರ್ ರ‍್ಯಾಲಿಯಲ್ಲಿ ಬಂದು ವಿಧಾನಮಂಡಲ ಚಳಿಗಾಲದ ಅಧಿವೇಶನದಲ್ಲಿ ಭಾಗಿಯಾದರು.

ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ನಗರದ ಆರ್‌ಟಿಒ ವೃತ್ತ ಸಮೀಪದ ಕಾಂಗ್ರೆಸ್ ಭವನದಿಂದ 10 ಕಿ.ಮೀ.ವರೆಗೆ ರ‍್ಯಾಲಿ ನಡೆಸಿದ ಶಾಸಕರಿಗೆ ಆ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಸಾಥ್ ನೀಡಿದರು. ಮಾರ್ಗದುದ್ದಕ್ಕೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಧಿಕ್ಕಾರ ಮೊಳಗಿಸಿದರು.

ಗೇಟ್‌ನಲ್ಲಿ ಪ್ರತಿಭಟನೆ, ಆಕ್ರೋಶ: ಸುವರ್ಣ ವಿಧಾನಸೌಧಕ್ಕೆ ಟ್ರ್ಯಾಕ್ಟರ್‌ನಲ್ಲೇ ತೆರಳಲು ಪ್ರತಿಭಟನಾಕಾರರು ಮುಂದಾದರು. ಆಗ ಪೊಲೀಸರು ಗೇಟ್‌ಗಳನ್ನು ಬಂದ್ ಮಾಡಿ, ಬ್ಯಾರಿಕೇಡ್ ಕೋಟೆ ನಿರ್ಮಿಸಿ ತಡೆದರು. ಇದರಿಂದ ಸಿಟ್ಟಾದ ಸಿದ್ದರಾಮಯ್ಯ ಹಾಗೂ ಮುಖಂಡರು ಪೊಲೀಸರನ್ನು ತರಾಟೆಗೆ ತೆಗೆದುಕೊಂಡರು. ಟ್ರ್ಯಾಕ್ಟರ್ ಮುಂದಿದ್ದ ಕಾರ್ಯಕರ್ತರು ಬ್ಯಾರಿಕೇಡ್‌ಗಳು ಮತ್ತು ಪೊಲೀಸರ ಭದ್ರಕೋಟೆ ಹಾರಲು ಪ್ರಯತ್ನಿಸಿದರು. ನಗರ ಪೊಲೀಸ್ ಆಯುಕ್ತ ಕೆ.ತ್ಯಾಗರಾಜನ್ ಅವರನ್ನು ಸಿದ್ದರಾಮಯ್ಯ ತರಾಟೆಗೆ ತೆಗೆದುಕೊಂಡರು.

'ಬಿಜೆಪಿ ಲೂಟಿ ಸಾವಿರಾರು ಕೋಟಿ' ಎಂಬ ಫಲಕ ಅಳವಡಿಸಲಾಗಿದ್ದ ಟ್ರ್ಯಾಕ್ಟರ್‌ನಲ್ಲೇ ಕುಳಿತ ನಾಯಕರು, 'ಪ್ರವೇಶ ಸಿಗುವವರೆಗೂ ನಾವು ಕದಲುವುದಿಲ್ಲ' ಎಂದು ಪಟ್ಟುಹಿಡಿದರು.

10ನೇ ಪುಟ ನೋಡಿ



ಶೇ 40ರಷ್ಟು ಲಂಚ ಹಾಗೂ ಆಡಳಿತ ವೈಫಲ್ಯ ವಿರೋಧಿಸಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಗುರುವಾರ ಬೆಳಗಾವಿಯ ಚೆನ್ನಮ್ಮ ವೃತ್ತದಿಂದ ಹೊರಟ ಟ್ರ್ಯಾಕ್ಟರ್ ರ‍್ಯಾಲಿ ಸುವರ್ಣ ವಿಧಾನಸೌಧ ಪ್ರವೇಶಿಸುತ್ತಿರುವುದು. ಶಾಸಕರಾದ ಕೃಷ್ಣಬೈರೇಗೌಡ, ಎಂ.ಎ. ಗೋಪಾಲಸ್ವಾಮಿ, ಬೈರತಿ ಸುರೇಶ್, ಎಂ. ನಾರಾಯಣಸ್ವಾಮಿ, ಶರತ್ ಬಚ್ಚೇಗೌಡ(ಮೊದಲ ಸಾಲು), ಆರ್.ವಿ. ದೇಶಪಾಂಡೆ, ರಹೀಂಖಾನ್, ಎಸ್.ಆರ್.ಪಾಟೀಲ(ಹಿಂದಿನ ಸಾಲು) ಇದ್ದರು –ಪ್ರಜಾವಾಣಿ ಚಿತ್ರ: ರಂಜು ಪಿ.

ಬ್ಯಾಂಕ್ ಮುಷ್ಕರ: ₹ 18,600 ಕೋಟಿ ಮೌಲ್ಯದ ಚೆಕ್‌ಗಳ ವಿಲೇವಾರಿಗೆ ಅಡ್ಡಿ

ನವದೆಹಲಿ/ಬೆಂಗಳೂರು (ಪಿಟಿಐ): ಬ್ಯಾಂಕ್ ಖಾಸಗೀಕರಣ ವಿರೋಧಿಸಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಉದ್ಯೋಗಿಗಳು ಗುರುವಾರ ದೇಶದಾದ್ಯಂತ ಮುಷ್ಕರ ನಡೆಸಿದರು. ಇದರಿಂದಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳ ಶಾಖೆಗಳಲ್ಲಿ ಹಣ ವರ್ಗಾವಣೆ, ಸ್ವೀಕೃತಿ, ಸಾಲ ಮಂಜೂರಾತಿ ಸೇವೆಗಳಿಗೆ ಅಡ್ಡಿ ಆಯಿತು.

ಮುಷ್ಕರದಿಂದಾಗಿ ₹ 18,600 ಕೋಟಿ ಮೌಲ್ಯದ 20.4 ಲಕ್ಷ ಚೆಕ್‌ಗಳ ಕ್ಲಿಯರೆನ್ಸ್ ಆಗಿಲ್ಲ ಎಂದು ಅಖಿಲ ಭಾರತ ಬ್ಯಾಂಕ್ ಉದ್ಯೋಗಿಗಳ ಸಂಘ (ಎಐಬಿಇಎ) ಪ್ರಧಾನ ಕಾರ್ಯದರ್ಶಿ ಸಿ.ಎಚ್. ವೆಂಕಟಾಚಲಂ ತಿಳಿಸಿದ್ದಾರೆ.

'ಕೇಂದ್ರ ಸರ್ಕಾರದ ಧೋರಣೆಯಿಂದಾಗಿ ಒಂದು ಲಕ್ಷಕ್ಕಿಂತಲೂ ಅಧಿಕ ಬ್ಯಾಂಕ್ ಶಾಖೆಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಶಾಖೆಗಳ ಕಾರ್ಯಾಚರಣೆಗೆ ಅಡ್ಡಿಯಾಯಿತು' ಎಂದು ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಸಂಘದ (ಎಐಬಿಒಸಿ) ಪ್ರಧಾನ ಕಾರ್ಯದರ್ಶಿ ಸೌಮ್ಯ ದತ್ತಾ ಮಾಹಿತಿ ನೀಡಿದ್ದಾರೆ.

ಒಂಬತ್ತು ಸಂಘಟನೆಗಳನ್ನು ಒಳಗೊಂಡಿರುವ ಬ್ಯಾಂಕ್ ಸಂಘಟನೆಗಳ ಸಂಯುಕ್ತ ವೇದಿಕೆಯು (ಯುಎಫ್‌ಬಿಯು) ಎರಡು ದಿನಗಳ ಮುಷ್ಕರಕ್ಕೆ ಕರೆ ನೀಡಿದೆ. ಶುಕ್ರವಾರವೂ ಮುಷ್ಕರ ನಡೆಯಲಿದ್ದು, ಬ್ಯಾಂಕಿಂಗ್ ಸೇವೆಗಳಿಗೆ ಅಡ್ಡಿಯಾಗುವ ಸಾಧ್ಯತೆ ಇದೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಮತ್ತು ವಿಮಾ ಕಂಪನಿಗಳ ಖಾಸಗೀಕರಣ, ಭಾರತೀಯ ಜೀವ ವಿಮಾ ನಿಗಮದಲ್ಲಿನ ಬಂಡವಾಳ ಹಿಂತೆಗೆತ, ವಿಮಾ ಕ್ಷೇತ್ರದಲ್ಲಿ ಶೇಕಡ 74ರವರೆಗೆ ಎಫ್‌ಡಿಐಗೆ ಅವಕಾಶದಂತಹ ಕೇಂದ್ರ ಸರ್ಕಾರದ ನಿರ್ಧಾರಗಳಿಗೆ ಯುಎಫ್‌ಬಿಯು ವಿರೋಧ ವ್ಯಕ್ತಪಡಿಸಿದೆ.

ರಾಜ್ಯದಲ್ಲಿಯೂ ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳು ಮುಷ್ಕರದಲ್ಲಿ ಭಾಗವಹಿಸಿದ್ದರು. ಇದರಿಂದಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸೇವೆಗಳು ಲಭ್ಯವಾಗಲಿಲ್ಲ ಎಂದು ನೌಕರರ ಸಂಘಟನೆಯ ಮುಖಂಡರು ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಕೆ.ಜಿ.ರಸ್ತೆಯಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕ್ ಕಚೇರಿ ಬಳಿ ಸೇರಿದ್ದ 1,500ಕ್ಕೂ ಅಧಿಕ ಸಿಬ್ಬಂದಿ ಮತ್ತು ಅಧಿಕಾರಿಗಳು ಕೇಂದ್ರ ಸರ್ಕಾರದ ನಿರ್ಧಾರಗಳ ವಿರುದ್ಧ ಪ್ರತಿಭಟನೆ ನಡೆಸಿದರು ಎಂದು ಭಾರತೀಯ ರಾಷ್ಟ್ರೀಯ ಬ್ಯಾಂಕ್ ಉದ್ಯೋಗಿಗಳ ಒಕ್ಕೂಟದ (ಐಎನ್‌ಬಿಇಎಫ್) ರಾಜ್ಯದ ಘಟಕದ ಪ್ರಧಾನ ಕಾರ್ಯದರ್ಶಿ ನರಸಿಂಹಮೂರ್ತಿ ಎಂ.ಕೆ. 'ಪ್ರಜಾವಾಣಿ'ಗೆ ತಿಳಿಸಿದರು.

ಒಳ ಪುಟಗಳು

ಅತ್ಯಾಚಾರ: ರಮೇಶ್ ಕುಮಾರ್ ಮಾತಿಗೆ ಟೀಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಅತ್ಯಾಚಾರದ ಕುರಿತು ಕಾಂಗ್ರೆಸ್ ಶಾಸಕ ಕೆ.ಆರ್.ರಮೇಶ್ ಕುಮಾರ್ ಅವರು ಗುರುವಾರ ವಿಧಾನಸಭೆಯಲ್ಲಿ ನೀಡಿದ ಹೇಳಿಕೆ ಟೀಕೆಗೆ ಗುರಿಯಾಗಿದೆ.

ರಮೇಶ್ ಕುಮಾರ್ ಹೇಳಿದ್ದು ಇಷ್ಟು– 'ದೆರ್ ಈಸ್ ಎ ಸೇಯಿಂಗ್, ವೆನ್ ರೇಪ್ ಈಸ್ ಇನೆವಿಟೆಬಲ್ ಲೆಟ್ ಲೇಡೌನ್ ಅಂಡ್ ಎಂಜಾಯ್ (ಅಂದರೆ, ಅತ್ಯಾಚಾರದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದಿದ್ದರೆ, ಮಲಗಿ ಆನಂದಿಸಿ) ಎಂದು ಹೇಳಿದರು.

ಅತಿವೃಷ್ಟಿಯ ಕುರಿತು ಚರ್ಚೆ ನಡೆಯುವ ಸಂದರ್ಭದಲ್ಲಿ ಎಲ್ಲಾ ಸದಸ್ಯರು ಮಾತನಾಡಬೇಕು ಎಂದು ಸಭಾಧ್ಯಕ್ಷರ ದುಂಬಾಲು ಬಿದ್ದರು. ವಿರೋಧಪಕ್ಷ ಮತ್ತು ಆಡಳಿತ ಪಕ್ಷದವರು ಮಾತನಾಡುವ ಸದಸ್ಯರ ಸಂಖ್ಯೆಯನ್ನು ಮಿತಿಗೊಳಿಸದೇ ಸುಮ್ಮನಾದರು.

ಆಗ ಸಭ್ಯಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ನಾಲ್ಕು ದಿನಗಳಿಂದ ಚರ್ಚೆ ನಡೆಯುತ್ತಿದೆ. ಸರ್ಕಾರ ಉತ್ತರ ಕೊಡಬೇಕು. ಈ ರೀತಿ ಆದರೆ ಯಾವುದೇ ಕಾರ್ಯಕಲಾಪ ನಡೆಸಲು ಆಗುವುದಿಲ್ಲ. ಈಗಾಗಲೇ 25 ಶಾಸಕರು ಮಾತನಾಡಿದ್ದಾರೆ' ಎಂದರು.

ಆಗಲೂ ಶಾಸಕರು ಮಾತನಾಡುವುದಕ್ಕಾಗಿ ಕೈ ಎತ್ತುವುದನ್ನು ಮುಂದುವರಿಸಿದರು. ಇದರಿಂದ ಬೇಸತ್ತ ಸಭಾಧ್ಯಕ್ಷರು, ಎಷ್ಟು ಶಾಸಕರು ಬೇಕಾದರೂ ಮಾತನಾಡಲಿ, ನಾನು ಕೇಳುತ್ತಾ ಆನಂದಿಸುವುದನ್ನು ಬಿಟ್ಟರೆ ಇನ್ನೇನು ಮಾಡಲಿ. ಅಜೆಂಡಾದಲ್ಲಿರುವ ಬೇರೆ ಯಾವುದೇ ವಿಷಯಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುವುದಿಲ್ಲ.' ಎಂದರು.

ಅದೊಂದು ಮಾತಿದೆಯಲ್ಲ ರಮೇಶ್ ಕುಮಾರ್ ಅವರೇ ಎಂದು ಕಾಗೇರಿ ಹೇಳಿದರು. ಆಗ ಸಾಂದರ್ಭಿಕವಾಗಿ ರಮೇಶ್‌ಕುಮಾರ್ ಮೇಲಿನಂತೆ ಮಾತು ಹೇಳಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸಂಕ್ಷಿಪ್ತ ಸುದ್ದಿ

ಕಸಾಪ: ಚೆನ್ನಬಸವ ಪಟ್ಟದೇವರ ಜಯಂತಿ ಆಚರಣೆ


ಚನ್ನಬಸವ ಪಟ್ಟದೇವರ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ರಾಜ್ಯದಾದ್ಯಂತ ಇದೇ 22 ರಂದು ಚನ್ನಬಸವ ಪಟ್ಟದೇವರ ಜಯಂತಿ ಆಚರಿಸುವುದಾಗಿ ಘೋಷಿಸಿದೆ.

ಶ್ರೀಗಳ 132ನೇ ಜಯಂತೋತ್ಸವವನ್ನು ಪರಿಷತ್ತಿನ ಎಲ್ಲಾ ಜಿಲ್ಲಾ ಹಾಗೂ ಗಡಿನಾಡು ಘಟಕಗಳಲ್ಲಿ ಸಾಂಕೇತಿಕವಾಗಿ ಆಚರಿಸಬೇಕು ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅವರು ನಾಡು, ನುಡಿ ಹಾಗೂ ಸಂಸ್ಕೃತಿಗೆ ಧಕ್ಕೆಯಾದಾಗ ಎಂತಹ ಸಂದರ್ಭದಲ್ಲಿಯೂ ರಾಜಿಗೆ ಒಪ್ಪುತ್ತಿರಲಿಲ್ಲ. ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗಿಸಿಕೊಂಡಿದ್ದ ಅವರು, ಹೈದರಾಬಾದ್ ಕರ್ನಾಟಕ ವಿಮೋಚನೆಗಾಗಿಯೂ ಹೋರಾಡಿದ್ದರು.

ಸಮಾಲೋಚಕ ಹುದ್ದೆಗೆ ಅರ್ಜಿ ಆಹ್ವಾನ

ಬೆಂಗಳೂರು: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿಯ 'ಸಖಿ' (ಒನ್ ಸ್ಟಾಪ್ ಸೆಂಟರ್) ಯೋಜನೆಯ ಅನುಷ್ಠಾನಕ್ಕಾಗಿ ಹೊರಗುತ್ತಿಗೆ ಆಧಾರದ ಮೇಲೆ ಸಮಾಲೋಚಕರ ಹುದ್ದೆಗೆ ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು 2022ರ ಜ.12 ಕೊನೆಯ ದಿನ. ಅಭ್ಯರ್ಥಿಗಳು ಎಂ.ಎಸ್.ಡಬ್ಲ್ಯು, ಸ್ನಾತಕೋತ್ತರ ಕಾನೂನು ಪದವಿ, ಎಂ.ಎಸ್ಸಿ ಹೋಮ್ ಸೈನ್ಸ್, ಎಂ.ಎಸ್ಸಿ ಸೈಕಾಲಜಿ, ಎಂ.ಎಸ್ಸಿ ಸೈಕಿಯಾಟ್ರಿ ವಿದ್ಯಾರ್ಹತೆ ಹೊಂದಿರಬೇಕು.

ವಿದ್ಯುತ್ ವ್ಯತ್ಯಯ

ಬೆಂಗಳೂರು: ನೆಲದಡಿಯಲ್ಲಿ ಕೇಬಲ್ ಅಳವಡಿಸುವ ಕಾಮಗಾರಿ ಕೈಗೊಂಡಿರುವುದರಿಂದ ಶುಕ್ರವಾರ (ಡಿ.17) ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಮಾಳಗಾಳ, ಗಂಗಮ್ಮ ವಾರ್ಡನ್, ಪ್ರಮೋದ್ ಬಡಾವಣೆ, ಬಾಲಾಜಿ ಬಡಾವಣೆ, ವಿಜಯ ಶ್ರೀ ಬಡಾವಣೆ, ಮೂಕಾಂಬಿಕಾ ಬಡಾವಣೆ, ಬಿಎಚ್ಇಎಲ್ ಬಡಾವಣೆ, ಪಟ್ಟಣಗೆರೆ, ಅನ್ನಪೂರ್ಣೇಶ್ವರಿ ಬಡಾವಣೆ, ತಟಗುಪ್ಪೆ, ಮುನಿನಗರ, ಕೆಂಗೇರಿ ಮುಖ್ಯ ರಸ್ತೆ, ಸುತ್ತಮುತ್ತ ಪ್ರದೇಶಗಳು.


ಕಲಾಸಿಪಾಳ್ಯದ ಕೋಟೆ ಆಂಜನೇಯಸ್ವಾಮಿ ದೇವಾಲಯದಲ್ಲಿ ಭಕ್ತರು ವಿಶೇಷ ಪೂಜೆ ಸಲ್ಲಿಸಿದರು – ಪ್ರಜಾವಾಣಿ ಚಿತ್ರಗಳು


ಬ್ಯಾಟರಾಯನಪುರದ ಗಾಳಿ ಆಂಜನೇಯ ದೇವಾಲಯದಲ್ಲಿ ಗುರುವಾರ ಹನುಮ ಜಯಂತಿ ಪ್ರಯುಕ್ತ ವಿಶೇಷ ಪೂಜೆ ನಡೆಯಿತು


ಬಸವನಗುಡಿಯಲ್ಲಿ ಗುರುವಾರ ಹನುಮ ವೇಷ ದರಿಸಿದ್ದ ವ್ಯಕ್ತಿಯೊಬ್ಬರು ಟ್ರಾಫಿಕ್ ಸಿಗ್ನಲ್ ಬಳಿ ಕಾಣಿಸಿಕೊಂಡಿದ್ದು ಹೀಗೆ

ವಿಶೇಷ ಪೂಜೆ, ಅಲಂಕಾರ: ಪುನೀತ್ ರಾಜ್‌ಕುಮಾರ್ ಸ್ಮರಣೆಗಾಗಿ ರಕ್ತದಾನ ಶಿಬಿರ

ಭಕ್ತರಿಂದ ಎಲ್ಲೆಡೆ ಹನುಮ ನಾಮ ಜಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಾದ್ಯಂತ ಹನುಮ ವ್ರತವನ್ನು ಗುರುವಾರ ಭಕ್ತಿಭಾವದಿಂದ ಆಚರಿಸಲಾಯಿತು.

ದೇವಾಲಯಗಳಲ್ಲಿ ವಿಶೇಷ ಪೂಜೆ, ಅಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಗಳು ನೆರವೇರಿದವು. ದೇವರ ಮೂರ್ತಿಗಳನ್ನು ಹೂವಿನಿಂದ ವಿಶೇಷವಾಗಿ ಅಲಂಕರಿಸಲಾಗಿತ್ತು. ಭಕ್ತಾದಿಗಳು ದೇವಸ್ಥಾನಗಳಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ದೇವಸ್ಥಾನಗಳ ಬಳಿ ಬೆಳಿಗ್ಗೆಯಿಂದಲೇ ಭಕ್ತರ ಸಾಲುಗಳು ಕಂಡು ಬಂದವು.

ಮಹಾಲಕ್ಷ್ಮಿಪುರದ ಪ್ರಸನ್ನ ವೀರಾಂಜನೇಯಸ್ವಾಮಿ ದೇವಸ್ಥಾನ, ಮೈಸೂರು ರಸ್ತೆಯ ಗಾಳಿ ಆಂಜನೇಯ ಸ್ವಾಮಿ, ಉಲ್ಲಾಳದ ವೀರಾಂಜನೇಯ ಸ್ವಾಮಿ ದೇವಸ್ಥಾನ, ರಾಜರಾಜೇಶ್ವರಿ ನಗರದ ಕೆಂಚೇನಹಳ್ಳಿ ಆಂಜನೇಯ ದೇವಸ್ಥಾನ, ಬ್ಯಾಟರಾಯನಪುರ ವಾರ್ಡ್‌ನ ಕೆಂಪಾಪುರದ ಆಂಜನೇಯ ದೇವಸ್ಥಾನ ಸೇರಿದಂತೆ ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜೆ ಮತ್ತು ಅಲಂಕಾರ ಮಾಡಲಾಗಿತ್ತು.

ಹೇರೋಹಳ್ಳಿ ಸಮೀಪದ ಮುನೇಶ್ವರನಗರದ ನ್ಯೂ ಬಾಲ್ಡ್‌ವಿನ್ ಶಾಲೆಯ ಮುಖರಸ್ತೆಯಲ್ಲಿರುವ ಅಭಯಾಂಜನೇಯ ಸ್ವಾಮಿ, ಮಹಾಗಣಪತಿ, ಮುನೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ಹನುಮ ಹನುಮ ವ್ರತ ಕಾರ್ಯಕ್ರಮದ ಅಂಗವಾಗಿ ಹೋಮ, ಹವನ, ಪೂಜಾ ಕೈಂಕರ್ಯಗಳು ಜರುಗಿದವು. ಪ್ರಧಾನ ಅರ್ಚಕ ಶಶಿಕುಮಾರ್, ರಾಮಚಂದ್ರ ಭಟ್ಟಾಚಾರ್ಯ ಮತ್ತು ಧರ್ಮದರ್ಶಿ ಮಮತಾ ಅರುಣ್‌ಗೌಡ ಸಮ್ಮುಖದಲ್ಲಿ ಕಾರ್ಯಕ್ರಮಗಳು ನಡೆದವು.


ಆನಂದ್ ರಾವ್ ವೃತ್ತದ ಪಾತಾಳ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಗುರುವಾರ ಕಲಾವಿದರು ಆಂಜನೇಯ ವೇಷ ಧರಿಸಿ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ

ಇದೇ ಸಂದರ್ಭದಲ್ಲಿ ನಟ ಪುನೀತ್‌ರಾಜ್‌ಕುಮಾರ್ ಅವರ ಸ್ಮರಣೆಗಾಗಿ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರದಲ್ಲಿ 105 ಮಂದಿ ರಕ್ತದಾನ ಮಾಡಿದರು. 165 ಮಂದಿ ನೇತ್ರದಾನಕ್ಕೆ ಹೆಸರು ನೋಂದಾಯಿಸಿಕೊಂಡರು. ಹಲವರ ನೇತ್ರ ಪರೀಕ್ಷೆಯನ್ನು ಸಹ ನಡೆಸಲಾಯಿತು.

ಸೊಣ್ಣೇನಹಳ್ಳಿಯಲ್ಲಿ ಇತಿಹಾಸ ಪ್ರಸಿದ್ಧ ಆಂಜನೇಯ ಸ್ವಾಮಿ ದೇವಸ್ಥಾನಯಲ್ಲಿ ಹನುಮ ವ್ರತ ನಡೆಯಿತು. ದೇವಸ್ಥಾನದ ಧರ್ಮದರ್ಶಿ ಎ.ಎಂ. ಹನುಮಂತೇಗೌಡ ಪ್ರತಿವರ್ಷದಂತೆ, ಭಕ್ತಾದಿಗಳಿಗೆ ಅನ್ನಸಂತರ್ಪಣೆ ವ್ಯವಸ್ಥೆ ಮಾಡಿದ್ದರು.

ಯಲಹಂಕದ ವೆಂಕಟೇಶಪುರ (ಕಳ್ಳಿಪಾಳ್ಯ) ಗ್ರಾಮದಲ್ಲಿರುವ ಅಭಯ ಆಂಜನೇಯಸ್ವಾಮಿ ದೇವಸ್ಥಾನದ 15ನೇ ವಾರ್ಷಿಕೋತ್ಸವ ಹಾಗೂ ಹನುಮ ವ್ರತವನ್ನು ಆಚರಿಸಲಾಯಿತು.

ಹೆಗ್ಗುಂದದಲ್ಲಿ ಬ್ರಹ್ಮ ರಥೋತ್ಸವ

ದಾಬಸ್ ಪೇಟೆ: ಸೋಂಪುರ ಹೋಬಳಿಯ ಹಲವು ಗ್ರಾಮಗಳಲ್ಲಿ ಹನುಮ ವ್ರತ ಆಚರಿಸಲಾಯಿತು.

ಬರಗೂರು, ನಿಜಗಲ್ಲು ಸಿದ್ದರ ಬೆಟ್ಟ, ಕುಂಟ ಬೊಮ್ಮನಹಳ್ಳಿ, ಎಲೆಕ್ಯಾತನಹಳ್ಳಿ, ಕೆರೆಪಾಳ್ಯ, ಚನ್ನೋಹಳ್ಳಿ, ಇಮಚೇನಹಳ್ಳಿಯ ಆಂಜನೇಯ ದೇವಾಲಯಗಳಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು. ನರಸೀಪುರ ತೋಪಿನಲ್ಲಿರುವ ಆತ್ಮಾರಾಮ ದೇವಾಲಯದಲ್ಲಿ ಸೀತಾರಾಮ ಕಲ್ಯಾಣೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಐತಿಹಾಸಿಕ ದೇವಾಲಯವಾದ ಹೆಗ್ಗುಂದದ 'ಹಳೇ ಊರು ಆಂಜನೇಯ' ದೇವಾಲಯದಲ್ಲಿ ಬ್ರಹ್ಮರಥೋತ್ಸವ ನಡೆಯಿತು. ನಿಜಗಲ್ಲು ಸಿದ್ಧರ ಬೆಟ್ಟ ಸೇವಾ ಸಮಿತಿ ವತಿಯಿಂದ ತಾಲ್ಲೂಕಿನ ಇತಿಹಾಸ ಪ್ರಸಿದ್ಧ ನಿಜಗಲ್ಲು ಸಿದ್ಧರಬೆಟ್ಟದಲ್ಲಿ ಹನುಮ ವೃತ ಕಾರ್ಯಕ್ರಮ ನೆರವೇರಿತು.

ನೆಲಮಂಗಲ, ದಾಬಸ್ ಪೇಟೆ, ಶಿವಗಂಗೆ ಸುತ್ತಮುತ್ತಲಿಂದ ಐದು ಸಾವಿರಾರಕ್ಕೂ ಅಧಿಕ ಮಾಲಾ ಧಾರಿಗಳು ಪಾದಯಾತ್ರೆ ಮೂಲಕ ಬೆಟ್ಟಕ್ಕೆ ಆಗಮಿಸಿ ಮಾಲೆ ಬಿಚ್ಚಿದರು.

10 ವರ್ಷಗಳಿಂದ ತೊಂದರೆ ಅನುಭವಿಸುತ್ತಿರುವ ಸುತ್ತಮುತ್ತಲ ಜನ • ಮಳೆ ಬಂದರೆ ಹೊಂಡವಾಗುವ ರಸ್ತೆ

ಕೊಡಿಗೇಹಳ್ಳಿ ಕೆಳಸೇತುವೆಗೆ ಸಿಗದ ಮುಕ್ತಿ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಮಳೆ ಬಂದರೆ ಈಜುಕೊಳದಂತಾಗುವ ಕೆಳಸೇತುವೆ, ಕಾಮಗಾರಿ ಮುಗಿದರೂ ಈಡೇರದ ಉದ್ದೇಶ, ಕೆಳಸೇತುವೆ ಹೆಸರಿನಲ್ಲಿ ಅಗೆದ ರಸ್ತೆಗಳಿಗೆ ದೊರೆತಿಲ್ಲ ಮುಕ್ತಿ...

ಇದು ಕೊಡಿಗೇಹಳ್ಳಿ ರೈಲ್ವೆ ಕೆಳಸೇತುವೆ ಕಾಮಗಾರಿಯ ಕಥೆ. ರೈಲು ಬಂದಾಗ ಗೇಟ್ ಹಾಕಬೇಕಾಗಿದ್ದ ಸ್ಥಿತಿ ತಪ್ಪಿಸಲು ಆರಂಭವಾದ ಈ ರೈಲ್ವೆ ಅಂಡರ್‌ಪಾಸ್ ಉದ್ಘಾಟನೆಗೊಂಡು ವರ್ಷಗಳೇ ಕಳೆದಿವೆ.

ಕೊಡಿಗೇಹಳ್ಳಿಯಿಂದ ತಿಂಡ್ಲು, ಸಹಕಾರ ನಗರಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ಇದಾಗಿದ್ದು, ರೈಲ್ವೆ ಇಲಾಖೆ ಮತ್ತು ಬಿಬಿಎಂಪಿ ಸಹಭಾಗಿತ್ವದಲ್ಲಿ 2014ರಲ್ಲಿ ಕಾಮಗಾರಿ ಆರಂಭಗೊಂಡಿತ್ತು. ಆಮೆಗತಿಯಲ್ಲಿ ನಡೆದ ಕಾಮಗಾರಿಯಿಂದಾಗಿ ಐದು ವರ್ಷಗಳ ಕಾಲ ಇಲ್ಲಿನ ನಿವಾಸಿಗಳು ಪಡಿಪಾಟಲು ಎದುರಿಸಬೇಕಾಗಿ ಬಂತು. ಕೊನೆಗೂ 2019ರ ಏಪ್ರಿಲ್‌ನಲ್ಲಿ ಈ ಕೆಳಸೇತುವೆ ವಾಹನಗಳ ಸಂಚಾರಕ್ಕೆ ಮುಕ್ತವಾಯಿತು.

ಸೇತುವೆಯ ಅಡಿಯಲ್ಲಿ ವಾಹನಗಳ ಸಂಚಾರಕ್ಕೆ ಮುಕ್ತ ಅವಕಾಶ ಕಲ್ಪಿಸಿರುವುದನ್ನು ಬಿಟ್ಟರೆ ನಾಲ್ಕು ಕಡೆಯ ಸರ್ವೀಸ್ ರಸ್ತೆಗಳು ಅಂದಿನಿಂದ ಅಭಿವೃದ್ಧಿಯನ್ನೇ ಕಂಡಿಲ್ಲ. ಐದಾರು ವರ್ಷಗಳಿಂದ ದೂಳಿನ ನಡುವೆಯೇ ಸ್ಥಳೀಯರು ಬದುಕು ಸಾಗಿಸುತ್ತಿದ್ದಾರೆ.

ಅಂಡರ್‌ಪಾಸ್‌ಗೆ ಹರಿದು ಬರುವ ಮಳೆ ನೀರು ಮುಂದೆ ಹೋಗಲು ಬೇಕಾದ ಒಳಚರಂಡಿಯನ್ನು ಅವೈಜ್ಞಾನಿಕವಾಗಿ ನಿರ್ಮಿಸಿರುವುದು ಸಮಸ್ಯೆ ಹೆಚ್ಚಿಸಿದೆ. ಸಣ್ಣ ಮಳೆ ಬಂದರೂ ಅಂಡರ್‌ಪಾಸ್ ತುಂಬಿಕೊಳ್ಳುತ್ತದೆ. ಅದರೊಟ್ಟಿಗೆ ಒಳಚರಂಡಿ ನೀರು ಸೇರಿಕೊಳ್ಳುತ್ತದೆ.

'ಮಳೆ ಬಂದು ನೀರು ತುಂಬಿಕೊಂಡರೆ ತಿಂಡ್ಲು, ವಿದ್ಯಾರಣ್ಯಪುರ, ಸಹಕಾರನಗರದ ಕಡೆಗೆ ಹೋಗಬೇಕಾದ ಜನರು ಕೆನರಾ ಬ್ಯಾಂಕ್ ಲೇಔಟ್ ಕಡೆಯಿಂದ ಮೂರ್ನಾಲ್ಕು ಕಿಲೋ ಮೀಟರ್ ಸುತ್ತು ಹಾಕಬೇಕಾದ ಸ್ಥಿತಿ ಇದೆ. ನೀರು ತುಂಬಿಕೊಂಡಾಗ ಬಿಬಿಎಂಪಿ ಮತ್ತು ಜಲಮಂಡಳಿ ಸಿಬ್ಬಂದಿ ಮೋಟಾರ್‌ಗಳನ್ನು ತಂದು ಅದನ್ನು ಹೊರ ಹಾಕುತ್ತಾರೆ. ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಂಡಿಲ್ಲ. ಹೀಗಾಗಿ, ಅಂಡರ್‌ಪಾಸ್ ಯೋಜನೆಯ ಉದ್ದೇಶವೇ ಬುಡಮೇಲಾಗಿದೆ' ಎಂದು ಸ್ಥಳೀಯರು ದೂರುತ್ತಾರೆ.

'ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ಇತ್ತೀಚೆಗೆ ಸ್ಥಳಕ್ಕೆ ಭೇಟಿ ನೀಡಿ ರೈಲ್ವೆ ಇಲಾಖೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದರು' ಎಂದು ಟಾಟನಗರದ ಬಿ.ಮುನೇಗೌಡ ತಿಳಿಸಿದರು. 'ಒಳಚರಂಡಿ ಸ್ಥಳಾಂತರಿಸಲು ಮತ್ತು ರೈಲ್ವೆ ಹಳಿಯ ಬಳಿ ಕಾಂಪೌಂಡ್ ಗೋಡೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವಂತೆ ನೈರುತ್ಯ ರೈಲ್ವೆ ವಿಭಾಗೀಯ ವ್ಯವಸ್ಥಾಪಕರಿಗೆ ಸಂಸದ ಡಿ.ವಿ. ಸದಾನಂದಗೌಡ ಪತ್ರ ಬರೆದಿದ್ದಾರೆ' ಎಂದರು.

ಅಂಕಿ-ಅಂಶಗಳು

- ₹120 ಕೋಟಿ — ರೈಲ್ವೆ ಕೆಳಸೇತುವೆ ಯೋಜನೆಯ ಒಟ್ಟು ಮೊತ್ತ
- 73 — ಕಾಮಗಾರಿ ಸಲುವಾಗಿ ಸ್ವಾಧೀನಪಡಿಸಿಕೊಂಡಿರುವ ಕಟ್ಟಡಗಳು
- 80 ಅಡಿ — ಕೆಳಸೇತುವೆ ರಸ್ತೆಯ ಅಗಲ



ಸೇತುವೆ ಮೇಲೆ ಅಗೆದು ಬಿಟ್ಟಿರುವ ಜಾಗದಲ್ಲಿ ಹಳ್ಳ–ಗುಂಡಿಗಳನ್ನು ದಾಟುತ್ತಿರುವ ವಿದ್ಯಾರ್ಥಿನಿಯರು



ಕೊಡಿಗೇಹಳ್ಳಿ ಬಳಿ ರೈಲು ಹಳಿ ದಾಟುತ್ತಿರುವ ಶಾಲಾ ಮಕ್ಕಳು –ಪ್ರಜಾವಾಣಿ ಚಿತ್ರಗಳು/ಎಂ.ಎಸ್. ಮಂಜುನಾಥ್

ಹೊರ ವಲಯ ಒಳ ಬೇಗುದಿ

ರಾಜಧಾನಿ ಎಕ್ಸ್‌ಪ್ರೆಸ್ ತಡೆ: ಎಚ್ಚರಿಕೆ



ಮಲ ಹೊರುವ ಪದ್ಧತಿ ಈಗ ಜಾರಿಯಲ್ಲಿ ಇಲ್ಲ. ಆದರೆ, ರೈಲ್ವೆ ಕೆಳ ಸೇತುವೆಯಲ್ಲಿ ಸಂಚರಿಸುವ ಎಲ್ಲರ ಮೇಲೆ ಒಳ ಚರಂಡಿ ನೀರಿನ ಸಿಂಚನವಾಗುತ್ತಿದೆ. ಈ ಕಾಮಗಾರಿಯನ್ನು ಸಂಪೂರ್ಣವಾಗಿ ರೈಲ್ವೆ ಇಲಾಖೆಯ ಸುಪರ್ದಿಗೆ ವಹಿಸಿದ್ದೇ ದೊಡ್ಡ ತಪ್ಪು ಎಂಬಂತಾಗಿದೆ. ಸಮಸ್ಯೆಯನ್ನು ಕೂಡಲೇ ಸರಿಪಡಿಸದಿದ್ದರೆ ರೈಲ್ವೆ ಇಲಾಖೆಗೆ ಲಿಖಿತ ಮಾಹಿತಿ ನೀಡಿ ಸುತ್ತಮುತ್ತಲ 10 ಸಾವಿರಕ್ಕೂ ಹೆಚ್ಚು ಜನರೊಂದಿಗೆ ರಾಜಧಾನಿ ಎಕ್ಸ್‌ಪ್ರೆಸ್ ತಡೆದು ಪ್ರತಿಭಟನೆ ನಡೆಸಲಾಗುವುದು.

–**ಕೆ.ಎನ್.ಚಕ್ರಪಾಣಿ**, ಬಿಜೆಪಿ ಮುಖಂಡ

ರೈಲು ಹಳಿ ದಾಟುವ ಅಪಾಯ

ರೈಲ್ವೆ ಕೆಳ ಸೇತುವೆ ಮೇಲಿನ ರೈಲ್ವೆ ಹಳಿಗಳ ಬದಿಯಲ್ಲಿ ಆವರಣ ಗೋಡೆ ಇಲ್ಲದಿರುವುದು ಅಪಾಯಗಳಿಗೆ ಆಹ್ವಾನ ನೀಡುತ್ತಿದೆ.

ಬೆಂಗಳೂರು–ಹೈದರಾಬಾದ್ ಸಂಪರ್ಕ ಕಲ್ಪಿಸುವ ಪ್ರಮುಖ ರೈಲು ಮಾರ್ಗ ಇದಾಗಿರುವುದರಿಂದ ಸಾಕಷ್ಟು ಎಕ್ಸ್‌ಪ್ರೆಸ್ ರೈಲುಗಳು ಇದರಲ್ಲಿ ಸಂಚರಿಸುತ್ತವೆ. ಶಾಲಾ ಮಕ್ಕಳು ಅಪಾಯ ಲೆಕ್ಕಿಸದೇ ಹಳಿ ದಾಟಬೇಕಾಗಿದೆ.

ಎರಡೂ ಬದಿಯಲ್ಲಿ ಕೂಡಲೇ ಆವರಣ ಗೋಡೆ ನಿರ್ಮಿಸುವಂತೆ ಅಗತ್ಯ ಇದ್ದರೆ ಪಾದಚಾರಿ ಮೇಲ್ಸೇತುವೆ ನಿರ್ಮಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದರು.

ಈ ಬಗ್ಗೆ ಸಂಸದ ಡಿ.ವಿ. ಸದಾನಂದಗೌಡ ಅವರೂ ರೈಲ್ವೆ ಇಲಾಖೆಗೆ ಪತ್ರ ಬರೆದಿದ್ದಾರೆ.

ನಗರದಲ್ಲಿ ಇಂದು

'ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಸಮಸ್ಯೆಗೆ ಸುಸ್ಥಿರ ಪರಿಹಾರ' ಕುರಿತು ಅಂತರರಾಷ್ಟ್ರೀಯ ವಿಚಾರ ಸಂಕಿರಣ; ಆಯೋಜನೆ– ಆರ್.ವಿ. ತಾಂತ್ರಿಕ ಮಹಾವಿದ್ಯಾಲಯ ಹಾಗೂ ಅಮೆರಿಕದ ಫ್ಲೋರಿಡಾ ಅಂತರರಾಷ್ಟ್ರೀಯ ವಿಶ್ವವಿದ್ಯಾಲಯ, ಸ್ಥಳ–ಆರ್.ವಿ. ಕಾಲೇಜು ಸಭಾಂಗಣ, ಅತಿಥಿಗಳು–ಪ್ರೊ. ವೈ. ನರಹರಿ, ಪ್ರೊ. ಎಸ್.ಎಸ್. ಅಯ್ಯಂಗಾರ್, ಬಿಂದು ಮಾಧವ, ಅಧ್ಯಕ್ಷತೆ–ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಗೌರವ ಸಹ ಕಾರ್ಯದರ್ಶಿ ಡಿ.ಪಿ. ನಾಗರಾಜ್. ಬೆಳಿಗ್ಗೆ 9.30

ಎಸ್.ವಿ.ನಾರಾಯಣಸ್ವಾಮಿ ರಾವ್ ಸ್ಮಾರಕ ಅಂತರರಾಷ್ಟ್ರೀಯ ಸಂಗೀತೋತ್ಸವ ಉದ್ಘಾಟನೆ; ಆಯೋಜನೆ– ಶ್ರೀ ರಾಮಸೇವಾ ಮಂಡಳಿ ಟ್ರಸ್ಟ್, ಸ್ಥಳ–ಕೆ.ಆರ್.ರಸ್ತೆಯಲ್ಲಿರುವ ಬೆಂಗಳೂರು ಗಾಯನ ಸಮಾಜ ಸಭಾಂಗಣ, ಉದ್ಘಾಟಕರು– ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ, ಅತಿಥಿಗಳು– ಗಾಯಕರಾದ ವಲಯಪತಿ ಎ.ಆರ್. ಸುಬ್ರಮಣಿಯಮ್, ಸುಧಾ ರಘುನಾಥನ್, ದಿ ಪ್ರಿಂಟರ್ಸ್ ಮೈಸೂರು ಪ್ರೈ. ಲಿ. ನಿರ್ದೇಶಕ ಕೆ.ಎನ್. ಶಾಂತಕುಮಾರ್, ಫೋರ್ಟಿಸ್ ಆಸ್ಪತ್ರೆ ಚೇರ್ಮನ್ ಡಾ. ವಿವೇಕ್ ಜವಳಿ, ಗಾಯನ ಸಮಾಜದ ಅಧ್ಯಕ್ಷ ಡಾ. ಎಂ.ಆರ್.ವಿ.ಪ್ರಸಾದ್, ನಿವೃತ್ತ ಐಎಎಸ್ ಅಧಿಕಾರಿಗಳಾದ ಮಣಿ ನಾರಾಯಣ ಸ್ವಾಮಿ, ಡಾ. ಎ. ರವೀಂದ್ರ. ಸಂಜೆ 4



ಎಸ್.ಎಂ. ಕೃಷ್ಣ


17ನೇ ಮಾರ್ಗಶೀರ್ಷೋತ್ಸವ–2021ರಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ; ಆಯೋಜನೆ– ಸುರಭಾರತಿ ಸಂಸ್ಕೃತ ಹಾಗೂ ಕಲ್ಚರಲ್ ಫೌಂಡೇಶನ್, ಸ್ಥಳ– ಎಚ್‌ಆರ್‌ಬಿಆರ್ ಬಡಾವಣೆಯ 1ನೇ ಹಂತದಲ್ಲಿರುವ ಫೌಂಡೇಶನ್‌ನ 'ಜಗದ್ಗುರು ಭಾರತೀತೀರ್ಥ ಸಭಾ ಮಂಟಪ', ಗಾಯಕರು– ಎಂ.ಎಸ್.ಶೀಲಾ ಹಾಗೂ ತಂಡ. ಸಂಜೆ 6.30

ಐಪಿಎಸ್ ಅಧಿಕಾರಿ ದಿವಂಗತ ಡಾ. ಕೆ. ಮಧುಕರ ಶೆಟ್ಟಿ ಅವರ 50ನೇ ಜನ್ಮ ದಿನಾಚರಣೆ; ಸ್ಥಳ– ಹೋಟೆಲ್ ದಿ ಚಾನ್ಸರಿ, ಅತಿಥಿಗಳು; ನಿವೃತ್ತ ನ್ಯಾಯಮೂರ್ತಿ ಎನ್.ಕೆ. ಸುಧೀಂದ್ರ ರಾವ್, ಎಡಿಜಿಪಿ ಅರುಣ್ ಚಕ್ರವರ್ತಿ, ಐಎಎಸ್ ಅಧಿಕಾರಿ ಹರ್ಷಗುಪ್ತ. ಸಂಜೆ 5.30



ಮಧುಕರ್ ಶೆಟ್ಟಿ

ಕನ್ನಡ ಗೀತ ಗಾಯನ: ಆಯೋಜನೆ– ಗಾನಗಂಗಾ ಲಲಿತಕಲಾ ಸಂಸ್ಥೆ, ಸ್ಥಳ–ರವೀಂದ್ರ ಕಲಾಕ್ಷೇತ್ರ ಆವರಣದ ನಯನ ಸಭಾಂಗಣ, ಉದ್ಘಾಟಕ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್. ರಂಗಪ್ಪ, ಅತಿಥಿಗಳು– ಗಾಯಕಿ ಪ್ರೇಮಲತಾ ದಿವಾಕರ್, ಬಲವಂತರಾವ್ ಪಾಟೀಲ. ಸಂಜೆ 5



ಬೆಳಕಿನ ಚಿತ್ತಾರ...

ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಇಂಟೀರಿಯರ್ ಡಿಸೈನರ್ಸ್ (ಐಐಐಡಿ) ಸಂಸ್ಥೆಯು ಮಹಾತ್ಮ ಗಾಂಧಿ ರಸ್ತೆಯ 'ರಂಗೋಲಿ' ಕೇಂದ್ರದಲ್ಲಿ ಆಯೋಜಿಸಿರುವ 'ಡಿಸೈನೂರು' ವಿನ್ಯಾಸ ಉತ್ಸವದ ಅಂಗವಾಗಿ ಗುರುವಾರ ರಾತ್ರಿ ಮಾಡಿದ್ದ ದೀಪಾಲಂಕಾರದಿಂದ ನಮ್ಮ ಮೆಟ್ರೊ ರೈಲು ಮಾರ್ಗದ ಕಂಬಗಳಲ್ಲಿ ಮೂಡಿದ ರಂಗಿನ ಚಿತ್ತಾರ – ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ಪೊಲೀಸರ ಹೆಸರಿನಲ್ಲಿ ಬೆದರಿಕೆ; ನೊಂದ ಯುವತಿ ಆತ್ಮಹತ್ಯೆ

ಬೆಂಗಳೂರು: ಪೀಣ್ಯ ಠಾಣೆ ವ್ಯಾಪ್ತಿಯಲ್ಲಿ ಯುವತಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದು, ಆತ್ಮಹತ್ಯೆಗೆ ಪ್ರಚೋದನೆ ನೀಡಿದ್ದ ಆರೋಪದಡಿ ಇಬ್ಬರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ನಗರದ ಶಾಪಿಂಗ್ ಮಾಲ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ ಯುವತಿ ತಮ್ಮ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಸಹೋದ್ಯೋಗಿ ಅರುಣ್ ಹಾಗೂ ಆತನ ಸ್ನೇಹಿತ ಗೋಪಾಲ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಯುವತಿಯ ಹಿಂದೆ ಬಿದ್ದಿದ್ದ ಅರುಣ್, ಪ್ರೀತಿಸುವಂತೆ ಪೀಡಿಸುತ್ತಿದ್ದ. ಅದಕ್ಕೆ ಯುವತಿ ಒಪ್ಪಿರಲಿಲ್ಲ. ಆಗ, ಅರುಣ್ ತಾನು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆಯೊಡ್ಡಿದ್ದ. ಅದಕ್ಕೆ ಯುವತಿ ತಲೆಕೆಡಿಸಿಕೊಂಡಿರಲಿಲ್ಲ. ಈ ವಿಚಾರವಾಗಿ ಅರುಣ್, ಸ್ನೇಹಿತ ಗೋಪಾಲ್‌ಗೆ ತಿಳಿಸಿದ್ದ.'

'ಪೊಲೀಸರ ಹೆಸರಿನಲ್ಲಿ ಯುವತಿಗೆ ಕರೆ ಮಾಡಿದ್ದ ಗೋಪಾಲ್, 'ನಿಮ್ಮ ಪರಿಚಯಸ್ಥ ಅರುಣ್ ಠಾಣೆಗೆ ಬಂದಿದ್ದಾರೆ. ನಿಮ್ಮನ್ನು ಮದುವೆ ಮಾಡಿಕೊಳ್ಳುವುದಾಗಿ ಹೇಳುತ್ತಿದ್ದಾರೆ. ಅದಕ್ಕೆ ನೀವು ಒಪ್ಪದಿದ್ದರೆ, ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ತಿಳಿಸುತ್ತಿದ್ದಾರೆ. ಆಕಸ್ಮಾತ್ ಅವರು ಆತ್ಮಹತ್ಯೆ ಮಾಡಿಕೊಂಡರೆ, ನಿಮ್ಮ ಮೇಲೆ ಎಫ್‌ಐಆರ್ ದಾಖಲಿಸಿಕೊಂಡು ಜೈಲಿಗೆ ಕಳುಹಿಸುತ್ತೇವೆ' ಎಂದು ಬೆದರಿಸಿದ್ದ. ಅದರಿಂದ ನೊಂದು ಯುವತಿ ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ' ಎಂದೂ ಮೂಲಗಳು ತಿಳಿಸಿವೆ.

ರಂಗಶಂಕರ: ನಾಟಕೋತ್ಸವ ಇಂದಿನಿಂದ

ಬೆಂಗಳೂರು: ಬಾಲಿವುಡ್ ನಟ ಹಾಗೂ ರಂಗಭೂಮಿ ಕಲಾವಿದ ಸಲೀಂ ಅರೀಫ್ ನಿರ್ದೇಶನದ ನಾಟಕಗಳ ಪ್ರದರ್ಶನವು ನಗರದ ರಂಗ ಶಂಕರದಲ್ಲಿ ಇದೇ 17ರಿಂದ 19ರವರೆಗೆ ನಡೆಯಲಿದೆ.

ಸಲೀಂ ನಿರ್ದೇಶನದ 'ರಾತ್', 'ಮೈ ತುಮ್ಹೇ ಫಿರ್ ಮಿಲೂಂಗಿ' ಮತ್ತು 'ಗುಡಂಬಾ' ನಾಟಕಗಳು ಪ್ರದರ್ಶನಗೊಳ್ಳಲಿದ್ದು, ಇವುಗಳಲ್ಲಿ ಹಿಂದಿ ಚಿತ್ರರಂಗದ ಹೆಸರಾಂತ ನಟ–ನಟಿಯರು, ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ಕಲಾವಿದರು ಅಭಿನಯಿಸಲಿದ್ದಾರೆ ಎಂದು ಆಯೋಜಕರಾದ ನಟಿ ಅಂಕಿತಾ ಜೈನ್ ತಿಳಿಸಿದ್ದಾರೆ.

ಶುಕ್ರವಾರ ಸಂಜೆ 7.30ಕ್ಕೆ ಒಂದು ಪ್ರದರ್ಶನವಿದ್ದು, ಶನಿವಾರ ಮತ್ತು ಭಾನುವಾರ ಸಂಜೆ 3.30ರಿಂದ 7.30ರವರೆಗೆ ಪ್ರದರ್ಶನಗಳು ಇರಲಿವೆ.

ಪೊಲೀಸ್ ವೇಷದಲ್ಲಿ ವಂಚನೆ: ಆರೋಪಿ ಬಂಧನ

ಹೊಳಲ್ಕೆರೆ: ಪೊಲೀಸ್ ಎಂದು ಹೇಳಿಕೊಂಡು ಮೊಬೈಲ್, ಬಂಗಾರದ ಆಭರಣ ಹಾಗೂ ನಗದು ದೋಚುತ್ತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದು, ₹ 2.09 ಲಕ್ಷ ಮೌಲ್ಯದ ಮೊಬೈಲ್, ಬಂಗಾರದ ಆಭರಣ, ಬೈಕ್ ವಶಪಡಿಸಿಕೊಂಡಿದ್ದಾರೆ. ಭದ್ರಾವತಿ ತಾಲ್ಲೂಕಿನ ಕೂಡ್ಲಿಗೆರೆಯ ರಾಜಶೇಖರ ಅಲಿಯಾಸ್ ರಾಜ ಬಂಧಿತ ಆರೋಪಿ.

ಸಂಚಾರ ಅಸ್ತವ್ಯಸ್ತ: ಪ್ರಯಾಣಿಕರ ಪರದಾಟ

ಜೆ.ಸಿ. ರಸ್ತೆಯಲ್ಲಿ 8 ಅಡಿ ಆಳದ ಗುಂಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಜೆ.ಸಿ. ರಸ್ತೆಯ ಟೌನ್‌ಹಾಲ್ ಬಳಿ ಗುರುವಾರ ಆಳವಾದ ಗುಂಡಿ ಬಿದ್ದಿದ್ದರಿಂದ ಸಂಚಾರ ಅಸ್ತವ್ಯಸ್ತಗೊಂಡಿತು.

ರಸ್ತೆಯ ಮಧ್ಯದಲ್ಲಿಯೇ ಸುಮಾರು ಎಂಟು ಅಡಿ ಆಳದ ಗುಂಡಿ ದಿಢೀರ್ ಸೃಷ್ಟಿಯಾಗಿದ್ದರಿಂದ ಸುತ್ತಮುತ್ತ ಪ್ರದೇಶದಲ್ಲಿ ಹಲವು ಗಂಟೆಗಳ ಕಾಲ ವಾಹನ ಸವಾರರು ಪರದಾಡಬೇಕಾಯಿತು. ಬಿಬಿಎಂಪಿ ರಸ್ತೆ ಮೂಲಸೌಕರ್ಯ ವಿಭಾಗದ ಎಂಜಿನಿಯರ್‌ಗಳು ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದರು.

ಆಳವಾದ ಗುಂಡಿಗೆ ಖಚಿತವಾದ ಕಾರಣಗಳು ತಿಳಿದು ಬಂದಿಲ್ಲ. ಆದರೆ, ನೀರು ಬಸಿದ ಪರಿಣಾಮ ರಸ್ತೆ ಕೆಳಗಿನ ಮಣ್ಣು ಸಡಿಲಗೊಂಡಿರಬಹುದು. ಇದರಿಂದಾಗಿ, ದಿಢೀರನೆ ಗುಂಡಿ ಸೃಷ್ಟಿಯಾಗಿರುವ ಸಾಧ್ಯತೆಗಳಿವೆ ಎಂದು ಎಂಜಿನಿಯರ್‌ಗಳು ಅಭಿಪ್ರಾಯಪಟ್ಟಿದ್ದಾರೆ.

ಇಂತಹ ಸಮಸ್ಯೆಗಳನ್ನು ಸುಲಭವಾಗಿ ಪತ್ತೆ ಮಾಡಲು ಸಾಧ್ಯವಿಲ್ಲ. ಇದು ಹಳೆಯ ರಸ್ತೆ. 3 ರಿಂದ 4 ಅಡಿಗಳಷ್ಟು ಕೆಳಗೆ ನೀರು ಬಸಿದಿರುವ ಸಾಧ್ಯತೆ ಇರುವುದರಿಂದ ಪತ್ತೆ ಮಾಡುವುದು ಕಷ್ಟಸಾಧ್ಯ ಎಂದು ತಿಳಿಸಿದ್ದಾರೆ.

ರಸ್ತೆ ಗುಣಮಟ್ಟ ಕಾಪಾಡಿಲ್ಲ ಎನ್ನುವ ಆರೋಪಗಳನ್ನು ತಳ್ಳಿ ಹಾಕಿರುವ ಬಿಬಿಎಂಪಿ ಮುಖ್ಯ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್, 'ಈ ರಸ್ತೆ ಉತ್ತಮ ಸ್ಥಿತಿಯಲ್ಲಿತ್ತು. ಒಂದು ವರ್ಷದ ಹಿಂದೆಯೇ ದುರಸ್ತಿ ಮಾಡಿ ಡಾಂಬರೀಕರಣ ಮಾಡಲಾಗಿತ್ತು. ಈಗ ಬಿದ್ದಿರುವ ಗುಂಡಿಯನ್ನು ಶೀಘ್ರ ದುರಸ್ತಿ ಮಾಡಲಾಗುವುದು' ಎಂದು ತಿಳಿಸಿದ್ದಾರೆ.



ನಗರದ ಜೆ.ಸಿ. ರಸ್ತೆಯಲ್ಲಿ ಗುರುವಾರ ಸೃಷ್ಟಿಯಾದ ಗುಂಡಿಯನ್ನು ಬಿಬಿಎಂಪಿ ಸಿಬ್ಬಂದಿ ದುರಸ್ತಿಗೊಳಿಸಿದರು – ಪ್ರಜಾವಾಣಿ ಚಿತ್ರ

ಮತ್ತೆ ಕಸ ಹೊತ್ತು ಬಂದ ಲಾರಿ

ದೊಡ್ಡಬಳ್ಳಾಪುರ: ಇಲ್ಲಿನ ಚಿಗರೇನಹಳ್ಳಿಯ ಎಂಎಸ್‌ಜಿಪಿ ಕಸ ವಿಲೇವಾರಿ ಘಟಕಕ್ಕೆ ಗುರುವಾರ ಬೆಳಿಗ್ಗೆಯಿಂದಲೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಸ ತುಂಬಿದ ಲಾರಿಗಳು ಬರಲು ಆರಂಭಿಸಿದವು. ಇದರಿಂದ ಆಕ್ರೋಶಗೊಂಡ ಗ್ರಾಮಸ್ಥರು ಲಾರಿಗಳನ್ನು ತಡೆದರು.

ಕಸದ ಲಾರಿಗಳನ್ನು ದೊಡ್ಡಬಳ್ಳಾಪುರ- ದಾಬಸ್‌ಪೇಟೆ ಹೆದ್ದಾರಿಯ ಮೂಗೇನಹಳ್ಳಿ ಕ್ರಾಸ್‌ನಲ್ಲಿ ಗುರುವಾರ ಬೆಳಿಗ್ಗೆ ಲಾರಿ ತಡೆದು, ಅದರ ಚಕ್ರದಲ್ಲಿನ ಗಾಳಿಯನ್ನು ತೆಗೆಯಲಾಯಿತು ಎಂದು ನವ ಬೆಂಗಳೂರು ಹೋರಾಟ ಸಮಿತಿ ಗೌರವ ಅಧ್ಯಕ್ಷ ಕೆ.ವಿ.ಸತ್ಯಪ್ರಕಾಶ್ ತಿಳಿಸಿದರು.

ಬೆಳಗಾವಿ ಸುವರ್ಣ ಸೌಧದಲ್ಲಿ ನಡೆಯುತ್ತಿರುವ ಅಧಿವೇಶನದಲ್ಲಿ ಎಂಎಸ್‌ಜಿಪಿ ಕಸ ವಿಲೇವಾರಿ ಘಟಕ ಕುರಿತಂತೆ ಬುಧವಾರ ನಡೆದ ಚರ್ಚೆವೇಳೆ ಉತ್ತರಿಸಿದ್ದ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, 'ಕಸ ವಿಲೇವಾರಿ ಘಟಕ ಮುಚ್ಚಲು ಸಾಧ್ಯವಿಲ್ಲ. ಅಲ್ಲಿನ ಸಮಸ್ಯೆಗಳನ್ನು ಪರಿಹರಿಸುವ ಕುರಿತಂತೆ ಮುಖ್ಯಮಂತ್ರಿ ಅವರೊಂದಿಗೆ ಸಭೆ ನಡೆಸಲಾಗುವುದು' ಎಂದು ಹೇಳಿದ್ದರು. ಅದರ ಬೆನ್ನಲ್ಲೇ ಗುರುವಾರ ಬೆಳಿಗ್ಗೆಯಿಂದಲೇ ಬಿಬಿಎಂಪಿ ವ್ಯಾಪ್ತಿಯಿಂದ ಕಸ ತುಂಬಿದ ಲಾರಿಗಳು ಗ್ರಾಮದತ್ತ ಮುಖಮಾಡಿವೆ.

ಕಸ ತುಂಬಿದ ಲಾರಿಗಳನ್ನು ಗ್ರಾಮಕ್ಕೆ ಬರಲು ಬಿಡುವುದಿಲ್ಲ. ಒಂದು ವೇಳೆ ಲಾರಿಗಳು ಬಂದರೆ ಮತ್ತೆ ಧರಣಿ ಆರಂಭಿಸಲಾಗುವುದು ಎಂದು ಸತ್ಯಪ್ರಕಾಶ್ ಎಚ್ಚರಿಸಿದರು.

ಚಿತ್ರಾವಳಿ



ಸರಳವಾಗಿ ಹುಟ್ಟುಹಬ್ಬ ಆಚರಿಸಿಕೊಂಡ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರಿಗೆ ನವದೆಹಲಿಯಲ್ಲಿ ಪಕ್ಷದ ಮುಖಂಡರು ಗುರುವಾರ ಶುಭಕೋರಿದರು. ಜೆಡಿಎಸ್ ವಕ್ತಾರ ಟಿ.ಎ.ಶರವಣ, ಶಾಸಕ ಸಾ.ರ.ಮಹೇಶ್ ಹಾಗೂ ಅನಿತಾ ಕುಮಾರಸ್ವಾಮಿ ಇದ್ದಾರೆ



ಕುಶಲಕರ್ಮಿಗಳನ್ನು ಉತ್ತೇಜಿಸುವ ಉದ್ದೇಶದಿಂದ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಇಂಟೀರಿಯರ್ ಡಿಸೈನರ್ಸ್ (ಐಐಐಡಿ) ವತಿಯಿಂದ ನಗರದ ಎಂ.ಜಿ. ರಸ್ತೆಯ ಮೆಟ್ರೊ ರಂಗೋಲಿ ಕೇಂದ್ರದಲ್ಲಿ ಇದೇ 22ರವರೆಗೆ 'ಡಿಸೈನೂರು 3.0' ವಸ್ತು ಪ್ರದರ್ಶನ ಆಯೋಜಿಸಲಾಗಿದ್ದು, ಮಳಿಗೆಯೊಂದರಲ್ಲಿದ್ದ ವಸ್ತುಗಳನ್ನು ಜನರು ಗುರುವಾರ ಕುತೂಹಲದಿಂದ ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

ಚಿತ್ರಸಂತೆ: ಜನವರಿ 2ನೇ ವಾರದಲ್ಲಿ ಆಚರಿಸಲು ಚಿಂತನೆ

ಆನ್‌ಲೈನ್–ಆಫ್‌ಲೈನ್ ಜಿಜ್ಞಾಸೆ

• ವರುಣ್ ಹೆಗಡೆ

ಬೆಂಗಳೂರು: ನೂರಾರು ಕಲಾವಿದರ ಪ್ರತಿಭೆ ಅನಾವರಣಕ್ಕೆ ವೇದಿಕೆ ಕಲ್ಪಿಸುವ ಹಾಗೂ ಅವರು ರಚಿಸಿದ ಕಲಾಕೃತಿಗಳ ಮಾರಾಟಕ್ಕೆ ಅವಕಾಶ ಒದಗಿಸುವ ಚಿತ್ರಸಂತೆ ಮುಂಬರುವ ಜನವರಿಯಲ್ಲಿ ನಡೆಯಲಿದೆ.

ಆದರೆ, ನಗರದಲ್ಲಿ ಕೋವಿಡ್ ರೂಪಾಂತರಿ ಸೋಂಕು ಓಮೈಕ್ರಾನ್ ಪತ್ತೆಯಿಂದಾಗಿ ಈ ಕಾರ್ಯಕ್ರಮವನ್ನು ಭೌತಿಕವಾಗಿ ಆಯೋಜಿಸಬೇಕೋ ಅಥವಾ ಕಳೆದ ವರ್ಷದಂತೆ ಆನ್‌ಲೈನ್‌ಗೆ ಸೀಮಿತಗೊಳಿಸಬೇಕೋ ಎಂಬ ಜಿಜ್ಞಾಸೆಯು ಈಗ ಕರ್ನಾಟಕ ಚಿತ್ರಕಲಾ ಪರಿಷತ್ತನ್ನು ಕಾಡುತ್ತಿದೆ.

ಕೋವಿಡ್ ಕಾರಣ ಕಳೆದ ವರ್ಷ ನಡೆದ 18ನೇ ಚಿತ್ರಸಂತೆ ಆನ್‌ಲೈನ್‌ಗೆ ಸೀಮಿತವಾಗಿತ್ತು. ಪರಿಷತ್ತಿನ ವೆಬ್ ಪೋರ್ಟಲ್ ಜತೆಗೆ ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಯೂಟ್ಯೂಬ್‌ಗಳಲ್ಲೂ ಕಲಾಕೃತಿಗಳ ವೀಕ್ಷಣೆಗೆ ಅವಕಾಶ ನೀಡಲಾಗಿತ್ತು. ಕಲಾವಿದರನ್ನು ಸಂಪರ್ಕಿಸಿ, ಕಲಾಕೃತಿಗಳನ್ನು ಖರೀದಿಸುವ ವ್ಯವಸ್ಥೆ ರೂಪಿಸಲಾಗಿತ್ತು. ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದರಿಂದ ಪ್ರದರ್ಶನ ಎರಡು ತಿಂಗಳವರೆಗೆ ಮುಂದುವರಿದಿತ್ತು.

ಈ ಬಾರಿ ಕೋವಿಡ್ ನಿಯಂತ್ರಣಕ್ಕೆ ಬಂದಿದ್ದರಿಂದ ಕುಮಾರಕೃಪಾ ರಸ್ತೆಯಲ್ಲಿ ಭೌತಿಕ ಪ್ರದರ್ಶನ ಆಯೋಜಿಸಲು ಪರಿಷತ್ತು ಚಿಂತನೆ ನಡೆಸಿತ್ತು. ಆದರೆ, ಓಮೈಕ್ರಾನ್ ಪತ್ತೆಯಾದ ಬಳಿಕ ಸರ್ಕಾರವು ಸಾರ್ವಜನಿಕ ಕಾರ್ಯಕ್ರಮಗಳಿಗೆ ನಿರ್ಬಂಧ ವಿಧಿಸಿದೆ. ಇದರಿಂದಾಗಿ ಪರಿಷತ್ತು ಗೊಂದಲಕ್ಕೊಳಗಾಗಿದೆ. ಭೌತಿಕ ಆಯೋಜನೆಗೆ ಸಂಬಂಧಿಸಿದಂತೆ ಪರಿಷತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಈಗಾಗಲೇ ಪತ್ರ ಬರೆದಿದೆ. ಅಲ್ಲಿಂದ ಬರುವ ಪ್ರತಿಕ್ರಯೆ ಆಧರಿಸಿ ಅಂತಿಮ ತೀರ್ಮಾನ ಕೈಗೊಳ್ಳಲಿದೆ.

ಅಮೃತ ಮಹೋತ್ಸವ ಪರಿಕಲ್ಪನೆ: ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರಪ್ರದೇಶ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಒಡಿಶಾ, ಗುಜರಾತ್, ರಾಜಸ್ಥಾನ... ಹೀಗೆ ವಿವಿಧ ಪ್ರದೇಶಗಳಿಂದ ಹವ್ಯಾಸಿ ಮತ್ತು ವೃತ್ತಿಪರ ಕಲಾವಿದರು ಚಿತ್ರಸಂತೆಯಲ್ಲಿ ಭಾಗವಹಿಸಲಿದ್ದಾರೆ.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವವು ಚಿತ್ರಸಂತೆಯ ಪರಿಕಲ್ಪನೆಯಾಗಿದ್ದು, ದೇಶದ ಇತಿಹಾಸ ಹಾಗೂ ಸಾಂಸ್ಕೃತಿಕ ವೈವಿಧ್ಯಗಳು ಕುಂಚದಲ್ಲಿ ಅರಳಲಿವೆ.

‘ಕಳೆದ ವರ್ಷದ ಚಿತ್ರಸಂತೆ ಆನ್‌ಲೈನ್ ವೇದಿಕೆಗೆ ಸೀಮಿತವಾಗಿದ್ದರೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಕೋವಿಡ್ ಸಂಕಷ್ಟಕ್ಕೆ ಒಳಗಾಗಿದ್ದ ಕಲಾವಿದರಿಗೆ ಈ ಪ್ರದರ್ಶನ ವೇದಿಕೆ ಒದಗಿಸಿತ್ತು. ಭೌತಿಕ ಪ್ರದರ್ಶನಕ್ಕೆ ಅವಕಾಶ ಸಿಗದಿದ್ದಲ್ಲಿ ಈ ಬಾರಿಯೂ ಆನ್‌ಲೈನ್ ಮೂಲಕವೇ ನಡೆಸಬೇಕಾಗುತ್ತದೆ. ಪರಿಷತ್ತಿನ 15 ಕೊಠಡಿಗಳನ್ನು ಗ್ಯಾಲರಿ ರೂಪದಲ್ಲಿ ಬಳಸಿಕೊಳ್ಳಬಹುದಾಗಿದೆ. ಅಲ್ಲಿ ಸಾವಿರಕ್ಕೂ ಅಧಿಕ ಕಲಾಕೃತಿಗಳ ಪ್ರದರ್ಶನ ಸಾಧ್ಯ’ ಎಂದು ಪರಿಷತ್ತಿನ ಗೌರವ ಕಾರ್ಯದರ್ಶಿ ಪ್ರೊ. ಕೆ.ಎಸ್. ಅಪ್ಪಾಜಯ್ಯ ತಿಳಿಸಿದರು.

ಪ್ರದರ್ಶನಕ್ಕೆ 700 ಅರ್ಜಿಗಳು

ಚಿತ್ರಸಂತೆಯಲ್ಲಿ ಕಲಾಕೃತಿಗಳ ಪ್ರದರ್ಶನಕ್ಕೆ ಸಂಬಂಧಿಸಿದಂತೆ ಕಳೆದ ನವೆಂಬರ್ ತಿಂಗಳಲ್ಲಿಯೇ ಕಲಾವಿದರಿಂದ ಅರ್ಜಿ ಆಹ್ವಾನಿಸಲಾಗಿತ್ತು. ಈವರೆಗೆ 700 ಅರ್ಜಿಗಳು ಸಲ್ಲಿಕೆಯಾಗಿವೆ. ರಾಜಸ್ಥಾನ, ತಮಿಳುನಾಡು, ಆಂಧ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳಿಂದಲೂ ಕಲಾವಿದರು ಅರ್ಜಿ ಸಲ್ಲಿಸಿದ್ದಾರೆ. ಕಳೆದ ಬಾರಿ 1,100 ಕಲಾವಿದರು ಭಾಗವಹಿಸಿದ್ದರು. ಪ್ರತಿಯೊಬ್ಬರಿಗೂ ಪ್ರತ್ಯೇಕ ಆನ್‌ಲೈನ್ ಪುಟಗಳನ್ನು ಒದಗಿಸಲಾಗಿತ್ತು.

ಚಿತ್ರಸಂತೆಯ ಭೌತಿಕ ಆಯೋಜನೆ ಬಗ್ಗೆ ಸರ್ಕಾರದ ಅನುಮತಿ ಕೇಳಲಾಗಿದೆ. ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ
ಪ್ರೊ.ಕೆ.ಎಸ್. ಅಪ್ಪಾಜಯ್ಯ, ಗೌರವ ಕಾರ್ಯದರ್ಶಿ, ಕರ್ನಾಟಕ ಚಿತ್ರಕಲಾ ಪರಿಷತ್ತು


ಸಾಂದರ್ಭಿಕ ಚಿತ್ರ

ವಿ.ಕೆ. ಶಶಿಕಲಾಗೆ ಜೈಲಿನಲ್ಲಿ ಐಷಾರಾಮಿ ಸೌಲಭ್ಯ ಆರೋಪ

ನಿರ್ಧಾರ ಪ್ರಕಟಿಸಲು ಸರ್ಕಾರಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ವಿ.ಕೆ. ಶಶಿಕಲಾಗೆ ವಿಶೇಷ ಸೌಲಭ್ಯ ಒದಗಿಸಲು ಲಂಚ ಪಡೆದ ಪ್ರಕರಣದಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧ ಪ್ರಾಸಿಕ್ಯೂಷನ್ ಕ್ರಮ ಕೈಗೊಳ್ಳಲು ಪೂರ್ವಾನುಮತಿ ಕೋರಿ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಸಲ್ಲಿಸಿರುವ ಮನವಿ ಕುರಿತಂತೆ ಎರಡು ವಾರಗಳಲ್ಲಿ ನಿರ್ಧಾರ ಕೈಗೊಳ್ಳಬೇಕು’ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಸೂಚಿಸಿದೆ.

‘ಪ್ರಕರಣದ ತನಿಖೆಯನ್ನು ವಿಳಂಬ ಮಾಡಲಾಗುತ್ತಿದೆ’ ಎಂದು ಆಕ್ಷೇಪಿಸಿ ಚೆನ್ನೈ ನಿವಾಸಿಯಾದ ಶಿಕ್ಷಣ ತಜ್ಞೆ ಹಾಗೂ ಸಾಮಾಜಿಕ ಕಾರ್ಯಕರ್ತೆ ಕೆ.ಎಸ್. ಗೀತಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರಿ ವಕೀಲರು ವಾದ ಮಂಡಿಸಿ, ಈಗಾಗಲೇ ಎಸಿಬಿ ತನಿಖೆಯನ್ನು ಪೂರ್ಣಗೊಳಿಸಿದೆ. ಪ್ರಕರಣದಲ್ಲಿ ಭಾಗಿಯಾಗಿದವರ ವಿರುದ್ಧ ಪ್ರಾಸಿಕ್ಯೂಷನ್ ನಡೆಸಲು ಪೂರ್ವಾನುಮತಿ ಕೋರಿ ತನಿಖಾ ವರದಿಯನ್ನು ಸಕ್ಷಮ ಪ್ರಾಧಿಕಾರ ಗೃಹ ಇಲಾಖೆ ಕಾರ್ಯದರ್ಶಿಗೆ 2021ರ ಜುಲೈ ತಿಂಗಳಲ್ಲಿ ರವಾನಿಸಿದೆ.’ ಎಂದು ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಪೂರ್ವಾನುಮತಿ ಕೋರಿದ ಮನವಿ ಮೇಲೆ ನಿರ್ಧಾರ ಕೈಗೊಳ್ಳಲು ಎಷ್ಟು ಸಮಯ ಬೇಕಿದೆ’ ಎಂದು ಪ್ರಶ್ನಿಸಿತು. ಇದಕ್ಕೆ ಸರ್ಕಾರಿ ವಕೀಲರು, ‘ಸದ್ಯ ಬೆಳಗಾವಿಯಲ್ಲಿ ವಿಧಾನಮಂಡಲ ಅಧಿವೇಶನ ನಡೆಯುತ್ತಿದೆ. ಗೃಹ ಸಚಿವರು ಅಲ್ಲಿಯೇ ಇದ್ದಾರೆ ಹೀಗಾಗಿ ಎರಡು ವಾರ ಕಾಲಾವಕಾಶ ನೀಡಬೇಕು’ ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಸರ್ಕಾರಕ್ಕೆ ಎರಡು ವಾರ ಕಾಲಾವಕಾಶ ನೀಡಿತು.

ಕಾರ್ಮಿಕರ ಹಕ್ಕೊತ್ತಾಯ ಸಮಾವೇಶ 19ರಂದು

ಬೆಂಗಳೂರು: ಕಾರ್ಮಿಕರ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕಾರ್ಮಿಕ ಹಕ್ಕುಗಳ ಹೋರಾಟ ಸಮಿತಿಯು (ಎಂಎಎಸ್‌ಎ) ಇದೇ 19ರಂದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಕಾರ್ಮಿಕ ಹಕ್ಕೊತ್ತಾಯ ಸಮಾವೇಶವನ್ನು ಹಮ್ಮಿಕೊಂಡಿದೆ.

ಬುಧವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಟ್ರೇಡ್ ಯೂನಿಯನ್ ಸೆಂಟರ್ ಆಫ್ ಇಂಡಿಯಾದ (ಟಿಯುಸಿಐ) ರಾಜ್ಯ ಘಟಕದ ಅಧ್ಯಕ್ಷ ಆರ್.ಮಾನಸಯ್ಯ, ‘ಶತಮಾನದ ಹೋರಾಟಗಳ ಫಲವಾಗಿ ಜಾರಿಗೊಂಡಿದ್ದ 44 ಕಾರ್ಮಿಕ ಕಾಯ್ದೆಗಳನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿ ಕಾರ್ಮಿಕರ ಸಾಂವಿಧಾನಿಕ ಹಕ್ಕುಗಳನ್ನು ಕಸಿದುಕೊಂಡಿದೆ. ಅದರ ಬದಲಿಗೆ 4 ಹೊಸ ಕಾರ್ಮಿಕ ಕಾಯ್ದೆಗಳನ್ನು ಜಾರಿಗೊಳಿಸಿದೆ. ಇದನ್ನು ಕೂಡಲೇ ರದ್ದುಗೊಳಿಸಿ ಹಿಂದಿನ ಕಾಯ್ದೆಗಳನ್ನು ಜಾರಿಗೆ ತರಬೇಕು ಎಂದು ಆಗ್ರಹಿಸಿ ರೈತ ಆಂದೋಲನದ ಮಾದರಿಯಲ್ಲಿ ಹೋರಾಟವನ್ನು ಹಮ್ಮಿಕೊಳ್ಳಲಾಗುವುದು’ ಎಂದು ಹೇಳಿದರು.

ಇದೇ 19ರಂದು ಬೆಳಿಗ್ಗೆ 11 ಗಂಟೆಗೆ ಬೆಂಗಳೂರು ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಮೆರವಣಿಗೆ ನಡೆಯಲಿದೆ. ಬಳಿಕ ಬಹಿರಂಗ ಅಧಿವೇಶನದಲ್ಲಿ ವಕೀಲ ಎಸ್.ಬಾಲನ್, ವರದರಾಜೇಂದ್ರ, ಪಶ್ಚಿಮ ಬಂಗಾಳದ ಕಾರ್ಮಿಕ ಮುಖಂಡ ಅಮಿತಾಭ್ ಭಟ್ಟಾಚಾರ್ಯ, ಮುಂಬೈನ ಸಂಜಯ್ ಸಿಂಘ್ವಿ, ತೆಲಂಗಾಣದ ವೆಂಕಟೇಶ್ವರ ರಾವ್ ಮಾತನಾಡಲಿದ್ದಾರೆ. ಪೌರ ಸೇವೆ, ನೀರು ಸರಬರಾಜು, ಹಮಾಲಿ, ಕಟ್ಟಡ, ಗಣಿಗಾರಿಕೆ, ನೇಕಾರ, ಮನೆಗೆಲಸ, ವಲಸೆ ಮುಂತಾದ ಕ್ಷೇತ್ರಗಳ 5 ಸಾವಿರ ಕಾರ್ಮಿಕರು ಪಾಲ್ಗೊಳ್ಳಲಿದ್ದಾರೆ ಎಂದರು.




ವಿಷ್ಣು ನೆನಪಲ್ಲಿ ಮತ್ತೆ 'ಬಂಧನ'



ಆದಿತ್ಯ, ಸುಹಾಸಿನಿ ಹಾಗೂ ಜೈಜಗದೀಶ್

ಅಭಿಲಾಷ್ ಪಿ.ಎಸ್.

37 **ವರ್ಷಗಳ** ಹಿಂದೆ ನಟ ದಿವಂಗತ ವಿಷ್ಣುವರ್ಧನ್ ಅವರ ನಟನೆಯ 'ಬಂಧನ' ಸಿನಿಮಾ ಹಲವು ದಾಖಲೆಗಳನ್ನು ಬರೆದಿತ್ತು. ಕನ್ನಡ ಚಿತ್ರರಂಗದ ಎವರ್‌ಗ್ರೀನ್ ಸಿನಿಮಾಗಳಲ್ಲಿ ಒಂದಾದ ಈ ಸಿನಿಮಾದ ಎರಡನೇ ಭಾಗದ ಮುಖಾಂತರ ವಿಷ್ಣುವರ್ಧನ್ ಅವರು ಮತ್ತೆ ತೆರೆಯ ಮೇಲೆ ಕಾಣಿಸಿಕೊಳ್ಳಲಿದ್ದಾರೆ. ಅದಕ್ಕೆ ಸಿದ್ಧತೆಯನ್ನು ಆರಂಭಿಸಿರುವ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು, 'ಬಂಧನ-2'ರ ಮೊದಲ ಹೆಜ್ಜೆ ಇಟ್ಟಿದ್ದಾರೆ.



ರಾಜೇಂದ್ರ ಸಿಂಗ್ ಬಾಬು

ವಿಷ್ಣುವರ್ಧನ್, ಸುಹಾಸಿನಿ, ಜೈಜಗದೀಶ್, ಅಶ್ವಥ್ ಮುಂತಾದವರು ಮುಖ್ಯಭೂಮಿಕೆಯಲ್ಲಿ ನಟಿಸಿದ್ದ ಮೊದಲ ಭಾಗವನ್ನು ಸಿನಿಪ್ರಿಯರು ಇನ್ನೂ ಮೆಲುಕು ಹಾಕುತ್ತಿರುತ್ತಾರೆ. 'ಬಂಧನ' ಮುಹೂರ್ತ ನಡೆದಿದ್ದ ಲಲಿತ್ ಅಶೋಕ ಹೋಟೆಲ್‌ನಲ್ಲೇ ಎರಡನೇ ಭಾಗದ ಮುಹೂರ್ತ ನಡೆದಿದೆ.

'ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಸುವರ್ಣಾಕ್ಷರದಲ್ಲಿ ಬರೆದ ಸಿನಿಮಾ ಬಂಧನ. ವಿಷ್ಣುವರ್ಧನ್ ದೈಹಿಕವಾಗಿ ಇರದೇ ಇರಬಹುದು. ಆದರೆ ಅವರು ನಮ್ಮ ಜೊತಗೇ ಇದ್ದಾರೆ. ಬಂಧನ-2ನಲ್ಲೂ ವಿಷ್ಣುವರ್ಧನ್ ಅವರನ್ನು ಅಲ್ಲಲ್ಲಿ ಜ್ಞಾಪಿಸುತ್ತೇವೆ. ಇದೂ ಪ್ರೇಮಕಥೆಯೇ. ಆವತ್ತು ವಿಷ್ಣುವರ್ಧನ್ ಇಲ್ಲದೇ ಬಂಧನ ಆಗುತ್ತಿರಲಿಲ್ಲ. ಆದಿತ್ಯ ಅವರು ಸುಹಾಸಿನಿ ಅವರ ಮಗನ ಪಾತ್ರವನ್ನು ಮಾಡುತ್ತಾರೆ. ಮಗುವನ್ನು ತೆಗೆದುಕೊಂಡು ಹೋಗುವಲ್ಲಿಂದ ಕಥೆ ಆರಂಭವಾಗುತ್ತದೆ' ಎನ್ನುತ್ತಾರೆ ರಾಜೇಂದ್ರ ಸಿಂಗ್ ಬಾಬು.

'ಆ್ಯಕ್ಷನ್ ಹೀರೊ ಆಗಿದ್ದ ವಿಷ್ಣುವರ್ಧನ್ ಅವರನ್ನು ಹಾಕಿಕೊಂಡು ಪ್ರೇಮಕಥೆ ಮಾಡುತ್ತಿದ್ದಾರೆ ಎಂದು ಎಲ್ಲರೂ ಆಡಿಕೊಂಡಿದ್ದ ಸಂದರ್ಭದಲ್ಲಿ ವಿಷ್ಣುವರ್ಧನ್ ನನ್ನ ಬೆನ್ನಿಗೆ ನಿಂತಿದ್ದರು. 25 ಕೇಂದ್ರಗಳಲ್ಲಿ 25 ವಾರಗಳವರೆಗೆ ಸಿನಿಮಾ ಓಡಿತು. ವಿಷ್ಣುವರ್ಧನ್ ಅವರ ಕಟೌಟ್ ಅನ್ನು ಸುಟ್ಟರು, ಚಿತ್ರಮಂದಿರಗಳಲ್ಲಿ ಸಿನಿಮಾ ಓಡಬಾರದು ಎಂದು ಮೆಣಸಿನಪುಡಿ ಎರಚಿದರು, ಹೆಂಗಸರಿಗೆ ಬ್ಲೇಡ್‌ನಿಂದ ಕೊಯ್ದರು. ಅಂಥ ಸಂದರ್ಭದಲ್ಲಿ ವಿಷ್ಣು ಅವರ ಅಭಿಮಾನಿಗಳು ನನ್ನ ಜೊತೆ ನಿಂತರು. ಅವರಿಗೆ ನಾನು ಚಿರಋಣಿ. ಸುಹಾಸಿನಿ ಅವರು ಮೊದಲ ದಿನವೇ ನನ್ನ ಬಳಿ ಜಗಳ ಮಾಡಿದ್ದರು. ಮೊದಲ ದೃಶ್ಯದಲ್ಲೇ ವಿಷ್ಣುವರ್ಧನ್ ಅವರಿಗೆ ಕಪಾಳಕ್ಕೆ ಹೊಡೆಯುವ ಶಾಟ್ ತೆಗೆಯುತ್ತಿದ್ದೀರಲ್ಲಾ ಎಂದು ಕೇಳಿದ್ದರು. ಎರಡನೇ ಭಾಗಕ್ಕೆ ಪ್ರೇಕ್ಷಕರ ಸಲಹೆ, ಸೂಚನೆಗಳನ್ನು ಕೇಳಿದ್ದೇನೆ. ಇದರಲ್ಲಿ ಸೂಕ್ತವೆನಿಸಿದ್ದನ್ನು ಆಯ್ದುಕೊಳ್ಳುತ್ತೇವೆ' ಎಂದರು.

'ಕನ್ನಡ ಸಿನಿಮಾದಲ್ಲಿ ನಟಿಸಿ ಬಹಳ ವರ್ಷಗಳಾಯಿತು. ಬಂಧನ-2 ಮೂಲಕ ಮತ್ತೆ ಇತ್ತ ಬರುತ್ತಿರುವುದು ಸಂತೋಷದ ವಿಷಯ' ಎನ್ನುತ್ತಾರೆ ಸುಹಾಸಿನಿ.

'1984ರಲ್ಲಿ ನಾನು ಆರು ವರ್ಷದ ಹುಡುಗ. ಬಂಧನ ಚಿತ್ರೀಕರಣವನ್ನು ಒಂದು ಮೂಲೆಯಲ್ಲಿ ನಿಂತು ನೋಡುತ್ತಿದ್ದೆ. ಪ್ರತಿಯೊಬ್ಬರು ನಟನೆ ಮಾಡುವುದನ್ನು ನೋಡಿಕೊಂಡೇ ನಾನು ಬೆಳೆದಿದ್ದೇನೆ. ವಿಷ್ಣು ಅವರ ನಟನೆ ನೋಡಿ ಅವರ ಹಾಗೆ ನಾನು ನಟಿಸುತ್ತಿದ್ದೆ. ಇಂಥ ಮೈಲಿಗಲ್ಲಾದ ಸಿನಿಮಾದ ಮುಂದುವರಿದ ಭಾಗದಲ್ಲಿ ನಾನು ನಟಿಸುತ್ತಿದ್ದೇನೆ ಎನ್ನುವುದು ಹೆಮ್ಮೆ' ಎಂದರು ಆದಿತ್ಯ.

ಒಟಿಟಿಯಲ್ಲಿ 'ಕನ್ನಡಿಗ'



ಕ್ರೇಜಿಸ್ಟಾರ್ ರವಿಚಂದ್ರ ವಿ. ನಟನೆಯ 'ಕನ್ನಡಿಗ' ಚಿತ್ರವು ಇಂದು 'ಜೀ ಸಿನಿಮಾ ಕನ್ನಡ' ಒಟಿಟಿಯಲ್ಲಿ ಬಿಡುಗಡೆಯಾಗಲಿದೆ.

ಪೀರಿಯಡ್ ಡ್ರಾಮ ಕಥಾಹಂದರ ಹೊಂದಿರುವ ಈ ಚಿತ್ರವನ್ನು 'ಜಟ್ಟ', 'ಮೈತ್ರಿ', 'ಅಮರಾವತಿ' ಚಿತ್ರಗಳ ಖ್ಯಾತಿಯ ಬಿ.ಎಂ. ಗಿರಿರಾಜ್ ರಚಿಸಿ, ನಿರ್ದೇಶಿಸಿದ್ದಾರೆ. ಓಂಕಾರ್ ಮೂವೀಸ್ ಲಾಂಛನದಲ್ಲಿ ಎನ್.ಎಸ್.ರಾಜಕುಮಾರ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಇದರಲ್ಲಿ ಲಿಪಿಕಾರನ ಪಾತ್ರಕ್ಕೆ ಬಣ್ಣಹಚ್ಚಿರುವ ರವಿಚಂದ್ರ ಅವರು, ಗಿರಿಜಾ ಮೀಸೆ ಹಾಗೂ ಮುಂಡಾಸು ಧರಿಸಿ ವಿಭಿನ್ನ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

ಕನ್ನಡ ಭಾಷೆ, ಲಿಪಿಯ ಬಗ್ಗೆ ಹಾಗೂ ಇದನ್ನು ಹೇಗೆ ಉಳಿಸಿಕೊಂಡು ಬಂದಿದ್ದೇವೆ, ಬೆಳೆಸುವುದು ಹೇಗೆ ಎನ್ನುವ ವಿಷಯವನ್ನು ಆಧಾರವಾಗಿಟ್ಟುಕೊಂಡು ಗಿರಿರಾಜ್ ಅವರು ಕಥೆ ಹೆಣೆದಿದ್ದು, ಸಂಕಮ್ಮಬ್ಬೆ ಪಾತ್ರದಲ್ಲಿ ಪಾವನಾ ಗೌಡ ನಟಿಸಿದ್ದಾರೆ. ಚಿತ್ರಕ್ಕೆ ರವಿ ಬಸ್ರೂರ್ ಸಂಗೀತ, ಜಿ.ಎಸ್.ವಿ.ಸೀತಾರಾಂ ಅವರ ಛಾಯಾಗ್ರಹಣವಿದೆ. ಅರ್ಜುನ್ ಕಿಟ್ಟು ಸಂಕಲನ, ಹೊಸ್ಮನೆ ಮೂರ್ತಿ ಕಲಾ ನಿರ್ದೇಶನ ಹಾಗೂ ಡಿಫರೆಂಟ್ ಡ್ಯಾನಿ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಜೀವಿಕ, ಜಮ್ಮಿ ಅಲ್ಟರ್, ಬಾಲಾಜಿ ಮನೋಹರ್, ರಾಕ್‌ಲೈನ್ ವೆಂಕಟೇಶ್, ಶೃಂಗ, ಮೈತ್ರಿ ಜಗ್ಗ ತಾರಾಗಣದಲ್ಲಿದ್ದಾರೆ.

ಇದು ಶ್ರೀವಲ್ಲಿಯ 'ಪುಷ್ಪ' ಪುರಾಣ



ಪುಷ್ಪ

ಅಲ್ಲು ಅರ್ಜುನ್, ರಶ್ಮಿಕಾ ಮಂದಣ್ಣ

ಕೋವಿಡ್ ದೀರ್ಘ ಬ್ರೇಕ್‌ನ ನಂತರ ಮತ್ತೆ ಚಿತ್ರ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ ಕೊಡಗಿನ ಬೆಡಗಿ, 'ನ್ಯಾಷನಲ್ ಕ್ರಷ್' ರಶ್ಮಿಕಾ ಮಂದಣ್ಣ. ಅವರ ಪ್ಯಾನ್ ಇಂಡಿಯಾ ಸಿನಿಮಾ 'ಪುಷ್ಪ' ಇಂದು ಬಿಡುಗಡೆಯಾಗುತ್ತಿರುವ ಹೊತ್ತಿನಲ್ಲಿ ಅವರ ಸಿನಿಪಯಣ ತೆರೆದುಕೊಂಡದ್ದು ಹೀಗೆ...

ಶರತ್ ಹೆಗ್ಡೆ

- **ಕ್ಲೀನ್ ಅಂಡ್ ಕ್ಲಿಯರ್ ಫ್ರೆಶ್ ಫೇಸ್ ಆಫ್ ಇಂಡಿಯಾದಿಂದ ಕಿರಿಕ್ ಪಾರ್ಟಿಯ ಸಾನ್ವಿ ಜೋಸೆಫ್‌ವರೆಗೆ, ಈಗ 'ಪುಷ್ಪ'ದಲ್ಲಿನ ಚಿತ್ತೂರು ಹುಡುಗಿ ಶ್ರೀವಲ್ಲಿಯವರೆಗೆ ಹೇಗಿದೆ ಈ ಪ್ರಯಾಣ?**

ಈ ಪ್ರಯಾಣ ತುಂಬಾ ಎಂಗೇಜಿಂಗ್ ಆಗಿತ್ತು. ಪ್ರತಿದಿನ ಹೊಸ ಜನರನ್ನು ಭೇಟಿಯಾಗುತ್ತಿದ್ದೆ. ಸಾನ್ವಿ ಜೋಸೆಫ್‌ನಿಂದ 'ಪುಷ್ಪ'ದ ಶ್ರೀವಲ್ಲಿಯವರೆಗೂ ಪ್ರತಿ ಪಾತ್ರವೂ ಭಿನ್ನವಾಗಿಯೇ ಸಿಕ್ಕಿದೆ. ಜನ ಮೆಚ್ಚಿಕೊಂಡಿದ್ದಾರೆ. ಇದರ ಹಿಂದೆ ತುಂಬಾ ಶ್ರಮ ಇದೆ.

- **'ನ್ಯಾಷನಲ್ ಕ್ರಷ್' ಎಂದು ಗೂಗಲ್ ಗೌರವಕ್ಕೆ ಪಾತ್ರರಾದಿರಿ. ಅಭಿಮಾನಿಗಳು ನಿಮ್ಮ ಮನೆಯವರೆಗೂ ಹುಡುಕಿಕೊಂಡು ಬಂದರು. ಈ ಬೆಳವಣಿಗೆ ನೋಡುವಾಗ ಏನನ್ನಿಸುತ್ತದೆ?**

ನಾನು ಇದನ್ನೆಲ್ಲಾ ಊಹಿಸಿಕೊಂಡಿರಲಿಲ್ಲ. ಅಭಿಮಾನಿಗಳು ಹುಡುಕಿಕೊಂಡು ಬರುವಾಗ ಖುಷಿಯಾಗುತ್ತದೆ. ಬೇಸರವೂ ಆಗುತ್ತಿದೆ. ಏಕೆಂದರೆ ಅವರು ಪ್ರೀತಿಯಿಂದ ಹುಡುಕಿಕೊಂಡು ಬರುತ್ತಾರೆ. ಅದು ಖುಷಿಯ ಸಂಗತಿ. ಆದರೆ, ಅವರು ಬರುವಾಗ ನಾನು ಅಲ್ಲಿ ಇರೋದಿಲ್ಲ. ಅದು ಬೇಸರದ ಸಂಗತಿ.

- **ಕೊಡಗಿನ ಸೊಗಡು, ಕನ್ನಡದ ಕಂಪು ಎಷ್ಟರಮಟ್ಟಿಗೆ ಆವರಿಸಿದೆ?**

ಹೌದು, ನಾನು ಪ್ರಪಂಚದ ಎಲ್ಲೇ ಹೋಗಲಿ ಏನೇ ಪ್ರತಿಭೆ ತೋರಿಸಲಿ. ನನ್ನಲ್ಲಿ ಕನ್ನಡತಿ ಇದ್ದಾಳೆ. ಕೊಡಗಿನ ಮಗಳು ಎಂದು ಹೇಳಿಕೊಳ್ಳುವುದಕ್ಕೆ ತುಂಬಾ ಹೆಮ್ಮೆ ಇದೆ.

- **'ಪುಷ್ಪ'ದ ಚಿತ್ತೂರು ಹುಡುಗಿ ತೆರೆಯ ಮೇಲೆ ಹೇಗೆ ಕಾಣಿಸಲಿದ್ದಾಳೆ?**

ತುಂಬಾ ಷಾಕ್ ಅನಿಸುವಂತೆ ಆ ಲುಕ್ ಇದೆ. ಶ್ರೀವಲ್ಲಿ ಪಾತ್ರದೊಳಗೆ ತೊಡಗಿಸಿಕೊಂಡಾಗ ನನಗೇ ಷಾಕ್ ಆಗಿತ್ತು. ನಾನು ಪಾತ್ರದೊಳಗೆ ಹೆಚ್ಚು ತಲ್ಲೀನಳಾದೆ. ಜನ ಇಷ್ಟಪಡುತ್ತಾರೆ ಎಂಬ ನಂಬಿಕೆ ಇದೆ. ನನಗೂ ಕಾತರವಿದೆ.

ಡಬ್ಬಿಂಗ್‌ನ ವೇಳೆ ನನ್ನನ್ನು ನಾನು ನೋಡಲಿಲ್ಲ. ಪಾತ್ರವಾಗಿಯೇ ನೋಡಿದೆ. ಏನಿದ್ದರೂ ಡಿ. 17ರವರೆಗೆ ಕಾಯಬೇಕು.

ಪ್ರಜಾವಾಣಿ ಕನ್ನಡ ಧ್ವನಿ

ಪೂರ್ಣ ಸಂದರ್ಶನದ ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

- **ನಿಮ್ಮ ಮತ್ತು ಅಲ್ಲು ಅರ್ಜುನ್ ಅವರ ಹೊಂದಾಣಿಕೆ ಹೇಗಿದೆ?**

ಇಬ್ಬರ ಕೆಮೆಸ್ಟ್ರಿ ತುಂಬಾ ಭಿನ್ನವಾಗಿದೆ. ಚಿತ್ತೂರಿನ ಸೊಗಡು, ನಡವಳಿಕೆ ಎಲ್ಲವೂ ಭಿನ್ನ. ಭಾರತೀಯ ಚಿತ್ರಗಳ ಪೈಕಿ ಅದೊಂದು ಬೇರೆಯೇ ರೀತಿಯ ಪ್ರಪಂಚವನ್ನು ಕಟ್ಟಿಕೊಡಲಿದೆ. ಪುಷ್ಪ ಮತ್ತು ಶ್ರೀವಲ್ಲಿ ಪಾತ್ರ ಜನರಿಗೆ ಇಷ್ಟವಾಗಲಿದೆ. ಈ ಚಿತ್ರ 5 ಭಾಷೆಗಳಲ್ಲಿ ಬರಲಿದೆ.

ಚಿತ್ತೂರು ಶೈಲಿಯ ತೆಲುಗು ಕಲಿಯಬೇಕಾದರೆ ಬಹಳ ಕಷ್ಟಪಟ್ಟೆ. ಶಬ್ದಗಳು ಅದೇ ತೆಲುಗು ಆದರೂ ಮಾತನಾಡುವ ಶೈಲಿಯೇ ಬೇರೆ. ಅಲ್ಲಿ ಚಿತ್ತೂರು ಜನರನ್ನು ಬಳಸಿಕೊಂಡೆವು. ಸ್ಕ್ರಿಪ್ಟ್ ಬರೆಯುವಾಗ, ಡಬ್ಬಿಂಗ್ ವೇಳೆ ಅಲ್ಲಿನ ಸೊಗಡು ಗೊತ್ತಿರುವವರೇ ಜೊತೆಗಿದ್ದರು.ಸಣ್ಣತಪ್ಪಾದರೂಅಲ್ಲಿಎಚ್ಚರಿಸುತ್ತಿದ್ದರು.

- **ಮತ್ತೆ ಕನ್ನಡ ಚಿತ್ರಗಳಲ್ಲಿ ಕಾಣಿಸುತ್ತೀರಾ?**

ಖಂಡಿತವಾಗಿಯೂ ನಾನು ಕಾಯುತ್ತಿದ್ದೇನೆ. ನಾನು ಯಾವುದೇ ಭಾಷೆಯ ಚಿತ್ರಗಳಲ್ಲಿ ಅಭಿನಯಿಸಲು ಸಿದ್ಧಳಿದ್ದೇನೆ.

- **ವೆಬ್ ಸಿರೀಸ್‌ಗಳತ್ತ ಅಥವಾ ಒಟಿಟಿ ವೇದಿಕೆಗಳ ಕ್ಷೇತ್ರದಲ್ಲಿ ರಶ್ಮಿಕಾ?**

ವೆಬ್‌ಸಿರೀಸ್ ವೇದಿಕೆಗಳಲ್ಲಿ ಆಸಕ್ತಿದಾಯಕ, ಒಳ್ಳೆಯ ಪಾತ್ರ ಸಿಕ್ಕಿದರೆ ಖಂಡಿತವಾಗಿಯೂ ಅಭಿನಯಿಸುತ್ತೇನೆ.

- **ಕೊಡಗಿನ ಅಕ್ಕಿ ರೊಟ್ಟಿ ಇತ್ಯಾದಿ ತಿನಿಸುಗಳನ್ನು ಡಿಜಿಟಲ್ ವೇದಿಕೆಯಲ್ಲಿ ಇನ್ನಷ್ಟು ಖ್ಯಾತಿಗೊಳಿಸಿದಿರಿ. ಅಡುಗೆ ಇಷ್ಟವಾ? ಬಿಡುವಿನ ವೇಳೆ ಏನು ಮಾಡುತ್ತೀರಿ?**

ಹೌದು, ಅಕ್ಕಿರೊಟ್ಟಿ ಮಾಡುತ್ತೇನೆ. ಅದು ನಮ್ಮ ಸಂಸ್ಕೃತಿಯಲ್ಲೇ ಇದೆ. ಅಡುಗೆ ಮಾಡುವುದೂ ನನ ಗಿಷ್ಟ. ನಮ್ಮ ಭಾಗದ ವಿಶೇಷ ಹಬ್ಬಗಳಲ್ಲಿ, ಬುಡಕಟ್ಟು ಹಬ್ಬಗಳಲ್ಲಿ ವಿಶೇಷ ತಿನಿಸುಗಳನ್ನು ಮಾಡುತ್ತೇನೆ.

- **ಕೋವಿಡ್ ಸಮಯದಲ್ಲಿ ತೊಂದರೆಗಳ ಮಧ್ಯೆ ಒಂದಿಷ್ಟು ಸಕಾರಾತ್ಮಕ ಸ್ಫೂರ್ತಿ ತುಂಬುವ ಕೆಲಸ ಮಾಡಿದಿರಿ. ಆ ಬಗ್ಗೆ ಹೇಳಿ.**

ಕೋವಿಡ್ ಸಮಯದಲ್ಲಿ ಎಲ್ಲರೂ ಸಂಕಷ್ಟಕ್ಕೆ ಒಳಗಾದೆವು. ಆಗ ನಮಗೆಲ್ಲರಿಗೂ ವೈಯಕ್ತಿಕವಾಗಿ ಮಾನವೀಯತೆಯ ಸ್ಪರ್ಶ ಆಯಿತು. ಆಗ ನಾವು ಅಗತ್ಯವುಳ್ಳವರಿಗೆ ಸಾಧ್ಯವಾದಷ್ಟು ನೆರವಾಗಬೇಕು ಎಂದು ಅನಿಸಿತು. ಅದನ್ನು ಮುಂದೆಯೂ ಮಾಡುತ್ತೇನೆ.

- **ನಿಮ್ಮ ಮುಂದಿನ ಕನಸುಗಳು?**

ಚಿತ್ರರಂಗಕ್ಕೆ ಬಂದಾಗಲೇ ಜನರನ್ನು ಮನರಂಜಿಸಬೇಕು. ಜನರ ಮುಖದಲ್ಲಿ ನಗು ಮೂಡಿಸಬೇಕು. ಅವರು ಖುಷಿಯಾಗಿರಬೇಕು. ಅವರು ನಮ್ಮ ಬಗ್ಗೆ ಹೆಮ್ಮೆಪಡುವಂತಾಗಬೇಕು ಎಂಬುದೇ ನನ್ನ ಗುರಿಯಾಗಿತ್ತು. ಅದನ್ನೇ ಮುಂದುವರಿಸುತ್ತೇನೆ.



ಲಕ ಲಕ ಲ್ಯಾಂಬೋರ್ಗಿನಿಯಲ್ಲಿ ರಚಿತಾ

ಚಂದನವನದ ಡಿಂಪಲ್ ಕ್ವೀನ್ ರಚಿತಾ ರಾಮ್ ಇದೀಗ 'ಲಕ ಲಕ ಲ್ಯಾಂಬೋರ್ಗಿನಿ' ಹತ್ತಿದ್ದಾರೆ. ಸಾಲು ಸಾಲು ಸಿನಿಮಾಗಳ ನಡುವೆಯೂ ಸಂಗೀತ ನಿರ್ದೇಶಕ, ಗಾಯಕ ಚಂದನ್ ಶೆಟ್ಟಿ ಜೊತೆಗೆ ಮ್ಯೂಸಿಕ್ ವಿಡಿಯೊವೊಂದಕ್ಕೆ ಹೆಜ್ಜೆ ಹಾಕಿದ್ದಾರೆ. ಚಂದನ್ ಮ್ಯೂಸಿಕ್ ವಿಡಿಯೊಗಳಾದ '3ಪೆಗ್', 'ಚಾಕೊಲೇಟ್ ಗರ್ಲ್', 'ಪಾರ್ಟಿ ಫ್ರೀಕ್', 'ಟಕಿಲ' ಹಿಟ್ ಆಗಿದ್ದವು. ಇದೀಗ 'ಅಲೆ ಲೆಲೆಲೇ ಇವ್ಳು ಚೆಂದಾಗವ್ಳೆ.. ಒಳ್ಳೆ ರೆಡ್ ಕಲರ್ ಲ್ಯಾಂಬೋರ್ಗಿನಿ ಹಂಗೇ ಅವ್ಳೆ' ಎಂದು ಹಾಡಿದ್ದಾರೆ ಚಂದನ್. ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹೊಸ ಹಾಡಿನ ಪೋಸ್ಟರ್ ಅನ್ನು ಚಂದನ್ ಅಪ್‌ಲೋಡ್ ಮಾಡಿದ್ದಾರೆ. ಈ ಮ್ಯೂಸಿಕ್ ವಿಡಿಯೊಗೆ ಸಾಹಿತ್ಯ ಬರೆದು, ಹಾಡಿದ್ದಾರೆ ಚಂದನ್. ಹೊಸ ವರ್ಷ ಸಮೀಪಿಸುತ್ತಿದ್ದು, ಶೀಘ್ರದಲ್ಲೇ ಈ ಹಾಡು ಬಿಡುಗಡೆಯಾಗಲಿದೆ. ಖ್ಯಾತ ನಿರ್ದೇಶಕ ನಂದ ಕಿಶೋರ್ ಈ ಹಾಡನ್ನು ನಿರ್ದೇಶಿಸಿದ್ದಾರೆ. 'ಪೊಗರು' ಸಿನಿಮಾದಲ್ಲಿ ನಂದ ಕಿಶೋರ್ ಜೊತೆಗೆ ಚಂದನ್ ಕಾರ್ಯನಿರ್ವಹಿಸಿದ್ದರು. ಚಿತ್ರದ ಸಂಗೀತ ನಿರ್ದೇಕನಾಗಿ 'ಪೊಗರು', 'ಕರಾಬು' ಹಾಡಿನ ಸಾಹಿತ್ಯ ಬರೆದು ಹಾಡಿದ್ದರು.

'ವಿಕ್ರಾಂತ್ ರೋಣ' ಫೆ. 24ಕ್ಕೆ ತೆರೆಗೆ

ನಟ ಕಿಚ್ಚ ಸುದೀಪ್ ನಟನೆಯ, ಅನೂಪ್ ಭಂಡಾರಿ ನಿರ್ದೇಶನದ ಪ್ಯಾನ್ ಇಂಡಿಯಾ ಬಿಗ್‌ಬಜೆಟ್ ಸಿನಿಮಾ 'ವಿಕ್ರಾಂತ್ ರೋಣ' 2022ರ ಫೆ.24ಕ್ಕೆ ತೆರೆಕಾಣಲಿದೆ.

ನಿರೂಪ್ ಭಂಡಾರಿ ಹಾಗೂ ನೀತಾ ಅಶೋಕ್ ಮುಖ್ಯಭೂಮಿಕೆಯಲ್ಲಿ ನಟಿಸಿರುವ ಈ ಚಿತ್ರವು '3ಡಿ'ಯಲ್ಲಿ ತೆರೆಕಾಣಲಿದೆ. ಸುದೀಪ್ ಅವರೇ ಕನ್ನಡದ ಜೊತೆಗೆ, ಹಿಂದಿ, ತಮಿಳು, ತೆಲುಗು ಹಾಗೂ ಇಂಗ್ಲಿಷ್‌ನ ಡಬ್ಬಿಂಗ್ ಮಾಡಿದ್ದಾರೆ. ಕಳೆದ ಆಗಸ್ಟ್ 19ರಂದೇ ತೆರೆಯ ಮೇಲೆ ಬರಬೇಕಿದ್ದ ಈ ಸಿನಿಮಾ, ಕೋವಿಡ್ ಲಾಕ್‌ಡೌನ್ ಕಾರಣದಿಂದ ಮುಂದೂಡಲ್ಪಟ್ಟಿತ್ತು.



ಸುದೀಪ್

ಬಾಲಿವುಡ್ ನಟಿ ಜಾಕ್ವೆಲಿನ್ ಫರ್ನಾಂಡಿಸ್, ಈ ಚಿತ್ರದ ಮುಖಾಂತರ ಚಂದನವನಕ್ಕೆ ಹೆಜ್ಜೆ ಇಟ್ಟಿದ್ದು, ರಕೇಲ್ ಡಿಕೋಸ್ಟ ಉರ್ಫ್ 'ಗಡಂಗ್ ರಕ್ಕಮ್ಮ'ನಾಗಿ ವಿಶೇಷ ಪಾತ್ರದಲ್ಲಿ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ. ಹಿಂದಿ ಹಾಗೂ ಇತರ ಭಾಷೆಗಳಲ್ಲಿ ಪ್ರಮೋಷನ್ ಸೇರಿ ಚಿತ್ರದ ಬಜೆಟ್ ₹100 ಕೋಟಿ ದಾಟಿದೆ ಎಂದು ಇತ್ತೀಚೆಗೆ ಚಿತ್ರದ ನಿರ್ಮಾಪಕ ಜಾಕ್ ಮಂಜು ತಿಳಿಸಿದ್ದರು. ಜೀ ಸ್ಟುಡಿಯೊಸ್ ಹಾಗೂ ಕಿಚ್ಚ ಕ್ರಿಯೇಷನ್ಸ್‌ನಡಿ ಜಾಕ್ ಮಂಜು ಅವರ ಶಾಲಿನಿ ಆರ್ಟ್ಸ್ ಈ ಚಿತ್ರವನ್ನು ವಿತರಣೆ ಮಾಡಲಿದೆ. ಚಿತ್ರಕ್ಕೆ ಬಿ.ಅಜನೀಶ್ ಲೋಕನಾಥ್ ಸಂಗೀತವಿದೆ.





ಕಾರ್ಯಕಾರಿ ಸಮಿತಿಗೆ ಕೆಂಚಪ್ಪಗೌಡ ಬಣದಿಂದ 10 ಸದಸ್ಯರು ಆಯ್ಕೆ

ಒಕ್ಕಲಿಗರ ಸಂಘದ ಚುಕ್ಕಾಣಿಗೆ ನಾನಾ ಕಸರತ್ತು

• ವಿಜಯಕುಮಾರ್ ಎಸ್.ಕೆ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿ ಚುನಾವಣೆಯ ಮತ ಎಣಿಕೆ ಪ್ರಕ್ರಿಯೆ ಮುಗಿದ ಬೆನ್ನಲ್ಲೇ ಸಂಘದ ಚುಕ್ಕಾಣಿ ಹಿಡಿಯಲು ನಾನಾ ಕಸರತ್ತು ಆರಂಭವಾಗಿದೆ.

ಕಾರ್ಯಕಾರಿ ಸಮಿತಿಯು ಒಟ್ಟು 35 ಸದಸ್ಯರನ್ನು ಹೊಂದಿದ್ದು, ಅಧ್ಯಕ್ಷರಾಗಲು 18 ಜನರ ಬೆಂಬಲ ಅಗತ್ಯ. ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ 15 ಸ್ಥಾನಗಳಲ್ಲಿ ಹೆಚ್ಚು ಸ್ಥಾನ ಗಳಿಸಿದವರೇ ಅಧ್ಯಕ್ಷರಾಗುವುದು ಹಿಂದಿನಿಂದ ನಡೆದುಕೊಂಡು ಬಂದ ಸಂಪ್ರದಾಯ. ಈ ಬಾರಿ ಈ 15 ಸ್ಥಾನಗಳಲ್ಲಿ 10 ಸ್ಥಾನಗಳನ್ನು ಬಿ.ಕೆಂಚಪ್ಪಗೌಡ ಅವರ ಬಣ ಗೆದ್ದಿದೆ.

ಮಂಡ್ಯ ಜಿಲ್ಲೆಯ ನಾಲ್ಕು, ಹಾಸನ, ಮೈಸೂರು ಮತ್ತು ಕೋಲಾರ ಜಿಲ್ಲೆಗಳ ತಲಾ ಮೂರು, ತುಮಕೂರು ಜಿಲ್ಲೆಯ ಇಬ್ಬರು, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಯ ತಲಾ ಒಬ್ಬರು ಸೇರಿ ಒಟ್ಟು 20 ಸದಸ್ಯರಿದ್ದಾರೆ. ಇವರಲ್ಲಿ ಬಹುತೇಕರು ಹೊಸಬರೇ ಆಗಿದ್ದಾರೆ.

‘ಸ್ವಾಮೀಜಿ, ಹಿರಿಯರಿಂದ ಸಂಧಾನ’

‘ಅಧ್ಯಕ್ಷರು ಮತ್ತು ಇತರ ಪದಾಧಿಕಾರಿಗಳು ಯಾರಾಗಬೇಕು ಎಂಬುದನ್ನು ಸಮುದಾಯದ ಸ್ವಾಮೀಜಿಗಳು ಮತ್ತು ಹಿರಿಯರು ಸೇರಿ ತೀರ್ಮಾನಿಸಲಿದ್ದಾರೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಸದಸ್ಯರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಚುನಾವಣೆಯಲ್ಲಿ ಗೆದ್ದಿರುವ ಬಹುತೇಕರು ಆದಿ ಚುಂಚನಗಿರಿ ಮಠದೊಂದಿಗೆ ಒಡನಾಟ ಇಟ್ಟುಕೊಂಡವರೇ ಆಗಿದ್ದಾರೆ. ಹಾಗಾಗಿ, ಒಮ್ಮತದಿಂದ ಸಂಘ ಮುನ್ನಡೆಸಲು ನಿರ್ಮಲಾನಂದನಾಥ ಸ್ವಾಮೀಜಿ ಸಲಹೆಗಳನ್ನು ನೀಡುವ ಸಾಧ್ಯತೆಯೂ ಇದೆ. ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರ ಸಲಹೆಯನ್ನೂ ಪಡೆದು ತೀರ್ಮಾನಕ್ಕೆ ಬರುವ ನಿರೀಕ್ಷೆ ಇದೆ’ ಎಂದು ಅವರು ವಿವರಿಸಿದರು.

ನಾಲ್ಕು ಬಾರಿ ನಿರ್ದೇಶಕರಾಗಿ, ಎರಡು ಬಾರಿ ಕಾರ್ಯದರ್ಶಿಯಾಗಿ ಮತ್ತು ಒಮ್ಮೆ ಅಧ್ಯಕ್ಷರಾಗಿ ಕೆಲಸ ಮಾಡಿರುವ ಕೆಂಚಪ್ಪಗೌಡ ಈ ಬಾರಿ ಮತ್ತೆ ಅಧ್ಯಕ್ಷರಾಗುವ ಬಯಕೆ ಹೊಂದಿದ್ದಾರೆ. ತಮ್ಮ ಬಣವು ಮೇಲುಗೈ ಸಾಧಿಸಿರುವ ಹುಮ್ಮಸ್ಸಿನಲ್ಲಿರುವ ಅವರು ಅವಿರೋಧವಾಗಿ ಆಯ್ಕೆ ಆಗಲು ತಂತ್ರಗಾರಿಕೆ ಆರಂಭಿಸಿದ್ದಾರೆ.

ಕಿಮ್ಸ್ ವೈದ್ಯ ಡಾ. ಅಂಜನಪ್ಪ ಬಣದಿಂದ ಇಬ್ಬರು ಹಾಗೂ ವಿಧಾನ ಪರಿಷತ್ ಸದಸ್ಯ ಅ. ದೇವೇಗೌಡ ಬಣದಿಂದ ಮೂವರು ಚುನಾಯಿತರಾಗಿದ್ದಾರೆ. ಅಂಜನಪ್ಪ ಅವರೂ ಅಧ್ಯಕ್ಷ ಸ್ಥಾನಕ್ಕೆ ಆಕಾಂಕ್ಷಿ. ಬೆಂಗಳೂರು ಮತ್ತು ಸುತ್ತಮುತ್ತಲಿನ ಜಿಲ್ಲೆಗಳು ಹೊರತಾಗಿ ಉಳಿದ ಜಿಲ್ಲೆಗಳಿಂದ ಆಯ್ಕೆಯಾಗಿರುವ 20 ಸದಸ್ಯರ ಬೆಂಬಲ ಗಳಿಸಲು ಅವರು ಪ್ರಯತ್ನಿಸುತ್ತಿದ್ದಾರೆ.

ಸತತ ಮೂರು ಬಾರಿ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಚುನಾಯಿತರಾಗಿರುವ ಶ್ರವಣಬೆಳಗೊಳದ ಶಾಸಕ ಸಿ.ಎನ್. ಬಾಲಕೃಷ್ಣ ಅವರೂ ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಎಂದು ಸಂಘದ ಮೂಲಗಳು ತಿಳಿಸಿವೆ.

ತಡರಾತ್ರಿ ಪ್ರಕಟವಾದ ಫಲಿತಾಂಶ

ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ ಹಾಗೂ ತಮಿಳುನಾಡಿನ ಹೊಸೂರು ಜಿಲ್ಲಾ ಕ್ಷೇತ್ರಗಳ 15 ಸ್ಥಾನಗಳ ಫಲಿತಾಂಶ ಬುಧವಾರ ತಡರಾತ್ರಿ ಪ್ರಕಟವಾಯಿತು. ಗೆದ್ದವರ ವಿವರ ಇಂತಿದೆ.

ಡಾ. ಎಚ್.ಟಿ. ಅಂಜನಪ್ಪ(68,398 ಮತ), ಎಚ್.ಎನ್. ಅಶೋಕ್(61,892), ಬಿ.ಕೆಂಚಪ್ಪಗೌಡ(58,066), ಆರ್. ಪ್ರಕಾಶ್(56,694), ಎಚ್.ಸಿ. ಜಯಮುತ್ತು(56,254), ಸಿ.ದೇವರಾಜು ಹಾಪ್‌ಕಾಮ್ಸ್(55,903), ಎಚ್. ಶ್ರೀನಿವಾಸ್(49,217), ಸಿ.ಎಂ. ಮಾರೇಗೌಡ(48,492), ಬಿ.ವಿ. ರಾಜಶೇಖರಗೌಡ(46,180), ಕೆ.ಎಸ್. ಸುರೇಶ್(45,601), ಎಂ.ಎಸ್.ಉಮಾಪತಿ(44,709), ವೆಂಕಟರಾಮೇಗೌಡ(43,022), ಡಿ. ಹನುಮಂತಯ್ಯ ಚೋಳನಾಯಕನಹಳ್ಳಿ(41,687), ಎಂ. ಪುಟ್ಟಸ್ವಾಮಿ (41,165), ಡಾ. ವಿ. ನಾರಾಯಣಸ್ವಾಮಿ(40,728) ಆಯ್ಕೆಯಾಗಿದ್ದಾರೆ.

ಈ ಮೂರೂ ಜಿಲ್ಲೆಗಳಿಂದ ಒಟ್ಟು 141 ಅಭ್ಯರ್ಥಿಗಳು ಕಣದಲ್ಲಿದ್ದರು.

‘ಕಾರ್ಯಕಾರಿ ಸಮಿತಿಗೆ ಆಯ್ಕೆಯಾಗಿರುವ ನಾಲ್ಕೈದು ಸದಸ್ಯರನ್ನು ಹೊರತಾಗಿ ಉಳಿದವರೆಲ್ಲರೂ ಹೊಸಬರು. ಅಧ್ಯಕ್ಷರು ಯಾರಾಗಬೇಕು ಎಂಬ ಬಗ್ಗೆ ಚರ್ಚಿಸಿ ಒಮ್ಮತದ ತೀರ್ಮಾನಕ್ಕೆ ಬರುತ್ತೇವೆ’ ಎಂದು ಬಾಲಕೃಷ್ಣ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕೆಂಚಪ್ಪಗೌಡ ಅವರ ಬಣದಿಂದ 10 ಜನ ಚುನಾಯಿತರಾಗಿದ್ದೇವೆ. ಜೊತೆಗೆ 8 ಜನರ ಬೆಂಬಲ ನಮ್ಮ ಬಣಕ್ಕೆ ಸಿಕ್ಕಿದೆ. ಕೆಂಚಪ್ಪಗೌಡ ಅವರೇ ಅಧ್ಯಕ್ಷರಾಗಲಿದ್ದಾರೆ. ಇನ್ನಷ್ಟು ಸದಸ್ಯರು ನಮ್ಮ ಬಣ ಸೇರಿಕೊಳ್ಳಲಿದ್ದಾರೆ’ ಎಂದು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಚುನಾಯಿತರಾಗಿರುವ ಎಲ್.ಶ್ರೀನಿವಾಸ್ ಹೇಳಿದರು.

‘ಅಧ್ಯಕ್ಷ, ಎರಡು ಉಪಾಧ್ಯಕ್ಷ, ಕಾರ್ಯದರ್ಶಿ, ಖಜಾಂಚಿ, ಜಂಟಿ ಕಾರ್ಯದರ್ಶಿ ಸ್ಥಾನಗಳಿಗೆ ಡಿ.30ರೊಳಗೆ ಚುನಾವಣೆ ನಡೆಯಲಿದೆ. ಚುನಾವಣೆಗೆ ಮುನ್ನ ಗುಂಪುಗಳಿದ್ದವು. ಈಗ ಗುಂಪುಗಳನ್ನು ಬಿಟ್ಟು ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕಿದೆ. ಈ ನಿಟ್ಟಿನಲ್ಲಿ ಎಲ್ಲರನ್ನೂ ಒಂದೆಡೆ ಸೇರಿಸಿ ಸಭೆ ನಡೆಸಿ ಒಮ್ಮತದ ತೀರ್ಮಾನಕ್ಕೆ ಬರಲು ಪ್ರಯತ್ನಿಸುತ್ತಿದ್ದೇವೆ’ ಎಂದು ಕೆಂಚಪ್ಪಗೌಡ ತಿಳಿಸಿದರು.

‘ಬೆಂಗಳೂರಿನಲ್ಲಿ 10 ಸ್ಥಾನಗಳನ್ನು ಗೆದ್ದ ಮಾತ್ರಕ್ಕೆ ಅವರೇ ಅಧ್ಯಕ್ಷರಾಗುತ್ತಾರೆ ಎಂದು ಹೇಳಲಾಗದು. ಹೊರ ಜಿಲ್ಲೆಗಳಲ್ಲಿ 20 ಸದಸ್ಯರಿದ್ದಾರೆ. ಅವರೆಲ್ಲರೂ ಸೇರಿ ಬೇರೆ ಜಿಲ್ಲೆಯವರಿಗೆ ಅವಕಾಶ ಕಲ್ಪಿಸುವ ಸಾಧ್ಯತೆಯೂ ಇದೆ. ಎಲ್ಲಾ ರೀತಿಯ ಪ್ರಯತ್ನಗಳೂ ತೆರೆಮರೆಯಲ್ಲಿ ನಡೆಯುತ್ತಿವೆ. ಅಧ್ಯಕ್ಷ ಸ್ಥಾನಕ್ಕೆ ನಾನೂ ಆಕಾಂಕ್ಷಿ’ ಎಂದು ಬಿ.ಪಿ. ಮಂಜೇಗೌಡ ಹೇಳಿದರು.

ಸುದ್ದಿ 2 ನಿಮಿಷ

ಎಸಿಬಿ ಬಲೆಗೆ ಗ್ರಾ.ಪಂ ಅಧ್ಯಕ್ಷೆ

ರಾಮನಗರ: ಜಮೀನಿನ ಇ–ಖಾತೆ ಮಾಡಿಕೊಡಲು ₹ 2 ಲಕ್ಷ ಲಂಚ ಪಡೆಯುತ್ತಿದ್ದ ಬೆಂಗಳೂರು ದಕ್ಷಿಣ ತಾಲ್ಲೂಕಿನ ಚೋಳನಾಯಕನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶ್ವೇತಾ ಹಾಗೂ ಅವರ ಪತಿ ಶಿವರಾಜಕುಮಾರ್ ಎಸಿಬಿ ಅಧಿಕಾರಿಗಳ ಬಲೆಗೆ ಬಿದ್ದಿದ್ದಾರೆ.

ತಾವರೆಕೆರೆ ಗ್ರಾಮದ ನಿವಾಸಿಯೊಬ್ಬರು ಗಂಗೇನಹಳ್ಳಿ ಗ್ರಾಮದಲ್ಲಿರುವ 2 ಎಕರೆ 2 ಗುಂಟೆ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿಸಿಕೊಂಡಿದ್ದರು. ಇದಕ್ಕೆ ಇ–ಖಾತೆ ಮಾಡಿಕೊಡುವಂತೆ ಚೋಳನಾಯಕನಹಳ್ಳಿ ಗ್ರಾ.ಪಂ.ಗೆ ಅರ್ಜಿ ಸಲ್ಲಿಸಿದ್ದರು. ಆದರೆ, ಈ ಕೆಲಸಕ್ಕೆ ಪಂಚಾಯಿತಿಯ ಅಧ್ಯಕ್ಷೆ ಶ್ವೇತಾ ಮತ್ತು ಆಕೆಯ ಪತಿ ₹ 5 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ದೂರುದಾರರು ಎಸಿಬಿಗೆ ಮಾಹಿತಿ ನೀಡಿದ್ದು, ಅವರ ಸೂಚನೆ ಮೇರೆಗೆ ಶ್ವೇತಾ ಪತಿ ಶಿವರಾಜಕುಮಾರ್ ಅವರಿಗೆ ₹ 2 ಲಕ್ಷ ಲಂಚ ನೀಡುತ್ತಿದ್ದ ವೇಳೆ ರಾಮನಗರ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ದಾಳಿ ನಡೆಸಿ ಆರೋಪಿಗಳು ಹಾಗೂ ಹಣವನ್ನು ವಶಕ್ಕೆ ಪಡೆದರು.

ದಸ್ತಕಾರ್ ನೇಚರ್ ಉತ್ಸವ



ಬೆಂಗಳೂರು: ನಗರದ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ‘ದಸ್ತಕಾರ್ ನೇಚರ್ ಉತ್ಸವ’ ಆರಂಭವಾಗಿದ್ದು, ಇದು ಇದೇ 19ವರೆಗೆ ಮುಂದುವರಿಯಲಿದೆ.

ಉತ್ಸವದಲ್ಲಿ ದೇಶದ ವಿವಿಧ ಪ್ರದೇಶಗಳ ನುರಿತ ನೇಕಾರರು ತಯಾರಿಸಿದ ರೇಷ್ಮೆ–ಹತ್ತಿ ಬಟ್ಟೆಗಳು, ಆಭರಣಗಳು, ಕೈಯಿಂದ ಮಾಡಿದ ಕಾಗದ, ಕಲ್ಲುಗಳು, ಮರ, ಚರ್ಮ, ದಂತ, ಗಾಜು, ವಿವಿಧ ಲೋಹಗಳ ಕರಕುಶಲ ವಸ್ತುಗಳು, ಅಮೃತಶಿಲೆಯ (ಮಾರ್ಬಲ್) ಕುಸುರಿ ಮತ್ತು ವರ್ಣಚಿತ್ರಗಳನ್ನು ಪ್ರದರ್ಶಿಸಲಾಗಿದೆ. ಆಸಕ್ತರು ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕ: 9841278707

ಪರಿಚಯಸ್ಥರ ಮನೆಯಲ್ಲೇ ಕೃತ್ಯ ಎಸಗಿದ್ದ ಆರೋಪಿ

ಆಟಿಕೆ ಪಿಸ್ತೂಲ್ ತೋರಿಸಿ ಸುಲಿಗೆ; ಕ್ಯಾಬ್ ಚಾಲಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟಿಕೆ ಪಿಸ್ತೂಲ್ ಹಿಡಿದು ಒಂಟಿ ಮಹಿಳೆ ಮನೆಗೆ ನುಗ್ಗಿ ಸುಲಿಗೆ ಮಾಡಿದ್ದ ಆರೋಪದಡಿ ನಿಂಗಪ್ಪ ಎಂಬುವರನ್ನು ಗಂಗಮ್ಮನಗುಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಆಟಿಕೆ ಪಿಸ್ತೂಲ್

‘ಸಿಂಗಾಪುರ ನಿವಾಸಿಯಾದ ಆರೋಪಿ, ಕ್ಯಾಬ್ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಪರಿಚಯಸ್ಥರೇ ಆಗಿದ್ದ ಅಬ್ಬಿಗೆರೆಯ ಎನ್ಎಚ್ಆರ್ ಬಡಾವಣೆಯ ಮಹಿಳೆ ಮನೆಗೆ ನುಗ್ಗಿ ಕೃತ್ಯ ಎಸಗಿದ್ದರು. ಅವರಿಂದ ₹ 5 ಲಕ್ಷ ಮೌಲ್ಯದ ಚಿನ್ನಾಭರಣ, ಕಾರು ಹಾಗೂ ನಕಲಿ ಪಿಸ್ತೂಲ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದೂರುದಾರ ಮಹಿಳೆಯ ಸಂಬಂಧಿಕರೊಬ್ಬರು ತಮ್ಮ ಕಾರನ್ನು ಬಾಡಿಗೆಗೆ ಚಲಾಯಿಸಲೆಂದು ಆರೋಪಿಗೆ ನೀಡಿದ್ದರು. ಹೀಗಾಗಿ, ಮಹಿಳೆ ಮನೆಗೆ ಆರೋಪಿ ಆಗಾಗ ಬಂದು ಹೋಗುತ್ತಿದ್ದರು. ಚಿನ್ನಾಭರಣ ಹಾಗೂ ನಗದು ಇರುವುದನ್ನು ತಿಳಿದಿದ್ದರು.’

‘₹ 1 ಲಕ್ಷ ಸಾಲ ಮಾಡಿಕೊಂಡಿದ್ದ ಚಾಲಕ, ಅದನ್ನು ತೀರಿಸಲಾಗದೇ ಸಂಕಷ್ಟಕ್ಕೆ ಸಿಲುಕಿದ್ದರು. ಅದೇ ಕಾರಣಕ್ಕೆ ಮಹಿಳೆ ಮನೆಯಲ್ಲಿ ಕಳ್ಳತನ ಮಾಡಲು ಸಂಚು ರೂಪಿಸಿದ್ದರು. ಆಟಿಕೆ ಪಿಸ್ತೂಲ್ ಹಿಡಿದು ಮನೆಗೆ ನುಗ್ಗಿದ್ದ ಆರೋಪಿ, ಜೀವ ಬೆದರಿಕೆ ಹಾಕಿ ಸುಲಿಗೆ ಮಾಡಿ ಪರಾರಿಯಾಗಿದ್ದರು. ಪ್ರಕರಣ ದಾಖಲಾದ 13 ಗಂಟೆಯಲ್ಲೇ ಆರೋಪಿಯನ್ನು ಬಂಧಿಸಲಾಗಿದೆ’ ಎಂದೂ ಪೊಲೀಸರು ತಿಳಿಸಿದರು.

ಸ್ನೇಹಿತೆ ಮನೆಯಲ್ಲಿ ಕಳ್ಳತನ: ಸಂಪಿನಲ್ಲಿ ಚಿನ್ನಾಭರಣ ಪತ್ತೆ

ಬೆಂಗಳೂರು: ಅಣ್ಣನ ಮದುವೆ ಆಮಂತ್ರಣ ನೀಡುವ ಸೋಗಿನಲ್ಲಿ ಸ್ನೇಹಿತೆ ಮನೆಗೆ ಹೋಗಿ ಚಿನ್ನಾಭರಣ ಕಳವು ಮಾಡಿದ್ದ ಆರೋಪದಡಿ ಮಹಿಳೆಯೊಬ್ಬರನ್ನು ದೇವರಜೀವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿ ಆಜಾರ್ ಸಿದ್ದಿಕ್ ಬಂಧಿತರು. ಸ್ನೇಹಿತೆ ರೋಹಿನಾಜ್ ಎಂಬುವರ ಮನೆಗೆ ಡಿ. 14ರಂದು ಹೋಗಿದ್ದ ಆರೋಪಿ, ಚಿನ್ನಾಭರಣ ಕದ್ದು ಪರಾರಿಯಾಗಿದ್ದರು. ಆಜಾರ್ ಮೇಲೆಯೇ ಅನುಮಾನ ವ್ಯಕ್ತಪಡಿಸಿ ರೋಹಿನಾಜ್ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದ್ದು, ಅವರು ತಪ್ಪೊಪ್ಪಿಕೊಂಡಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಅಣ್ಣನ ಮದುವೆ ಆಮಂತ್ರಣ ಪತ್ರ ಹಿಡಿದು ರೋಹಿನಾಜ್ ಮನೆಗೆ ತೆರಳಿದ್ದ ಆರೋಪಿ, ಕುಶಲೋಪರಿ ವಿಚಾರಿಸಿದ್ದರು. ಬಟ್ಟೆ ಬದಲಿಸಬೇಕೆಂದು ಹೇಳಿ ಕೊಠಡಿಗೆ ಹೋಗಿದ್ದರು. ಬೀರುವಿನಲ್ಲಿದ್ದ 206 ಗ್ರಾಂ ಚಿನ್ನಾಭರಣ ಕದ್ದಿದ್ದರು. ನಂತರ, ಸ್ನೇಹಿತೆಗೆ ಯಾವುದೇ ಅನುಮಾನ ಬಾರದಂತೆ ವರ್ತಿಸಿ ಮನೆಯಿಂದ ಹೊರಟು ಹೋಗಿದ್ದರು.’

‘ಸ್ನೇಹಿತೆ ರೋಹಿನಾಜ್ ಮರುದಿನ ಬೀರುವಿನ ಬಾಗಿಲು ತೆರೆದಿದ್ದರು. ಆಭರಣಗಳು ಇರಲಿಲ್ಲ. ಅವಾಗಲೇ ಅವರು ಠಾಣೆಗೆ ಬಂದು ದೂರು ನೀಡಿದ್ದರು’ ಎಂದೂ ತಿಳಿಸಿದರು.

ನೀರಿನ ಸಂಪಿನಲ್ಲಿಟ್ಟಿದ್ದ ಆಭರಣ: ‘ಕದ್ದ ಆಭರಣವನ್ನು ಆರೋಪಿ, ಮನೆ ಸಮೀಪದಲ್ಲಿದ್ದ ನೀರಿನ ಸಂಪಿನಲ್ಲಿ ಬಚ್ಚಿಟ್ಟಿದ್ದರು. ಅವರು ನೀಡಿದ ಹೇಳಿಕೆ ಆಧರಿಸಿ ಆಭರಣ ಜಪ್ತಿ ಮಾಡಲಾಗಿದೆ’ ಎಂದೂ ಪೊಲೀಸರು ವಿವರಿಸಿದರು.

ಅಪರಾಧ ಸುದ್ದಿ

‘ಉತ್ತುಂಗ’ ಪುಸ್ತಕ ಬಿಡುಗಡೆ

‘ನಮ್ಮ ವ್ಯಕ್ತಿತ್ವ ಸಂಘದ ಪ್ರತಿಬಿಂಬದಂತೆ ಇರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಘದ ಹೆಸರಿನಿಂದ ಯಾರೂ ಗುರುತಿಸಿಕೊಳ್ಳಬಾರದು. ನಮ್ಮ ವ್ಯಕ್ತಿತ್ವವೇ ಸಂಘದ ಬಗ್ಗೆ ತಿಳಿಸುವಂತೆ ಇರಬೇಕು’ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಕಾರ್ಯಕಾರಿಣಿ ಸದಸ್ಯ ಸುರೇಶ್ ಜೋಶಿ (ಭಯ್ಯಾಜಿ) ಹೇಳಿದರು.


ಕೃಷ್ಣಪ್ರಸಾದ ಬದಿ ಅವರು ರಚಿಸಿರುವ ದಿವಂಗತ ಕೃ.ಸೂರ್ಯನಾರಾಯಣ ರಾವ್ ಅವರ ಜೀವನ ಚಿತ್ರಣ ಒಳಗೊಂಡ ‘ಉತ್ತುಂಗ’ ಪುಸ್ತಕ ಬಿಡುಗಡೆ ಮಾಡಿ ಅವರು ಬುಧವಾರ ಮಾತನಾಡಿದರು.

‘ಸಂಘವು ಸಂಸ್ಕಾರವನ್ನು ಕಲಿಸುತ್ತದೆ. ಅಲ್ಲಿ ಕೆಲಸ ಮಾಡುವವರ ವ್ಯಕ್ತಿತ್ವ ಸಂಘದ ಪ್ರತಿಬಿಂಬದಂತೆ ಇರಬೇಕು. ಪುಸ್ತಕಗಳು ವ್ಯಕ್ತಿಗಳ ಬದುಕಿನ ಹಾದಿಯ ಬಗ್ಗೆ ಅರಿಯಲು ಸಹಕಾರಿಯಾಗುತ್ತವೆ. ತಮ್ಮ ವ್ಯಕ್ತಿತ್ವದ ಮೂಲಕವೇ ಜನರಿಗೆ ಸಂಘದ ಮಹತ್ವ ಸಾರಿದ ಸೂರ್ಯನಾರಾಯಣ ಅವರನ್ನು ಈ ಪುಸ್ತಕದ ಮೂಲಕ ಸ್ಮರಿಸುತ್ತಿರುವುದು ಖುಷಿಯ ವಿಷಯ’ ಎಂದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ–ಮಧ್ಯ ಕ್ಷೇತ್ರದ ಕ್ಷೇತ್ರೀಯ ಸಂಘ ಚಾಲಕ ವಿ.ನಾಗರಾಜ್, ‘ಸೂರ್ಯನಾರಾಯಣ ಅವರ ಚಿಂತನೆಯಲ್ಲಿ ಖಚಿತತೆ ಇತ್ತು. ಮಾತಿನಲ್ಲಿ ಪ್ರಖರತೆ ಇತ್ತು. 70 ವರ್ಷಗಳ ಕಾಲ ಪ್ರಚಾರಕ ಜೀವನ ನಡೆಸಿದ ಅವರು ಸಂಘದ ಕೆಲಸಕ್ಕೆ ಹೊಸ ಆಯಾಮ ತಂದುಕೊಟ್ಟರು’ ಎಂದರು.

‘ಮಹಾತ್ಮ ಗಾಂಧೀಜಿಯ ಹತ್ಯೆಯ ನಂತರ ಸ್ವಯಂಸೇವಕರು ಹಾಗೂ ಸಂಘದ ಕಾರ್ಯಕರ್ತರು ಬಂಧನಕ್ಕೊಳಪಟ್ಟರು. ಆಗ ‘ಸೂರು’ ಅವರೂ ಜೈಲು ಸೇರಿದ್ದರು. ಆಗಿನ ಕಾಲದಲ್ಲಿ ಸೆರೆಮನೆಯಲ್ಲಿದ್ದವರಿಗೆ ಸರ್ಕಾರದಿಂದ ತಿಂಗಳಿಗೆ 10 ಬೀಡಿ ಅಥವಾ ಸಿಗರೇಟ್ ನೀಡಲಾಗುತ್ತಿತ್ತು. ‘ಸೂರು’ ಅವರು ತಮ್ಮ ಜೊತೆಗಿದ್ದ ಇತರ 14 ಮಂದಿಯಿಂದ ಸಿಗರೇಟಿಗಾಗಿ ನೀಡುವ ಹಣ ಸಂಗ್ರಹಿಸಿ ಅದರಿಂದ ವಿವೇಕಾನಂದರ ಪುಸ್ತಕಗಳನ್ನು ಖರೀದಿಸಿದ್ದರು. ಅದನ್ನು ಜೈಲಿನ ಗ್ರಂಥಾಲಯಕ್ಕೆ ಕೊಟ್ಟಿದ್ದರು’ ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಕೃಷ್ಣಪ್ರಸಾದ ಬದಿ ಅವರ ಅನುವಾದಿತ ‘ಪಥಿಕ ಮತ್ತು ಪಾಥೇಯ’ ಕೃತಿಯನ್ನೂ ಬಿಡುಗಡೆ ಮಾಡಲಾಯಿತು.



ಸುರೇಶ್ ಜೋಶಿ (ಮಧ್ಯ) ಅವರು ಪುಸ್ತಕ ಬಿಡುಗಡೆ ಮಾಡಿದರು. ಲೇಖಕ ಕೃಷ್ಣಪ್ರಸಾದ ಬದಿ (ಎಡ) ಹಾಗೂ ವಿ.ನಾಗರಾಜ್ ಇದ್ದರು– ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

ಹೆಸರು: ಉತ್ತುಂಗ
ಲೇಖಕ: ಕೃಷ್ಣಪ್ರಸಾದ ಬದಿ
ಪ್ರಕಾಶನ: ಸಾಹಿತ್ಯ ಸಂಗಮ
ಪುಟ: 236
ಬೆಲೆ: ₹200

ಎಂಜಿನಿಯರ್, ಪತ್ನಿ, ಪುತ್ರಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ತುಮಕೂರು: ಹೇಮಾವತಿ ನಾಲಾ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಪತ್ನಿ ಮತ್ತು ಪುತ್ರಿಯೊಂದಿಗೆ ನಾಲೆಗೆ ಹಾರಿ ಗುರುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಎಂಜಿನಿಯರ್ ರಮೇಶ್ (55), ಪತ್ನಿ ಮಮತಾ (45), ಪುತ್ರಿ ಶುಭಾ (25) ಆತ್ಮಹತ್ಯೆ ಮಾಡಿಕೊಂಡವರು.

ಗುಬ್ಬಿ ತಾಲ್ಲೂಕಿನ ಸಾಗರನಹಳ್ಳಿ ಗೇಟ್ ಸಮೀಪ ಗುರುವಾರ ರಾತ್ರಿ ಹೇಮಾವತಿ ನಾಲೆಗೆ ಹಾರಿದ್ದಾರೆ. ಮಮತಾ ಮತ್ತು ಶುಭಾ ಅವರ ಮೃತದೇಹ ಪತ್ತೆಯಾಗಿದ್ದು, ರಮೇಶ್ ಅವರ ಶವದ ಶೋಧ ಕಾರ್ಯ ಮುಂದುವರಿದಿದೆ. ಶುಭಾ ಅವರಿಗೆ ಕಳೆದ ತಿಂಗಳಷ್ಟೇ ಮದುವೆ ಮಾಡಿಕೊಡಲಾಗಿತ್ತು. ಕೌಟುಂಬಿಕ ಕಲಹದಿಂದ ಆತ್ಮಹತ್ಯೆ ಮಾಡಿಕೊಂಡಿರಬಹುದು ಎನ್ನಲಾಗಿದೆ. ತಿಪಟೂರು ತಾಲ್ಲೂಕು ಕೆ.ಬಿ. ಕ್ರಾಸ್ ನಾಲಾ ವಲಯದಲ್ಲಿ ರಮೇಶ್ ಕಾರ್ಯ ನಿರ್ವಹಿಸುತ್ತಿದ್ದರು.

ಮರಳು ಚಿತ್ರಕಲೆ ಪ್ರದರ್ಶನ 21ರಂದು

ಬೆಂಗಳೂರು: ಕಲಾವಿದ ರಾಘವೇಂದ್ರ ಹೆಗಡೆ ರಚಿಸಿರುವ ಮರಳು ಚಿತ್ರಕಲೆ ಪ್ರದರ್ಶನ ‘ಸ್ಯಾಂಡ್ಸ್ ಆಫ್ ಟೈಮ್’ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಇದೇ 21ರಿಂದ 27ರವರೆಗೆ ನಡೆಯಲಿದೆ.

ಪ್ರದರ್ಶನದ ಉದ್ಘಾಟನಾ ಸಮಾರಂಭ ಇದೇ 21ರಂದು ಸಂಜೆ 4.30ಕ್ಕೆ ನಡೆಯಲಿದ್ದು, ಗ್ರ್ಯಾಮೀ ಪ್ರಶಸ್ತಿ ವಿಜೇತ ಸಂಗೀತ ಸಂಯೋಜಕ ರಿಕಿ ಕೇಜ್, ರಾಜ್ಯಸಭಾ ಸದಸ್ಯ ಕೆ.ಸಿ.ರಾಮಮೂರ್ತಿ ಮತ್ತು ಕಲಾವಿದ ಚಂದ್ರನಾಥ ಆಚಾರ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಬೆಳಿಗ್ಗೆ ಗಂಟೆ 10ರಿಂದ ಸಂಜೆ 7.30ರವರೆಗೆ ಸಾರ್ವಜನಿಕರಿಗೆ ಪ್ರವೇಶ ಇರಲಿದೆ.

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಹ್ಯಾಕ್: ದೋಷಾರೋಪ ಪಟ್ಟಿ ಸಲ್ಲಿಕೆ– ಜ್ಞಾನೇಂದ್ರ

ಪರಿಷತ್‌ನಲ್ಲಿ ಬಿಟ್ ಕಾಯಿನ್ ಸದ್ದು

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ರಾಜ್ಯದಲ್ಲಿ ರಾಜಕೀಯ ತಲ್ಲಣ ಸೃಷ್ಟಿಸಿದ್ದ ಬಿಟ್ ಕಾಯಿನ್ ಹಗರಣ ಗುರುವಾರ ವಿಧಾನ ಪರಿಷತ್ ಕಲಾಪದ ವೇಳೆ ಪ್ರಶ್ನೋತ್ತರ ಅವಧಿಯಲ್ಲಿ ಪ್ರಸ್ತಾಪಗೊಂಡು ಕೆಲಹೊತ್ತು ಸದ್ದು ಮಾಡಿತು.

ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಗೃಹ ಸಚಿವ ಆರಗ ಜ್ಞಾನೇಂದ್ರ, 'ಈ ಹಗರಣಕ್ಕೆ ಸಂಬಂಧಿಸಿದಂತೆ ಮೂರು ವರ್ಷಗಳಲ್ಲಿ 11 ಪ್ರಕರಣಗಳು ದಾಖಲಾಗಿವೆ. ಕೆಲವು ಪ್ರಕರಣಗಳು ತನಿಖಾ ಹಂತದಲ್ಲಿವೆ. ತನಿಖೆಯಲ್ಲಿ ಯಾವುದೇ ಲೋಪ ಆಗಿಲ್ಲ. ಸರ್ಕಾರದ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ನಡೆಸುವ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅನ್ನು ಶ್ರೀಕಿ ಹ್ಯಾಕ್ ಮಾಡಿದ ಪ್ರಕರಣದ ಬಗ್ಗೆ ತನಿಖೆ ನಡೆಸಿದ್ದ ಸಿಐಡಿ ದೋಷಾರೋಪ ಪಟ್ಟಿ ಸಲ್ಲಿಸಿದೆ. ಆರೋಪಿ ಶ್ರೀಕೃಷ್ಣ (ಶ್ರೀಕಿ) ಯನ್ನು ರಕ್ಷಣೆ ಮಾಡಿಲ್ಲ' ಎಂದರು.

'ವಿಚಾರಣೆ ವೇಳೆ ಶ್ರೀಕಿಗೆ ಪೊಲೀಸರು ಹಿಂಸೆ ನೀಡಿದ್ದಾರೆ' ಎಂಬ ಆರೋಪಕ್ಕೆ, 'ಈ ಪ್ರಕರಣಗಳ ಪೈಕಿ ಎರಡರಲ್ಲಿ ಮಾತ್ರ ಶ್ರೀಕಿ ಆರೋಪಿ. ಅವನಿಂದ ಬಲವಂತವಾಗಿ ಹೇಳಿಕೆ ಪಡೆದಿಲ್ಲ. ತನಿಖೆ ಸಮರ್ಪಕವಾಗಿ, ಪಾರದರ್ಶಕವಾಗಿ ನಡೆದಿದೆ. ಬಿಟ್ ಕಾಯಿನ್ ಕದಿಯಲು ಪೊಲೀಸರು ಶ್ರೀಕಿಯನ್ನು ಬಳಸಿಕೊಂಡಿದ್ದಾರೆ. ಅವನಿಗೆ ಡ್ರಗ್ಸ್ ನೀಡಿದ್ದಾರೆ ಎನ್ನುವುದು ಆಧಾರರಹಿತ ಆರೋಪ. ಬೆಂಗಳೂರು ಪೊಲೀಸರು ಸಮರ್ಥವಾಗಿ ತನಿಖೆ ನಡೆಸುತ್ತಿದ್ದಾರೆ. ಶ್ರೀಕಿ ಸದ್ಯ ಜಾಮೀನು ಪಡೆದು ಬಿಡುಗಡೆಯಾಗಿದ್ದು, ಆತನನ್ನು ಯಾರು ಬೇಕಾದರೂ ಸಂಪರ್ಕಿಸಿ ಮಾಹಿತಿ ಪಡೆಯಬಹುದು' ಎಂದರು.

ಸಚಿವರ ಉತ್ತರದಿಂದ ಸಮಾಧಾನಗೊಳ್ಳದ ವೆಂಕಟೇಶ್, 'ಮಗನಿಗೆ ಡ್ರಗ್ಸ್ ನೀಡಲಾಗಿದೆ ಎಂದು ಶ್ರೀಕಿ ಅವರ ತಂದೆ ಆರೋಪಿಸಿದ್ದಾರೆ. ಪೊಲೀಸರು ಹಿಂಸೆ ನೀಡಿದ್ದಾರೆ ಎಂದೂ ಹೇಳಿದ್ದಾರೆ. ಈ ಪ್ರಕರಣದಲ್ಲಿ ಪ್ರಭಾವಿ ವ್ಯಕ್ತಿಗಳು, ರಾಜಕೀಯ ನಾಯಕರು ಭಾಗಿಯಾಗಿರುವ ಆರೋಪವೂ ಇದೆ. ಇದರಿಂದಾಗಿ ಪ್ರಕರಣದ ಸೂಕ್ತ ತನಿಖೆ ನಡೆಸಬೇಕು. ಪ್ರಕರಣದಲ್ಲಿ ಭಾಗಿಯಾದವರನ್ನು ರಕ್ಷಿಸುವ ಕೆಲಸವನ್ನು ಸರ್ಕಾರ ಮಾಡಬಾರದು' ಎಂದರು.

'ಶ್ರೀಕಿಗೆ ಡ್ರಗ್ಸ್ ನೀಡಿರುವ ಬಗ್ಗೆ ಪೊಲೀಸರು ಸಮರ್ಪಕವಾಗಿ ವೈದ್ಯಕೀಯ ತಪಾಸಣೆ ಮಾಡಿಲ್ಲ. ಮೊದಲು ಹೊಟ್ಟೆಯನ್ನು ಸ್ವಚ್ಛಗೊಳಿಸಿ, ಬಳಿಕ ಎಫ್‌ಎಸ್‌ಎಲ್ ವರದಿಗೆ ಕಳುಹಿಸಿಕೊಡಲಾಗಿದೆ. ಇದು ಸರಿಯಲ್ಲ' ಎಂದರು.

ಆಗ ಮಧ್ಯಪ್ರವೇಶಿಸಿದ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, 'ವೈದ್ಯಕೀಯ ತಪಾಸಣೆಯಲ್ಲಿ ಯಾವುದೇ ಲೋಪ ಆಗಿಲ್ಲ. ಸರ್ಕಾರ ವ್ಯವಸ್ಥಿತವಾಗಿಯೇ ತಪಾಸಣೆ ನಡೆಸಿದೆ. ಎಫ್‌ಎಸ್‌ಎಲ್ ವರದಿಗೆ ಕಳುಹಿಸುವ ಮೊದಲು ಬೌರಿಂಗ್ ಆಸ್ಪತ್ರೆಯಲ್ಲಿ ಕೋವಿಡ್ ತಪಾಸಣೆ ನಡೆಸಲಾಗಿದೆ ಅಷ್ಟೇ' ಎಂದು ಸಮಜಾಯಿಷಿ ನೀಡಿದರು.

'ಇದೊಂದು ಗಂಭೀರ ಪ್ರಕರಣ. ಈ ವಿಚಾರದಲ್ಲಿ ಅರ್ಧ ಗಂಟೆ ಚರ್ಚೆಗೆ ನೀಡಬೇಕು' ಎಂದು ಕಾಂಗ್ರೆಸ್ ಸದಸ್ಯರು ಒತ್ತಾಯಿಸಿದರು. ಆಗ ಸಭಾಪತಿ ಬಸವರಾಜ ಹೊರಟ್ಟಿ, ಪ್ರತ್ಯೇಕ ಪತ್ರವನ್ನು ನೀಡಿದರೆ ಅವಕಾಶ ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದರು.

'ಎತ್ತಿನಹೊಳೆ ಭೂಸ್ವಾಧೀನ ಅಡೆತಡೆ ನಿವಾರಣೆ'

ಬೆಳಗಾವಿ (ಸುವರ್ಣ ವಿಧಾನಸೌಧ): 'ಬಯಲುಸೀಮೆಯ ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸುವ ಎತ್ತಿನಹೊಳೆ ಯೋಜನೆಯ ಭೂಸ್ವಾಧೀನದ ಅಡೆತಡೆಗಳನ್ನು ನಿವಾರಿಸಿ, ತ್ವರಿತಗತಿಯಲ್ಲಿ ಯೋಜನೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ಗುರುವಾರ ವಿಧಾನಪರಿಷತ್ತಿನಲ್ಲಿ ಕಾಂಗ್ರೆಸ್ಸಿನ ಎಂ.ಎ. ಗೋಪಾಲಸ್ವಾಮಿ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು ಎರಡು ಹಂತಗಳಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದೆ. ಮೊದಲ ಹಂತದಲ್ಲಿ ಎತ್ತಿನಹೊಳೆ ಯೋಜನೆಯ ಲಿಫ್ಟ್ ಕಾಮಗಾರಿಗಳು ಹಾಗೂ ವಿದ್ಯುತ್ ಪೂರೈಕೆ ಕಾಮಗಾರಿಗಳು, ಎರಡನೇ ಹಂತದಲ್ಲಿ ಎತ್ತಿನಹೊಳೆ ಗುರುತ್ವ ಕಾಲುವೆ (260.00 ಕಿ.ಮೀ), ಟಿ.ಜಿ.ಹಳ್ಳಿ ಮತ್ತು ರಾಮನಗರ ಫೀಡರ್ ಕಾಲುವೆ, ಮಧುಗಿರಿ ಫೀಡರ್ ಕಾಲುವೆ ಹಾಗೂ ಗೌರಿಬಿದನೂರು ಫೀಡರ್ ಕಾಲುವೆ ಮತ್ತು ಭೈರಗೊಂಡ್ಲು ಜಲಾಶಯ ನಿರ್ಮಾಣ ಕಾಮಗಾರಿ' ಎಂದರು.

'ಮೊದಲನೇ ಹಂತದ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಲಿಫ್ಟ್ ಕಾಮಗಾರಿಗಳು ಹಾಗೂ ವಿದ್ಯುತ್ ಪೂರೈಕೆ ಕಾಮಗಾರಿಗಳು ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಬರುತ್ತಿವೆ. ಈ ಕಾಮಗಾರಿಗಳು ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದ್ದು, ಮಾರ್ಚ್ 2022ರ ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳಿಸಿ ಮುಂದಿನ ಮುಂಗಾರಿನ ಹಂಗಾಮಿನಲ್ಲಿ ಪ್ರಾಯೋಗಿಕವಾಗಿ ನೀರು ಎತ್ತಲು ಯೋಜಿಸಲಾಗಿದೆ' ಎಂದು ಸಚಿವರು ವಿವರಿಸಿದರು.

ಕೋವಿಡ್: ವಿದೇಶಿಗರಿಗೆ ಅತಂತ್ರರಾಗುವ ಆತಂಕ

ಪ್ರಜಾವಾಣಿ ವಾರ್ತೆ

> **ಕೋವಿಡ್‌ನಿಂದಾಗಿ ಅಂತರರಾಷ್ಟ್ರೀಯ ವಿಮಾನಯಾನ ಇನ್ನೂ ಪ್ರಾರಂಭವಾಗಿಲ್ಲ. ನಮ್ಮನ್ನು ದೇಶ ಬಿಡುವಂತೆ ವಿದೇಶಾಂಗ ಇಲಾಖೆ ಸೂಚಿಸಿದೆ**
> **ವಿಲಿಯಂ,** ಬ್ರಿಟನ್ ಪ್ರಜೆ

ಗೋಕರ್ಣ: ಕಳೆದ ವರ್ಷ ಕೋವಿಡ್ ಕಾರಣದಿಂದ ಇಲ್ಲೇ ಉಳಿದುಕೊಂಡಿದ್ದ ವಿದೇಶಿ ಪ್ರವಾಸಿಗರಿಗೆ ವಿದೇಶಾಂಗ ಇಲಾಖೆಯು ನಿರ್ದಿಷ್ಟ ದಿನಾಂಕದೊಳಗೆ ದೇಶ ಬಿಡುವಂತೆ ಸೂಚಿಸುತ್ತಿದೆ. ಆದರೆ, ಯುರೋಪ್‌ನ ವಿವಿಧ ದೇಶಗಳಲ್ಲಿ ಪುನಃ ಲಾಕ್‌ಡೌನ್ ಆರಂಭವಾಗಿದ್ದು, ಅವರಿಗೆ ಆತಂಕ ಮೂಡಿಸಿದೆ.



ಇಲ್ಲಿಯವರೆಗೆ ಯಾವುದೇ ಸಮಸ್ಯೆಯಿಲ್ಲದೆ ವೀಸಾ ಮುಂದುವರಿಸಿ ಕೊಡಲಾಗುತ್ತಿತ್ತು. ಆದರೆ, ಈಗ ಪ್ರವಾಸಿ ವೀಸಾವನ್ನು ಒಂದು ತಿಂಗಳ ಅವಧಿಗೆ ಮಾತ್ರ ನೀಡಲಾಗುತ್ತಿದೆ. ವ್ಯಾಪಾರಕ್ಕಾಗಿ ನೀಡುವ ವೀಸಾ ಒಂದು ವರ್ಷದ ಅವಧಿ ಹೊಂದಿದೆ. ಆದರೆ, ಅದಕ್ಕೆ ಹೆಚ್ಚು ಶುಲ್ಕವಿದ್ದು, ಎಲ್ಲರಿಗೂ ಸಿಗುವುದಿಲ್ಲ. ಈ ನಡುವೆ, ಓಮೈಕ್ರಾನ್ ನಿಯಂತ್ರಣದ ಕ್ರಮವಾಗಿ ಜ.31ರವರೆಗೆ ವಿಮಾನಗಳ ಅಂತರರಾಷ್ಟ್ರೀಯ ಕಾರ್ಯಾಚರಣೆಯನ್ನು ರದ್ದು ಪಡಿಸಲಾಗಿದೆ.

'ನಾವು ನಮ್ಮ ದೇಶಕ್ಕೆ ಹೋದರೆ ವಿಮಾನ ನಿಲ್ದಾಣದಲ್ಲೇ ವಾರಗಟ್ಟಲೆ ಕ್ವಾರಂಟೈನ್ ಆಗಬೇಕು. ನಮ್ಮ ಹತ್ತಿರ ಅಷ್ಟು ಹಣವೂ ಇಲ್ಲ. ಏನು ಮಾಡಬೇಕೆಂದೇ ತಿಳಿಯುತ್ತಿಲ್ಲ' ಎನ್ನುತ್ತಾರೆ ಬ್ರಿಟನ್ ಪ್ರಜೆ ವಿಲಿಯಂ.

ಇಲ್ಲಿಗೆ ಬ್ರಿಟನ್, ಫ್ರಾನ್ಸ್, ಇಟಲಿ, ಸ್ಪೇನ್, ಜರ್ಮನಿ, ಆಸ್ಟ್ರಿಯಾ, ಇಸ್ರೇಲ್ ಮತ್ತು ರಷ್ಯಾ ಪ್ರಜೆಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಕೆಲವರಂತೂ ಸತತವಾಗಿ 2–3 ದಶಕಗಳಿಂದಲೂ ಭೇಟಿ ನೀಡುತ್ತಿದ್ದಾರೆ. ತಮಗೆ ವೀಸಾ ಅವಧಿಯನ್ನು ವಿಸ್ತರಿಸಬೇಕು ಎಂದು ಹಲವರು ವಿದೇಶಾಂಗ ಇಲಾಖೆಗೆ ಒತ್ತಾಯವನ್ನೂ ಮಾಡಿದ್ದಾರೆ. ಕನಿಷ್ಠ ಐದು ತಿಂಗಳಿಗಾದರೂ ಅವಕಾಶ ಕೊಡಬೇಕು ಎಂದು ಆಗ್ರಹಿಸಿದ್ದಾರೆ.



ಕಾರ್ಯಕ್ರಮದಲ್ಲಿ ವಾರಾಣಸಿಯ ಭಾರತೀಯ ತಂತ್ರಜ್ಞಾನ ಸಂಸ್ಥೆಯ(ಬಿಎಚ್‌ಯು) ಆಡಳಿತ ಮಂಡಳಿ ಅಧ್ಯಕ್ಷ ಕೋಟಾ ಹರಿನಾರಾಯಣ ಅವರು ಸಮ್ಮೇಳನದ ಕೈಪಿಡಿ ಬಿಡುಗಡೆ ಮಾಡಿದರು. ಪ್ರಾಚಾರ್ಯ ಡಾ.ಎಸ್ ಮುರಳೀಧರ್, ಟ್ರಸ್ಟಿ ಅವಿರಾಮ್ ಶರ್ಮಾ, ಇಂದಿರಾ ರಾವ್, ಸಮ್ಮೇಳನದ ಅಧ್ಯಕ್ಷ ಡಾ. ನಳಿನಾಕ್ಷ್ ವ್ಯಾಸ್ ಹಾಗೂ ಡಾ. ಸುರೇಶ ರಾಮಸ್ವಾಮಿ ರೆಡ್ಡಿ ಇದ್ದಾರೆ –ಪ್ರಜಾವಾಣಿ ಚಿತ್ರ

ವಿಮಾನ ಸುರಕ್ಷತೆಗಾಗಿ 'ಐವಿಎಚ್‌ಎಂ'

ಬೆಂಗಳೂರು: ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು ವೈಬ್ರೇಷನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಸಹಯೋಗದಲ್ಲಿ ನಗರದಲ್ಲಿ ಹಮ್ಮಿಕೊಂಡಿರುವ 'ಕಂಪನ ಎಂಜಿನಿಯರಿಂಗ್ ಮತ್ತು ಯಂತ್ರಗಳ ತಂತ್ರಜ್ಞಾನ' ಕುರಿತ ಮೂರು ದಿನಗಳ 'ವೆಟೊಮ್ಯಾಕ್-2021' ಸಮ್ಮೇಳನ ಗುರುವಾರ ಆರಂಭವಾಯಿತು.

ತಂತ್ರಜ್ಞಾನ ಕ್ಷೇತ್ರದಲ್ಲಿನ ಬದಲಾವಣೆ, ಅವಕಾಶಗಳ ಬಗ್ಗೆ ಪ್ರಾಧ್ಯಾಪಕರು ಹಾಗೂ ವಿಷಯ ತಜ್ಞರು ಚರ್ಚಿಸಿದರು. ಕೃತಕ ಬುದ್ಧಿಮತ್ತೆ ಸೇರಿದಂತೆ ವಿವಿಧ ತಂತ್ರಜ್ಞಾನಗಳನ್ನು ಸಾರಿಗೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಅಳವಡಿಸಿಕೊಳ್ಳುವ ಸಾಧ್ಯತೆಯ ಬಗ್ಗೆಯೂ ವಿಶ್ಲೇಷಣೆ ನಡೆಸಿದರು.

'ವಿಮಾನಗಳ ಸುರಕ್ಷತೆ ಖಚಿತಪಡಿಸಿಕೊಳ್ಳಲು ವಾಹನಗಳ ಸದೃಢತೆಯ ಸಮಗ್ರ ನಿರ್ವಹಣೆ ವ್ಯವಸ್ಥೆ (ಐವಿಎಚ್‌ಎಂ) ಸಹಕಾರಿ. ಈ ವ್ಯವಸ್ಥೆಯನ್ನು ವಿಮಾನಯಾನ ಸಂಸ್ಥೆಗಳು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳಬೇಕು' ಎಂದು ನೀತಿ ಆಯೋಗದ ಸದಸ್ಯ ವಿ.ಕೆ.ಸಾರಸ್ವತ್ ಅಭಿಪ್ರಾಯಪಟ್ಟರು.

'ಐವಿಎಚ್‌ಎಂ ವ್ಯವಸ್ಥೆಯಿಂದ ವಾಹನಗಳ ಚಲನೆಯನ್ನು ನೈಜ ಸಮಯದಲ್ಲಿ ಗುರುತಿಸಬಹುದು. ಸಾಧನದ ದೋಷ ಪತ್ತೆ ಹಚ್ಚಲು ಹಾಗೂ ಅದರ ಕಾರ್ಯಕ್ಷಮತೆ ನಿರ್ಣಯಿಸಲು ಇದು ಸಹಕಾರಿ. ಸರಪಳಿ ಆಧಾರಿತ ಈ ವ್ಯವಸ್ಥೆಯಲ್ಲಿ ದತ್ತಾಂಶ ನಿರ್ವಹಣಾ ಕೇಂದ್ರಗಳಿಗೆ ಮಾಹಿತಿ ರವಾನೆಯಾಗುತ್ತಾ ಇರುತ್ತದೆ. ಸೆನ್ಸಾರ್ ಆಧಾರಿತ ಈ ವ್ಯವಸ್ಥೆಯು ಬಹುಪಯೋಗಿ' ಎಂದು ಹೇಳಿದರು.

ಬಿಎಂಎಸ್ ಶಿಕ್ಷಣ ಟ್ರಸ್ಟ್‌ನ ಟ್ರಸ್ಟಿ ಅವಿರಾಮ್ ಶರ್ಮಾ, 'ತಂತ್ರಜ್ಞಾನ ಕ್ಷೇತ್ರವು ವೇಗವಾಗಿ ಸಾಗುತ್ತಿದೆ. ಅಲ್ಲಿನ ಬದಲಾವಣೆಗಳನ್ನು ಗಮನಿಸುವ ಜೊತೆಗೆ ಅದರ ವೇಗಕ್ಕೆ ಹೊಂದಿಕೊಳ್ಳಬೇಕು' ಎಂದು ತಿಳಿಸಿದರು.

ಕಾಲೇಜಿನ ಉಪಪ್ರಾಂಶುಪಾಲ ಡಾ. ಸುರೇಶ್ ರಾಮಸ್ವಾಮಿ ರೆಡ್ಡಿ, 'ನಮ್ಮ ಕಾಲೇಜು 13 ಪದವಿಪೂರ್ವ ಹಾಗೂ 16 ಸ್ನಾತಕೋತ್ತರ ಕೋರ್ಸ್‌ಗಳನ್ನು ನಡೆಸುತ್ತಿದೆ. ಸಂಶೋಧನೆಗಳಿಗೂ ಆದ್ಯತೆ ನೀಡುತ್ತಿದೆ. ಪಠ್ಯದ ಜೊತೆಗೆ ಪಠ್ಯೇತರ ಕಾರ್ಯಕ್ರಮಗಳಿಗೂ ಮಹತ್ವ ಕೊಡಲಾಗುತ್ತಿದೆ. ಏರೋಸ್ಪೇಸ್ ಎಂಜಿನಿಯರಿಂಗ್ ವಿಭಾಗವನ್ನು ಇತ್ತೀಚೆಗೆ ಪ್ರಾರಂಭಿಸಲಾಗಿದ್ದು, ಅಲ್ಲಿಯೂ ಆವಿಷ್ಕಾರಗಳಿಗೆ ಉತ್ತೇಜನ ನೀಡಲಾಗುತ್ತಿದೆ' ಎಂದು ಹೇಳಿದರು.

ಇದೇ 19ರವರೆಗೆ ಪ್ರದರ್ಶನ • ಸಾರ್ವಜನಿಕರು, ವಿದ್ಯಾರ್ಥಿಗಳಿಗೆ ವೀಕ್ಷಣೆಗೆ ಅವಕಾಶ

ಬಿಇಎಲ್: ರಕ್ಷಣಾ ಸಾಮಗ್ರಿಗಳ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಲಹಳ್ಳಿ ಬಳಿ ಇರುವ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಆವರಣದಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮಾಚರಣೆಯ ಅಂಗವಾಗಿ ಹಮ್ಮಿಕೊಂಡಿರುವ '1954ರಿಂದ ಬಿಇಎಲ್‌ನ ಪಯಣ' ಅನಾವರಣ ಕಾರ್ಯಕ್ರಮ ಭಾನುವಾರ ಸಂಪನ್ನಗೊಳ್ಳಲಿದೆ.

ಈ ವಸ್ತು ಪ್ರದರ್ಶನಕ್ಕೆ ರಕ್ಷಣಾ ಸಾಮಗ್ರಿಗಳ ಪ್ರದರ್ಶನಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಇತ್ತೀಚೆಗೆ ಆನ್‌ಲೈನ್‌ನಲ್ಲೇ ಚಾಲನೆ ನೀಡಿದ್ದರು.

'ಸ್ವಾತಂತ್ರ್ಯ ಬಂದ ನಂತರವೂ ದೇಶದ ರಕ್ಷಣಾ ಕ್ಷೇತ್ರದ ಕಡೆಗೆ ಹೆಚ್ಚಿನ ಗಮನವನ್ನು ನೀಡಿರಲಿಲ್ಲ. ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ಹೂಡಿಕೆ, ನಾವೀನ್ಯತೆ ಮತ್ತು ಸಂಶೋಧನೆ ಮತ್ತು ಅಭಿವೃದ್ಧಿಯ ಕೊರತೆಯಿಂದಾಗಿ ರಕ್ಷಣಾ ಕ್ಷೇತ್ರ ಹಿಂದುಳಿದಿತ್ತು' ಎಂದು ರಾಜನಾಥ್ ಸಿಂಗ್ ಹೇಳಿದರು.

ಬಿಇಎಲ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಆನಂದಿ ರಾಮಲಿಂಗಂ, ನಿರ್ದೇಶಕ ವರ್ಗ ಹಾಗೂ ಅಧಿಕಾರಿಗಳು ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅಮೃತ ಮಹೋತ್ಸವದ ಅಂಗವಾಗಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್), ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್) ಸೇರಿದಂತೆ ಬೆಂಗಳೂರಿನ ವಿವಿಧೆಡೆ ಇರುವ ರಕ್ಷಣಾ ಕ್ಷೇತ್ರದ ಉದ್ದಿಮೆಗೆ ಸಂಬಂಧಿಸಿದ ಸರ್ಕಾರಿ ಸಂಸ್ಥೆಗಳಲ್ಲೂ ವಸ್ತು ಪ್ರದರ್ಶನ ಹಾಗೂ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ವಸ್ತು ಪ್ರದರ್ಶನವು ಡಿ.19ರವರೆಗೆ ನಡೆಯಲಿದೆ. ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ವಸ್ತು ಪ್ರದರ್ಶನ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ.



ರಕ್ಷಣಾ ಸಲಕರಣೆಗಳ ಕುರಿತು ಸಾರ್ವಜನಿಕರಿಗೆ ಸೈನಿಕರು ಮಾಹಿತಿ ನೀಡಿದರು



ವಸ್ತು ಪ್ರದರ್ಶನದಲ್ಲಿ ತೇಜಸ್ ಯುದ್ಧ ವಿಮಾನದ ಮಾದರಿ ಬಗ್ಗೆ ಬಿಇಎಲ್ ಸಿಬ್ಬಂದಿ ವಿವರಿಸಿದರು

' ಸಿಕ್ಯುಎ (ಎಲ್) ನಿಂದ 150 ವರ್ಷಗಳಿಂದ ಯುದ್ಧ ಸಲಕರಣೆ ಪೂರೈಕೆ'

ಬೆಂಗಳೂರು: 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮಾಚರಣೆಯ ಅಂಗವಾಗಿ ಜೆ.ಸಿ.ನಗರದ ಸಿಕ್ಯುಎ(ಎಲ್) ಸಂಸ್ಥೆಯ ಆವರಣದಲ್ಲಿ ಇದೇ 19ರವರೆಗೆ ಆಯೋಜಿಸಿರುವ ರಕ್ಷಣಾ ಸಾಮಾಗ್ರಿಗಳ ವಸ್ತು ಪ್ರದರ್ಶನಕ್ಕೆ ಸಂಸ್ಥೆಯ ನಿಯಂತ್ರಕ ಕೆ.ಪಿ.ಕುಮಾರ್ ಚಾಲನೆ ನೀಡಿದರು.

' ಸಿಕ್ಯುಎ (ಎಲ್) ಸಂಸ್ಥೆಯು 150 ವರ್ಷಗಳಿಂದ ದೇಶದ ರಕ್ಷಣಾ ಪಡೆಗಳಿಗೆ ಯುದ್ಧ ಸಲಕರಣೆಗಳನ್ನು ಪೂರೈಸುತ್ತಿದೆ. ಸಶಸ್ತ್ರ ಪಡೆಗಳ ಸಾಮರ್ಥ್ಯವನ್ನು ಜನರಿಗೆ ಪರಿಚಯಿಸುವ ಉದ್ದೇಶದಿಂದ ದೇಶದ 75 ಪ್ರದೇಶಗಳಲ್ಲಿ ವಸ್ತು ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಸೇನಾಪಡೆ ಹಾಗೂ ನೌಕಾಪಡೆಗಳಲ್ಲಿ ಬಳಸುವ ಸಲಕರಣೆಗಳ ಕುರಿತು ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳು ಹಾಗೂ ನಾಗರಿಕರಿಗೆ ಮಾಹಿತಿ ಒದಗಿಸುವುದೂ ಇದರ ಉದ್ದೇಶ' ಎಂದು ಅವರು ಹೇಳಿದರು.

'ಸಿಯಾಚಿನ್‌ನಲ್ಲಿ ಮೈಕೊರೆಯುವ ಚಳಿ ಇರುತ್ತದೆ. ಅಲ್ಲಿ ಪಹರೆ ಕಾಯುವ ಸೈನಿಕರಿಗೆ ವಿಶೇಷ ಶಸ್ತ್ರಾಸ್ತ್ರಗಳನ್ನು ಪೂರೈಸಲಾಗುತ್ತದೆ. ಆ ಪರಿಕರಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಸೇನೆಯಲ್ಲಿ ಉಪಯೋಗಿಸುವ ಸಂವಹನ ಸಲಕರಣೆಗಳು, ರೇಡಾರ್‌ಗಳು, ಬಂದೂಕುಗಳು, ಎಲೆಕ್ಟ್ರಾನಿಕ್ ಉಪಕರಣಗಳು, ಮೈಂಡ್ ಡಿಟೆಕ್ಟರ್ ಹಾಗೂ ನೌಕಾಪಡೆಯಲ್ಲಿ ಬಳಸುವ ಜಿಪಿಎಸ್ ಹಾಗೂ ಇತರೆ ಉಪಕರಣಗಳನ್ನೂ ಪ್ರದರ್ಶನದಲ್ಲಿ ಇಡಲಾಗಿದೆ. ಇದೇ 19ರ ಸಂಜೆ 5.30ರವರೆಗೂ ಪ್ರದರ್ಶನ ಇರಲಿದೆ' ಎಂದು ಅವರು ಮಾಹಿತಿ ನೀಡಿದರು.

ಬಿಇಎಲ್ ಸಾಮರ್ಥ್ಯ ದರ್ಶನ

ಬಿಇಎಲ್ ನಿರ್ಮಿಸಿರುವ ರೇಡಾರ್ ವ್ಯವಸ್ಥೆಗಳು, ಎಲೆಕ್ಟ್ರಾನಿಕ್ ಉಪಕರಣಗಳು, ಎಲೆಕ್ಟ್ರಾನಿಕ್ ಮತದಾನ ಯಂತ್ರಗಳು ಹಾಗೂ ಇತರ ವಿಶಿಷ್ಟ ಉಪಕರಣಗಳನ್ನು ಪ್ರದರ್ಶಿಸಲಾಗಿದೆ. ತೇಜಸ್ ಯುದ್ಧ ವಿಮಾನದ ಹಾರಾಟ ನಿಯಂತ್ರಣ ವ್ಯವಸ್ಥೆ, ಮಾನವ ರಹಿತ ವಿಮಾನ ರುಸ್ತುಂ, ಆಕಾಶ್ ಕ್ಷಿಪಣಿ, ಮಾನವ ರಹಿತ ಟ್ರ್ಯಾಕರ್ ಹಾಗೂ ವಿವಿಧ ಡ್ರೋನ್‌ಗಳೂ ಪ್ರದರ್ಶನದಲ್ಲಿವೆ.

ಜನ ಬಲಕ್ಕೆ ಸೋಲು: ಶರವಣ

ಬೆಂಗಳೂರು: 'ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ ಸದಸ್ಯರ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಹಣ ಬಲದ ಎದುರು ಜನ ಬಲಕ್ಕೆ ಸೋಲಾಗಿದೆ' ಎಂದು ಜೆಡಿಎಸ್ ವಕ್ತಾರ ಟಿ.ಎ.ಶರವಣ ತಿಳಿಸಿದರು.

'ಜೆಡಿಎಸ್ ಬಗ್ಗೆ ಇಲ್ಲಸಲ್ಲದ ಆರೋಪಗಳನ್ನು ಮಾಡಲಾಯಿತು. ಹಣ ಹಂಚಿಕೆಯಿಂದ ಮೋಸದ ಗೆಲುವು ಕಂಡ ಇಂತಹ ಪಕ್ಷಗಳಿಂದ ರಾಜ್ಯಕ್ಕೆ ಏನೂ ಕೊಡುಗೆ ಇಲ್ಲ. ಇತರ ಪಕ್ಷಗಳ ಮೋಸದ ಆಟ ನೋವು ತಂದಿದೆ. ಆದರೆ ಇದರಿಂದ ನಾವು ಧೃತಿಗೆಡುವುದಿಲ್ಲ' ಎಂದರು.

'ಕುಟುಂಬ ರಾಜಕಾರಣದ ಬಗ್ಗೆ ಬೊಬ್ಬೆ ಹೊಡೆಯುತ್ತಿರುವ ಕಾಂಗ್ರೆಸ್ ಹಾಗೂ ಬಿಜೆಪಿಯ ಮುಖಂಡರು ತಮ್ಮ ಕುಟುಂಬದವರಿಗೆ, ಸಂಬಂಧಿಕರಿಗೆ ಟಿಕೆಟ್ ಕೊಡಿಸಿದ್ದೇಕೆ' ಎಂದು ಪ್ರಶ್ನಿಸಿದರು.

'ನಮಗೆ ಜನರ ಮೇಲೆ ಭರವಸೆ ಇದೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಜನರು ನಮ್ಮ ಕೈಹಿಡಿಯಲಿದ್ದಾರೆ. ನಮ್ಮ ಪಕ್ಷ ಮತ್ತೆ ಅಧಿಕಾರಕ್ಕೆ ಬರಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	27.28 ಕೋಟಿ ▲	3.47 ಕೋಟಿ
ಸಕ್ರಿಯ ಪ್ರಕರಣ	2.23 ಕೋಟಿ ▲	87,245 ▼
ಗುಣಮುಖ	24.51 ಕೋಟಿ ▲	3.41 ಕೋಟಿ
ಸಾವು	53.49 ಲಕ್ಷ ▲	4.76 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	7.23 ಲಕ್ಷ ▲	7,974 ▲
ಗುಣಮುಖ	5.28 ಲಕ್ಷ ▼	7,948 ▼
ಸಾವು	8,233 ▲	343 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): ಅಮೆರಿಕ 95,343 ▼; ಬ್ರಿಟನ್ 78,610 ▲; ಜರ್ಮನಿ 55,650 ▲

ಎಲ್ಲಿ ಹೆಚ್ಚು ಸಾವು: ಮಹಾರಾಷ್ಟ್ರ 1.36 ಲಕ್ಷ ▼; ತಮಿಳುನಾಡು 36,644 ▲; ಕೇರಳ 43,626 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): ಅಮೆರಿಕ 1.01 ಕೋಟಿ ▲; ಬ್ರಿಟನ್ 12.45 ▲; ಜರ್ಮನಿ 9.88

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): ಮಹಾರಾಷ್ಟ್ರ 66.46 ▲; ಕೇರಳ 52.04; ತಮಿಳುನಾಡು 27.37 ▲

ಪ್ರಜಾವಾಣಿ ಗ್ರಾಫಿಕ್ಸ್

'ಉ.ಪ್ರ: ಆಮ್ಲಜನಕ ಕೊರತೆಯಿಂದ ಒಂದು ಸಾವು ಸಂಭವಿಸಿಲ್ಲ'

ಲಖನೌ (ಪಿಟಿಐ): ಕೋವಿಡ್ ಎರಡನೇ ಅಲೆಯಲ್ಲಿ ರಾಜ್ಯದಲ್ಲಿ ಆಮ್ಲಜನಕ ಕೊರತೆಯಿಂದ ಒಬ್ಬರೂ ಮೃತಪಟ್ಟಿಲ್ಲ ಎಂದು ಉತ್ತರ ಪ್ರದೇಶ ಸರ್ಕಾರ ಪ್ರತಿಪಾದಿಸಿದೆ. ಆದರೆ, ವಿರೋಧ ಪಕ್ಷಗಳು ಈ ಹೇಳಿಕೆಯನ್ನು ಅಲ್ಲಗಳೆದಿವೆ.

ಕೋವಿಡ್ ಸೋಂಕಿನಿಂದ ರಾಜ್ಯದಲ್ಲಿ 22,915 ಜನರು ಮೃತಪಟ್ಟಿದ್ದರು. ಅವರಿಗೆ ನೀಡಿದ ಮರಣ ಪ್ರಮಾಣಪತ್ರದಲ್ಲಿ 'ಆಮ್ಲಜನಕ ಕೊರತೆಯಿಂದ ಸಾವು ಸಂಭವಿಸಿದೆ' ಎಂಬ ಉಲ್ಲೇಖವಿಲ್ಲ ಎಂದು ಸರ್ಕಾರ ಹೇಳಿದೆ.

ವಿಧಾನಪರಿಷತ್ತಿನಲ್ಲಿ ಗುರುವಾರ ಕಾಂಗ್ರೆಸ್ ಸದಸ್ಯ ದೀಪಕ್ ಸಿಂಗ್ ಅವರ ಪ್ರಶ್ನೆಗೆ ಉತ್ತರಿಸಿದ ಆರೋಗ್ಯ ಸಚಿವ ಜೈಪ್ರತಾಪ್ ಸಿಂಗ್ ಅವರು ಈ ಮಾಹಿತಿಯನ್ನು ನೀಡಿದರು.

ಈ ಬಗ್ಗೆ ಗಮಸೆಳೆದ ದೀಪಕ್ ಸಿಂಗ್, 'ಆಮ್ಲಜನಕ ಕೊರತೆಯಿಂದ ಸಾವು ಸಂಭವಿಸಿದೆ ಎಂದು ಸಚಿವರು ಪತ್ರ ಬರೆದಿದ್ದರು. ಅನೇಕ ಸಂಸದರೂ ಇಂತಹುದೇ ದೂರು ನೀಡಿದ್ದರು. ಆಮ್ಲಜನಕವಿಲ್ಲದೇ ಸಾವು ಸಂಭವಿಸಿದ್ದ ಅನೇಕ ಘಟನೆಗಳು ನಡೆದವು. ಇಂಥ ಪ್ರಕರಣಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ? ಆಮ್ಲಜನಕವಿಲ್ಲದೇ ಸತ್ತವರ ಶವಗಳು ಗಂಗಾನದಿಯಲ್ಲಿ ತೇಲಿದ್ದನ್ನು ರಾಜ್ಯ ಸರ್ಕಾರ ಗಮನಿಸಲಿಲ್ಲವೇ' ಎಂದು ಪ್ರಶ್ನಿಸಿದರು.

ಆಸ್ಪತ್ರೆಗೆ ಸೇರಿದ್ದವರು ಮೃತಪಟ್ಟಾಗ ವೈದ್ಯರು ಪ್ರಮಾಣಪತ್ರ ನೀಡುತ್ತಾರೆ. 22,915 ಸಾವುಗಳಿಗೆ ಸಂಬಂಧಿಸಿ ನೀಡಿರುವ ಯಾವುದೇ ಪ್ರಮಾಣಪತ್ರದಲ್ಲಿ ಆಮ್ಲಜನಕ ಕೊರತೆಯ ಉಲ್ಲೇಖವಿಲ್ಲ ಎಂದು ಸಚಿವರು ಹೇಳಿದರು.

ಸಚಿವರ ಉತ್ತರಕ್ಕೆ ಆಕ್ಷೇಪಿಸಿದ ಸಮಾಜವಾದಿ ಪಕ್ಷದ ಉದಯ್‌ವೀರ್ ಸಿಂಗ್, 'ಸರ್ಕಾರ ಪ್ರಮಾಣಪತ್ರದಲ್ಲಿ ಬರೆಯದೇ ಇದ್ದ ಮಾತ್ರಕ್ಕೆ ಸತ್ಯ ಬದಲಾಗುವುದಿಲ್ಲ' ಎಂದು ಹೇಳಿದರು. ದೀಪಕ್ ಸಿಂಗ್ ಅವರು, 'ಹಾಗಾದರೆ ಆಮ್ಲಜನಕದ ಕೊರತೆ ಇದೆ ಎಂದು ಸಚಿವರು ಬರೆದಿದ್ದ ಪತ್ರಗಳೂ ಸುಳ್ಳೇ' ಎಂದು ಪ್ರಶ್ನಿಸಿದರು.

ರಾಜ್ಯ ಕೋವಿಡ್ ಅಂಕಿ–ಅಂಶ

ಒಟ್ಟು ಸೋಂಕಿತರು	30,01,554 ▲ (30,01,251 ನಿನ್ನೆಯ ವಿವರ)
ಸಕ್ರಿಯ ಪ್ರಕರಣಗಳು	7,158 ▼
ಗುಣಮುಖರಾದವರು	29,56,088 ▲
ಒಟ್ಟು ಸಾವು	38,279 ▲

ದಿನದ ಏರಿಕೆ

ಹೊಸ ಪ್ರಕರಣ	303 ▼
ಗುಣಮುಖ	322 ▲
ಸಾವು	02

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಬ್ಯಾಂಕ್ ಉದ್ಯೋಗಿಗಳ ಶಕ್ತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಕೃತ ಬ್ಯಾಂಕ್‌ಗಳ ಖಾಸಗೀಕರಣ ವಿರೋಧಿಸಿ ದೇಶವ್ಯಾಪಿ ಕರೆ ನೀಡಲಾಗಿದ್ದ ಪ್ರತಿಭಟನೆಗೆ ನಗರದಲ್ಲೂ ಬ್ಯಾಂಕ್ ಉದ್ಯೋಗಿಗಳಿಂದ ವ್ಯಾಪಕ ಬೆಂಬಲ ವ್ಯಕ್ತವಾಯಿತು.

ಬ್ಯಾಂಕ್ ಸಂಘಟನೆಗಳ ಐಕ್ಯ ವೇದಿಕೆ ಪ್ರತಿಭಟನೆಗೆ ಕರೆ ನೀಡಲಾಗಿತ್ತು. ಕೆಲಸಕ್ಕೆ ಗೈರಾದ ಉದ್ಯೋಗಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡರು. ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿರುವ ಎಸ್‌ಬಿಐ ಬ್ಯಾಂಕ್ ಆವರಣದಲ್ಲಿ ಸೇರಿದ್ದ 200ಕ್ಕೂ ಹೆಚ್ಚು ಉದ್ಯೋಗಿಗಳು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.



ನಗರದ ವಿವಿಧ ಬ್ಯಾಂಕ್‌ಗಳ ಉದ್ಯೋಗಿಗಳು ಮೈಸೂರು ಬ್ಯಾಂಕ್ ವೃತ್ತದ ಎಸ್‌ಬಿಐ ಆವರಣದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಬ್ಯಾಂಕ್‌ಗಳ ಖಾಸಗೀಕರಣ ವಿರೋಧಿಸುವ ಬರಹಗಳಿದ್ದ ಮಾಸ್ಕ್‌ಗಳನ್ನು ಧರಿಸಿದ್ದ ಕೆಲ ಉದ್ಯೋಗಿಗಳು ಪ್ರತಿಭಟನೆಯಲ್ಲಿ ಗಮನ ಸೆಳೆದರು. ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಖಾಸಗೀಕರಣ ಪ್ರಕ್ರಿಯೆಯನ್ನು ಕೂಡಲೇ ನಿಲ್ಲಿಸಬೇಕೆಂದು ಆಗ್ರಹಿಸಿದರು.

'ಸಾರ್ವಜನಿಕ ವಲಯದ ರಾಷ್ಟ್ರೀಕೃತ ಬ್ಯಾಂಕ್‌ಗಳು ಹಾಗೂ ವಿಮಾ ಕಂಪನಿಗಳ ಖಾಸಗೀಕರಣ, ಜೀವ ವಿಮಾ ನಿಗಮದ ಬಂಡವಾಳ ಹಿಂತೆಗೆತ, ವಿಮಾ ಕ್ಷೇತ್ರದಲ್ಲಿ ಶೇ 74 ವಿದೇಶಿ ಬಂಡವಾಳ ಹೂಡಿಕೆ, ಇತ್ಯಾದಿ ಕ್ರಮಗಳು ಬ್ಯಾಂಕಿಂಗ್ ಕ್ಷೇತ್ರದ ಮೇಲೆ ಪರಿಣಾಮ ಬೀರುತ್ತಿವೆ' ಎಂದೂ ಪ್ರತಿಭಟನಕಾರರು ದೂರಿದರು.

'ಬ್ಯಾಂಕ್‌ಗಳ ಖಾಸಗೀಕರಣದಿಂದ ಯಾವುದೇ ಪ್ರಯೋಜನವಿಲ್ಲ. ಈ ಹಿಂದೆ ಖಾಸಗೀಕರಣ ಮಾಡಲಾಗಿದ್ದ ಬ್ಯಾಂಕ್‌ಗಳು ಇಂದು ಕಾರ್ಯನಿರ್ವಹಣೆಯಲ್ಲಿ ವಿಫಲವಾಗಿವೆ' ಎಂದೂ ಆಗ್ರಹಿಸಿದರು.

ಶುಕ್ರವಾರವೂ ನಗರದ ಹಲವೆಡೆ ಉದ್ಯೋಗಿಗಳು ಪ್ರತಿಭಟನೆ ನಡೆಸಲಿದ್ದಾರೆ.

'ಮಾದಕ ವಸ್ತು ವ್ಯಸನಿಗಳಿಗೆ ಬೆಂಗಳೂರು ಸ್ವರ್ಗ: ವಕೀಲರ ಆತಂಕ

ಎನ್‌ಡಿಪಿಎಸ್: ಕೋರ್ಟ್‌ಗೆ ಹೆಚ್ಚುತ್ತಿರುವ ಭಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾದಕ ವಸ್ತುಗಳು ಹಾಗೂ ಅಮಲು ಪದಾರ್ಥಗಳ ಬಳಕೆದಾರರಿಗೆ ಬೆಂಗಳೂರು ಮಹಾನಗರ ಸ್ವರ್ಗವಾಗುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿರುವ ನ್ಯಾಯಾಂಗದ ಹಿರಿಯ, ನಿವೃತ್ತ ಅಧಿಕಾರಿಗಳು ಹಾಗೂ ವಕೀಲರು, 'ಇವುಗಳ ವಿಚಾರಣೆಗಾಗಿ ಇರುವ ಏಕಮಾತ್ರ ವಿಶೇಷ ಕೋರ್ಟ್ ಪ್ರಕರಣಗಳ ಶೀಘ್ರ ವಿಲೇವಾರಿಗೆ ಹರಸಾಹಸ ಪಡುತ್ತಿದೆ' ಎಂಬ ಅಂಶದ ಬಗ್ಗೆ ಮೌಖಿಕವಾಗಿ, ಲಿಖಿತವಾಗಿ ಸಕ್ಷಮ ಪ್ರಾಧಿಕಾರದ ಗಮನ ಸೆಳೆದಿದ್ದಾರೆ.

ಈ ಕುರಿತಂತೆ ಹೈಕೋರ್ಟ್ ವಕೀಲ ಟಿ.ರಾಜಾರಾಂ ಅವರು, 'ಮಾದಕ ವಸ್ತುಗಳು ಹಾಗೂ ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆ-1985ರ (ಎನ್‌ಡಿಪಿಎಸ್) ಅಡಿಯಲ್ಲಿ ದಾಖಲಾಗುವ ಪ್ರಕರಣಗಳನ್ನು ಕಂದಾಯ ವಿಚಕ್ಷಣಾ ನಿರ್ದೇಶನಾಲಯ, ಕಸ್ಟಮ್ಸ್ ಅಧಿಕಾರಿಗಳು ಮತ್ತು ರಾಜ್ಯ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸುತ್ತಾರೆ. ಆದರೆ, ಬೆಂಗಳೂರಿನಂತಹ ಕಾಸ್ಮೊಪಾಲಿಟನ್ ನಗರದಲ್ಲಿ ಒಂದೇ ಒಂದು ವಿಶೇಷ ನ್ಯಾಯಾಲಯ ಸಿಸಿಎಚ್-33ರಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇಲ್ಲಿಗೆ ಒಬ್ಬರೇ ಒಬ್ಬ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಇರುವುದು ದೊಡ್ಡ ನ್ಯೂನ್ಯತೆಯಾಗಿ ಪರಿಣಮಿಸಿದೆ' ಎನ್ನುತ್ತಾರೆ.

ನವ ಪ್ರೇಮಿಗಳು, ಭಗ್ನ ಪ್ರೇಮಿಗಳೇ ಜಾಸ್ತಿ...!

'ಆರೋಪಿಗಳಲ್ಲಿ ಹೆಚ್ಚಿನವರು, ನವ ಪ್ರೇಮಿಗಳು, ಭಗ್ನ ಪ್ರೇಮಿಗಳು, ಆಧುನಿಕ ಜೀವನ ಶೈಲಿಗೆ ಒಗ್ಗಿಹೋಗಿರುವ ಸಂಗಾತಿಗಳು, ಲಿವ್– ಇನ್ ಸಂಬಂಧ ಹೊಂದಿರುವವರೇ ಜಾಸ್ತಿ. ಅವು ರೆಡ್ ಹ್ಯಾಂಡ್ ಆಗಿ ಸಿಕ್ಕಿಹಾಕೊಂಡಿರುತ್ತಾರೆ. ಇವರೆಲ್ಲಾ ತನಿಖೆಯ ವೇಳೆ ಅನೇಕ ಅಂಶಗಳನ್ನು ಬಾಯಿ ಬಿಟ್ಟಿದ್ದಾರೆ. ಆದರೆ, ಅವುಗಳ ಬೆನ್ನತ್ತಿ ದೋಷಾರೋಪ ಪಟ್ಟಿ ಸಿದ್ಧಪಡಿಸಿ ನ್ಯಾಯಾಲಯಕ್ಕೆ ಸಲ್ಲಿಸಿದರೆ, ಹಲವಾರು ತಾಂತ್ರಿಕ ಕಾರಣಗಳಿಂದಾಗಿ ಅವರು ಮುಕ್ತಿ ಹೊಂದುತ್ತಿದ್ದಾರೆ' ಎಂದು ಹೆಸರು ಹೇಳಲು ಇಚ್ಛಿಸದ ತನಿಖಾ ಅಧಿಕಾರಿಗಳು ಬೇಸರ ವ್ಯಕ್ತಪಡಿಸುತ್ತಾರೆ.

'ನ್ಯಾಯಾಧೀಶರ ನೇಮಕ ಶೀಘ್ರ'

ಈ ಕುರಿತಂತೆ ಪ್ರತಿಕ್ರಿಯಿಸಿದ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಜಿ.ಟಿ.ಶಿವಶಂಕರೇ ಗೌಡ, 'ಎನ್‌ಡಿಪಿಎಸ್ ಕೋರ್ಟ್‌ಗೆ ನ್ಯಾಯಾಧೀಶರನ್ನು ನೇಮಕ ಮಾಡುವ ಕುರಿತಂತೆ ವಕೀಲರೊಬ್ಬರು ಮನವಿ ಪತ್ರ ನೀಡಿದ್ದಾರೆ. ಬೆಂಗಳೂರು ನಗರದಲ್ಲಿ 18 ಜಿಲ್ಲಾ ಶ್ರೇಣಿಯ ನ್ಯಾಯಾಧೀಶರ ಹುದ್ದೆಗಳು ಖಾಲಿಯಿವೆ. ಆ ಪೈಕಿ 12 ನ್ಯಾಯಾಧೀಶರ ನೇಮಕಾತಿ ಪೂರ್ಣಗೊಂಡಿದ್ದು, ಅವರು ಇದೇ 20ರಂದು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಈ ನೇಮಕಾತಿ ವೇಳೆಯಲ್ಲೇ ಎನ್‌ಡಿಪಿಎಸ್ ಕೋರ್ಟ್ ನ್ಯಾಯಾಧೀಶರ ಹುದ್ದೆಯೂ ಭರ್ತಿಯಾಗುತ್ತದೆ' ಎಂದು ವಿವರಿಸಿದರು.

ಮತ್ತೊಂದೆಡೆ, ಇಂತಹ ಪ್ರಕರಣಗಳ ತನಿಖೆ ನಡೆಸುತ್ತಿರುವ ಹೆಸರು ಹೇಳಲು ಇಚ್ಛಿಸದ ಅಧಿಕಾರಿಗಳು, 'ಈ ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಾದ ನಂತರ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲು ಸಾಕಷ್ಟು ವಿಳಂಬವಾಗುತ್ತಿದೆ. ಕಾರಣ ಇವು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ನಂಟು ಹೊಂದಿರುತ್ತವೆ. ಇವುಗಳಲ್ಲಿ ತನಿಖಾ ಸಂಸ್ಥೆಗಳು ತಕ್ಷಣವೇ ಅಗತ್ಯ ಮಾಹಿತಿ ಕಲೆ ಹಾಕಲು ಕಷ್ಟವಾಗುತ್ತಿದೆ' ಎನ್ನುತ್ತಾರೆ.

'ಮೊದಲೆಲ್ಲಾ ಎನ್‌ಡಿಪಿಎಸ್ ಕಾಯ್ದೆ ಅಡಿಯ ಪ್ರಕರಣಗಳಲ್ಲಿ ಗಾಂಜಾ, ಕೊಕೇನ್‌ನಂತಹ ವಸ್ತುಗಳೇ ಹೆಚ್ಚಾಗಿ ಇರುತ್ತಿದ್ದವು. ಮೊದಲೆಲ್ಲಾ ಪಂಜಾಬ್, ಮುಂಬೈನಿಂದ ಇಂತಹ ಪದಾರ್ಥಗಳನ್ನು ಇಲ್ಲಿಗೆ ತರಿಸಲಾಗುತ್ತಿತ್ತು. ಈಗ ಬೆಂಗಳೂರಿನಲ್ಲೇ ಉತ್ಪಾದನೆಯಾಗುತ್ತಿವೆ. ಇಲ್ಲಿಂದ ಆಸ್ಟ್ರೇಲಿಯಾ, ಮಲೇಷ್ಯಾ ಸೇರಿದಂತೆ ಹಲವು ದೇಶಗಳಿಗೂ ಸರಬರಾಜು ಆಗುತ್ತಿವೆ' ಎಂದು ಅವರು ವಿವರಿಸುತ್ತಾರೆ.

'ಇವುಗಳ ಆಮದು–ರಫ್ತು ಈಗ ಮೊದಲಿಗಿಂತಲೂ ಹೆಚ್ಚು ಸುಲಭ. ನಗರದಲ್ಲಿನ ವಿದೇಶಿ ಅಂಚೆ ಕಚೇರಿಯಲ್ಲಿ ಈ ಪದಾರ್ಥಗಳ ಪ್ರಮಾಣ ಹಿಂದೆಂದಿಗಿಂತಲೂ ಈಗ ಅಧಿಕವಾಗಿದೆ. ಕೇರಳದ ಆರೋಪಿಗಳು ಈ ಜಾಲದಲ್ಲಿ ಹೆಚ್ಚಾಗಿ ಕಂಡು ಬರುತ್ತಿದ್ದಾರೆ' ಎನ್ನುತ್ತಾರೆ ಈ ಅಧಿಕಾರಿಗಳು.

'ತನಿಖಾ ಸಂಸ್ಥೆಗಳು ಹೆಚ್ಚಿದ್ದರೂ ಅವುಗಳ ವಿಚಾರಣೆ ನಡೆಸುವ ವಿಶೇಷ ಕೋರ್ಟ್ ಒಂದೇ ಇರುವುದು ಮತ್ತು ಈ ವಿಶೇಷ ಕೋರ್ಟ್‌ನಲ್ಲಿ ಸಿವಿಲ್ ಪ್ರಕರಣಗಳ ಸಂಖ್ಯೆಯೂ ಬೃಹತ್ ಪ್ರಮಾಣದಲ್ಲಿ ಇರುವ ಕಾರಣ ನ್ಯಾಯಾಧೀಶರೂ ಹೊರೆಯಿಂದ ಕಾರ್ಯ ನಿರ್ವಹಿಸಬೇಕಾಗಿದೆ. ವಿಧಿವಿಜ್ಞಾನ ಪ್ರಯೋಗಾಲಯದಿಂದ ಬರುವ ವರದಿಯೂ ವಿಳಂಬವಾಗುತ್ತಿದ್ದು, ಅಪರಾಧಿಗಳು ಆರೋಪ ಮುಕ್ತರಾಗುತ್ತಿದ್ದಾರೆ' ಎಂದು ರಾಜಾರಾಂ ತಿಳಿಸಿದರು. 'ಹಲವು ಸ್ವಯಂಸೇವಾ ಸಂಸ್ಥೆಗಳು ಮಾದಕ ವಸ್ತುಗಳ ಸೇವನೆ ಹಾಗೂ ಸಾಗಣೆ ಆರೋಪ ಪ್ರಕರಣಗಳ ಹತ್ತು ವರ್ಷಗಳ ಅಂಕಿ ಅಂಶ ಕಲೆ ಹಾಕುತ್ತಿವೆ' ಎಂದರು.

1,256 ಮಂದಿ 'ರೌಡಿ ಶೀಟ್'ನಿಂದ ಮುಕ್ತ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಮಂಗಳೂರು ಪೊಲೀಸ್ ಕಮಿಷನರೇಟ್ ವ್ಯಾಪ್ತಿಯ ವಿವಿಧ ಠಾಣೆಗಳಲ್ಲಿ 'ರೌಡಿ ಶೀಟ್' ಪಟ್ಟಿಯಲ್ಲಿ ಗುರುತಿಸಿಕೊಂಡಿದ್ದ 1,256 ಮಂದಿಯನ್ನು ಮುಕ್ತಗೊಳಿಸಲಾಗಿದೆ' ಎಂದು ಮಂಗಳೂರು ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಹೇಳಿದರು.

ಮಂಗಳೂರು ನಗರ ಪೊಲೀಸ್ ವತಿಯಿಂದ ನಗರದ ಟಿ.ವಿ. ರಮಣ ಪೈ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಪರಿವರ್ತನಾ ಸಭೆ'ಯಲ್ಲಿ ಅವರು ಮಾತನಾಡಿದರು.

'3,263 ರೌಡಿಶೀಟರ್‌ಗಳ ಪೈಕಿ 1,256 ಮಂದಿಯನ್ನು ರೌಡಿಶೀಟ್‌ನಿಂದ ತೆರವು ಮಾಡಲಾಗಿದೆ. ಅವರಲ್ಲಿ 663 ಮಂದಿ ನ್ಯಾಯಾಲಯದಲ್ಲಿ ಪ್ರಕರಣ ಮುಕ್ತವಾದವರು. 523 ಮಂದಿ ಅಪರಾಧ ಚಟುವಟಿಕೆಯಲ್ಲಿ ಇಲ್ಲದವರು. ಸುಮಾರು 5 ವರ್ಷ ಮತ್ತು ಅದಕ್ಕಿಂತ ಹೆಚ್ಚು ವರ್ಷಗಳಿಂದ ಅಪರಾಧ ಕೃತ್ಯದಲ್ಲಿ ಭಾಗಿಯಾಗದೆ ಉತ್ತಮ ಜೀವನ ನಡೆಸುವವರನ್ನು ಪರಿಗಣಿಸಿ ರೌಡಿಶೀಟ್‌ನಿಂದ ತೆರವು ಮಾಡಲಾಗಿದೆ' ಎಂದು ತಿಳಿಸಿದರು.

ಫಾದರ್ ಮುಲ್ಲರ್ ಆಸ್ಪತ್ರೆಯ ಆಡಳಿತಾಧಿಕಾರಿ ರುಡಾಲ್ಫ್ ರವಿ ಡೇಸಾ ಮಾತನಾಡಿ, 'ಪ್ರತಿಯೊಬ್ಬನ ಅಂತಃಕರಣವು ಸರಿ- ತಪ್ಪುಗಳನ್ನು ಪ್ರಾಮಾಣಿಕವಾಗಿ ಹೇಳುತ್ತದೆ. ಅಂತಃಕರಣದ ಎಚ್ಚರ ಪಾಲಿಸಿದರೆ ಜೀವನದಲ್ಲಿ ಎಡವಲು ಸಾಧ್ಯವಿಲ್ಲ. ನಮ್ಮ ಜೀವನ ರೂಪಿಸುವುದು ನಮ್ಮ ಕೈಯಲ್ಲಿದ್ದು, ಯಾರ ಪ್ರಭಾವಕ್ಕೂ ಮಣಿಯಬಾರದು' ಎಂದರು.

'ತುಳುನಾಡಿನ ಈ ಪುಣ್ಯಭೂಮಿ ಶಾಂತಿ, ಪ್ರೀತಿ, ಸೌಹಾರ್ದ, ಸಾಮರಸ್ಯಕ್ಕೆ ಹೆಸರುವಾಸಿ. ಆದರೆ, ಇತ್ತೀಚಿನ ದಿನಗಳಲ್ಲಿ ಸಮಾಜ ಅಶಾಂತಿಯತ್ತ ವಾಲುತ್ತಿರುವುದು ಬೇಸರದ ವಿಚಾರ. ಹಿಂಸೆಯನ್ನು ಹಿಂಸೆಯಿಂದಲೇ ನಾಶ ಮಾಡಲು ಸಾಧ್ಯವಿಲ್ಲ. ಗೆಳೆತನ ಮಾತ್ರ ವೈರತ್ವವನ್ನು ನಾಶ ಮಾಡಬಲ್ಲದು' ಎಂದರು.

ಎ.ಜೆ. ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ.ಎ.ಜೆ. ಶೆಟ್ಟಿ, 'ಯಾವುದೋ ಒತ್ತಡದಿಂದ ತಪ್ಪು ನಡೆದಿರಬಹುದು. ಅದನ್ನು ತಿದ್ದಿ ನಡೆಯುವುದು ಮನುಷ್ಯ ಧರ್ಮ. ರೌಡಿ ಶೀಟ್‌ನಿಂದ ತೆರವಾದ ಎಲ್ಲರೂ ಉತ್ತಮ ನಾಗರಿಕರಾಗಿ ಬದುಕಿ ಕುಟುಂಬದ ಬಾಳು ಬೆಳಗಬೇಕಿದೆ. ಇದರಿಂದ ಸಮಾಜದಲ್ಲಿ ಉತ್ತಮ ಗೌರವ ಸಂಪಾದಿಸಲು ಸಾಧ್ಯ' ಎಂದರು.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

ಒಟ್ಟು ಪ್ರಕರಣಗಳು	12,59,585 ▲ (12,59,388 ನಿನ್ನೆಯ ವಿವರ)
ಸಕ್ರಿಯ ಪ್ರಕರಣ	5,630 ▲
ಗುಣಮುಖ ಆದವರು	12,37,580 ▲
ಒಟ್ಟು ಸಾವು	16,374 ▲

ದಿನದ ಏರಿಕೆ

ಹೊಸ ಪ್ರಕರಣ	197 ▼
ಗುಣಮುಖ	135 ▼
ಸಾವು	02

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನೀವು ರಾತ್ರೋರಾತ್ರಿ ನಿಮ್ಮ ಗುರಿಯನ್ನು ಬದಲಿಸಲು ಸಾಧ್ಯವಿಲ್ಲ. ಆದರೆ ಅದನ್ನು ತಲುಪಲು ಅಗತ್ಯವಾದ ದಿಕ್ಕನ್ನು ಬದಲಿಸಬಹುದು.

–ಜಿಮ್ ರೌನ್

ಲಖಿಂಪುರ ಖೇರಿ ಪ್ರಕರಣ: ರೈತರ ವಾದ ಸಮರ್ಥಿಸಿದ ಎಸ್‌ಐಟಿ ಹೇಳಿಕೆ

ನಾಲ್ವರು ರೈತರು ಹಾಗೂ ಒಬ್ಬ ಪತ್ರಕರ್ತನ ಸಾವಿಗೆ ಕಾರಣವಾದ ಅಕ್ಟೋಬರ್ 3ರ ಲಖಿಂಪುರ ಖೇರಿ ಹಿಂಸಾಚಾರವನ್ನು 'ಒಂದು ಪೂರ್ವಯೋಜಿತ ಸಂಚು' ಎಂದು, ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಕರೆದಿದೆ. ಉತ್ತರಪ್ರದೇಶದ ಪೊಲೀಸರು, ಆರಂಭದಿಂದಲೂ ಇದನ್ನೊಂದು ಮಾಮೂಲಿ ಪ್ರಕರಣ ಎಂಬಂತೆಯೇ ಬಿಂಬಿಸುತ್ತಾ ಬಂದಿದ್ದರು. ಎಸ್‌ಐಟಿಯ ಹೇಳಿಕೆಯಿಂದಾಗಿ ಈಗ ಪ್ರಕರಣದ ಸ್ವರೂಪವೇ ಬದಲಾಗಿದೆ. 'ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆಯಲ್ಲಿ ತೊಡಗಿದ್ದ ರೈತರ ಮೇಲೆ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾ ಕಾರು ನುಗ್ಗಿಸಿದ್ದಲ್ಲದೆ, ಗುಂಡನ್ನೂ ಹಾರಿಸಿದ್ದ' ಎಂದು ಘಟನಾ ಸ್ಥಳದಲ್ಲಿದ್ದ ಪ್ರತ್ಯಕ್ಷದರ್ಶಿಗಳು ಹೇಳಿದ ಕುರಿತು ವರದಿಯಾಗಿತ್ತು. ಉತ್ತರಪ್ರದೇಶದ ಪೊಲೀಸರು ಪ್ರಕರಣದ ತನಿಖೆಯನ್ನು ನಡೆಸುತ್ತಿದ್ದ ರೀತಿಗೆ ಅತೃಪ್ತಿ ವ್ಯಕ್ತಪಡಿಸಿದ್ದ ಸುಪ್ರೀಂ ಕೋರ್ಟ್, ಮೂವರು ಐಪಿಎಸ್ ಅಧಿಕಾರಿಗಳನ್ನು ಸೇರ್ಪಡೆ ಮಾಡುವ ಮೂಲಕ ಎಸ್‌ಐಟಿಯನ್ನು 'ಮೇಲ್ದರ್ಜೆ'ಗೆ ಏರಿಸಿತ್ತು. 'ಜನರ ನಂಬಿಕೆ ಮತ್ತು ವಿಶ್ವಾಸವನ್ನು ಉಳಿಸಿಕೊಳ್ಳಲು ಎಸ್‌ಐಟಿಯಲ್ಲಿ ಈ ಬದಲಾವಣೆ ಮಾಡಲಾಗಿದೆ' ಎಂದೂ ಕೋರ್ಟ್ ಹೇಳಿತ್ತು. ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ರಾಕೇಶ್ ಜೈನ್ ಅವರನ್ನು ಉಸ್ತುವಾರಿಯಾಗಿ ನೇಮಕ ಮಾಡಲಾಗಿದೆ. ಎಸ್‌ಐಟಿಯು ಪ್ರಕರಣದ ತನಿಖೆಯನ್ನು ಈಗ ಹೊಸ ಎತ್ತರಕ್ಕೆ ಒಯ್ದಿದೆ.



ಕೇಂದ್ರ ಸಚಿವ ಅಜಯ್ ಮಿಶ್ರಾ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು, ಇಲ್ಲದಿದ್ದರೆ ಅವರನ್ನು ಸಂಪುಟದಿಂದ ಕೈಬಿಡಬೇಕು ಎನ್ನುವ ರೈತರ ಬೇಡಿಕೆಗೆ ಈಗ ಇನ್ನಷ್ಟು ಬಲ ಬಂದಿದೆ

ಮುಖ್ಯ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಎಸ್‌ಐಟಿಯು ಸಲ್ಲಿಸಿರುವ ವರದಿಯಲ್ಲಿ 'ನಿರ್ಲಕ್ಷ್ಯ ಇಲ್ಲವೇ ಅಸೂಕ್ಷ್ಮ ವರ್ತನೆಯಿಂದ ಈ ಸಾವುಗಳು ಸಂಭವಿಸಿಲ್ಲ; ಬದಲಾಗಿ ಕೊಲ್ಲುವ ಉದ್ದೇಶದಿಂದಲೇ ನಡೆಸಿದ ಕೃತ್ಯಗಳು ಅವಾಗಿದ್ದವು' ಎಂದು ಸ್ಪಷ್ಟವಾಗಿ ತಿಳಿಸಿದೆ. ನಿರ್ಲಕ್ಷ್ಯ ಹಾಗೂ ಅತಿವೇಗದ ಚಾಲನೆಯು ಸಾವಿಗೆ ಕಾರಣ ಎಂಬ ಮೊದಲಿನ ಆರೋಪವನ್ನು ಕೈಬಿಟ್ಟು, ಕೊಲೆ ಹಾಗೂ ಕೇಡು ಉಂಟುಮಾಡುವ ಉದ್ದೇಶದಿಂದಲೇ ಎಸಗಿದ ಕೃತ್ಯ ಎಂಬ ಆಪಾದನೆಯನ್ನು ಹೊಸದಾಗಿ ಸೇರ್ಪಡೆ ಮಾಡುವಂತೆಯೂ ಅದು ಕೋರಿದೆ. ಆರೋಪಿಗಳ ವಿರುದ್ಧ ಈಗ ಐಪಿಸಿ ಸೆಕ್ಷನ್ 307ರ ಅಡಿ (ಕೊಲೆ ಯತ್ನ) ಪ್ರಕರಣ ದಾಖಲಿಸಿಕೊಳ್ಳಬೇಕಾಗಿದೆ. ಪ್ರಕರಣ ಸಂಭವಿಸಿದ ಮೇಲೆ ದಾಖಲಿಸಿಕೊಂಡ ಪ್ರಥಮ ಮಾಹಿತಿ ವರದಿಯಲ್ಲಿ ಈ ಸೆಕ್ಷನ್‌ನ ಪ್ರಸ್ತಾಪವೇ ಇರಲಿಲ್ಲ. ಪ್ರಕರಣದ ಮುಖ್ಯ ಆರೋಪಿ ಆಶಿಶ್ ಮಿಶ್ರಾ ಹಾಗೂ ಇತರ 12 ಜನ ಈಗ ಜೈಲಿನಲ್ಲಿದ್ದಾರೆ. ಅವರೀಗ ಹೊಸ ಆರೋಪಗಳನ್ನು ಎದುರಿಸಬೇಕಿದೆ.

ಆರೋಪಿಗಳೆಲ್ಲರ ಉದ್ದೇಶವೂ ಒಂದೇ ಆಗಿತ್ತು ಎಂಬ ಅಂಶವನ್ನು ಹೊರತುಪಡಿಸಿ ಆರೋಪಿಗಳ ಮೇಲೆ ಹೇರಬೇಕು ಎಂದು ಎಸ್‌ಐಟಿ ಸೂಚಿಸಿರುವ ಉಳಿದೆಲ್ಲ ಅಂಶಗಳನ್ನು ಕೋರ್ಟ್ ಒಪ್ಪಿಕೊಂಡಿದೆ. ಹೊಸ ಆರೋಪಗಳನ್ನು ಹೊರಿಸಿರುವುದರಿಂದ ಆಶಿಶ್ ಮಿಶ್ರಾ ಮೇಲಿನ ಕಾನೂನಿನ ಹಿಡಿತ ಇನ್ನಷ್ಟು ಬಲಗೊಂಡಿದೆ. ಸಚಿವ ಅಜಯ್ ಮಿಶ್ರಾ ಅವರು ಮಗನನ್ನು ಸಮರ್ಥಿಸಲು ಪ್ರಬಲವಾಗಿ ಯತ್ನಿಸಿದ್ದರು. ಪ್ರಕರಣದಲ್ಲಿ ಆತನ ಪಾತ್ರ ಏನೂ ಇಲ್ಲ ಎಂದು ಬಿಂಬಿಸಲೂ ಹೊರಟಿದ್ದರು. 'ಪ್ರತಿಭಟನೆನಿರತ ರೈತರೇ ಕಾರಿನ ಮೇಲೆ ದಾಳಿ ಮಾಡಿದರು. ನಿಯಂತ್ರಣ ತಪ್ಪಿದ ಕಾರು ಅವರ ಮೇಲೆ ನುಗ್ಗಿತು' ಎಂದು ಪ್ರತಿಪಾದಿಸಿದ್ದರು. ಆದರೆ, ಎಸ್‌ಐಟಿ ಈಗ ಈ ಕೃತ್ಯವನ್ನು ಪೂರ್ವಯೋಜಿತ ಸಂಚು ಎಂದು ಹೇಳಿರುವುದರಿಂದ ಈ ಕುರಿತು ತನಿಖೆ ನಡೆಸುವಾಗ ಮುಂದೊಂದು ದಿನ ಸಚಿವರೂ ವಿಚಾರಣೆ ಎದುರಿಸಬೇಕಾದ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಅಜಯ್ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು, ಇಲ್ಲದಿದ್ದರೆ ಅವರನ್ನು ಸಂಪುಟದಿಂದ ಕೈಬಿಡಬೇಕು ಎನ್ನುವುದು ರೈತರ ಬೇಡಿಕೆ. ಈ ಬೇಡಿಕೆಗೆ ಈಗ ಇನ್ನಷ್ಟು ಬಲ ಬಂದಿದೆ. ಪ್ರಕರಣದ ಸಂಬಂಧ ಪ್ರಶ್ನೆ ಕೇಳಿದ ಪತ್ರಕರ್ತರ ಜತೆ ಸಚಿವರು ಅನುಚಿತವಾಗಿ ವರ್ತಿಸಿದ್ದು ಸಹ ಅವರು ಹೊಂದಿರುವ ಹುದ್ದೆಗೆ ಶೋಭೆ ತರುವಂಥದ್ದಲ್ಲ. ಉತ್ತರಪ್ರದೇಶವು ವಿಧಾನಸಭಾ ಚುನಾವಣೆಗೆ ಸಜ್ಜಾಗುತ್ತಿದ್ದು ರೈತರ ಈ ಹತ್ಯೆ ಪ್ರಕರಣ ಅಲ್ಲಿ ಅನುರಣಿಸಲಿದೆ. ಅಜಯ್ ಮಿಶ್ರಾ ಅವರನ್ನು ಬಿಜೆಪಿ ಬಲವಾಗಿ ಬೆಂಬಲಿಸುತ್ತಿದ್ದು, ಅವರನ್ನು ಸಂಪುಟದಿಂದ ಕೈಬಿಡಬೇಕೆಂಬ ಬೇಡಿಕೆಗೆ ಪ್ರಧಾನಿ ಕಿವಿಗೊಟ್ಟಿಲ್ಲ. ಆದರೆ, ಪ್ರಕರಣ ಹೊಸ ಸ್ವರೂಪ ಪಡೆದಿರುವ ಈ ಹಂತದಲ್ಲಿ ಮಿಶ್ರಾ ಅವರಿಗೆ ಇದೇ ರೀತಿ ಬೆಂಬಲ ಮುಂದುವರಿಸುವುದು ಪ್ರಧಾನಿಯವರಿಗೆ ಸಾಧ್ಯವಾಗದೇ ಇರಬಹುದು.

ದಿನದ ಟ್ವೀಟ್



ಪ್ರಶ್ನೆಪತ್ರಿಕೆ ಸೋರಿಕೆ ಅಕ್ಷಮ್ಯ

ಗುಜರಾತಿನಲ್ಲಿ ಸರ್ಕಾರದ ಹೆಡ್‌ಕ್ಲರ್ಕ್ ಹುದ್ದೆಗಳ ನೇಮಕಾತಿಗೆ 2.15 ಲಕ್ಷಕ್ಕೂ ಹೆಚ್ಚು ಮಂದಿ ಅರ್ಜಿ ಸಲ್ಲಿಸಿದ್ದಾರೆ. ಲಿಖಿತ ಪರೀಕ್ಷೆಗಾಗಿ 88,000ಕ್ಕೂ ಹೆಚ್ಚು ಅರ್ಜಿದಾರರನ್ನು ಆಯ್ಕೆ ಮಾಡಲಾಗಿದೆ. ಆದರೆ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ. ಇದೆಲ್ಲ ನಡೆದಿರುವುದು 186 ಖಾಲಿ ಹುದ್ದೆಗಳಿಗಾಗಿ. ಸೋರಿಕೆಯನ್ನು ಮೊದಲು ನಿರಾಕರಿಸಲಾಗಿತ್ತು. ಈಗ ಉತ್ತರ ಗುಜರಾತ್‌ನಲ್ಲಿ ಒಬ್ಬ ವ್ಯಕ್ತಿಯನ್ನು ಬಂಧಿಸಲಾಗಿದೆ. #Gujarat_Paper_Leak

ದೀಪಲ್ ತ್ರಿವೇದಿ, ಉದ್ಯಮಿ, ಪತ್ರಕರ್ತೆ

ಕಿಡಿನುಡಿ

ನರೇಂದ್ರ ಮೋದಿ ಅವರೇ, ಅಪರಾಧಿ ಅಜಯ್ ಮಿಶ್ರಾ ಅವರನ್ನು ನೀವು ರಕ್ಷಿಸುತ್ತಿದ್ದೀರಿ ಎಂಬ ಸತ್ಯವನ್ನು, ಅತ್ಯಂತ ಎಚ್ಚರದಲ್ಲಿ ಆಕರ್ಷಕವಾಗಿ ರೂಪಿಸಿದ ಧಾರ್ಮಿಕ ಕಾರ್ಯಕ್ರಮ ಮತ್ತು ಧಾರ್ಮಿಕ ದಿರಿಸು ಬದಲಾಯಿಸುವುದಿಲ್ಲ.



ಪ್ರಿಯಾಂಕಾ ಗಾಂಧಿ ವಾದ್ರಾ
ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

25 ವರ್ಷಗಳ ಹಿಂದೆ

ಮಂಗಳವಾರ, 17-12-1996

• ಅಕ್ರಮ ಆಸ್ತಿ ಪ್ರಕರಣದಲ್ಲಿ ಜಯಲಲಿತಾ ಮತ್ತೆ ಬಂಧನ

ಚೆನ್ನೈ, ಡಿ. 16– ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾ ಅವರನ್ನು ಅಕ್ರಮ ಸಂಪತ್ತು ಕ್ರೋಡೀಕರಣ ಪ್ರಕರಣದ ಸಂಬಂಧ ಬಂಧಿಸಲಾಗಿದೆ. ಬಣ್ಣದ ಟೆಲಿವಿಷನ್ ಹಗರಣದಲ್ಲಿ ಬಂಧಿತರಾಗಿರುವ ಜಯಾ ಈಗಾಗಲೇ ನ್ಯಾಯಾಂಗ ಬಂಧನದಲ್ಲಿದ್ದಾರೆ. ಹೊಸ ಪ್ರಕರಣದಲ್ಲಿ ಜಯಾ ಅವರನ್ನು ಈ ತಿಂಗಳ 21ರವರೆಗೆ ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ.

ಅಕ್ರಮ ಸಂಪತ್ತು ಕ್ರೋಡೀಕರಣ ಪ್ರಕರಣದಲ್ಲಿ ಜಯಾ ಅವರನ್ನು ಅಧಿಕೃತವಾಗಿ ಬಂಧಿಸಲು ಅನುಮತಿ ಕೋರಿ ಜಾಗೃತಿ ಮತ್ತು ಭ್ರಷ್ಟಾಚಾರ ನಿರ್ಮೂಲನಾ ನಿರ್ದೇಶನಾಲಯದ ಹೆಚ್ಚುವರಿ ಎಸ್ಪಿ ನಲ್ಲಮ್ಮ ನಾಯ್ಡು ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸೆಷನ್ಸ್ ನ್ಯಾಯಾಧೀಶ ಎ.ರಾಮಮೂರ್ತಿ ಅವರು ಜಯಾ ಬಂಧನಕ್ಕೆ ಅನುಮತಿ ನೀಡಿದರು.

• ಕವಿ ಕೆ.ಎಸ್. ನರಸಿಂಹಸ್ವಾಮಿಗೆ ಪ್ರತಿಷ್ಠಿತ ಪಂಪ ಪ್ರಶಸ್ತಿ

ಬೆಂಗಳೂರು, ಡಿ. 16– ಸುಪ್ರಸಿದ್ಧ ಕವಿ ಡಾ. ಕೆ.ಎಸ್.ನರಸಿಂಹಸ್ವಾಮಿಯವರ 'ದುಂಡುಮಲ್ಲಿಗೆ' ಕವನ ಸಂಗ್ರಹವನ್ನು 95ನೇ ಸಾಲಿನ 'ಪಂಪ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಇಲ್ಲಿ ಇಂದು ಪ್ರಕಟಿಸಿದರು.

ಒಂದು ಲಕ್ಷ ನಗದನ್ನು ಒಳಗೊಂಡ ಈ ಪ್ರಶಸ್ತಿಯನ್ನು ಇದೇ ತಿಂಗಳು 28ರಂದು ಶಿರಸಿ ಬಳಿಯ ಬನವಾಸಿಯಲ್ಲಿ ನಡೆಯಲಿರುವ ಕದಂಬೋತ್ಸವ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಖ್ಯಾತ ಕವಿ ಡಾ. ಜಿ.ಎಸ್.ಶಿವರುದ್ರಪ್ಪ ನೇತೃತ್ವದ ಸಮಿತಿ ಈ ಕೃತಿಯನ್ನು ಆಯ್ಕೆ ಮಾಡಿದ್ದು ಸರ್ಕಾರ ಅದನ್ನು ಒಪ್ಪಿದೆ ಎಂದರು.

50 ವರ್ಷಗಳ ಹಿಂದೆ

ಶುಕ್ರವಾರ, 17-12-1971

• ಪಾಕ್ ಶರಣಾಗತಿ: ಕದನವಿರಾಮ

ನವದೆಹಲಿ, ಡಿ. 16– ಗಣಪ್ರಜಾತಂತ್ರೀ ಬಾಂಗ್ಲಾದೇಶವು ದಬ್ಬಾಳಿಕೆಯ ದುರ್ಗವನ್ನು ದೂಳೀಪಟಗೊಳಿಸಿ ಇಂದು ಸ್ವತಂತ್ರ.

ಪಶ್ಚಿಮ ಪಾಕಿಸ್ತಾನದ ಆಕ್ರಮಣಕೋರ ಪಡೆಗಳು ಸೋತು ಸುಣ್ಣವಾಗಿ ಭಾರತ ಸೇನೆಗೆ ಬೇಷರತ್ ಶರಣು. ಮುಕ್ತಿವಾಹಿನಿಯ ಒಡಗೂಡಿ ಭಾರತದ ವೀರಸೈನಿಕರು ಕೈಗೊಂಡ ವಿಮೋಚನೆ ಸಮರ ಸಫಲ.

ಶರಣಾಗತಿಗೆ ಸಹಿ ಬಿದ್ದ ಕೆಲವೇ ಗಂಟೆಗಳಲ್ಲಿ ಪಶ್ಚಿಮ ರಣರಂಗದಲ್ಲಿ ನಾಳೆ ರಾತ್ರಿ ಎಂಟು ಗಂಟೆಯಿಂದ ಕದನವಿರಾಮ ಜಾರಿಗೆ ತರುವುದಾಗಿ ಭಾರತದ ಘೋಷಣೆ. ಇದಕ್ಕೆ ಮುನ್ನ ಯಾಹ್ಯಾರು ತಮ್ಮ ರಾಷ್ಟ್ರಕ್ಕಿತ್ತ ಸಂದೇಶದಲ್ಲಿ ಯುದ್ಧ ನಿಂತಿಲ್ಲವೆಂಬ ಪ್ರಕಟಣೆ. ನಮ್ಮ ರಾಜ್ಯಸಭೆಯಲ್ಲಿ ರಕ್ಷಣಾ ಸಚಿವ ಜಗಜೀವನರಾಂ ಅವರು ಶರಣಾಗತಿ ಸುದ್ದಿ ಪ್ರಕಟಿಸಿದರು. ಶರಣಾಗತಿ ಪತ್ರಕ್ಕೆ ಬಾಂಗ್ಲಾ ದೇಶದಲ್ಲಿರುವ ಆಕ್ರಮಣಕೋರ ಪಶ್ಚಿಮ ಪಾಕಿಸ್ತಾನ್ ಸೇನೆಯ ಪ್ರಧಾನ ದಂಡನಾಯಕ ಲೆಫ್ಟಿನೆಂಟ್ ಜನರಲ್ ಎ.ಎ.ಕೆ. ನಿಯಾಜಿರವರು ಸಹಿ ಹಾಕಿದರು.

ಭಾರತ ಸೇನೆಯ ಪೂರ್ವ ವಲಯದ ಜನರಲ್ ಆಫೀಸರ್ ಕಮಾಂಡಿಂಗ್–ಇನ್– ಚೀಫ್‌ರಾದ ಲೆಫ್ಟಿನೆಂಟ್ ಜನರಲ್ ಜಗಜೀತ್‌ಸಿಂಗ್ ಅರೋರ ಶರಣಾಗತಿ ಪತ್ರಗಳನ್ನು ಭಾರತದ ಪರವಾಗಿ ಸ್ವೀಕರಿಸಿದರು.

ಕೇವಲ ಸಂಖ್ಯೆಯಲ್ಲಿ ಲಿಂಗ ಸಮಾನತೆ ಸಾಧಿಸಿದರೆ ಸಾಕೇ ಎಂದು ಕೇಳಿಕೊಳ್ಳಬೇಕಾಗಿದೆ

ಲಿಂಗಾನುಪಾತ ಸಮೀಕ್ಷೆ: ದಾರಿ ತಪ್ಪದಿರೋಣ



ವಿಶ್ಲೇಷಣೆ

ಡಾ. ಗೀತಾ ಕೃಷ್ಣಮೂರ್ತಿ

ಕೇಂದ್ರ ಆರೋಗ್ಯ ಸಚಿವಾಲಯವು ಎರಡು ವರ್ಷಗಳ ಕಾಲ ನಡೆಸಿದ ರಾಷ್ಟ್ರೀಯ ಕುಟುಂಬ ಮತ್ತು ಆರೋಗ್ಯ ಸಮೀಕ್ಷೆಯಿಂದ, 'ಪ್ರತೀ 1,000 ಸಂಖ್ಯೆಯ ಪುರುಷರಿಗೆ 1,020 ಮಹಿಳೆಯರಿದ್ದಾರೆ' ಎಂಬ ಸ್ತ್ರೀ- ಪುರುಷ ಅನುಪಾತದ ಅಂಶ ನವೆಂಬರ್‌ನಲ್ಲಿ ಹೊರಬಿದ್ದಿದೆ. 1876ರ ನಂತರ ನಡೆಸಿದ ಸಮೀಕ್ಷೆಗಳೆಲ್ಲದರ ಪೈಕಿ, ಈ ಸಮೀಕ್ಷೆ ಮೊದಲ ಬಾರಿಗೆ, ಸ್ತ್ರೀಯರ ಸಂಖ್ಯೆ ಪುರುಷರಿಗಿಂತ ಹೆಚ್ಚಿದೆ ಎಂದು ತೋರಿಸಿದೆ.

ಅಲ್ಲದೆ, 1992ರಲ್ಲಿ ರಾಷ್ಟ್ರೀಯ ಕುಟುಂಬ ಮತ್ತು ಆರೋಗ್ಯ ಸಮೀಕ್ಷಾ ಘಟಕ ಪ್ರಾರಂಭವಾದ ನಂತರ ಮೊದಲ ಬಾರಿಗೆ, ಪುರುಷರಿಗಿಂತ ಮಹಿಳೆಯರ ಸಂಖ್ಯೆ ಹೆಚ್ಚಿರುವುದಾಗಿ ದಾಖಲಾಗಿದೆ. ಸ್ತ್ರೀ- ಪುರುಷರ ನಡುವೆ ಇರುವ ತಾರತಮ್ಯವನ್ನು ನಿವಾರಿಸಲು ನಡೆಸಿದ ಸರ್ಕಾರದ ಪ್ರಾಮಾಣಿಕ ಪ್ರಯತ್ನದಿಂದಾಗಿ 'ಪ್ರಥಮ ಬಾರಿಗೆ ಮಹಿಳೆಯರ ಸಂಖ್ಯೆ ಪುರುಷರ ಸಂಖ್ಯೆಗಿಂತ ಹೆಚ್ಚಾಗಿದೆ' ಎಂದು ಆರೋಗ್ಯ ಸಚಿವಾಲಯ ಸಂತಸ ವ್ಯಕ್ತಪಡಿಸಿದೆ. ಅದರ ಬೆನ್ನಲ್ಲೇ, 'ಇದು ಸರ್ಕಾರವು ಮಹಿಳಾ ಸಬಲೀಕರಣದ ದಿಕ್ಕಿನಲ್ಲಿ ಕೈಗೊಂಡ ಕ್ರಮಗಳ ಫಲ' ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ.

ಆದರೆ, ಭಾರತದ ಜನಸಂಖ್ಯಾ ಪ್ರತಿಷ್ಠಾನ 'ಸ್ತ್ರೀ- ಪುರುಷ ಅನುಪಾತದಲ್ಲಿ ಕಂಡುಬಂದಿರುವ ಈ ಸುಧಾರಣೆ ಸ್ವಾಗತಾರ್ಹ. ಈ ದಿಕ್ಕಿನಲ್ಲಿ ಕೈಗೊಂಡಿರುವ ಪ್ರಯತ್ನಗಳು ಸಕಾರಾತ್ಮಕವಾಗಿವೆ ಎಂಬುದನ್ನು ಇದು ತೋರಿಸುತ್ತದೆ. ಆದರೆ, ಸ್ತ್ರೀ- ಪುರುಷ ಸಮಾನತೆಯನ್ನು ಸಾಧಿಸುವುದಕ್ಕೆ ಮಾಡಬೇಕಾದ ಪ್ರಯತ್ನಗಳು ಬಹಳಷ್ಟಿವೆ' ಎಂದು ಪ್ರತಿಕ್ರಿಯಿಸಿದೆ.

'ಈ ಏರಿಕೆಗೆ ಮಹಿಳೆಯರ ಜೀವಿತಾವಧಿ ದೀರ್ಘವಾಗಿರುವುದು ಕಾರಣ. ಇವತ್ತಿಗೂ ನವಜಾತ ಶಿಶುಗಳ ಅನುಪಾತ ಪ್ರತೀ 1,000 ಗಂಡುಮಕ್ಕಳಿಗೆ ಹೆಣ್ಣುಮಕ್ಕಳ ಸಂಖ್ಯೆ 929ರಲ್ಲೇ ಇದೆ. ಇದು ಗಂಡುಮಕ್ಕಳ ಆಯ್ಕೆಯ ಬಗ್ಗೆ ಇರುವ ಮೋಹವನ್ನು ತೋರಿಸುತ್ತದೆ. ಕೋವಿಡ್ ಕಾರಣದಿಂದಾಗಿ ತಡವಾಗಿರುವ ಜನಗಣತಿಯನ್ನು ನಡೆಸಿದ ನಂತರ ಹೊರಬರುವ ಅಂಕಿ ಅಂಶಗಳಿಂದ ಮಾತ್ರ ಈ ಬಗ್ಗೆ ಸ್ಪಷ್ಟವಾದ ಚಿತ್ರಣ ಸಿಗುವುದು ಸಾಧ್ಯ' ಎಂಬ ಎಚ್ಚರಿಕೆಯನ್ನೂ ನೀಡಿದೆ. ಈ ಅಂಕಿ ಅಂಶಗಳು ಸ್ತ್ರೀ- ಪುರುಷ ಅನುಪಾತದಲ್ಲಿ ಕಂಡುಬರುವ ಏರುಪೇರನ್ನು ಸರಿಪಡಿಸಲು ನಾವು ಕೈಗೊಂಡಿರುವ ಮಹಿಳಾಪರ ಕ್ರಮಗಳು ಕಾರಣವಲ್ಲ ಎಂಬುದನ್ನು ನಮಗೆ ಮನದಟ್ಟು ಮಾಡಿಸುವ ರೀತಿಯಲ್ಲಿ ಈ ಪ್ರತಿಕ್ರಿಯೆ ಇದೆ.

ಈ ಸಮೀಕ್ಷೆಗೆ ಒಳಪಡಿಸಿರುವುದು ಭಾರತದ 6,36,699 ಮನೆಗಳನ್ನು. ಸ್ತ್ರೀ- ಪುರುಷ ಅನುಪಾತದ ಸ್ಪಷ್ಟ ಚಿತ್ರಣ ಸಿಕ್ಕುವುದು ಜನಗಣತಿಯಲ್ಲಿ ದೊರೆಯುವ ಅಂಕಿ ಅಂಶಗಳಿಂದ ಮಾತ್ರವಾದ್ದರಿಂದ, ಈ ಸಮೀಕ್ಷೆಯಿಂದ ಹೊರಬಿದ್ದಿರುವ ಫಲಿತಾಂಶವು ಸಮಾಜದಲ್ಲಿ ಆಳವಾಗಿ ಬೇರೂರಿರುವ ಪಿತೃಪ್ರಧಾನ ಮನೋಧರ್ಮದ ಬದಲಾವಣೆಯ ಸೂಚಿ ಅಲ್ಲವೇ ಅಲ್ಲ. ಏಕೆಂದರೆ, ಈ ಸಮೀಕ್ಷೆಯಿಂದ ಹೊರಬಿದ್ದಿರುವುದು ಸ್ತ್ರೀ- ಪುರುಷರ ಲಿಂಗಾನುಪಾತವೇ ವಿನಾ ನವಜಾತ ಶಿಶುಗಳ ಲಿಂಗಾನುಪಾತವಲ್ಲ.

2015- 16ರಲ್ಲಿ ಬಿಡುಗಡೆ ಮಾಡಿದ ವರದಿಯ ಪ್ರಕಾರ, ನವಜಾತ ಶಿಶುಗಳ ಪೈಕಿ ಪ್ರತೀ 1,000 ಗಂಡು ಮಕ್ಕಳಿಗೆ 919 ಹೆಣ್ಣುಮಕ್ಕಳ ಅನುಪಾತವಿದ್ದರೆ, 2019-21ರ ಸಮೀಕ್ಷಾ ವರದಿಯ ಪ್ರಕಾರ, ಈ ಅನುಪಾತ 1,000 ಗಂಡು ಮಕ್ಕಳಿಗೆ 929 ಹೆಣ್ಣು ಮಕ್ಕಳು. ಈ ಎರಡೂ ವರದಿಗಳಲ್ಲಿ ಹೆಣ್ಣುಮಕ್ಕಳ ಸಂಖ್ಯೆಯಲ್ಲಿ ಕಂಡುಬರುವುದು ಅತ್ಯಲ್ಪ ವ್ಯತ್ಯಾಸ. ಇದು, ಸಮಾಜದಲ್ಲಿ ಇನ್ನೂ ಗಂಡುಮಕ್ಕಳನ್ನು ಪಡೆಯುವ ಆಯ್ಕೆಯ ಮನೋಭಾವ ಕಡಿಮೆಯಾಗಿಲ್ಲ ಎಂಬುದನ್ನು ತೋರಿಸುತ್ತದೆ. ವಿಶ್ವ ಆರೋಗ್ಯ ಸಂಸ್ಥೆಯ ಅಂದಾಜಿನ ಪ್ರಕಾರ, ನವಜಾತ ಶಿಶುಗಳ ಸಹಜ ಲಿಂಗಾನುಪಾತ 1,000 ಗಂಡುಮಕ್ಕಳಿಗೆ 952 ಹೆಣ್ಣುಮಕ್ಕಳು.

ಅಂತರರಾಷ್ಟ್ರೀಯ ಜನಸಂಖ್ಯಾ ವಿಜ್ಞಾನ ಸಂಸ್ಥೆಯ ಮೂಲಗಳಂತೆ, ಈ ಸಮೀಕ್ಷೆಯಿಂದ ಹೊರಬಿದ್ದಿರುವ ಆಶಾದಾಯಕ ಲಿಂಗಾನುಪಾತದ ಸಂಖ್ಯೆಗೆ ಕಾರಣ ಎರಡು. ಒಂದು, ಇದು ಸಮೀಕ್ಷೆಯ ಕಾಲದಲ್ಲಿ ಮನೆಯಲ್ಲಿ ಹಾಜರಿದ್ದ ಪುರುಷರು ಮತ್ತು ಮಹಿಳೆಯರ ಸಂಖ್ಯೆಯನ್ನು ಆಧರಿಸಿದೆ. ಎರಡನೆಯದು, ಕಳೆದ ಮೂವತ್ತು ವರ್ಷಗಳಲ್ಲಿ ಭಾರತದ ಲಿಂಗಾನುಪಾತದಲ್ಲಿ ಆಗಿರುವ ಗಣನೀಯ ಏರಿಕೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಈ ಸಮೀಕ್ಷೆಯನ್ನು ಎರಡು ಹಂತಗಳಲ್ಲಿ ನಡೆಸಲಾಗಿರುವುದು. ಮೊದಲನೆಯ ಹಂತದ ಸಮೀಕ್ಷೆಯನ್ನು 2019ರ ಜೂನ್ ಮತ್ತು 2020ರ ಜನವರಿ 30ರವರೆಗೆ ಮತ್ತು ಎರಡನೇ ಹಂತದ ಸಮೀಕ್ಷೆಯನ್ನು 2020ರ ಜನವರಿ 2ರಿಂದ 2021ರ ಏಪ್ರಿಲ್ 30ರವರೆಗೆ ನಡೆಸಲಾಯಿತು. ಸಮೀಕ್ಷೆ ನಡೆದ ಈ ಎರಡನೇ ಹಂತವು, ದೇಶದಲ್ಲಿ ಕೊರೊನಾ ಮಹಾಮಾರಿ ಅತ್ಯಂತ ತೀವ್ರ ಸ್ವರೂಪವನ್ನು ಪಡೆದುಕೊಂಡು ಜನಜೀವನವನ್ನು ಅಸ್ತವ್ಯಸ್ತಗೊಳಿಸಿದ್ದ ಮತ್ತು ಗ್ರಾಮೀಣ ಪ್ರದೇಶಗಳಿಂದ ವಲಸೆ ಹೋಗಿದ್ದ ಬಹುಪಾಲು ಕಾರ್ಮಿಕರು ಕೆಲಸ ಕಳೆದುಕೊಂಡು ತಮ್ಮ ತಮ್ಮ ಗ್ರಾಮಗಳಿಗೆ ಹಿಂತಿರುಗಿದ್ದ ಅವಧಿಯಾಗಿತ್ತು.

ರಾಷ್ಟ್ರೀಯ ಕುಟುಂಬ ಮತ್ತು ಆರೋಗ್ಯ ಸಮೀಕ್ಷಾ ಘಟಕದ ಸಮೀಕ್ಷೆಯು ಕೆಲವು ರಾಜ್ಯಗಳ ಕೆಲವು ಪ್ರದೇಶಗಳಿಗೆ ಸೀಮಿತವಾಗಿರುವುದರಿಂದ, ಇದು ಇಡೀ ದೇಶದ ಚಿತ್ರಣವನ್ನು ಬಿಂಬಿಸುತ್ತದೆ ಎಂದು ಭಾವಿಸಲಾಗದು.


ನವೆಂಬರ್ 25ರಂದು, ಅಂತರರಾಷ್ಟ್ರೀಯ ಮಹಿಳೆಯರ ವಿರುದ್ಧದ ಹಿಂಸೆಯ ನಿರ್ಮೂಲನಾ ದಿನ. ಈ ದಿನವನ್ನು ಅಂತರರಾಷ್ಟ್ರೀಯ ದಿನವನ್ನಾಗಿ 1992ರಲ್ಲಿ ವಿಶ್ವಸಂಸ್ಥೆ ಘೋಷಿಸಿತು. ಮಹಿಳೆಯ ಮೇಲೆ ಮಾನಸಿಕವಾಗಿ, ದೈಹಿಕವಾಗಿ ಅಥವಾ ಲೈಂಗಿಕವಾಗಿ ನಡೆಯುವ ದೌರ್ಜನ್ಯವನ್ನು ಹಿಂಸೆ ಎಂದು ವಿಶ್ವಸಂಸ್ಥೆ ಪರಿಭಾವಿಸುತ್ತದೆ. ಆದರೆ, ಇಂದಿಗೂ ಕುಟುಂಬದ ಸದಸ್ಯರಿಂದ ಹಿಡಿದು ಅಪರಿಚಿತರವರೆಗೆ ಎಲ್ಲರಿಂದಲೂ ಮಹಿಳೆ ಇಂಥ ಎಲ್ಲ ದೌರ್ಜನ್ಯಗಳಿಗೆ ಒಳಗಾಗುತ್ತಲೇ ಇದ್ದಾಳೆ.

ವಿಶ್ವಸಂಸ್ಥೆ ವರದಿಯ ಪ್ರಕಾರ, ಮೂವರಲ್ಲಿ ಒಬ್ಬಳು ಮಹಿಳೆ ತನ್ನ ಜೀವಿತಾವಧಿಯಲ್ಲಿ ದೌರ್ಜನ್ಯಕ್ಕೆ ಒಳಗಾಗಿರುತ್ತಾಳೆ. 13 ರಾಷ್ಟ್ರಗಳ ಅಂಕಿ ಅಂಶಗಳ ಆಧಾರದ ಮೇಲೆ, ಮಹಿಳೆಯರ ಮೇಲಾಗುವ 10 ದೌರ್ಜನ್ಯಗಳ ಪೈಕಿ ವರದಿಯಾಗುವುದು ಸರಾಸರಿ ಒಂದು ಮಾತ್ರ ಎಂದೂ ವಿಶ್ವಸಂಸ್ಥೆಯು ವರದಿಯೊಂದರಲ್ಲಿ ತಿಳಿಸಿದೆ. ಭಾರತ ಇದಕ್ಕೆ ಹೊರತಲ್ಲ. ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೊದ ಹಿಂದಿನ ವರ್ಷದ ವರದಿಯ ಪ್ರಕಾರ, ದೇಶದಲ್ಲಿ ಪ್ರತೀ 35 ನಿಮಿಷಗಳಿಗೆ ಒಂದರಂತೆ ಮಹಿಳೆಯ ಮೇಲೆ ಅಪರಾಧ ಕೃತ್ಯ ನಡೆಯುತ್ತದೆ. ಇದರಲ್ಲಿ, ಮಹಿಳೆ ಅತಿ ಹೆಚ್ಚಿನ (ಶೇ 30ರಷ್ಟು) ಹಿಂಸೆಗೆ ಒಳಗಾಗುವುದು ಅವಳ ಗಂಡ ಮತ್ತು ಅವನ ಸಂಬಂಧಿಗಳಿಂದ. ಇದಲ್ಲದೆ, ಲೈಂಗಿಕ ಕಿರುಕುಳ ಮತ್ತು ಅತ್ಯಾಚಾರದಂಥ ಹಿಂಸೆಗೆ ನಿರಂತರವಾಗಿ ಒಳಗಾಗುತ್ತಾಳೆ.


ಇಂಥ ಪರಿಸ್ಥಿತಿಯಲ್ಲಿ, ಮಹಿಳೆಯರ ಸಂಖ್ಯೆಯು ಪುರುಷರ ಸಂಖ್ಯೆಗಿಂತ ಜಾಸ್ತಿಯಾಗಿದೆ ಎಂಬ ಏಕಮಾತ್ರ ಕಾರಣದಿಂದ, ನಾವು ಅಭಿವೃದ್ಧಿಹೊಂದಿದ ದೇಶಗಳ ಸಾಲಿನಲ್ಲಿ ನಿಲ್ಲುತ್ತೇವೆ ಎಂದು ಬೀಗುವುದು ಸರಿಯಲ್ಲ.

ಮಹಿಳೆಗಿರುವ ಸೀಮಿತ ಉದ್ಯೋಗಾವಕಾಶಗಳು ಮತ್ತು ಹೆಚ್ಚಿನ ಕೌಟುಂಬಿಕ ಕರ್ತವ್ಯಗಳಿಂದಾಗಿ ಭಾರತದ ಉದ್ಯೋಗ ಕ್ಷೇತ್ರದಲ್ಲಿ ಮಹಿಳೆಯ ಪಾಲ್ಗೊಳ್ಳುವಿಕೆ ಕುಂಠಿತವಾಗಿದೆ. ಹಾಗಾಗಿ ದೇಶದ ಆರ್ಥಿಕತೆಗೆ ಅವಳ ಕೊಡುಗೆ ಅತ್ಯಲ್ಪ. ಜಾಗತಿಕ ಜಿಡಿಪಿಗೆ ಮಹಿಳೆಯರ ಕೊಡುಗೆ ಸರಾಸರಿ ಶೇ 37 ಇದ್ದರೆ ಭಾರತದ ಮಹಿಳೆಯರ ಕೊಡುಗೆ ಕೇವಲ ಶೇ 18ರಷ್ಟಿದೆ. ವಿಶ್ವ ಆರ್ಥಿಕ ವೇದಿಕೆಯ ಜಾಗತಿಕ ಲಿಂಗ ಅಂತರದ ಬಗೆಗಿನ ವರದಿಯ ಪ್ರಕಾರ, 153 ರಾಷ್ಟ್ರಗಳ ಪಟ್ಟಿಯಲ್ಲಿ ಭಾರತದ ಸ್ಥಾನ 143ನೆಯದು.

ಈ ಹಿನ್ನೆಲೆಯಲ್ಲಿ, ಕೇವಲ ಸಂಖ್ಯೆಯಲ್ಲಿ ಲಿಂಗ ಸಮಾನತೆ ಸಾಧಿಸಿದರೆ ಸಾಕೇ ಎಂಬುದು, ಈ ಸಂದರ್ಭದಲ್ಲಿ ನಮಗೆ ನಾವೇ ಕೇಳಿಕೊಳ್ಳಬೇಕಾದ ಪ್ರಶ್ನೆ. 'ಲಿಂಗ ಸಮಾನತೆ ಎಂಬುದು ಸಾಧಿಸಬೇಕಾದ ಗುರಿ ಅಲ್ಲ. ಬಡತನವನ್ನು ನಿವಾರಿಸುವುದು, ಸುಸ್ಥಿರ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು ಮತ್ತು ಉತ್ತಮ ಆಡಳಿತವನ್ನು ಕಟ್ಟುವುದಕ್ಕೆ ಇರಬೇಕಾದ ಪೂರ್ವಷರತ್ತು' ಎಂಬ, ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿಯಾಗಿದ್ದ ಕೋಫಿ ಅನ್ನಾನ್ ಅವರ ಮಾತುಗಳು ದಾರಿ ತಪ್ಪದಂತೆ ನಮ್ಮನ್ನು ಮುನ್ನಡೆಸಬೇಕು.



ಚುರುಮುರಿ



ಮನೆ, ಮೇಲ್ಮನೆ!

• ಬಿ.ಎನ್.ಮಲ್ಲೇಶ್

'ಪಪ್ಪಾ... ನಾ ಬೇರೆ ಮನೆ ಮಾಡ್ತೀನಿ...' ಮಗನ ಮಾತು ಕೇಳಿ ತೆಪರೇಸಿಗೆ ಗಾಬರಿಯಾಯಿತು. 'ಏಯ್, ಯಾಕೋ? ಮದುವೆಗೆ ಮುಂಚೆನೇ ಬೇರೆ ಮನೆ ಬಗ್ಗೆ ಮಾತಾಡ್ತಿದೀಯ?' ಎಂದ.

'ಮತ್ತೆ? ನಂಗೂ ವಯಸ್ಸಾಗ್ತಿದೆ. ನಾನ್ಯಾವಾಗ ಮನೆ ಯಜಮಾನ ಅನ್ನಿಸ್ಕೊಳ್ಳೋದು?'

'ಅದಕ್ಕೆಲ್ಲ ಸಮಯ ಸಂದರ್ಭ ಬರುತ್ತೆ. ಅಲ್ಲೀತಂಕ ತಡ್ಕೊಬೇಕು'.

'ಅದೆಲ್ಲ ಆಗಲ್ಲ, ಅತ್ತ ಗಡಿನಾಡಲ್ಲಿ ಒಬ್ಬರು ಅವರಣ್ಣನ ಸಪೋರ್ಟ್‌ನಿಂದ ಈಗ ಮೇಲ್ಮನೆಗೆ ಆಯ್ಕೆಯಾಗಿದಾರೆ. ಇತ್ತ ಅರೆ ಮಲೆನಾಡಲ್ಲಿ ಒಬ್ಬರನ್ನು ಅವರ ತಾತ ಮೇಲ್ಮನೆಗೆ ಗೆಲ್ಲಿಸಿದ್ರಂತೆ. ಅದೇ ಥರ ತುಮಕೂರು, ಶಿವಮೊಗ್ಗ, ಧಾರವಾಡದಲ್ಲೂ ಅವರ ಅಪ್ಪಂದಿರ ಇಲ್ಲವೇ ಅಣ್ಣಂದಿರ ಬಲದಿಂದ ಮೇಲ್ಮನೆಗೆ ಹೋಗಿದಾರೆ. ಈಗ ಅವರದೇ ರಾಜ್ಯಭಾರ, ಯಜಮಾನಿಕೆ'.

'ಲೇ... ಅಧಿಕಾರ ಅನ್ನೋದು ಅವರ ಪಿತ್ರಾರ್ಜಿತ ಆಸ್ತಿ ಕಣೋ... ನನ್ನತ್ರ ಪಿತ್ರಾರ್ಜಿತ ಏನೈತೆ? ಡಯಾಬಿಟೀಸು, ಬೀಪಿ. ಇರೋ ಆಸ್ತಿ ಎಲ್ಲ ನನ್ನ ಸ್ವಯಾರ್ಜಿತ...'

'ಅದೆಲ್ಲ ಗೊತ್ತಿಲ್ಲ, ನಂಗೂ ಅಧಿಕಾರ ಬೇಕು. ಕೊನೇಪಕ್ಷ ಮನೆ ಯಜಮಾನ ಆದ್ರೂ ಆಗ್ಬೇಕು...' ಮಗ ಪಟ್ಟು ಬಿಡಲಿಲ್ಲ.

ಅಷ್ಟರಲ್ಲಿ ಅಲ್ಲಿಗೆ ಬಂದ ಗುಡ್ಡೆ ಎಲ್ಲ ವಿಚಾರ ತಿಳಿದುಕೊಂಡು 'ಏನಪ್ಪಾ... ನಿನಗೀಗ ಅಧಿಕಾರ ಬೇಕು ತಾನೆ? ಒಂದು ದಾರಿ ಐತೆ ನೋಡು' ಎಂದ.

'ದಾರಿನಾ? ಏನದು ಅಂಕಲ್?'

'ನಿಮ್ಮಪ್ಪನ್ನ ಅರ್ಜೆಂಟ್ 'ಮೇಲ್ಮನೆ'ಗೆ ಕಳಿಸಬೇಕು, ಕಳಿಸ್ತೀಯ?'

ತೆಪರೇಸಿಗೆ ಗಾಬರಿಯಾಯಿತು, 'ಲೇಯ್, ಏನು ಮನೆಹಾಳ ಐಡಿಯಾ ಹೇಳಿಕೊಡ್ತಿದೀಯೋ...' ಎಂದ. ಗುಡ್ಡೆಗೆ ನಗು ತಡೆಯಲಾಗಲಿಲ್ಲ. ತೆಪರೇಸಿ ಮಗನೂ ತೆಪ್ಪಗಾದ.

ಸಂಗತ

ಬಂದರೂ ಕಾಲೇಜಿಗೆ ಬಾರದು ಕಾಗುಣಿತ

ಮಕ್ಕಳಲ್ಲಿನ ಕಾಗುಣಿತ ದೋಷದ ಮೂಲ ಯಾವುದು, ಪರಿಹಾರ ಏನು ಎಂಬುದರ ಬಗ್ಗೆ ಚರ್ಚೆಗಳೇ ನಡೆಯದಿರುವುದು ಏಕೆ?

• ಸಿಬಂತಿ ಪದ್ಮನಾಭ ಕೆ.ವಿ.

ಇದು 'ಅ'ಕಾರ 'ಹ'ಕಾರ ವಿವಾದದ ಕುರಿತು ಅಲ್ಲ; ಅಲ್ಪಪ್ರಾಣ, ಮಹಾಪ್ರಾಣಗಳಿಗೆ ಸಂಬಂಧಿಸಿದ ಸಂಗತಿಯೂ ಅಲ್ಲ. ಅದಕ್ಕಿಂತಲೂ ಪ್ರಾಥಮಿಕವಾದ ವಿಷಯವೊಂದಕ್ಕೆ ಸಂಬಂಧಿಸಿದ್ದು. ಬರವಣಿಗೆಯಲ್ಲಿ ಕಾಗುಣಿತ ದೋಷ ಇರಬಾರದು ಎಂಬ ಬಗ್ಗೆ ಬಹುಮಂದಿಯ ಆಕ್ಷೇಪ ಇರಲಾರದೇನೋ?

ಕಾಲೇಜು ಅಥವಾ ವಿಶ್ವವಿದ್ಯಾಲಯ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ತರಗತಿ ಟಿಪ್ಪಣಿಯನ್ನೋ ಬೇರೆ ಯಾವುದಾದರೂ ಬರಹವನ್ನೋ ಗಮನಿಸಿ. ಬಹುಪಾಲು ವಿದ್ಯಾರ್ಥಿಗಳಲ್ಲಿ ಒಂದು ಸಾಲಿಗೆ ನಾಲ್ಕು ಕಾಗುಣಿತ ತಪ್ಪು ಎದ್ದು ಕಾಣುತ್ತದೆ. ಉತ್ತರಪತ್ರಿಕೆಗಳ ಮೌಲ್ಯಮಾಪಕರ ಪರಿಸ್ಥಿತಿಯನ್ನಂತೂ ಕೇಳುವುದೇ ಬೇಡ. ಅದು ಅವರಿಗೇ ಒಂದು ದೊಡ್ಡ ಪರೀಕ್ಷೆ.


ಪದವಿ ಅಥವಾ ಸ್ನಾತಕೋತ್ತರ ಹಂತಕ್ಕೆ ಬಂದರೂ ಈ ವಿದ್ಯಾರ್ಥಿಗಳ ಭಾಷೆ ಏಕೆ ತಿದ್ದಿಲ್ಲ? ಪ್ರೌಢ ಬರಹಗಳನ್ನು ಬರೆಯುವ ವಿಷಯ ಹಾಗಿರಲಿ, ಕಾಗುಣಿತ ದೋಷವಿಲ್ಲದ, ಅರ್ಥಪೂರ್ಣ ವಾಕ್ಯವೊಂದನ್ನು ರಚಿಸುವ ಶಕ್ತಿಯೂ ಈ ಮಕ್ಕಳಲ್ಲಿ ಏಕೆ ಬೆಳೆದಿಲ್ಲ? ಇದು ಯಾವುದೋ ಪ್ರದೇಶಕ್ಕೋ ಜಾತಿಗೋ ಪಂಗಡಕ್ಕೋ ಸಂಬಂಧಿಸಿದ ಸಮಸ್ಯೆ ಅಲ್ಲ. ಎಲ್ಲಾ ಕಡೆ, ಎಲ್ಲರಲ್ಲೂ ಇದೆ.

ಮಕ್ಕಳಲ್ಲಿ ಕಾಗುಣಿತ ದೋಷ ತಿದ್ದದಿರುವುದು ಹೊಸ ಚರ್ಚೆಯೇನೂ ಅಲ್ಲ. ವಿಶ್ವವಿದ್ಯಾಲಯದವರು ಕಾಲೇಜಿನವರತ್ತ ಬೆರಳು ತೋರಿಸುವುದು, ಕಾಲೇಜು ಅಧ್ಯಾಪಕರು ಪ್ರೌಢಶಾಲಾ ಶಿಕ್ಷಕರತ್ತ ಬೊಟ್ಟು ಮಾಡುವುದು, ಪ್ರೌಢಶಾಲೆಯಲ್ಲಿರುವವರು ಪ್ರಾಥಮಿಕ ಶಾಲೆಯ ಅಧ್ಯಾಪಕರನ್ನು ದೂರುವುದು ಹಿಂದಿನಿಂದಲೂ ನಡೆದುಬಂದಿದೆ. ಅವರಿವರನ್ನು ಜವಾಬ್ದಾರರನ್ನಾಗಿಸುವುದು ಹಾಗಿರಲಿ, ಈ ಸಮಸ್ಯೆಯ ಮೂಲ ಯಾವುದು, ಪರಿಹಾರ ಏನು ಎಂಬುದಾದರೂ ಚರ್ಚೆಯಾಗಬೇಕಲ್ಲ?

ಈ ವಿಚಾರದ ಬೆನ್ನು ಹಿಡಿದು ಹೊರಟರೆ ಮೂಲದಲ್ಲಿ ಪ್ರಾಥಮಿಕ ಶಾಲೆಯೇ ಕಾಣುತ್ತದೆ. ಆದರೆ ಅದೊಂದೇ ಕಾರಣವಲ್ಲ ಎಂಬುದೂ ಗೊತ್ತಾಗುತ್ತದೆ. ಪ್ರಾಥಮಿಕ ಶಾಲೆಯಲ್ಲಿ ಕಾಗುಣಿತ- ವ್ಯಾಕರಣಗಳಿಗೆ ಹೆಚ್ಚಿನ ಒತ್ತು ನೀಡಬೇಡಿ, ಮಕ್ಕಳಿಗೆ 'ಸೌಂಡ್' (ಧ್ವನಿ) ಅನ್ನು ಕಲಿಸಿಕೊಡಿ, ಮುಂದೆ ಭಾಷೆ ತಾನಾಗಿಯೇ ಬೆಳೆಯುತ್ತದೆ ಎಂಬ ಅಭಿಪ್ರಾಯವೊಂದಿದೆ. ಆದರೆ ಈ ವಿದ್ಯಾರ್ಥಿಗಳಿಗೆ 'ಸೌಂಡ್'ನ ಅರಿವು ಚೆನ್ನಾಗಿಯೇ ಇದೆ. 'ಮಾಡುತ್ತೇನೆ' ಎಂಬ ಪದವನ್ನು ಹಾಗೆಯೇ ಓದುತ್ತಾರೆ, ಬರೆಯುವಾಗ ಮಾತ್ರ ಅದು 'ಮಾಡುತೆನೆ'ಯೋ 'ಮಡುತ್ತೆನೆ'ಯೋ ಆಗುತ್ತದೆ.

ಆರಂಭದಿಂದಲೂ ಇಂಗ್ಲಿಷ್ ಮಾಧ್ಯಮದಲ್ಲಿ ಓದಿದವರಿಗೆ ಈ ಸಮಸ್ಯೆಯೋ ಎಂದು ಗಮನಿಸಿದರೆ, ಹಾಗಿಲ್ಲ. ಇವರು ಪೂರ್ತಿಯಾಗಿ ಕನ್ನಡ ಮಾಧ್ಯಮದಲ್ಲಿ ಓದಿದವರೇ. ಅಂದರೆ ಕಲಿಕೆಯಲ್ಲೇ ಸಮಸ್ಯೆ ಇದೆ ಎಂದಾಯಿತು. ಶಿಕ್ಷಣದ ವಿವಿಧ ಹಂತಗಳಲ್ಲಿರುವ ಅಧ್ಯಾಪಕರಲ್ಲಿ ಕಾಗುಣಿತವನ್ನು ತಪ್ಪಿಲ್ಲದೆ ಬರೆಯಬಲ್ಲವರು ಎಷ್ಟು ಪ್ರಮಾಣದಲ್ಲಿ ಇದ್ದಾರೆ ಎಂಬುದೂ ಒಂದು ಪ್ರಶ್ನೆ. ಹೀಗೆ ಕೇಳಿದರೆ ಅನೇಕ ಅಧ್ಯಾಪಕರಿಗೆ ಮುಜುಗರ ಅನ್ನಿಸೀತು. ಆರಂಭದಲ್ಲಿ ಪ್ರಸ್ತಾಪಿಸಿದ ರೀತಿಯ ವಿದ್ಯಾರ್ಥಿಗಳೇ ಅಧ್ಯಾಪಕರಾಗುತ್ತಾ ಹೋದರೆ ಅವರು ಅದನ್ನೇ ತಮ್ಮ ವಿದ್ಯಾರ್ಥಿಗಳಿಗೂ ಕಲಿಸುವುದು ಸಹಜ. ಎಂಟನೇ ತರಗತಿ ಕಳೆದ ಮೇಲಂತೂ ಈಗಿನ ವಿದ್ಯಾರ್ಥಿಗಳು ಯಂತ್ರಗಳೇ ಆಗಿಬಿಡುತ್ತಾರೆ. ಅವರಿಗೆ ಆಗಲೇ ಪಿಯುವಿನಲ್ಲಿ ವಿಜ್ಞಾನ ಓದಿ ಎಂಜಿನಿಯರಿಂಗ್, ಮೆಡಿಕಲ್ ಸೀಟು ಹಿಡಿಯುವ ಗುಂಗು. ದಿನಬೆಳಗಾದರೆ ಟ್ಯೂಶನ್, ಕೋಚಿಂಗ್. ಇನ್ನು ಹತ್ತನೇ ತರಗತಿ ಮುಗಿಯುವ ಮೊದಲೇ ನೀಟು, ಜೆಇಇ ತರಬೇತಿ. ಖಾಸಗಿ ಪದವಿಪೂರ್ವ ಕಾಲೇಜುಗಳಲ್ಲಿ ಪರ್ಸೆಂಟೇಜು ಹೆಚ್ಚಿಸುವ ಪ್ರಯೋಗಗಳ ನಡುವೆ ಭಾಷೆ ತಬ್ಬಲಿ.

ವಿಜ್ಞಾನ, ವಾಣಿಜ್ಯ ವಿಭಾಗದಲ್ಲಿ ಪಿಯು ಓದುವವರಿಗೆ ಭಾಷೆ ಯಾಕೆ, ಅದರಿಂದ ಪರ್ಸೆಂಟೇಜಿಗೆ ಏನೂ ಪ್ರಯೋಜನ ಇಲ್ಲ ಎಂಬಷ್ಟು ಉಡಾಫೆ. ಭಾಷಾ ಶಿಕ್ಷಕರು ಅನೇಕ ಸಲ ಪೆವಿಲಿಯನ್‌ಗೆ ಮಾತ್ರ ಉಳಿಯುವ ಹೆಚ್ಚುವರಿ ಆಟಗಾರರು. ಇನ್ನು ಕಲಾ ವಿಭಾಗವನ್ನು ಕೇಳುವವರೇ ಇಲ್ಲ.



ಕಲೆ-ವಾಣಿಜ್ಯ ವಿಭಾಗದವರು, ತಾಂತ್ರಿಕ ಶಿಕ್ಷಣಕ್ಕೆ ಹೋಗದ ವಿಜ್ಞಾನ ವಿಭಾಗದವರು ಕಾಲೇಜಿಗೆ ಬರುತ್ತಾರೆ. ಅಷ್ಟು ಹೊತ್ತಿಗೆ ಅವರ ಭಾಷೆಯ ತೊಡಕುಗಳು ಅಲುಗಾಡಿಸಲೂ ಆಗದಷ್ಟು ಭದ್ರವಾಗಿ ಬೇರೂರಿರುತ್ತವೆ. ಎದುರಿಗೆ ಒಂದು ಪುಟ ಇಟ್ಟು ಅದನ್ನೇ ನಕಲು ಮಾಡಿ ಎಂದರೂ ಅವರು ತಪ್ಪೇ ಬರೆಯುತ್ತಾರೆ. ಅವರ ಕಣ್ಣೆದುರೇ ತಪ್ಪನ್ನು ತಿದ್ದಿದರೂ ಮರುದಿನ ಅದೇ ತಪ್ಪು ಬರೆಯುತ್ತಾರೆ. ಹೇಗೋ ತೇರ್ಗಡೆ ಆಗಿ ಎಂ.ಎಗೆ ಪ್ರವೇಶ ಪಡೆಯುತ್ತಾರೆ. ಅಲ್ಲಿಯೂ ಇದೇ ಪ್ರಹಸನ ಮುಂದುವರಿಯುತ್ತದೆ. 'ನೀನು ತಪ್ಪು ಬರೆಯುತ್ತಾ ಇದ್ದೀ' ಎಂದರೆ ಈ ಹಂತಕ್ಕೆ ಬಂದ ವಿದ್ಯಾರ್ಥಿಗೆ ಅವಮಾನ. ಕಾಗುಣಿತ ತಿದ್ದಿಕೊಂಡು ಕೂರಲು ಅಧ್ಯಾಪಕರಿಗೆ ಸಮಯ, ವ್ಯವಧಾನ ಎರಡೂ ಇಲ್ಲ.

ಇಲ್ಲೊಂದು ಸಾಮಾಜಿಕ- ಆರ್ಥಿಕ ವಿಚಾರವೂ ಇದೆ. ಅದೇನೆಂದರೆ, ಸರ್ಕಾರಿ ಶಾಲೆಗಳಲ್ಲಿ ಓದುವ ಅನೇಕ ಮಕ್ಕಳು ವಿವಿಧ ಕಾರಣಗಳಿಗಾಗಿ ತರಗತಿಗೆ ಸರಿಯಾಗಿ ಹಾಜರಾಗುವುದೇ ಇಲ್ಲ. ಇವರು ಆರಂಭದಿಂದಲೇ ಭಾಷಾ ತರಬೇತಿಯಿಂದ ವಂಚಿತರು. ಅಂತೂ ಇದೊಂದು ವಿಷವರ್ತುಲ. ಕೇವಲ ಭಾಷಾಶಾಸ್ತ್ರಜ್ಞರೋ ಶಿಕ್ಷಣ ಶಾಸ್ತ್ರಜ್ಞರೋ ಪರಿಹಾರ ಸೂಚಿಸಬಹುದಾದ ಸಮಸ್ಯೆ ಅಲ್ಲ. ಸುಧಾರಣೆಯ ದಾರಿ ಬಗ್ಗೆ ಪೂರ್ವಗ್ರಹರಹಿತ ಚರ್ಚೆಯಾದರೆ ಒಳ್ಳೆಯದು.

ವಾಚಕರ ವಾಣಿ

ಸಕಾಲದಲ್ಲಿ ಸಹಾಯ ಸ್ತುತ್ಯರ್ಹ

ಕರ್ನಾಟಕ ಲೋಕಸೇವಾ ಆಯೋಗ ಮೊನ್ನೆ ಕಲಬುರಗಿಯಲ್ಲಿ ನಡೆಸಿದ ನೇಮಕಾತಿ ಪರೀಕ್ಷೆಗೆ ತೆರಳುತ್ತಿದ್ದ ನೂರಾರು ಅಭ್ಯರ್ಥಿಗಳಿಗೆ ರೈಲು ವಿಳಂಬದ ಹಿನ್ನೆಲೆಯಲ್ಲಿ ಪರೀಕ್ಷಾ ಕೇಂದ್ರಗಳನ್ನು ಸಮಯಕ್ಕೆ ಸರಿಯಾಗಿ ತಲುಪಲು ತೊಂದರೆಯಾಯಿತು. ಅಧಿಕಾರಿಗಳ ಮನವೊಲಿಕೆಯಿಂದ ಕನಿಷ್ಠ ಮಧ್ಯಾಹ್ನದ ಅವಧಿಯ ಪರೀಕ್ಷೆಗೆ ತೆರಳಲು ನಿರ್ಧರಿಸಿದ ನೂರಾರು ಅಭ್ಯರ್ಥಿಗಳನ್ನು ಸಂಚಾರ ದಟ್ಟಣೆಯಿಲ್ಲದೆ, ಅವರವರ ಪರೀಕ್ಷಾ ಕೇಂದ್ರಗಳಿಗೆ ತಲುಪಿಸಲು ಕಲಬುರಗಿ ಜಿಲ್ಲಾಡಳಿತವು ಸಕಾಲದಲ್ಲಿ ಸ್ಪಂದಿಸಿ, ಸಾರಿಗೆ ವ್ಯವಸ್ಥೆ ಮಾಡಿ ಸಹಕರಿಸಿದ್ದು ಸ್ತುತ್ಯರ್ಹ. ಜಿಲ್ಲಾಡಳಿತದ ಎಲ್ಲ ಅಧಿಕಾರಿ, ಸಿಬ್ಬಂದಿಯ ಕಾರ್ಯ ಅನುಕರಣೀಯ, ಅಭಿನಂದನೀಯ.

ಡಾ. ಚನ್ನು ಅ. ಹಿರೇಮಠ, ರಾಣೆಬೆನ್ನೂರು

ವಿಧಾನ ಪರಿಷತ್ ಅಗತ್ಯ: ನಡೆಯಲಿ ಚರ್ಚೆ

ಒಂದು ಕಾಲಕ್ಕೆ ಮುತ್ಸದ್ದಿಗಳು, ಚಿಂತಕರು ಹಾಗೂ ಬುದ್ಧಿಜೀವಿಗಳಿಗೆ ಮೀಸಲಾಗಿದ್ದ ವಿಧಾನ ಪರಿಷತ್ ಎನ್ನುವ ಮೇಲ್ಮನೆ ಸ್ಥಾನವು ಈಗ ಕುಟುಂಬದವರ, ಹಣವುಳ್ಳವರ ಪಾಲಾಗಿದೆ. ಈಗೀಗ ವಿಧಾನ ಪರಿಷತ್ ಸದಸ್ಯ ಸ್ಥಾನ ಹಾಸ್ಯಾಸ್ಪದವಾಗಿ ಪರಿಣಮಿಸಿದ್ದು, ಅದರ ಮಹತ್ವವೇ ಕಳೆಗುಂದುತ್ತಾ ಸಾಗಿದೆ. ಹಿಂದೊಮ್ಮೆ ಇದು ವಿಧಾನಸಭೆ ಚುನಾವಣೆಯಲ್ಲಿ ಸೋತವರಿಗೂ ಮರುಜನ್ಮ ಕಲ್ಪಿಸುತ್ತಿತ್ತು. ಆದರೆ ಈಗ ಅದಕ್ಕೆ ಒದಗಿರುವ ಸ್ಥಿತಿ ನೆನಪಿಸಿಕೊಂಡರೆ ವಿಷಾದ ಮೂಡುತ್ತದೆ. ಹಲವು ರಾಜ್ಯಗಳಲ್ಲಿ ವಿಧಾನ ಪರಿಷತ್ ಅನ್ನು ರದ್ದುಗೊಳಿಸಿರುವುದು ನಿಜ.

ಇಂತಹ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರಪ್ಪ ಅವರು 'ವಿಧಾನ ಪರಿಷತ್ ನಮಗೆ ಅವಶ್ಯವೇ?' ಎಂಬ ಪ್ರಶ್ನೆಯನ್ನು ಎತ್ತಿದ್ದಾರೆ. ಒಂದು ಕಾಲದಲ್ಲಿ ಅವರು ವಿಧಾನಸಭಾ ಚುನಾವಣೆಯಲ್ಲಿ ಸೋತಾಗ ಕೂಡ ಪರಿಷತ್ ಚುನಾವಣೆ ಅವರಿಗೆ ಮರುಹುಟ್ಟು ಕಲ್ಪಿಸಿತ್ತು. ಅದನ್ನು ಚೆನ್ನಾಗಿ ಅರಿತಿರುವ ಅವರಿಗೆ ಈಗ ವಿಧಾನ ಪರಿಷತ್ ಸ್ಥಾನ ಅಷ್ಟೇನೂ ಮಹತ್ವದ್ದಲ್ಲ ಎಂದೆನಿಸಿರಬೇಕು. ವಿಧಾನ ಪರಿಷತ್ತಿನ ಅಸ್ತಿತ್ವದ ಅಗತ್ಯ ಅಥವಾ ಅನಗತ್ಯದ ಕುರಿತು ವಿಧಾನಸಭೆಯಲ್ಲಿ ವ್ಯಾಪಕ ಚರ್ಚೆ ನಡೆಯಲಿ. ಇದು ಕೇವಲ ಕುಟುಂಬಸ್ಥರಿಗೆ, ಧನಬಲ ಇರುವವರಿಗೆ ವೇದಿಕೆಯಾಗುವುದಕ್ಕಿಂತ ವಿಸರ್ಜನೆಯಾಗುವುದು ಉತ್ತಮ.

ಚಂದ್ರಕಾಂತ ನಾಮಧಾರಿ, ಅಂಕೋಲಾ, ಉತ್ತರ ಕನ್ನಡ

ಹೀಗೊಂದು ಮನೆ

ಹೆಸರಿಗಷ್ಟೇ ಮೇಲ್ಮನೆ, ಕೆಳಮನೆ
ಅಲ್ಲಿ ಇರದಿದ್ದರೆ ಇಲ್ಲಿ
ಇಲ್ಲಿ ಇರದಿದ್ದರೆ ಅಲ್ಲಿ
ಒಟ್ಟಾರೆ ಒಂದು ಮನೆ,
ಸೂರು ಯಾವುದಾದರೇನು?
ಕೆಳಗೋ ಮೇಲೋ
ಬೆಚ್ಚಗಿದ್ದರಾಯ್ತು
ಅದುವೇ ಕೆಂಗಲ್ಲು ಹನುಮಂತಯ್ಯ
ನಿರ್ಮಿತ ವಿಧಾನಸೌಧವೆಂಬ
ಅರಮನೆ!

ಸಿರಿಗೇರಿ ಯರಿಸ್ವಾಮಿ, ಬಳ್ಳಾರಿ

ವೈಜ್ಞಾನಿಕ ಪರಿಹಾರದ ಬಗ್ಗೆ ಆಲೋಚಿಸಿ

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್‌ಸಿ) ಸಂಶೋಧನಾ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಇದನ್ನು ತಡೆಯಲು ವಿದ್ಯಾರ್ಥಿಗಳ ವಸತಿಗೃಹಗಳ ಕೊಠಡಿಗಳಲ್ಲಿ ಸೀಲಿಂಗ್ ಫ್ಯಾನ್‌ಗಳನ್ನು ತೆಗೆಸಿ ಗೋಡೆಗೆ ಫ್ಯಾನ್‌ಗಳನ್ನು ಅಳವಡಿಸಲು ನಿರ್ಧರಿಸಿರುವ ವರದಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಐಐಎಸ್‌ಸಿಗೆ ಪ್ರವೇಶ ಪಡೆಯುವುದೇ ಒಂದು ದೊಡ್ಡ ಸಾಧನೆಯಾಗಿರುತ್ತದೆ. ಅಲ್ಲಿ ಅಧ್ಯಯನ ಮಾಡಿದವರು, ಸಂಶೋಧನೆ ಮಾಡಿದವರು ವಿಶ್ವದ ಉನ್ನತ ಸಂಶೋಧನಾ ಕೇಂದ್ರಗಳಲ್ಲಿ ವಿಜ್ಞಾನಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಂಥ ವಿಜ್ಞಾನ ಸಂಸ್ಥೆಯ ವಿದ್ಯಾರ್ಥಿಗಳಲ್ಲಿ ಕೆಲವರು ಆತ್ಮಹತ್ಯೆಗೆ ಶರಣಾಗುತ್ತಾರೆ ಎಂದರೆ ಅದಕ್ಕೆ ಬಲವಾದ ಕಾರಣಗಳೇ ಇರಬಹುದು.

ಒಬ್ಬ ವ್ಯಕ್ತಿ ಕಟ್ಟ ಕಡೆಯದಾಗಿ ಆತ್ಮಹತ್ಯೆಯ ಬಗ್ಗೆ ಆಲೋಚಿಸುತ್ತಾನೆ. ಸಂಶೋಧನಾ ವಿದ್ಯಾರ್ಥಿ ಆತ್ಮಹತ್ಯೆಗೆ ಶರಣಾಗುವುದೆಂದರೆ ವಿವಿಧ ರೀತಿಯ ಕಿರುಕುಳ, ಖಿನ್ನತೆ, ಪ್ರೇಮ ವೈಫಲ್ಯ, ಸಂಶೋಧನೆಯಲ್ಲಿ ಯಶಸ್ಸು ಕಾಣದಿರುವುದು ಸೇರಿದಂತೆ ಹಲವು ಕಾರಣಗಳಿರಬಹುದು. ಇವುಗಳ ಬಗ್ಗೆ ವಿವಿಧ ಕೋನಗಳಿಂದ ವಿಶ್ಲೇಷಿಸಿ ಸೂಕ್ತವಾದ ಪರಿಹಾರಗಳನ್ನು ಕಂಡುಕೊಳ್ಳುವ ಮೂಲಕ ಇಂತಹ ಕೃತ್ಯಗಳನ್ನು ತಡೆಯಬೇಕಾಗಿದೆ. ಅದನ್ನು ಬಿಟ್ಟು ಸೀಲಿಂಗ್ ಫ್ಯಾನ್‌ಗಳನ್ನು ಬದಲಿಸಿದರೆ ಆತ ಅಥವಾ ಆಕೆ ಮತ್ತೊಂದು ಮಾರ್ಗವನ್ನು ಹಿಡಿಯಬಹುದು. ಆದ್ದರಿಂದ ಸಮಸ್ಯೆಯ ವ್ಯವಸ್ಥಿತ ಅಧ್ಯಯನ ಹಾಗೂ ವೈಜ್ಞಾನಿಕ ಪರಿಹಾರಗಳ ಕಡೆಗೆ ಗಮನ ಕೇಂದ್ರೀಕರಿಸುವುದು ಅಗತ್ಯವಾಗಿದೆ.

ಈ.ಬಸವರಾಜು, ಬೆಂಗಳೂರು

ಮೇಲ್ಮನೆಯೋ ಕುಬೇರರ ಮನೆಯೋ?

ರಾಜ್ಯ ವಿಧಾನ ಪರಿಷತ್ತಿಗೆ ಸ್ಥಳೀಯ ಸಂಸ್ಥೆಗಳಿಂದ ಇತ್ತೀಚೆಗೆ ನಡೆದ ಚುನಾವಣೆ ಬಹಳಷ್ಟು ಕುತೂಹಲ ಕೆರಳಿಸಿತ್ತು. ಈ ಚುನಾವಣೆಯಲ್ಲಿ ಕೋಟಿಗಟ್ಟಲೆ ಹಣವನ್ನು ಚೆಲ್ಲಲಾಯಿತು ಎಂದು ಆಡಳಿತಪಕ್ಷದ ಸದಸ್ಯರೇ ಆರೋಪಿಸಿದ್ದಾರೆ. ಈ ರೀತಿಯ ಚುನಾವಣೆಯನ್ನು ತಾವು ಹಿಂದೆಂದೂ ನೋಡಿರಲಿಲ್ಲ ಎಂದು ಕೆಲವರು ಪ್ರತಿಕ್ರಿಯಿಸಿದ್ದಾರೆ. ರಾಜ್ಯಸಭೆ ಹಾಗೂ ವಿಧಾನ ಪರಿಷತ್ತು ಶಾಶ್ವತವಾದ ಸದನಗಳಾಗಿವೆ. ಅಂದರೆ, ಲೋಕಸಭೆ ಹಾಗೂ ವಿಧಾನಸಭೆಗಳಂತೆ ಇವು ವಿಸರ್ಜನೆಗೊಳ್ಳುವುದಿಲ್ಲ. ಆದರೆ ಈ ಮನೆಗಳು ಈಗ ಕುಬೇರರ ಮನೆಗಳು ಎಂಬ ಅಪಖ್ಯಾತಿಗೆ ಒಳಗಾಗಿರುವುದು ಶೋಚನೀಯ ಸಂಗತಿ. ಇಲ್ಲಿ ದುಡ್ಡಿದ್ದವನೇ ದೊಡ್ಡಪ್ಪನಾಗುತ್ತಾನೆ.

ಅನೇಕ ಸಂದರ್ಭಗಳಲ್ಲಿ ವಿಧಾನಸಭೆಯಲ್ಲಿ ಬಹುಮತ ಹೊಂದಿರುವ ಆಡಳಿತ ಪಕ್ಷವು ವಿಧಾನ ಪರಿಷತ್ತಿನಲ್ಲಿ ಬಹುಮತದ ಕೊರತೆ ಎದುರಿಸುತ್ತದೆ. ಆದ್ದರಿಂದ ಅನೇಕ ರಾಜ್ಯಗಳು ವಿಧಾನ ಪರಿಷತ್ತನ್ನೇ ರದ್ದುಗೊಳಿಸಿವೆ. ವಿಧಾನ ಪರಿಷತ್ತಿನ ಅಗತ್ಯವಿದೆಯೇ ಎಂಬ ಪ್ರಶ್ನೆ ರಾಜಕೀಯ ವಲಯದಲ್ಲಿ ಆಗಿಂದಾಗ್ಗೆ ಕೇಳಿಬರುತ್ತಲೇ ಇರುತ್ತದೆ. ಇಂತಲ್ಲಿ, ವಿಧಾನ ಪರಿಷತ್ತು ದಿನೇ ದಿನೇ ತನ್ನ ಮಹತ್ವ ಕಳೆದುಕೊಳ್ಳುತ್ತಾ ಬರುತ್ತಿರುವುದು ಆತಂಕಕಾರಿಯಾದ ವಿಚಾರವಾಗಿದೆ.

ಕೆ.ವಿ.ವಾಸು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬಿಗಿಯಾಗುತ್ತಿದೆ ಯುಎಪಿಎ ಕುಣಿಕೆ

ಪ್ರತಿಪಕ್ಷಗಳು ಹಾಗೂ ಸಾಮಾಜಿಕ ಹೋರಾಟಗಾರರಿಂದ ತೀವ್ರ ಟೀಕೆಗೆ ಗುರಿಯಾಗಿರುವ ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆಯ (ಯುಎಪಿಎ) ಅಡಿಯಲ್ಲಿ ದಾಖಲಾಗುವ ಪ್ರಕರಣಗಳ ಸಂಖ್ಯೆ ಮತ್ತು ಕಾಯ್ದೆ ಅಡಿ ಬಂಧಿತರಾದವರ ಸಂಖ್ಯೆ ಕಳೆದ ಐದು ವರ್ಷಗಳಿಂದ ಏರಿಕೆಯಾಗಿದೆ. ಎಲ್ಲ ರಾಜ್ಯಗಳಿಗಿಂತ ಉತ್ತರ ಪ್ರದೇಶದಲ್ಲಿ ಈ ಕಾನೂನಿನ ಬಳಕೆ ಅಧಿಕವಾಗಿದೆ ಎಂದು ಕೇಂದ್ರ ಸರ್ಕಾರ ನೀಡಿದ ಅಂಕಿ–ಅಂಶಗಳು ಹೇಳುತ್ತವೆ. ಈ ಕಾನೂನನ್ನು ದುರ್ಬಳಕೆ ಮಾಡಿಕೊಂಡು ಅಮಾಯಕರನ್ನು ಬಂಧಿಸಲಾಗುತ್ತಿದೆ ಎಂಬ ಆರೋಪ ಸರ್ಕಾರದ ಮೇಲಿದೆ.

2015ರಲ್ಲಿ ಇಡೀ ದೇಶದಲ್ಲಿ 897 ಪ್ರಕರಣಗಳು ದಾಖಲಾಗಿದ್ದವು. ಈ ಸಂಖ್ಯೆಯು 2019ರಲ್ಲಿ 1,226ಕ್ಕೆ ಏರಿಕೆಯಾಗಿದೆ. 2015ರಲ್ಲಿ ಈ ಕಾಯ್ದೆಯಡಿ 1,128 ಜನರನ್ನು ಬಂಧಿಸಲಾಗಿತ್ತು. 2019ರಲ್ಲಿ 1,948 ಜನ ಕಾರಾಗೃಹ ಸೇರಿದ್ದಾರೆ. 2020ರಲ್ಲಿ ಕೋವಿಡ್ ಸಾಂಕ್ರಾಮಿಕ ಹಾಗೂ ಈ ಕಾರಣಕ್ಕೆ ವಿಧಿಸಲಾದ ಲಾಕ್‌ಡೌನ್ ಕಾರಣ, ಯುಎಪಿಎ ಕಾಯ್ದೆಯಡಿ ದಾಖಲಾದ ಪ್ರಕರಣ ಹಾಗೂ ಬಂಧಿತರ ಸಂಖ್ಯೆಯಲ್ಲಿ ಅಲ್ಪ ಇಳಿಕೆ ಕಂಡುಬಂದಿದೆ.

ವರ್ಷದಿಂದ ವರ್ಷಕ್ಕೆ ಏರಿಕೆ

ವರ್ಷ	ಪ್ರಕರಣ	ಬಂಧಿತರ ಸಂಖ್ಯೆ
2015	897	1,128
2016	922	999
2017	901	1,554
2018	1,182	1,421
2019	1,226	1,948
2020	796*	1,321

(*2020ರಲ್ಲಿ ಈ ಕಾಯ್ದೆಯಡಿ ಬಂಧಿಸಿದವರ ಸಂಖ್ಯೆಯನ್ನು ಕೇಂದ್ರ ಸರ್ಕಾರ ತಿಳಿಸಿದ್ದು, ದಾಖಲಾದ ಪ್ರಕರಣ ಎಷ್ಟು ಎಂಬ ಮಾಹಿತಿ ನೀಡಿಲ್ಲ. ಆದರೆ, ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ಪ್ರಕಾರ, 796 ಪ್ರಕರಣಗಳು ದಾಖಲಾಗಿವೆ)

ಇತ್ಯರ್ಥವಾಗದ ಪ್ರಕರಣಗಳೇ ಹೆಚ್ಚು

ಯುಎಪಿಎ ಅಡಿ ಬಂಧಿಸಲಾದ ವ್ಯಕ್ತಿಗಳಲ್ಲಿ ಶಿಕ್ಷೆಗೆ ಒಳಗಾದವರ ಪ್ರಮಾಣ ಶೇ 3ಕ್ಕಿಂತಲೂ ಕಡಿಮೆ ಇದೆ. ಆದರೆ ಶಿಕ್ಷೆಗೆ ಒಳಗಾದವರಿಗಿಂತ ಖುಲಾಸೆಯಾದವರ ಸಂಖ್ಯೆ ಹೆಚ್ಚು. ವಿಚಾರಣೆ ಪೂರ್ಣಗೊಳ್ಳದೆ ಜೈಲಿನಲ್ಲಿರುವ ಆರೋಪಿಗಳ ಪ್ರಮಾಣವು ಶೇ 79ಕ್ಕೂ ಹೆಚ್ಚು. ಈ ಬಗ್ಗೆ ಸಂಸತ್ತಿನ ಸದಸ್ಯರು ಕಳವಳ ವ್ಯಕ್ತಪಡಿಸಿದ್ದಾರೆ. ಈ ಪ್ರಕರಣಗಳಲ್ಲಿ ತನಿಖೆಯ ಹಂತದಲ್ಲಿರುವ ಪ್ರಕರಣಗಳು ಎಷ್ಟು ಎಂಬುದರ ಮಾಹಿತಿಯನ್ನು ಸರ್ಕಾರವು ನೀಡಿಲ್ಲ. ಅಲ್ಲದೆ, ತನಿಖೆ ಪೂರ್ಣಗೊಂಡು ವಿಚಾರಣೆ ಹಂತದಲ್ಲಿರುವ ಪ್ರಕರಣಗಳು ಎಷ್ಟು ಎಂಬುದರ ಬಗ್ಗೆಯೂ ಸರ್ಕಾರ ಮಾಹಿತಿ ನೀಡಿಲ್ಲ. ಸಂಸದ ವಿ.ಶಿವದಾಸನ್ ಅವರು ಗೃಹ ಸಚಿವಾಲಯವನ್ನು ಲೋಕಸಭೆಯಲ್ಲಿ ಈ ಬಗ್ಗೆ ಪ್ರಶ್ನಿಸಿದ್ದಾರೆ. 'ಖುಲಾಸೆ ಪ್ರಮಾಣವನ್ನು ಪರಿಗಣಿಸಿದರೆ, ಈ ಕಾಯ್ದೆಯು ದುರ್ಬಳಕೆಯಾಗುತ್ತಿದೆ ಎನಿಸುತ್ತಿದೆ. ಇದನ್ನು ತಡೆಯಲು ಕ್ರಮ ತೆಗೆದುಕೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ' ಎಂದು ಅವರು ಪ್ರಶ್ನಿಸಿದ್ದಾರೆ.

'ಈ ಕಾಯ್ದೆಗೆ ಮತ್ತಷ್ಟು ತಿದ್ದುಪಡಿ ತರುವ ಯಾವ ಚಿಂತನೆಯೂ ಇಲ್ಲ' ಎಂದು ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಹೇಳಿದ್ದಾರೆ.

ಸಂಖ್ಯೆ	ವಿವರ	ಪ್ರಮಾಣ
7,243	2016–2020ರ ಅವಧಿಯಲ್ಲಿ ಈ ಕಾಯ್ದೆ ಅಡಿ ಬಂಧಿಸಲಾದ ಆರೋಪಿಗಳು	
212	ಶಿಕ್ಷೆಗೆ ಒಳಗಾದವರ ಸಂಖ್ಯೆ	2.92%
354	ಖುಲಾಸೆಯಾದವರ ಸಂಖ್ಯೆ	4.8%
959	ಈ ಪ್ರಕರಣಗಳಲ್ಲಿ ಜಾಮೀನಿನ ಮೇಲೆ ಬಿಡುಗಡೆಯಾಗಿರುವವರ ಸಂಖ್ಯೆ	13.2%
5,718	ವಿಚಾರಣೆ ಪೂರ್ಣಗೊಳ್ಳದೆ ನ್ಯಾಯಾಂಗ ಬಂಧನದಲ್ಲಿರುವವರ ಸಂಖ್ಯೆ	79.08%

ಕರ್ನಾಟಕ: ರಾಜ್ಯದಲ್ಲಿ 2019 ಮತ್ತು 2020ರಲ್ಲಿ ಒಟ್ಟು ಎಂಟು ಜನರನ್ನು ಈ ಕಾಯ್ದೆ ಅಡಿ ಬಂಧಿಸಲಾಗಿದೆ. ಇವರಲ್ಲಿ ನಾಲ್ವರು 30 ವರ್ಷಕ್ಕಿಂತ ಕಿರಿಯರು.

30 ವರ್ಷಕ್ಕಿಂತ ಕಿರಿಯರೇ ಅಧಿಕ

ಈ ಕಾಯ್ದೆ ಅಡಿ ದಾಖಲಾದ ಪ್ರಕರಣಗಳಲ್ಲಿ 2018ರಿಂದ 2020ರ ನಡುವೆ ಬಂಧಿಸಲಾದ ಒಟ್ಟು ಆರೋಪಿಗಳಲ್ಲಿ 30 ವರ್ಷಕ್ಕಿಂತ ಕಡಿಮೆ ವಯಸ್ಸಿನವರ ಪ್ರಮಾಣವು ಶೇ 50ಕ್ಕೂ ಹೆಚ್ಚು. 30 ವರ್ಷಕ್ಕಿಂತ ಕಡಿಮೆ ವಯಸ್ಸಿನವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಂಧಿಸಿದ ರಾಜ್ಯಗಳ ಪಟ್ಟಿಯಲ್ಲಿ ಉತ್ತರ ಪ್ರದೇಶ ಮೊದಲ ಸ್ಥಾನದಲ್ಲಿದೆ. ಉತ್ತರ ಪ್ರದೇಶದಲ್ಲಿ ಈ ಕಾಯ್ದೆ ಅಡಿ ಬಂಧಿಸಲಾದವರಲ್ಲಿ 30 ವರ್ಷಕ್ಕಿಂತ ಕಡಿಮೆ ವಯಸ್ಸಿನವರ ಪ್ರಮಾಣ ಶೇ 69ಕ್ಕಿಂತಲೂ ಹೆಚ್ಚು.

(2018-2020ರವರೆಗಿನ ಮಾಹಿತಿ)

	ಒಟ್ಟು	30 ವರ್ಷಕ್ಕಿಂತ ಕಡಿಮೆ ವಯಸ್ಸಿನವರು
ದೇಶ	4,690	2,501 (53.32%)
ಉತ್ತರ ಪ್ರದೇಶ	1,338	931 (69.58%)
ಜಮ್ಮು–ಕಾಶ್ಮೀರ	750	366 (48.8%)
ಮಣಿಪುರ	943	499 (52.91%)
ಜಾರ್ಖಂಡ್	368	218 (59.2%)

ವರದಿ: ಜಯಸಿಂಹ ಆರ್., ಅಮೃತಕಿರಣ್ ಬಿ.ಎಂ.

ಉತ್ತರ ಪ್ರದೇಶದಲ್ಲಿ ಹೆಚ್ಚು ಪ್ರಕರಣ

ದೇಶದಲ್ಲಿ ಹೆಚ್ಚು ಯುಎಪಿಎ ಪ್ರಕರಣಗಳು ಕಂಡುಬಂದಿರುವುದು ಉತ್ತರ ಪ್ರದೇಶದಲ್ಲಿ. ಈ ಕಾಯ್ದೆಯಡಿ ಬಂಧಿತರಾದವರ ಸಂಖ್ಯೆಯೂ ಇಲ್ಲೇ ಅಧಿಕ. 2015ರಲ್ಲಿ 23 ಜನರನ್ನು ಬಂಧಿಸಲಾಗಿತ್ತು. 2019ರಲ್ಲಿ ಬಂಧಿತರಾದವರ ಸಂಖ್ಯೆ 498ಕ್ಕೆ ತಲುಪಿತು. 2017ರಲ್ಲಿ ಯೋಗಿ ಆದಿತ್ಯನಾಥ ನೇತೃತ್ವದ ಬಿಜೆಪಿ ಸರ್ಕಾರವು ಅಧಿಕಾರಕ್ಕೆ ಬಂದಿತು. 2016ರಲ್ಲಿ ಕೇವಲ 15 ಜನ ಜೈಲು ಸೇರಿದ್ದರು. ಮರುವರ್ಷವೇ ಇವರ ಸಂಖ್ಯೆ 382ಕ್ಕೆ ಏರಿಕೆಯಾಯಿತು. 2018 ಹಾಗೂ 2019ರಲ್ಲಿ ಬಂಧಿತರ ಸಂಖ್ಯೆ ಐನೂರರ ಸಮೀಪಕ್ಕೆ ಬಂದಿತು.

ಜಮ್ಮು ಕಾಶ್ಮೀರದಲ್ಲಿ, 2015ರಲ್ಲಿ 59ರಷ್ಟಿದ್ದ ಪ್ರಕರಣಗಳು 2020ರಲ್ಲಿ 287ಕ್ಕೆ ಹೆಚ್ಚಳವಾಗಿವೆ. ಬಂಧಿತರ ಸಂಖ್ಯೆಯೂ 10ರಿಂದ 346ಕ್ಕೆ ಏರಿದೆ. ಜಾರ್ಖಂಡ್‌ನಲ್ಲೂ ಪ್ರಕರಣ ಹಾಗೂ ಬಂಧಿತರ ಪ್ರಮಾಣದಲ್ಲಿ ಏರುಗತಿಯಲ್ಲಿದೆ.

ಉತ್ತರ ಪ್ರದೇಶ

ವರ್ಷ	ಪ್ರಕರಣ	ಬಂಧಿತರ ಸಂಖ್ಯೆ
2015	6	23
2016	10	15
2017	109	382
2018	107	479
2019	81	498
2020	72	361

ಜಮ್ಮು–ಕಾಶ್ಮೀರ


ವರ್ಷ	ಪ್ರಕರಣ	ಬಂಧಿತರ ಸಂಖ್ಯೆ
2015	59	10
2016	161	56
2017	156	35
2018	245	177
2019	255	227
2020	287	346

ಜಾರ್ಖಂಡ್

ವರ್ಷ	ಪ್ರಕರಣ	ಬಂಧಿತರ ಸಂಖ್ಯೆ
2015	44	44
2016	77	116
2017	52	57
2018	137	97
2019	105	202
2020	86	69

ಬಿಜೆಪಿ ಅಧಿಕಾರದ ರಾಜ್ಯಗಳಲ್ಲಿ ಯುಎಪಿಎ ಬಳಕೆ

ಬಿಜೆಪಿ ಮತ್ತು ಬಿಜೆಪಿಯ ಮಿತ್ರಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ, 2020ರಲ್ಲಿ ಯುಎಪಿಎ ಅಡಿ ದಾಖಲಾದ ಪ್ರಕರಣಗಳಲ್ಲಿ ಹೆಚ್ಚು ಜನರನ್ನು ಬಂಧಿಸಲಾಗಿದೆ. ಬೇರೆ ಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿ ಈ ಪ್ರಕರಣಗಳ ಅಡಿ ಒಬ್ಬರನ್ನೂ ಬಂಧಿಸಿಲ್ಲ. ಬಿಜೆಪಿ ಆಡಳಿತವಿರುವ ಗುಜರಾತ್, ಗೋವಾ ಮತ್ತು ಹಿಮಾಚಲ ಪ್ರದೇಶದಲ್ಲಿ ಒಬ್ಬ ವ್ಯಕ್ತಿಯನ್ನೂ ಯುಎಪಿಎ ಅಡಿ ಬಂಧಿಸಿಲ್ಲ.



- ತಮಿಳುನಾಡಿನಲ್ಲಿ ಈ ಹಿಂದೆ ಬಿಜೆಪಿಯ ಮಿತ್ರಪಕ್ಷ ಎಐಎಡಿಎಂಕೆ ಅಧಿಕಾರದಲ್ಲಿ ಇದ್ದಾಗ 92 ಜನರನ್ನು ಈ ಕಾಯ್ದೆ ಅಡಿ ಬಂಧಿಸಲಾಗಿತ್ತು
- ಪಂಜಾಬ್‌ನಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದ್ದ 44 ರೈತರನ್ನು ಈ ಕಾಯ್ದೆ ಅಡಿ ಬಂಧಿಸಲಾಗಿತ್ತು
- ಕೇರಳದಲ್ಲಿ 24 ಜನರನ್ನು ರಾಷ್ಟ್ರೀಯ ತನಿಖಾ ದಳವು ಈ ಕಾಯ್ದೆ ಅಡಿ ಬಂಧಿಸಿದೆ
- ಜಾರ್ಖಂಡ್‌ನಲ್ಲಿ 69, ಮಹಾರಾಷ್ಟ್ರದಲ್ಲಿ 7 ಜನರನ್ನು, ನಕ್ಸಲರು ಮತ್ತು ನಕ್ಸಲರ ಬಗ್ಗೆ ಅನುಕಂಪ ಹೊಂದಿರುವವರು ಎಂದು ಈ ಕಾಯ್ದೆ ಅಡಿ ಬಂಧಿಸಲಾಗಿದೆ

ಆಧಾರ: ಕೇಂದ್ರ ಗೃಹ ಸಚಿವಾಲಯ, ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಮಂಡಿಸಲಾದ ದತ್ತಾಂಶಗಳು, ಎನ್‌ಸಿಆರ್‌ಬಿ ವಾರ್ಷಿಕ ವರದಿಗಳು



ಕೇಂದ್ರ ಸಚಿವ ಅಜಯ್ ಮಿಶ್ರಾ ವಜಾಕ್ಕೆ ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರು ನವದೆಹಲಿಯ ಶಾಸ್ತ್ರಿ ಭವನದ ಹೊರಗಡೆ ಗುರುವಾರ ಪ್ರತಿಭಟನೆ ನಡೆಸಿದರು–ಪಿಟಿಐ ಚಿತ್ರ

ತೀವ್ರಗೊಂಡ ಆಗ್ರಹ; ಸಂಸತ್ತಿನ ಒಳಗೆ, ಹೊರಗೆ ಪ್ರತಿಭಟನೆ

ಮಿಶ್ರಾ ವಜಾಕ್ಕೆ ಬಿಗಿಪಟ್ಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣದಲ್ಲಿ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ವಜಾಕ್ಕೆ ಆಗ್ರಹಿಸಿ, ಸಂಸತ್ತಿನ ಒಳಗೂ ಹೊರಗೂ ಸರ್ಕಾರದ ಮೇಲೆ ಪ್ರತಿಪಕ್ಷಗಳು ಒತ್ತಡ ಹಾಕಿವೆ. ಲೋಕಸಭೆ ಹಾಗೂ ರಾಜ್ಯಸಭೆ ಕಲಾಪಗಳಲ್ಲಿ ಸದಸ್ಯರು ಗುರುವಾರವೂ ಪ್ರತಿಭಟನೆ ಮುಂದುವರಿಸಿದರು. ಆದರೆ ಮಿಶ್ರಾ ಅವರಿಂದ ರಾಜೀನಾಮೆ ಪಡೆಯುವ ಬಗ್ಗೆ ಸರ್ಕಾರ ಯಾವುದೇ ಸುಳಿವು ನೀಡಲಿಲ್ಲ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಪ್ರತಿಪಕ್ಷಗಳು ಲೋಕಸಭೆಯಲ್ಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡವು. ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯಸಭೆಯಲ್ಲಿ ಮಿಶ್ರಾ ಅವರ ವಿಷಯ ಪ್ರಸ್ತಾಪಿಸುವುದಕ್ಕೆ ಮುನ್ನವೇ, ಸಭಾಧ್ಯಕ್ಷ ಎಂ. ವೆಂಕಯ್ಯ ನಾಯ್ಡು ಅವರು ಕಲಾಪವನ್ನು ಮುಂದೂಡಿದರು.

ಮಿಶ್ರಾ ವಜಾಕ್ಕೆ ಆಗ್ರಹಿಸಿ ಎರಡೂ ಸದನಗಳಲ್ಲಿ ಸಂಸದರು ಘೋಷಣೆಗಳನ್ನು ಕೂಗಿ, ಧರಣಿ ನಡೆಸಿದ್ದರಿಂದ ಯಾವುದೇ ಮಹತ್ವದ ವಿಚಾರಗಳು ಚರ್ಚೆಯಾಗಲಿಲ್ಲ. ಎಂಎಸ್‌ಎಂಇ ವಲಯದ ಬಗ್ಗೆ ಪ್ರಶ್ನೆ ಕೇಳುವಂತೆ ರಾಹುಲ್ ಗಾಂಧಿ ಅವರನ್ನು ಸ್ಪೀಕರ್ ಓಂ ಬಿರ್ಲಾ ಕರೆದರು. ಈ ಸಮಯವನ್ನು ಮಿಶ್ರಾ ರಾಜೀನಾಮೆಗೆ ಆಗ್ರಹಿಸುವುದಕ್ಕೆ ರಾಹುಲ್ ಬಳಸಿಕೊಂಡರು. 'ಮಿಶ್ರಾ ಒಬ್ಬ ಕ್ರಿಮಿನಲ್. ಅವರನ್ನು ಸಂಪುಟದಿಂದ ಕಿತ್ತೊಗೆಯಬೇಕು. ಅವರ ವಿರುದ್ಧ ಕ್ರಮ ಜರುಗಿಸಬೇಕು. ಈ ಬಗ್ಗೆ ಮಾತನಾಡಲು ಅವಕಾಶ ನೀಡಬೇಕು' ಎಂದು ಅವರು ಪಟ್ಟು ಹಿಡಿದರು.

ಈ ಬಗ್ಗೆ ಗದ್ದಲ ಮುಂದುವರಿದಿದ್ದರಿಂದ, ಮಧ್ಯಾಹ್ನದ 2 ಗಂಟೆವರೆಗೆ ಕಲಾಪವನ್ನು ಮುಂದೂಡಲಾಯಿತು. ಸದನ ಸಮಾವೇಶಗೊಂಡಾಗ ಮತ್ತೆ ಇದೇ ವಿಚಾರವಾಗಿ ಕೋಲಾಹಲ ಎದ್ದಿದ್ದರಿಂದ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಲಾಯಿತು.

> ಎಸ್‌ಐಟಿ ವರದಿಯ ಬಳಿಕವೂ ಮಿಶ್ರಾ ಅವರನ್ನು ಸಚಿವ ಸ್ಥಾನದಲ್ಲಿ ಮುಂದುವರಿಸಲಾಗುತ್ತಿದೆ ಎಂದರೆ, ಅವರನ್ನು ಪ್ರಧಾನಿ ರಕ್ಷಿಸುತ್ತಿದ್ದಾರೆ ಎನ್ನಬೇಕಾಗುತ್ತದೆ
> **ಮಲ್ಲಿಕಾರ್ಜುನ ಖರ್ಗೆ**
> ರಾಜ್ಯಸಭೆ ಪ್ರತಿಪಕ್ಷ ನಾಯಕ

ಮಿಶ್ರಾ ವಿಷಯವನ್ನು ರಾಜ್ಯಸಭೆಯಲ್ಲಿ ಪ್ರತಿಪಕ್ಷಗಳು ಪ್ರಸ್ತಾಪಿಸುತ್ತಿದ್ದಂತೆಯೇ, ಸಭಾಧ್ಯಕ್ಷರು ಕಲಾಪ ಮುಂದೂಡಿದರು. ಮಧ್ಯಾಹ್ನ 2 ಗಂಟೆಗೆ ಸದನ ಸಮಾವೇಶಗೊಂಡರೂ, ಓಮೈಕ್ರಾನ್ ಕುರಿತ ಚರ್ಚೆಯನ್ನು ಮುಂದೆ ತೆಗೆದುಕೊಂಡು ಹೋಗಲು ಅವರಿಗೆ ಸಾಧ್ಯವಾಗಲಿಲ್ಲ.

'ಸಂಸತ್ತಿನಲ್ಲಿ ವಿಷಯ ಪ್ರಸ್ತಾಪಿಸುವುದಕ್ಕೂ ಬಿಡದೆ ಕಲಾಪವನ್ನು ಮುಂದೂಡಲಾಗುತ್ತಿದೆ. ಇದರ ಅರ್ಥ ಏನು. ನಮ್ಮ ಹಕ್ಕುಗಳನ್ನು ಸಭಾಧ್ಯಕ್ಷರು ರಕ್ಷಿಸಬೇಕು' ಎಂದು ಮಲ್ಲಿಕಾರ್ಜುನ ಖರ್ಗೆ ಅವರು ಆಕ್ರೋಶ ವ್ಯಕ್ತಪಡಿಸಿದರು.

ಮಿಶ್ರಾ ಅವರನ್ನು ಸಂಪುಟದಿಂದ ಕಿತ್ತುಹಾಕದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಟೀಕಿಸಿದ್ದಾರೆ. ಯುವ ಕಾಂಗ್ರೆಸ್ ಕಾರ್ಯಕರ್ತರು ಸಂಸತ್ ಭವನದ ಸಮೀಪ ಪ್ರತಿಭಟನೆ ನಡೆಸಿದರು. ಉತ್ತರ ಪ್ರದೇಶ ವಿಧಾನಸಭೆ ಎರಡನೇ ದಿನದ ಕಲಾಪದಲ್ಲೂ ಮಿಶ್ರಾ ವಜಾಕ್ಕೆ ಆಗ್ರಹ ಕೇಳಿಬಂದಿತು.

- ಎಸ್‌ಸಿ/ಎಸ್‌ಟಿ ನೌಕರರು ಕೆಲಸಕ್ಕೆ ಸೇರಿದ ಆರು ತಿಂಗಳ ಒಳಗಾಗಿ ಅವರ ಜಾತಿ ಪ್ರಮಾಣಪತ್ರಗಳನ್ನು ಪರಿಶೀಲನೆಗೆ ಒಳಪಡಿಸಬೇಕು ಎಂದು ಸಂಸದೀಯ ಸ್ಥಾಯಿ ಸಮಿತಿಯು ಸರ್ಕಾರಕ್ಕೆ ಶಿಫಾರಸು ಮಾಡಿದೆ. ಪಿಂಚಣಿ, ಬಡ್ತಿ ವೇಳೆ ಜಾತಿ ಪ್ರಮಾಣಪತ್ರಗಳನ್ನು ಪರಿಶೀಲನೆಗೆ ಒಳಪಡಿಸಿದಾಗ ಆಗುವ ವಿಳಂಬವನ್ನು ಇದರಿಂದ ತಪ್ಪಿಸಬಹುದು ಎಂದು ತಿಳಿಸಿದೆ.
- ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾಗುವ 'ಕಂಟೆಂಟ್'ಗಳನ್ನು ನಿರ್ವಹಣೆ ಮಾಡಲು ಶಾಸನಬದ್ಧ ಮಾಧ್ಯಮ ನಿರ್ವಹಣಾ ಪ್ರಾಧಿಕಾರ ರಚಿಸಬೇಕು ಎಂದು ಸಂಸದೀಯ ಸ್ಥಾಯಿ ಸಮಿತಿಯು ಸರ್ಕಾರಕ್ಕೆ ಶಿಫಾರಸು ಮಾಡಿದೆ. ಪ್ರಸ್ತುತ, ದೇಶದಲ್ಲಿ ಸುದ್ದಿ ಮಾಧ್ಯಮಗಳನ್ನೂ ಒಳಗೊಂಡಂತೆ, ವಿವಿಧ ವೇದಿಕೆಗಳಲ್ಲಿ ಪ್ರಕಟವಾಗುವ ವಿಷಯಗಳನ್ನು ನಿಯಂತ್ರಿಸುವ ಏಕೀಕೃತ ಸಂಸ್ಥೆ ಇಲ್ಲ ಎಂದು ಸಮಿತಿ ಹೇಳಿದೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕೇಸರಿ ವಸ್ತ್ರ ಧರಿಸಿರುವ ಹಿಂದೂ ವ್ಯಕ್ತಿಯ ಸುತ್ತ ಮುಸ್ಲಿಮರ ಗುಂಪು ನಿಂತಿರುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 34 ಮುಸ್ಲಿಂ ಕುಟುಂಬಗಳು ಹಿಂದೂ ಧರ್ಮಕ್ಕೆ ಮತಾಂತರಗೊಂಡಿವೆ ಎಂದು ಹೇಳಲಾಗಿದೆ. ಉತ್ತರ ಪ್ರದೇಶದ ಶಿಯಾ ವಕ್ಫ್ ಮಂಡಳಿ ಅಧ್ಯಕ್ಷ ಸಯ್ಯದ್ ವಸೀಂ ರಿಜ್ವಿ ಅವರು ಇತ್ತೀಚೆಗಷ್ಟೇ ಹಿಂದೂ ಧರ್ಮಕ್ಕೆ ಮತಾಂತರಗೊಂಡರು. ಅವರ ಹಾದಿಯಲ್ಲೇ ಈ 34 ಕುಟುಂಬಗಳೂ ಹಿಂದೂ ಧರ್ಮಕ್ಕೆ ಮತಾಂತರಗೊಂಡವು. 'ಇಸ್ಲಾಂ ಧರ್ಮ ತೊರೆಯಲು ಈಗ ಜನರು ಹೆದರುತ್ತಿಲ್ಲ. ಸ್ವಯಂಪ್ರೇರಿತವಾಗಿ ಸನಾತನ ಧರ್ಮಕ್ಕೆ ಮತಾಂತರವಾಗುತ್ತಿದ್ದಾರೆ' ಎಂದು ಹೇಳಲಾಗಿದೆ.



ಇದು 2016ರಲ್ಲಿ ತೆಗೆಯಲಾಗಿರುವ ಚಿತ್ರ. 'ಅಮರ್ ಉಜಾಲ' ಎಂಬ ಪತ್ರಿಕೆಯಲ್ಲಿ ಈ ಚಿತ್ರ ಪ್ರಕಟವಾಗಿದೆ ಎಂದು 'ದಿ ಕ್ವಿಂಟ್' ವರದಿ ಮಾಡಿದೆ. 2016ರ ಸೆಪ್ಟೆಂಬರ್‌ನಲ್ಲಿ ಭಯೋತ್ಪಾದಕರು 'ಉರಿ'ಯಲ್ಲಿ ದಾಳಿ ನಡೆಸಿ ಭಾರತೀಯ ಸೈನಿಕರನ್ನು ಹತ್ಯೆಗೈದಿದ್ದನ್ನು ವಿರೋಧಿಸಿ ಉತ್ತರ ಪ್ರದೇಶದ ಮಥುರಾದಲ್ಲಿ ಪ್ರತಿಭಟನೆ ನಡೆಸಲಾಗಿತ್ತು. ಹಿಂದೂ ಮತ್ತು ಮುಸ್ಲಿಂ ಧರ್ಮೀಯರು ಭಯೋತ್ಪಾದನೆ ವಿರುದ್ಧ ಒಟ್ಟಾಗಿದ್ದಾರೆ ಎಂಬ ಸಂದೇಶ ನೀಡಲು ಎರಡೂ ಸಮುದಾಯಗಳ ಧಾರ್ಮಿಕ ಮುಖಂಡರು ಈ ಪ್ರತಿಭಟನೆಯಲ್ಲಿ ಹಾಜರಿದ್ದರು ಎಂದು ಅಮರ್ ಉಜಾಲ ಪತ್ರಿಕೆಯಲ್ಲಿ ವರದಿ ಮಾಡಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ತ್ರಿಕರಣ ಸಂಪತ್ತು

ವೇದ ಲೋಕಾಚಾರ ನಿನ್ನಾನುಭವದ ಯುಕ್ತಿ |
ಶೋಧಿಸೀ ಮೂರನುಂ ಸಂವಾದಗೊಳಿಸು ||
ಸಾಧಿತಜ್ಞಾನ ನರಸಾಧ್ಯ ಪ್ರಮಾಣವದು |
ಹಾದಿ ಬೆಳಕದು ನಿನಗೆ – ಮಂಕುತಿಮ್ಮ || 521 ||

ಪದ-ಅರ್ಥ: ಲೋಕಾಚಾರ = ಲೋಕದ ನಡವಳಿಕೆ, ಶೋಧಿಸಿ = ಪರೀಕ್ಷಿಸಿ, ಸಂವಾದಗೊಳಿಸು = -ಸಮನ್ವಯಗೊಳಿಸು, ಸಾಧಿತಜ್ಞಾನ = ತಿಳಿದು ಅರಗಿಸಿಕೊಂಡ ಜ್ಞಾನ.

ವಾಚ್ಯಾರ್ಥ: ಆರ್ಷೇಯ ಜ್ಞಾನ, ಲೋಕದ ನಡವಳಿಕೆ ಮತ್ತು ನಮ್ಮ ಅನುಭವಕ್ಕೆ ದಕ್ಕಿದ ಯುಕ್ತಿ, ಈ ಮೂರನ್ನು ಪರೀಕ್ಷಿಸಿ, ಸಮನ್ವಯಗೊಳಿಸಿದಾಗ ದೊರಕುವ ಜ್ಞಾನವೇ ಮನುಷ್ಯರಿಗೆ ಸಾಧಿತವಾದ ಜ್ಞಾನ. ಅದು ನಮಗೆ ದಾರಿದೀಪ.

ವಿವರಣೆ: ಧರ್ಮವೆಂದರೆ ಧರಿಸುವುದು. ಯಾವುದು ಜೀವನವನ್ನು ಧರಿಸಿದೆಯೋ, ಪೋಷಿಸುತ್ತದೆಯೋ ಅದು ಧರ್ಮ. ಪ್ರಪಂಚ ವ್ಯವಹಾರದಲ್ಲಿ, ಪ್ರಪಂಚದ ಮೂಲವನ್ನು ನೆನಪಿನಲ್ಲಿಟ್ಟುಕೊಂಡು ಸಂತೋಷದಿಂದ ಬದುಕುವ ವಿಧಾನವೇ ಧರ್ಮ. ಈ ಧರ್ಮಕ್ಕೆ ಮೂರು ಮುಖಗಳು.

ಒಂದನೆಯದು ಶ್ರೇಯೋದರ್ಶಿಯಾದ ತತ್ವಶಾಸ್ತ್ರ, ಎರಡನೆಯದು ಲೌಕಿಕ ಪ್ರಗತಿಗೆ ಅವಶ್ಯವಾದ ವಿಜ್ಞಾನ ಹಾಗೂ ಸಾಮಾಜಿಕ ತಿಳಿವಳಿಕೆ, ಮೂರನೆಯದು ವ್ಯವಹಾರಕ್ಕೆ ಬೇಕಾದ ಯುಕ್ತಿಗಳು. ಈ ಮೂರೂ ವಿಷಯಗಳ ಸಮರ್ಪಕ ಸೇರುವಿಕೆಯೇ ಸಂಸ್ಕೃತಿ. ಲೋಕದಲ್ಲಿ ವಿವೇಕ ಮತ್ತು ಭಗವದಿಚ್ಛೆಯೂ ಪ್ರಬಲಿಸುವಂತೆ ಮಾಡುವುದೇ ಸಂಸ್ಕೃತಿ.

ಈ ಸಂಸ್ಕೃತಿಯ ಮೂಲಸ್ಥಾನಗಳು ಒಂದೆರಡಲ್ಲ, ನೂರಾರು. ಡಿ.ವಿ.ಜಿ ಯವರು ಮತ್ತೊಂದೆಡೆಗೆ ಅವುಗಳನ್ನು ವಿವರಿಸುತ್ತಾರೆ. ನೂರಾರು ಸ್ಥಾನಗಳನ್ನು ಸ್ಥೂಲವಾಗಿ ಕೆಲವು ಮುಖ್ಯವಾದ ಗಣಗಳಲ್ಲಿ ವಿಭಾಗಿಸಬಹುದು.

1.ವೇದಪುರಾಣ ಮತ್ತು ದೇವತಾ ಮತಧರ್ಮಗಳು, ಪೂಜೆ, ಧ್ಯಾನಗಳು, ಆಚಾರ ನಿಯಮಗಳು ಇದರಲ್ಲಿ ಸೇರುತ್ತವೆ.

2.ಸಾಹಿತ್ಯ ಮತ್ತು ಇತರ ಕಲೆಗಳು. ಇವುಗಳಲ್ಲಿ ಕಾವ್ಯ, ನಾಟಕ, ಸಂಗೀತ, ಶಿಲ್ಪ, ನರ್ತನ ಮೊದಲಾದ ಹೃದಯಾನುಭವ ಕರಣಗಳು ಸೇರುತ್ತವೆ.

3.ವಿಜ್ಞಾನದ ಅನ್ವೇಷಣೆಗಳು

4.ದೇಶ ವಿದೇಶಗಳ ಚರಿತ್ರೆಗಳು

5.ಬದುಕಿನ ಸಾಧ್ಯತೆಗಳನ್ನು ತಲುಪಲು ಬೇಕಾಗುವ ಯುಕ್ತಿಗಳು, ಅನುಭವಗಳು.

ಹೀಗೆ ಇವೆಲ್ಲ ಸೇರಿ ಮನಸ್ಸಿಗೆ ಮತ್ತು ಬುದ್ಧಿಗೆ ಸಂಸ್ಕಾರ ನೀಡುತ್ತವೆ.

ಇದನ್ನು ಕಗ್ಗ ಮನಮುಟ್ಟುವಂತೆ ಹೇಳುತ್ತದೆ. ನಮ್ಮ ಬದುಕಿನ ಬೆಳಕನ್ನು ಕಾಣಲು ಅಪೌರುಷೇಯವೆಂದು ಕರೆಸಿಕೊಳ್ಳುವ ವೇದದ ಜ್ಞಾನ, ಲೋಕಾಚಾರ, ಎಂದರೆ ಬದುಕಿನಲ್ಲಿ ಬೇಕಾದ ನಡವಳಿಕೆಗಳು, ಇತಿಹಾಸದ ಪಾಠಗಳೊಂದಿಗೆ ನಮ್ಮ ಅನುಭವ ಮತ್ತು ಯುಕ್ತಿಗಳು ಇವುಗಳ ಸಾಮರಸ್ಯದಿಂದ ದೊರೆಯುವುದು ಸಾಧಿತಜ್ಞಾನ. ಇದನ್ನು ಪ್ರತಿಯೊಬ್ಬ ಮನುಷ್ಯ ಪರೀಕ್ಷಿಸಿ, ಶೋಧಿಸಿ ಗಳಿಸಬೇಕು. ಅದು ಅವನಿಗೆ ಪ್ರಮಾಣವಾಗಿರುವಂಥದ್ದು.

ಈ ಸಾಧಿತವಾದ ಜ್ಞಾನವೇ ತ್ರಿಕರಣ ಸಂಪತ್ತು. ಇದೇ ಮನುಷ್ಯನಿಗೆ ದಾರಿ ತೋರಿ ಮುನ್ನಡೆಸುತ್ತದೆ. ಇದನ್ನು ಪಡೆಯುವುದೇ ಒಂದು ಮಹತ್ತರ ಸಾಧನೆ.

ದಿನ ಭವಿಷ್ಯ

ಶುಕ್ರವಾರ ಡಿಸೆಂಬರ್ 17, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹೇಮಂತ ಋತು ಮಗೃಶಿರ (ಧನುರ್ಮಾಸ) ಮಾಸ ಶುಕ್ಲಪಕ್ಷ ಪಕ್ಷ ಮಳೆ ನಕ್ಷತ್ರ ಮೂಲ ಚತುರ್ದಶಿ ಗಂ. 58-49 (ಬೆ.ಘ್ಞಾ. 6-12) ಶುಕ್ರವಾರ ನಿತ್ಯ ನಕ್ಷತ್ರ ಕೃತ್ತಿಕಾ ಗಂ. 10-7 (ಹ. 10-44) ಸಿದ್ಧ ನಾಮ ಯೋಗ ಗಂ. 5-44 ಗರಜ ಕರಣ ಗಂ. 26-16 ವಿಷ ಗಂ. 54-21 ಅಮೃತ ಗಂ. 4-1: ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30: ಸೂರ್ಯೋದಯ: 6-36 ಸೂರ್ಯಾಸ್ತ: 5-51 ಅದೃಷ್ಟ ಸಂಖ್ಯೆ 1, 8

ಮೇಷ: ಸ್ನೇಹಿತರ ಆರ್ಥಿಕ ಸುಧಾರಣೆಗಾಗಿ ಹೊಸ ಯೋಜನೆಯೊಂದನ್ನು ರೂಪಿಸುವಿರಿ. ಸ್ನೇಹಿತರು ಹಿತೈಷಿಗಳ ಭೇಟಿಯಿಂದಾಗಿ ಸಂತಸ. ಸಂಗಾತಿಯಿಂದ ಉತ್ತಮ ಸಹಕಾರ. ಹಿರಿಯರಿಂದ ಉತ್ತಮ ಸಲಹೆ ದೊರೆಯುವುದು.

ವೃಷಭ: ಗೆಳೆತನ ಮತ್ತು ಸಂಬಂಧಗಳು ಉತ್ತಮಗೊಳ್ಳಲಿವೆ. ಸಂತೋಷದ ವಾತಾವರಣ. ಆರ್ಥಿಕ ಉನ್ನತಿಯನ್ನು ಕಾಣುವಿರಿ. ಮಕ್ಕಳಿಂದ ಸಂತೋಷದ ಸುದ್ದಿಯನ್ನು ಕೇಳಲಿದ್ದೀರಿ. ಸಂಗಾತಿಯ ಆರೋಗ್ಯದ ಬಗ್ಗೆ ಗಮನವಿರಲಿ.

ಮಿಥುನ: ಬಂಧುಗಳ ಕುರಿತು ವಿಶೇಷ ಕಾಳಜಿ ವಹಿಸಬೇಕಾಗುವುದು. ಮಿತಿ ಮೀರಿದ ನಿರೀಕ್ಷೆಯಿಂದಾಗಿ ಗೊಂದಲ ಸಾಧ್ಯತೆ. ಆಯ್ದು ಮಾಡುವ ಕೆಲಸ ಕಾರ್ಯಗಳು ಸುಸೂತ್ರವಾಗಿ ನೆರವೇರುವವು. ಮಕ್ಕಳೊಂದಿಗೆ ಸಂತಸ.

ಕರ್ಕಾಟಕ: ಹೊಸ ಬಾಂಧವ್ಯಗಳು ಕೂಡಿಬರುವ ಸಾಧ್ಯತೆ. ಕೆಲಸ-ಕಾರ್ಯಗಳನ್ನು ಹೊಸದಾಗಿ ಪ್ರಾರಂಭಿಸಲು ಉತ್ತಮ ದಿನ. ಸಂಬಂಧಿಕರಿಂದ ಉತ್ತಮ ಸಹಕಾರ ದೊರೆತು ನೆಮ್ಮದಿ. ವಿದ್ಯಾರ್ಥಿಗಳಲ್ಲಿ ಉತ್ತಮ ಪ್ರಗತಿ.

ಸಿಂಹ: ಮನೆಮಂದಿಯೊಂದಿಗೆ ದೂರ ಪ್ರಯಾಣದ ಸಾಧ್ಯತೆ. ಭಾವನೆಗಳನ್ನು ಮುಕ್ತವಾಗಿ ಮನೆಯವರೊಂದಿಗೆ ಹಂಚಿಕೊಳ್ಳುವುದರಿಂದ ಸಂಕಷ್ಟಗಳು ದೂರ. ಆರೋಗ್ಯದಲ್ಲಿ ಸುಧಾರಣೆ. ಆಭರಣದ ಬಗ್ಗೆ ಎಚ್ಚರಿಕೆ ಅಗತ್ಯ.

ಕನ್ಯಾ: ವ್ಯಾಪಾರದಲ್ಲಿ ಪಾಲುದಾರಿಕೆ ಅಥವಾ ಒಪ್ಪಂದಗಳು ಏರ್ಪಡುವ ಸಾಧ್ಯತೆ ಇದ್ದು ಉತ್ತಮ ಲಾಭ. ಅವಕಾಶವನ್ನು ಸಮರ್ಥವಾಗಿ ಬಳಸಿಕೊಳ್ಳಿ. ಆರ್ಥಿಕ ಉನ್ನತಿಯ ದಿನ. ಮಾನಸಿಕ ಒತ್ತಡ ಹೆಚ್ಚಲಿದೆ.

ತುಲಾ: ನಿಮ್ಮ ಆವಿಷ್ಕಾರಗಳನ್ನು ಎಲ್ಲರೊಂದಿಗೆ ಹಂಚಿಕೊಳ್ಳುವ ಅವಕಾಶ. ಕೆಲಸ ಕಾರ್ಯ, ಯೋಜನೆಗಳಲ್ಲಿ ಉನ್ನತಿ ಸಾಧಿಸಲು ಜನರಿಂದ ಉತ್ತಮ ಸಹಾಯ ಸಹಕಾರಗಳು ದೊರಕಲಿವೆ. ಮಾತನಾಡುವಾಗ ಎಚ್ಚರಿಕೆ ಇರಲಿ.

ವೃಶ್ಚಿಕ: ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಬಿಡುವಿಲ್ಲದ ಕೆಲಸಗಳು. ಕೆಲಸದ ಒತ್ತಡದಿಂದಾಗಿ ದುಗುಡ ದುಮ್ಮಾನಗಳು. ಆರೋಗ್ಯದಲ್ಲಿ ಏರುಪೇರು ಸಾಧ್ಯತೆ. ಸಂಗಾತಿಯ ಮಾತುಗಳನ್ನು ಗೌರವಿಸಿ ಸಂತಸದಿಂದಿರಿ.

ಧನು: ವಾಸದ ಮನೆಯಲ್ಲಿ ಬದಲಾವಣೆ ಸಾಧ್ಯತೆ. ಭೋಗವಸ್ತುಗಳಿಗಾಗಿ ಅಧಿಕ ಖರ್ಚು. ಅನಿರೀಕ್ಷಿತ ವ್ಯಕ್ತಿಗಳ ಪರಿಚಯದಿಂದಾಗಿ ಸಂತೋಷ ಮೂಡುವುದು. ಅಪರಿಚಿತರ ಬಗ್ಗೆ ಎಚ್ಚರಿಕೆಯಿಂದಿರುವುದು ಉಚಿತ.

ಮಕರ: ಸಂಶೋಧನೆ ಮತ್ತು ನಿರ್ಮಾಣ ಕಾಮಗಾರಿಗಳಲ್ಲಿ ತೊಡಗಿದವರಿಗೆ ಪ್ರಶಂಸೆ. ಮನೆ ಕೆಲಸಗಳು ಸುಗಮ. ಪರಿಣಿತ ಕೆಲಸಗಾರರಿಗೆ ಎಲ್ಲಿಲ್ಲದ ಬೇಡಿಕೆ. ಜನರ ಸಮಸ್ಯೆಗಳಿಗೆ ಸ್ಪಂದಿಸುವ ಅವಕಾಶ.

ಕುಂಭ: ಕೌಟುಂಬಿಕ ವಿಚಾರಗಳ ಬಗ್ಗೆ ಹೆಚ್ಚಿನ ಗಮನ ವಹಿಸಿ. ವ್ಯವಹಾರಗಳ ಸುಧಾರಣಾ ಕಾರ್ಯಗಳಿಗೆ ಸಕಾಲ. ಕುಟುಂಬಕ್ಕೆ ಆರ್ಥಿಕ ಭದ್ರತೆಯಿಂದಾಗಿ ನೆಮ್ಮದಿ. ಸಾಂಸಾರಿಕ ತೃಪ್ತಿಯನ್ನು ಹೊಂದುವಿರಿ.

ಮೀನ: ಸಾಮಾಜಿಕ ಕಾರ್ಯಕರ್ತರಿಗೆ ರಾಜಕೀಯ ವ್ಯಕ್ತಿಗಳಿಂದ ಒತ್ತಡ ಹೆಚ್ಚುವ ಸಾಧ್ಯತೆ. ಹಣಕಾಸಿನ ಸಮಸ್ಯೆ ದೂರವಾಗಲಿದೆ. ಕುಟುಂಬದ ಸದಸ್ಯರ ಬಗ್ಗೆ ಅನಾದರ ಸಲ್ಲದು. ಬಂಧು ಬಾಂಧವರ ಸಲಹೆಗಳನ್ನು ಕಡೆಗಣಿಸದಿರಿ.

ನಿಮ್ಮ ಜನ್ಮದಿನ 17-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ಉದ್ಯೋಗ ನಿಮಿತ್ತ ವಿದೇಶ ಪ್ರವಾಸ ಮಾಡುವ ಸಾಧ್ಯತೆ. ವಿದ್ಯುತ್ ಉಪಕರಣಗಳು, ಮೋಟಾರು, ಪಂಪ್‌ಸೆಟ್ ಮುಂತಾದ ಚಲನೆಯುಳ್ಳ ಯಂತ್ರಗಳ ಮಾರಾಟಗಾರರಿಗೆ ಅತ್ಯಧಿಕ ಬೇಡಿಕೆಯಿಂದಾಗಿ ಲಾಭ ದ್ವಿಗುಣಗೊಳ್ಳಲಿದೆ. ಕಚೇರಿಗಳಲ್ಲಿ ಕೆಲಸ ಮಾಡುವವರಿಗೆ ಸಂತಸ.

ಪದಬಂಧ 4810


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಚೊಕ್ಕ ಚಿನ್ನ (4)
3.ಭಾರವನ್ನು ಹೊಂದಿರುವ ತಳಹದಿ (4)
5.ದಿನದೊಳಗೇ ಮಂತ್ರಿ ಬಂದಿಹನಲ್ಲಾ? (3)
7.ವನದ ಕೊನೆಗೆ ಮಾಡಿದ ಹೋಮ (3)
9.ಮರದಲ್ಲಿ ಕಾಣುತ್ತಿರುವ ನವಿಲು (3)
10.ಮಣ ಭಾರ ಹೊತ್ತಿರುವ ನಲ್ಲ (3)
11.ಮುಚ್ಚುಮರೆಯಿಲ್ಲದುದು (3)
15.ಮರೀಚಿಕೆ ಇಲ್ಲಿದೆ (4)
16.ಕೊನೆಗೆ ವಿಕ್ರಯಿಸಿದರೆ ಅಸಂಬದ್ಧತೆ ಕಾಣುತ್ತಿದೆಯಲ್ಲಾ? (4)

ಮೇಲಿಂದ ಕೆಳಕ್ಕೆ

1.ಆದಿಯಿಲ್ಲದುದು (3)
2.ಹಲವು ತಾಲ್ಲೂಕುಗಳನ್ನೊಳಗೊಂಡ ಭಾಗ (2)
3.ಸಹಕಾರದ ವಿರುದ್ಧ ಪದ (5)
4.ಕೆಲಸಕ್ಕೆ ಬಾರದುದು (2)
6.ಸಂಗೀತ ಕೃತಿಗಳನ್ನು ರಚಿಸುವವನು (5)
8.ಒಳ್ಳೇತನದ ಸೋಗಿನಲ್ಲಿ ವಂಚನೆ ಮಾಡುವವನು (5)
9.ಸಾಯುವ ಸಮಯವಿದು (5)
12.ಗಂಡುಕುರಿ ಇಲ್ಲಿದೆ (3)
13.ಕೋಮಲವಾದುದು ಉಲ್ಟಾ ಆಗಿದೆ (2)
14.ಕೊಡು ಕೊಡು ಎನ್ನುತ್ತಾ ಬಂದ ಅಜ್ಜ (2)



4809ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಶ್ವಾಸ3.ಪಾರ್ಥಿವ6.ದಲ್ಲಾಳಿ
7. ಸಾಮ್ರಾಜ್ಯ8.ಕುಬೇರ
10.ಮಾತು11.ಮಜ್ಜನ13.ಪಾತಿ
14.ಅಧರ15.ಶರೀರ16.ಮಂದಿರ
17.ಸಲಗ18.ಸಪ್ತಾಹ

ಮೇಲಿಂದ ಕೆಳಕ್ಕೆ:
1.ವಿಶ್ವಕುಟುಂಬಿ2.ಸದರ3.ಪಾಳಿ
4.ವಸಾಹತು5.ರಾಜ್ಯ
9.ಸಾಮತಿ10.ಮಾನಸ
12.ಸಮರಸಿಂಹ13.ಪಾದರಸ
14.ಅರಸ15.ಶನಿ16.ಮಂಗ

ಸುಡೊಕು 5196

	7			2				5
3		6	5		8			
	4			7		2		
	6				5			
9		1		8			6	2
4			2			1	3	
		2	3		7		5	
7	1			5		6		3
5		3	4					1

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5195 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಶಿವಸೇನೆ ಕೃತ್ಯದ ವಿರುದ್ಧ ಜೆಡಿಎಸ್ ಸದಸ್ಯರ ಧರಣಿ • 'ಪ್ರಜಾವಾಣಿ' ವರದಿ ಪ್ರಸ್ತಾಪಿಸಿದ ಅನ್ನದಾನಿ

ಕನ್ನಡ ಬಾವುಟಕ್ಕೆ ಬೆಂಕಿ: ಖಂಡನಾ ನಿರ್ಣಯಕ್ಕೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಳಗಾವಿ(ಸುವರ್ಣ ವಿಧಾನಸೌಧ): ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಶಿವಸೇನೆ ಕಾರ್ಯಕರ್ತರು ಕನ್ನಡದ ಬಾವುಟ ಸುಟ್ಟ ಘಟನೆಗೆ ಸಂಬಂಧಿಸಿದಂತೆ ವಿಧಾನಸಭೆಯಲ್ಲಿ ಖಂಡನಾ ನಿರ್ಣಯ ಮಂಡಿಸಿ ಮಹಾರಾಷ್ಟ್ರ ಸರ್ಕಾರಕ್ಕೆ ಕಳುಹಿಸುವುದಾಗಿ ಕಂದಾಯ ಸಚಿವ ಆರ್.ಅಶೋಕ ತಿಳಿಸಿದರು.

ಗುರುವಾರ ವಿಧಾನಸಭೆಯ ಶೂನ್ಯವೇಳೆಯಲ್ಲಿ 'ಪ್ರಜಾವಾಣಿ'ಯನ್ನು ಪ್ರದರ್ಶಿಸಿ, ಬಾವುಟಕ್ಕೆ ಬೆಂಕಿ ಇಟ್ಟ ವಿಷಯದ ವರದಿಯನ್ನು ಪ್ರಸ್ತಾಪಿಸಿದ ಜೆಡಿಎಸ್‌ನ ಡಾ.ಕೆ.ಅನ್ನದಾನಿ, ಶಿವಸೇನೆ ಮತ್ತು ಎಂಇಎಸ್ ಕಾರ್ಯಕರ್ತರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರದ ಪರವಾಗಿ ಉತ್ತರ ನೀಡಿದ ಸಚಿವ ಅಶೋಕ, 'ಕನ್ನಡ ಬಾವುಟ ಸುಟ್ಟಿದ್ದು ಕನ್ನಡಿಗರಿಗೆ ಅಪಾರ ನೋವು ತಂದಿದೆ. ನಾಡಿನ ನೆಲ, ಜಲ, ಭಾಷೆ ರಕ್ಷಿಸುವುದು ನಮ್ಮ ಜವಾಬ್ದಾರಿ. ಎಂಇಎಸ್ ಮತ್ತು ಶಿವಸೇನೆಯವರು ಪುಂಡಾಟಿಕೆ ನಡೆಸುತ್ತಿದ್ದಾರೆ. ಬಾವುಟ ಸುಟ್ಟವರು ಪುಂಡರು ಮತ್ತು ಕಿಡಿಗೇಡಿಗಳು. ಅಂತಹವರನ್ನು ಮಟ್ಟ ಹಾಕಬೇಕು. ಇದಕ್ಕಾಗಿ ಖಂಡನಾ ನಿರ್ಣಯ ಮಂಡಿಸಿ ಮಹಾರಾಷ್ಟ್ರ ಸರ್ಕಾರಕ್ಕೆ ಕಳುಹಿಸಲಾಗುವುದು' ಎಂದು ಭರವಸೆ ನೀಡಿದರು.

'ಕೊಲ್ಹಾಪುರದಲ್ಲಿ ನಡೆದ ಘಟನೆ ಭಾಷಾ ದಳ್ಳುರಿಗೆ ಕಾರಣವಾಗುತ್ತದೆ. ಎರಡು ರಾಜ್ಯಗಳು ಉತ್ತಮ ಬಾಂಧವ್ಯ ಹೊಂದಿವೆ. ಪುಂಡಾಟಿಕೆ ಮಾಡುವವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಮಹಾರಾಷ್ಟ್ರ ಸರ್ಕಾರಕ್ಕೆ ಮನವಿ ಮಾಡುತ್ತೇವೆ. ಘಟನೆ ಮಹಾರಾಷ್ಟ್ರದಲ್ಲಿ ನಡೆದ ಕಾರಣ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲು ನಮಗೆ ಆಗುವುದಿಲ್ಲ' ಎಂದೂ ಹೇಳಿದರು.

ವಿಷಯ ಪ್ರಸ್ತಾಪಿಸಿದ ಡಾ.ಕೆ. ಅನ್ನದಾನಿ, 'ಕನ್ನಡದ ಬಾವುಟ ಸುಟ್ಟು ಹಾಕಿದ ಕಿಡಿಗೇಡಿಗಳ ವಿರುದ್ಧ ಇನ್ನೂ ಯಾವುದೇ ಕ್ರಮ ಆಗಿಲ್ಲ. ಈ ಘಟನೆ ಇಡೀ ಕರ್ನಾಟಕಕ್ಕೆ ಮಾಡಿರುವ ಅಪಮಾನ. ಕನ್ನಡಿಗರ ಅಸ್ಮಿತೆಯ ಪ್ರಶ್ನೆ' ಎಂದು ಹೇಳಿದರು.

ಈ ವಿಷಯದ ಬಗ್ಗೆ ಜೆಡಿಎಸ್‌ನ ಇನ್ನೂ ಕೆಲವು ಸದಸ್ಯರು ಮಾತನಾಡಲು ಯತ್ನಿಸಿದಾಗ 'ಶೂನ್ಯವೇಳೆ ಆಗಿರುವುದರಿಂದ ಅದಕ್ಕೆ ಅವಕಾಶ ಇಲ್ಲ' ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದ್ದು ಜೆಡಿಎಸ್ ಶಾಸಕರನ್ನು ಕೆರಳಿಸಿತು. ಆಗ ಅನ್ನದಾನಿ ನೇತೃತ್ವದಲ್ಲಿ ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ನಡೆಸಿದರು. ಅನ್ನದಾನಿ ತಮ್ಮ ಕೈಯಲ್ಲಿ ಕನ್ನಡದ ಬಾವುಟವನ್ನು ಹಿಡಿದು ನಿಂತರು.

'ಜೆಡಿಎಸ್ ಸದಸ್ಯರು ಆಸನಗಳಲ್ಲಿ ಕುಳಿತು ಮಾತನಾಡಬೇಕು' ಎಂದು ಸಭಾಧ್ಯಕ್ಷರು ಮನವಿ ಮಾಡಿದಾಗ ಜೆಡಿಎಸ್ ಶಾಸಕರು ಧರಣಿ ಕೈಬಿಟ್ಟರು.

'ಬೆಳಗಾವಿ ತಮಗೆ ಬೇಕು ಎಂಬ ಚಟವನ್ನು ಎಂಇಎಸ್, ಶಿವಸೇನೆ ಕೈಬಿಡಬೇಕು. ಕನ್ನಡಿಗರ ಸ್ವಾಭಿಮಾನ ಕೆಣಕಬಾರದು. ವಿಧಾನಸಭೆ ಖಂಡನಾ ನಿರ್ಣಯ ತೆಗೆದುಕೊಳ್ಳಬೇಕು' ಎಂದು ಅನ್ನದಾನಿ ಒತ್ತಾಯಿಸಿದರು.

ಪುಂಡರಿಗೆ ಶಿಕ್ಷೆಯಾಗಲಿ –ಸಿದ್ದರಾಮಯ್ಯ

ಕನ್ನಡದ ಬಾವುಟ ಸುಟ್ಟಿರುವುದು ಭಾವನಾತ್ಮಕ ವಿಷಯ ಆದ್ದರಿಂದ ಖಂಡನಾ ನಿರ್ಣಯ ಮಂಡಿಸಬೇಕು ಮತ್ತು ಕಿಡಿಗೇಡಿಗಳಿಗೆ ಶಿಕ್ಷೆ ಆಗಬೇಕು' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಒತ್ತಾಯಿಸಿದರು.

'ಮಹಾರಾಷ್ಟ್ರದ ಪುಂಡರು, ಮತಿಹೀನರು ಕನ್ನಡದ ಬಾವುಟ ಸುಟ್ಟಿದ್ದಾರೆ. ಭಾರತ ಒಂದು ಒಕ್ಕೂಟ ವ್ಯವಸ್ಥೆ. ಎಲ್ಲ ರಾಜ್ಯಗಳ ಜನರು ಭಾರತೀಯರು. ಇಂತಹ ನಡೆಯನ್ನು ಸಹಿಸಿಕೊಳ್ಳಬಾರದು' ಎಂದು ಅವರು ಹೇಳಿದರು.

ಕ್ಷಮೆಗೂ ಅರ್ಹರಲ್ಲ: ಎಚ್‌ಡಿಕೆ


ಎಚ್.ಡಿ. ಕುಮಾರಸ್ವಾಮಿ

ಬೆಂಗಳೂರು: ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಕನ್ನಡ ಬಾವುಟ ಸುಟ್ಟು ಹಾಕಿರುವವರ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

'ಎಂಇಎಸ್ ಪುಂಡರು ಕನ್ನಡ ಧ್ವಜಕ್ಕೆ ಅಪಮಾನ ಮಾಡಿರುವ ಘಟನೆ ಅತ್ಯಂತ ಹೇಯ. ಧ್ವಜವನ್ನು ಸುಟ್ಟು ವಿಕೃತಿ ಮೆರೆದಿರುವುದು ನೀಚ ಕೃತ್ಯ. ಅಖಂಡ ಕರ್ನಾಟಕದ ಅಸ್ಮಿತೆ ಸಾರುವ ಧ್ವಜದ ವಿಚಾರದಲ್ಲಿ ಆಗಿರುವ ಅಪಚಾರ ಕ್ಷಮಾರ್ಹವಲ್ಲ' ಎಂದು ಟ್ವೀಟ್ ಮಾಡಿದ್ದಾರೆ.

'ಬಹುಭಾಷಾ ಪ್ರೇಮ, ಸಾಮರಸ್ಯ ಕನ್ನಡಿಗರ ದೌರ್ಬಲ್ಯವಲ್ಲ, ಔದಾರ್ಯ. ಇದನ್ನು ಕಿಡಿಗೇಡಿಗಳು ಅರ್ಥ ಮಾಡಿಕೊಳ್ಳಬೇಕು. ಈ ಪರಮ ಕಿರಾತಕ ಕೃತ್ಯದ ವಿರುದ್ಧ ರಾಜ್ಯ ಸರ್ಕಾರ ಅತ್ಯಂತ ಕಠಿಣವಾಗಿ ನಡೆದುಕೊಳ್ಳಬೇಕು. ನಮ್ಮ ಧ್ವಜವನ್ನು ಅಪಮಾನಿಸಿದ ಕನ್ನಡ ದ್ರೋಹಿಗಳಿಗೆ ತಕ್ಕಶಾಸ್ತಿ ಮಾಡಬೇಕು' ಎಂದು ಒತ್ತಾಯಿಸಿದ್ದಾರೆ. 'ಕನ್ನಡ ದ್ರೋಹಿಗಳನ್ನು ಹಾಗೆಯೇ ಬಿಟ್ಟರೆ ಕರ್ನಾಟಕ ಕ್ಷಮಿಸುವುದಿಲ್ಲ. ತಕ್ಷಣವೇ ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಕ್ರಮ ಕೈಗೊಳ್ಳಬೇಕು ಹಾಗೂ ಕನ್ನಡಕ್ಕಾಗಿ ಹೋರಾಟ ನಡೆಸಿದವರನ್ನು ಕೂಡಲೇ ಬಿಡುಗಡೆ ಮಾಡಬೇಕು' ಎಂದು ಆಗ್ರಹಿಸಿದ್ದಾರೆ.

ಧ್ವಜ ಸುಟ್ಟವರಿಗೆ ತಕ್ಕ ಶಿಕ್ಷೆಯಾಗಲಿ: ಕಲಾವಿದರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಶಿವಸೇನಾ ಕಾರ್ಯಕರ್ತರು ಕನ್ನಡ ಬಾವುಟವನ್ನು ಸುಟ್ಟು ಹಾಕಿರುವ ಘಟನೆಯನ್ನು ಚಂದನವನದ ಕಲಾವಿದರು ಒಕ್ಕೊರಲಿನಿಂದ ಖಂಡಿಸಿದ್ದಾರೆ. ಟ್ವೀಟ್ ಮೂಲಕ ತಮ್ಮ ಆಕ್ರೋಶ, ಅಸಮಾಧಾನವನ್ನು ಹೊರಹಾಕಿರುವ ನಟರಾದ ಶಿವರಾಜ್‌ಕುಮಾರ್, ದರ್ಶನ್, 'ಕರುನಾಡ ಧ್ವಜ ಸುಟ್ಟವರಿಗೆ ತಕ್ಕ ಶಿಕ್ಷೆಯಾಗಲೇಬೇಕು' ಎಂದು ಆಗ್ರಹಿಸಿದ್ದಾರೆ.

ಕನ್ನಡ ಧ್ವಜವನ್ನು ಸುಟ್ಟಿದ್ದು ತೀವ್ರ ಬೇಸರ ತರಿಸಿದೆ. ಸರ್ಕಾರ ಈ ಕೂಡಲೇ ಇವರ ಮೇಲೆ ನಿರ್ದಾಕ್ಷಿಣ್ಯ ಕ್ರಮಕೈಗೊಂಡು ಕನ್ನಡಿಗರ ಸ್ವಾಭಿಮಾನವನ್ನು ರಕ್ಷಿಸಬೇಕು.
ಧ್ರುವ ಸರ್ಜಾ, ನಟ

ನಮ್ಮ ಧ್ವಜ–ನಮ್ಮ ಮಾನ ಮತ್ತು ನಮ್ಮ ಪ್ರಾಣ. ಬೆಳಕು ಕೊಡುವ ಬಾವುಟಕ್ಕೆ ಬೆಂಕಿ ಇಟ್ಟವರನ್ನು ಶಿಕ್ಷಿಸಿ. ನಮ್ಮ ಧ್ವಜ ಹಿಡಿದ ಭುಜಗಳನ್ನು ರಕ್ಷಿಸಿ.
ಹಂಸಲೇಖ, ಸಂಗೀತ ನಿರ್ದೇಶಕ

'ನಮ್ಮ ನಾಡಧ್ವಜ ಸುಟ್ಟವರಿಗೆ ತಕ್ಕ ಶಿಕ್ಷೆ ಆಗಲಿ. ನಿಜವಾದ ಕನ್ನಡಪರ ಹೋರಾಟಗಾರರನ್ನು ಬಿಡುಗಡೆಗೊಳಿಸಿ. ಜೈ ಕನ್ನಡ. ಜೈ ಕರ್ನಾಟಕ' ಎಂದು ಶಿವರಾಜ್‌ಕುಮಾರ್ ಟ್ವೀಟ್‌ನಲ್ಲಿ ಹೇಳಿದ್ದಾರೆ. ಜೊತೆಗೆ ವರನಟ ಡಾ.ರಾಜ್‌ಕುಮಾರ್ ಅವರು ಕನ್ನಡ ಪರ ಹೋರಾಟ ಮಾಡಿದ ಸಂದರ್ಭದ ಫೋಟೊವೊಂದನ್ನು ಶಿವರಾಜ್‌ಕುಮಾರ್ ಅಪ್‌ಲೋಡ್ ಮಾಡಿದ್ದಾರೆ.

'ಕನ್ನಡ ಹೋರಾಟಗಾರರನ್ನ ಬಿಡುಗಡೆಗೊಳಿಸಿ' ಎಂಬ ಹ್ಯಾಷ್‌ಟ್ಯಾಗ್ ಅಭಿಯಾನವನ್ನೂ ಶಿವರಾಜ್‌ಕುಮಾರ್ ಆರಂಭಿಸಿದ್ದಾರೆ.


ಶಿವರಾಜ್‌ಕುಮಾರ್


ಜಗ್ಗೇಶ್


ದರ್ಶನ್

'ಕನ್ನಡ ಬಾವುಟ ಅಪಮಾನಿಸಿದವರ ಮೇಲೆ ಕಾನೂನು ಕ್ರಮಕ್ಕೆ ಒತ್ತಾಯ ಮಾಡುತ್ತೇನೆ. ಕನ್ನಡ ಪರ ಈ ವಿಷಯಕ್ಕೆ ಹೋರಾಟ ಮಾಡಿದ ಕನ್ನಡ ಸೈನಿಕರನ್ನು ದಯಮಾಡಿ ಬಿಡುಗಡೆಗೊಳಿಸಿ. ಕರ್ನಾಟಕದಲ್ಲಿ ಕನ್ನಡ ಭಾಷೆ ಸಾರ್ವಭೌಮ' ಎಂದು ಮುಖ್ಯಮಂತ್ರಿಗೆ ಟ್ವೀಟ್ ಮೂಲಕ ನಟ ಜಗ್ಗೇಶ್ ಆಗ್ರಹಿಸಿದ್ದಾರೆ.

'ನಮ್ಮ ಕರುನಾಡ ಧ್ವಜ ಸುಟ್ಟ ಹೇಡಿಗಳಿಗೆ ತಕ್ಕ ಶಿಕ್ಷೆಯಾಗಲೇಬೇಕು. ನಿಜವಾಗಿ ಕನ್ನಡ ಪರ ಹೋರಾಟ ಮಾಡುವವರನ್ನು ಬಿಡುಗಡೆಗೊಳಿಸಿ. ಕನ್ನಡ ತಾಯಿ ತಾಯ್ನಾಡು ವಿಷಯಕ್ಕೆ ಈ ರೀತಿ ಅವಮಾನ ಮಾಡಿರುವವರಿಗೆ ತಕ್ಕ ಪಾಠ ಕಲಿಸಲೇಬೇಕು. ದಯಮಾಡಿ ತಕ್ಕ ಕ್ರಮ ಕೈಗೊಳ್ಳಬೇಕಾಗಿ ವಿನಂತಿ' ಎಂದು ಟ್ವೀಟ್ ಮಾಡಿರುವ ದರ್ಶನ್ ಅವರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮುಖ್ಯಮಂತ್ರಿ ಟ್ವೀಟ್ ಖಾತೆಯನ್ನು ತಮ್ಮ ಟ್ವೀಟ್‌ಗೆ ಟ್ಯಾಗ್ ಮಾಡಿದ್ದಾರೆ.

'ಕನ್ನಡ ಧ್ವಜವನ್ನು ಕೆಲವು ಕಿಡಿಗೇಡಿಗಳು ಸುಟ್ಟಿದ್ದಾರೆ. ಈ ಕೃತ್ಯದ ಹಿಂದಿರುವ ಹೇಡಿಗಳನ್ನು ಕೂಡಲೇ ಬಂಧಿಸಿ ಶಿಕ್ಷೆ ನೀಡಬೇಕು. ಇದಕ್ಕಾಗಿ ಹೋರಾಟ ಮಾಡಿದ ನಮ್ಮ ವೀರ ಕನ್ನಡಿಗರನ್ನು ಬಿಡುಗಡೆ ಮಾಡಬೇಕು. ನಮ್ಮ ನಾಡು ನುಡಿ ಸಂಸ್ಕೃತಿಯನ್ನು ಅಗೌರವಿಸುವ ಯಾರೇ ಆದರೂ ಅವರ ವಿರುದ್ಧ ನಾವೆಲ್ಲರೂ ಒಗ್ಗಟ್ಟಾಗಿ ನಿಲ್ಲಲೇಬೇಕು' ಎಂದು ನಟ ಉಪೇಂದ್ರ ಅವರು ಹೇಳಿದ್ದಾರೆ.


ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಗುರುವಾರ ಬೆಳಗಾವಿ ಹೋಟೆಲೊಂದರಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮ್ಮುಖದಲ್ಲಿ ಸಮಾಜದ ಜನಪ್ರತಿನಿಧಿಗಳು ಹಾಗೂ ಮುಖಂಡರ ಸಭೆ ನಡೆಯಿತು

ಪಂಚಮಸಾಲಿ ಸಮಾಜಕ್ಕೆ ಮೀಸಲಾತಿ: ಸರ್ಕಾರಕ್ಕೆ ಮಾರ್ಚ್‌ವರೆಗೆ ಗಡುವು

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಹಿಂದುಳಿದ ವರ್ಗ 2ಎ ಮೀಸಲಾತಿ ಒದಗಿಸುವಂತೆ ರಾಜ್ಯ ಸರ್ಕಾರಕ್ಕೆ ಮಾರ್ಚ್‌ವರೆಗೆ ಗಡುವು ಕೊಡಲಾಗಿದೆ' ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ಇಲ್ಲಿನ ಖಾಸಗಿ ಹೋಟೆಲ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮ್ಮುಖದಲ್ಲಿ ಗುರುವಾರ ನಡೆದ ಸಮಾಜದ ಜನಪ್ರತಿನಿಧಿಗಳು ಹಾಗೂ ಮುಖಂಡರ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಯಾವುದೇ ಸಮಾಜಕ್ಕೂ ಅನ್ಯಾಯ ಆಗದ ರೀತಿಯಲ್ಲಿ ನಿಮಗೆ ಶೀಘ್ರದಲ್ಲಿ ಮೀಸಲಾತಿ ಕೊಡುತ್ತೇವೆ ಎಂದು ಭರವಸೆ ನೀಡಿದ್ದಾರೆ. ಇದರೊಂದಿಗೆ ನಮ್ಮ ಹೋರಾಟಕ್ಕೆ ಶೇ 75ರಷ್ಟು ಯಶಸ್ಸು ಸಿಕ್ಕಿದೆ. ಹಿಂದುಳಿದ ವರ್ಗದ ಆಯೋಗ ಸಮೀಕ್ಷೆಗೆ ಸಮಯ ಬೇಕಾಗಿರುವುದರಿಂದ, ಮಾರ್ಚ್ ತಿಂಗಳ ಒಳಗೆ ಮೀಸಲಾತಿ ಕೊಡಬೇಕು. ಶೀಘ್ರದಲ್ಲೇ ವರದಿ ಪಡೆದುಕೊಳ್ಳಬೇಕು ಎಂದು ಹಕ್ಕೊತ್ತಾಯ ಮಂಡಿಸಲಾಗಿದೆ. ಸರ್ಕಾರಕ್ಕೆ ನಮ್ಮ ಹೋರಾಟದ ಬಿಸಿ ಮುಟ್ಟಿದೆ. ಆದರೆ, ಹೋರಾಟ ಮುಂದುವರಿಸಲಾಗುವುದು' ಎಂದರು.

ಗಡುವು ಕೊಟ್ಟಿಲ್ಲ ಎಂದ ಸಿಎಂ: 'ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಹಿಂದುಳಿದ ವರ್ಗ 2ಎ ಮೀಸಲಾತಿ ನೀಡುವ ಸಂಬಂಧ ಗಡುವು ಕೊಟ್ಟಿಲ್ಲ. ಆದರೆ, ಸಮಯ ಬೇಕು ಎನ್ನುವುದು ಅವರಿಗೂ ಗೊತ್ತಾಗಿದೆ. ವರದಿ ಬಂದ ಕೂಡಲೇ ಮುಂದಿನ ಕ್ರಮ ವಹಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸಚಿವರಾದ ಶಂಕರ ಪಾಟೀಲ ಮುನೇನಕೊಪ್ಪ, ಸಿ.ಸಿ. ಪಾಟೀಲ, ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ್, ಸಿದ್ದು ಸವದಿ, ಅರವಿಂದ ಬೆಲ್ಲದ, ಮಹೇಶ ಕುಮಠಳ್ಳಿ, ಆನಂದ ಮಾಮನಿ, ಲಕ್ಷ್ಮಿ ಹೆಬ್ಬಾಳ್ಕರ, ಚನ್ನರಾಜ ಹಟ್ಟಿಹೊಳಿ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಮುಖಂಡರಾದ ವಿಜಯಾನಂದ ಕಾಶಪ್ಪನವರ, ರಾಜು ಕಾಗೆ, ಎಚ್.ಎಸ್. ಶಿವಶಂಕರ್, ಮಲ್ಲೇಶ್ ಮೊದಲಾದವರು ಭಾಗವಹಿಸಿದ್ದರು. ಈ ಸಭೆಗೆ ಸಚಿವ ಮುರುಗೇಶ ನಿರಾಣಿ ಗೈರು ಹಾಜರಾದರು. ಬೆಳಗಾವಿಯಲ್ಲೇ ಇದ್ದರೂ ಸಭೆಗೆ ಬರಲಿಲ್ಲ.

'ಶೌರ್ಯ' ಪ್ರಶಸ್ತಿ ಅನುದಾನ 5 ಪಟ್ಟು ಹೆಚ್ಚಳ: ಬೊಮ್ಮಾಯಿ

ಬೆಳಗಾವಿ: 'ಶೌರ್ಯ ಪ್ರಶಸ್ತಿ ವಿಜೇತ ಯೋಧರಿಗೆ ರಾಜ್ಯ ಸರ್ಕಾರದಿಂದ ಒಂದು ಬಾರಿ ನೀಡುವ ಅನುದಾನದ ಮೊತ್ತವನ್ನು ಪರಿಷ್ಕರಿಸಿ ಆದೇಶ ಹೊರಡಿಸಲಾಗಿದ್ದು, ಸರಾಸರಿ 5 ಪಟ್ಟು ಹೆಚ್ಚಿಸಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

ಭಾರತವು 1971ರಲ್ಲಿ ಪಾಕಿಸ್ತಾನ ವಿರುದ್ಧದ ಯುದ್ಧದಲ್ಲಿ ಜಯ ಸಾಧಿಸಿ 50 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಇಲ್ಲಿನ ಮರಾಠಾ ಲಘು ಪದಾತಿ ದಳ ಕೇಂದ್ರವು (ಎಂಎಲ್‌ಐಆರ್‌ಸಿ) ಗುರುವಾರ ಆಯೋಜಿಸಿದ್ದ 'ವಿಜಯ ದಿವಸ' ಆಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪರಮವೀರ ಚಕ್ರಕ್ಕೆ ₹ 25 ಲಕ್ಷದಿಂದ ₹ 1.5 ಕೋಟಿ, ಮಹಾವೀರ ಚಕ್ರಕ್ಕೆ ₹ 12 ಲಕ್ಷದಿಂದ ₹ 1 ಕೋಟಿ, ಅಶೋಕ ಚಕ್ರಕ್ಕೆ ₹ 25 ಲಕ್ಷದಿಂದ ₹ 1.5 ಕೋಟಿ, ಕೀರ್ತಿ ಚಕ್ರಕ್ಕೆ ₹ 12 ಲಕ್ಷದಿಂದ ₹ 1 ಕೋಟಿ, ವೀರ ಚಕ್ರ ಹಾಗೂ ಶೌರ್ಯ ಚಕ್ರಗಳಿಗೆ ತಲಾ ₹ 8 ಲಕ್ಷದಿಂದ ₹ 50 ಲಕ್ಷಕ್ಕೆ ಹಾಗೂ ಭೂಸೇನಾ, ನೌಕಾಪಡೆ ಹಾಗೂ ವಾಯುಪಡೆ ಪದಕಕ್ಕೆ ತಲಾ ₹ 2 ಲಕ್ಷದಿಂದ ₹ 15 ಲಕ್ಷಕ್ಕೆ ಮತ್ತು 'ಮೆನ್ಶನ್ ಎಎನ್‌ಡಿಎಸ್ ಪ್ಯಾಚ್'ಗೆ ₹ 2 ಲಕ್ಷದಿಂದ ₹ 15 ಲಕ್ಷಕ್ಕೆ ಹೆಚ್ಚಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಮತಾಂತರ ನಿಷೇಧ ಕಾಯ್ದೆ: ಒತ್ತಾಯ

ಪ್ರಜಾವಾಣಿ ವಾರ್ತೆ

ಹರಪನಹಳ್ಳಿ: 'ಹಣದ ಆಮಿಷ ತೋರಿಸಿ ಮತಾಂತರ ಮಾಡುವ ಪಿಡುಗು ಹೆಚ್ಚಾಗುತ್ತಿದ್ದು, ಸಮಾಜದ ಸ್ವಾಸ್ಥ್ಯ ಕದಡುವ ಕೆಲಸ ಮಾಡುತ್ತಿರುವವರನ್ನು ಶಿಕ್ಷೆಗೆ ಗುರಿಪಡಿಸಬೇಕು. ಮತಾಂತರ ನಿಷೇಧ ಕಾಯ್ದೆ ಜಾರಿಗೊಳಿಸಬೇಕು' ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ಒತ್ತಾಯಿಸಿದರು.

ಪಟ್ಟಣದ ತೆಗ್ಗಿನಮಠ ಸಂಸ್ಥಾನದ ಆವರಣದಲ್ಲಿ ಗುರುವಾರ ನಡೆದ ಚಂದ್ರಮೌಳೀಶ್ವರಶ್ರೀ ಅವರ 7ನೇ ವರ್ಷದ ಪುಣ್ಯ ಸ್ಮರಣೋತ್ಸವ ಹಾಗೂ ವರಸದ್ಯೋಜಾತ ಶ್ರೀಗಳ ಪಟ್ಟಾಧಿಕಾರದ 6ನೇ ವರ್ಷದ ವರ್ಧಂತಿ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

'ಪಕ್ಷಭೇದ ಮರೆತು ಎಲ್ಲ ರಾಜಕಾರಣಿಗಳು ಪರಸ್ಪರ ಸಮಾಲೋಚಿಸಿ ಮುಂದಾಗುವ ಅನಾಹುತಗಳನ್ನು ತಪ್ಪಿಸಬೇಕು. ಮತಾಂತರದ ಬಗ್ಗೆ ನಿಲುವು ತಾಳಬೇಕು. ಎಲ್ಲರೂ ಸ್ವಧರ್ಮದಲ್ಲಿ ಬದುಕಿ ಬಾಳಬೇಕು. ಪರಧರ್ಮದ ಬಗ್ಗೆ ಗೌರವ ಭಾವನೆ ಮೈಗೂಡಿಸಿಕೊಳ್ಳಬೇಕು' ಎಂದು ಕಿವಿಮಾತು ಹೇಳಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	4,972	4,790
ಹಾರಂಗಿ	2,859	2,853.96	51	600
ಕಬಿನಿ	2284.00	2,283.53	990	700
ಹೇಮಾವತಿ	2,922	2,912.51	482	2,590
ಲಿಂಗನಮಕ್ಕಿ	1,819	1,810.35	282	-
ಸೂಪಾ (ಮೀ)	564	553.74	321	3,698
ಮಾಣಿ	594.36	586.14	-	-
ತುಂಗಭದ್ರಾ	1,633	1,632.95	3,593	5,580
ಮಲಪ್ರಭಾ	2079.50	2,077.00	-	769
ಘಟಪ್ರಭಾ	2,175	2,166.16	170	170
ಭದ್ರಾ	186	186	1,057	1,057
ಆಲಮಟ್ಟಿ (ಮೀ)	519.60	519.32	3,550	9,406
ನಾರಾಯಣಪುರ (ಮೀ)	492.25	491.47	8,134	8,002

* ನೆಲಮಟ್ಟದಿಂದ

ಕೊಪ್ಪಳ ಜಿಲ್ಲೆಯ ಗಂಗಾವತಿಯ ಅಂಜನಾದ್ರಿಯಲ್ಲಿ ಭಕ್ತರು

ನಿಷೇಧದ ನಡುವೆ ಹನುಮಮಾಲಾ ವಿಸರ್ಜನೆ

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಆನೆಗೊಂದಿ ಸಮೀಪದ ಅಂಜನಾದ್ರಿಯಲ್ಲಿ ಗುರುವಾರ ಜಿಲ್ಲಾಡಳಿತವು ನಿಷೇಧ ವಿಧಿಸಿದ್ದರೂ ಹನುಮಮಾಲಾ ವಿಸರ್ಜನೆ ಕಾರ್ಯ ಅದ್ದೂರಿಯಾಗಿ ನಡೆಯಿತು.

ರಾಜ್ಯದ ವಿವಿಧೆಡೆಯಿಂದ ಬಂದ 35 ಸಾವಿರಕ್ಕೂ ಹೆಚ್ಚಿನ ಮಾಲಾಧಾರಿಗಳು ಅಂಜನಾದ್ರಿಯ 524 ಮೆಟ್ಟಿಲುಗಳನ್ನು ಏರಿ ಆಂಜನೇಯನ ದರ್ಶನ ಪಡೆದರು. ನಂತರ ಮಾಲೆ ವಿಸರ್ಜನೆ ಮಾಡಿದರು.

ಕೊರೊನಾ ಸೋಂಕು ಪ್ರಸರಣ ನಿಯಂತ್ರಿಸಲು ಜಿಲ್ಲಾಡಳಿತವು ನಿಷೇಧಾಜ್ಞೆ ಹೊರಡಿಸಿತ್ತು. ಆದರೆ, ಅಪಾರ ಸಂಖ್ಯೆಯಲ್ಲಿ ಮಾಲಾಧಾರಿಗಳು ಬಂದ ಕಾರಣ ಪೊಲೀಸರಿಗೆ ಸಂಪೂರ್ಣ ನಿಷೇಧ ಜಾರಿಗೊಳಿಸಲು ಆಗಲಿಲ್ಲ.

ಅಂಜನಾದ್ರಿ ಬೆಟ್ಟದ ಕೆಳಗೆ 8 ಕಡೆ ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿತ್ತು. ರಾಜ್ಯದ ವಿವಿಧ ಹಿಂದೂ ಸಂಘಟನೆಗಳ ಪ್ರಮುಖರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಭಕ್ತರಿಗೆ ವಿವಿಧ ಸಂಘಟನೆಗಳ ವತಿಯಿಂದ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

450ಕ್ಕೂ ಹೆಚ್ಚು ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿತ್ತು. ನಾಲ್ಕು ತಾತ್ಕಾಲಿಕ ಚಿಕಿತ್ಸಾ ಕೇಂದ್ರಗಳ ವ್ಯವಸ್ಥೆ ಮಾಡಲಾಗಿತ್ತು. ಕಳೆದ ವರ್ಷದ ಉತ್ಸವಕ್ಕಿಂತ ಈ ಸಲ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.

ಹುಬ್ಬಳ್ಳಿ, ಬೆಳಗಾವಿ, ಹಾವೇರಿ, ಬಳ್ಳಾರಿ, ರಾಯಚೂರು, ಗದಗ, ಬಾಗಲಕೋಟೆ ಸೇರಿದಂತೆ ವಿವಿಧೆಡೆಯಿಂದ ಹನುಮಮಾಲಾಧಾರಿಗಳು ಒಂದು ವಾರದ ಪಾದಯಾತ್ರೆ ಕೈಗೊಂಡು ಅಂಜನಾದ್ರಿ ತಲುಪಿದರು.



ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಅಂಜನಾದ್ರಿಯಲ್ಲಿ ಗುರುವಾರ ಹನುಮ ಮಾಲಾ ವಿಸರ್ಜನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಾಲಾಧಾರಿಗಳು

ಯುವಕರನ್ನು ಥಳಿಸಿ ಬಟ್ಟೆ ಹರಿದ ಮಾಲಾಧಾರಿಗಳು

ಶ್ರೀರಂಗಪಟ್ಟಣ: ಪಟ್ಟಣದಲ್ಲಿ ಗುರುವಾರ 'ಹನುಮಾನ್ ಮಾಲಾಧಾರಿಗಳ ಸಂಕೀರ್ತನಾ ಯಾತ್ರೆಯ ವಿಡಿಯೊ ಮಾಡುತ್ತಿದ್ದರು' ಎಂದು ಆರೋಪಿಸಿ ಮೂವರು ಯುವಕರನ್ನು ಮಾಲಾಧಾರಿಗಳು ಮನಸೋ ಇಚ್ಛೆ ಥಳಿಸಿದರು. ಗಂಜಾಂ ಬಳಿ ಯಾತ್ರೆಯ ವಿಡಿಯೊ ಮಾಡುತ್ತಿದ್ದ ಯುವಕನನ್ನು ಮಾಲಾಧಾರಿಗಳ ಗುಂಪು ಮೊದಲು ಥಳಿಸಿತು. ಪೊಲೀಸರು ತಕ್ಷಣ ಸುತ್ತುವರಿದು ಯುವಕನನ್ನು ವಶಕ್ಕೆ ಪಡೆದರು. ಬಳಿಕ ಮೆರವಣಿಗೆಯು ಪಟ್ಟಣದ ಮಸ್ಜಿದ್‌–ಎ–ಆಲಾ (ಟಪ್ಪು ಮಸೀದಿ) ಬಳಿ ಬಂದಾಗ ಇಬ್ಬರು ಯುವಕರು ವಿಡಿಯೊ ಮಾಡುತ್ತಿದ್ದರು. ಆಗ ಮತ್ತೆ 50ಕ್ಕೂ ಹೆಚ್ಚು ಮಾಲಾಧಾರಿಗಳು ಯುವಕರನ್ನು ಬೆನ್ನಟ್ಟಿ ಹಿಡಿದು ಥಳಿಸಿದರು. ಕೆಳಕ್ಕೆ ಕೆಡವಿ ಬಟ್ಟೆಗಳನ್ನು ಹರಿದು ಹಾಕಿದರು. ಅವರನ್ನೂ ಪೊಲೀಸರು ವಶಕ್ಕೆ ಪಡೆದರು.

ಯುವಕರನ್ನು ರಕ್ಷಿಸಿದ ಪೊಲೀಸರ ವಿರುದ್ಧವೇ ಮಾಲಾಧಾರಿಗಳು ತಿರುಗಿ ಬಿದ್ದರು. ವಶಕ್ಕೆ ಪಡೆದವರನ್ನು ಬಿಟ್ಟುಕೊಡುವಂತೆ ಮಾಲಾಧಾರಿಗಳ ಗುಂಪು ಒತ್ತಾಯಿಸಿತು. ಪೊಲೀಸರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿತು. ಇದರಿಂದ ಮಸ್ಜಿದ್‌–ಎ–ಆಲಾ ಬಳಿ ಕೆಲಕಾಲ ಗೊಂದಲದ ವಾತಾವರಣ ಉಂಟಾಯಿತು. ಹಿಂದೂ ಜಾಗರಣ ವೇದಿಕೆಯ ಮುಖಂಡರು ಸ್ಥಳಕ್ಕೆ ಧಾವಿಸಿ ಮಾಲಾಧಾರಿಗಳನ್ನು ಸಮಾಧಾನಪಡಿಸಿದರು. ನಂತರ ಸಂಕೀರ್ತನಾ ಯಾತ್ರೆ ಶ್ರೀರಂಗನಾಥಸ್ವಾಮಿ ದೇವಾಲಯದತ್ತ ಮುನ್ನಡೆಯಿತು.

ವಿಡಿಯೊ ಮಾಡುತ್ತಿದ್ದರು ಎನ್ನಲಾದ ಮೈಸೂರಿನ ಇಸ್ಮಾಯಿಲ್, ಅಬ್ರಾರ್ ಮತ್ತು ಗಂಜಾಂನ ಮಹಮದ್ ಸಿರಾಜ್ ಸದ್ಯ ಪೊಲೀಸರ ವಶದಲ್ಲಿದ್ದಾರೆ. 'ಘಟನೆ ಕುರಿತು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಹಿಂದೂ ಧರ್ಮದತ್ತ ಮುಸ್ಲಿಂ ಮಹಿಳೆಯರ ಒಲವು'

ಶ್ರೀರಂಗಪಟ್ಟಣ: 'ಇಸ್ಲಾಂ ಧರ್ಮವನ್ನು ಇಷ್ಟಪಡದ 3 ಲಕ್ಷಕ್ಕೂ ಹೆಚ್ಚು ಮಹಿಳೆಯರು ಹಿಂದೂ ಧರ್ಮಕ್ಕೆ ಬರಲು ಒಲವು ತೋರುತ್ತಿದ್ದಾರೆ' ಎಂದು ಹಿಂದೂ ಜಾಗರಣಾ ವೇದಿಕೆಯ ದಕ್ಷಿಣ ಪ್ರಾಂತ್ಯ ಕಾರ್ಯದರ್ಶಿ ದೊ.ಕೇಶವಮೂರ್ತಿ ಪ್ರತಿಪಾದಿಸಿದರು.

ಹನುಮಾನ್ ಮಾಲಾಧಾರಿಗಳ ಸಂಕೀರ್ತನಾ ಯಾತ್ರೆ ಪ್ರಯುಕ್ತ ಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯ ಮೈದಾನದಲ್ಲಿ ಗುರುವಾರ ನಡೆದ ಧಾರ್ಮಿಕ ಸಭೆಯಲ್ಲಿ ಅವರು ಮಾತನಾಡಿ, 'ವಿವಿಧ ಕಾರಣಗಳಿಗೆ ಹಿಂದೂ ಧರ್ಮವನ್ನು ತ್ಯಜಿಸಿ ಮತ್ತೆ ಮಾತೃ ಧರ್ಮಕ್ಕೆ ಬರಲು ಆಸಕ್ತಿ ತೋರುತ್ತಿರುವವರನ್ನು ಬರಮಾಡಿಕೊಳ್ಳಲು ನಾವು ಸಿದ್ಧರಾಗಬೇಕು' ಎಂದರು.

ವಿಶ್ವ ಹಿಂದೂ ಪರಿಷತ್ ಮುಖಂಡ ಡಾ.ಭಾನುಪ್ರಕಾಶ್ ಶರ್ಮಾ ಮಾತನಾಡಿ, 'ಉತ್ತರದ ಗಯಾ ಕ್ಷೇತ್ರದಂತೆ ದಕ್ಷಿಣದಲ್ಲಿ ಶ್ರೀರಂಗಪಟ್ಟಣ ಪವಿತ್ರ ಕ್ಷೇತ್ರ. ಪಟ್ಟಣದ 8 ದಿಕ್ಕುಗಳಲ್ಲಿ ಅಷ್ಟದಳ ಆಂಜನೇಯ ಮೂರ್ತಿಗಳನ್ನು ಸ್ಥಾಪಿಸಿದ್ದು, ಆ ಪೈಕಿ ಪಟ್ಟಣದ ಮೂಡಲಬಾಗಿಲು ಆಂಜನೇಯಸ್ವಾಮಿ ಮೂರ್ತಿಯನ್ನು ಮೂಲ ದೇಗುಲದಿಂದ ಇಕ್ಕಟ್ಟಾದ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ. ಅದು ಮತ್ತೆ ಮೂಲ ಸ್ಥಳದಲ್ಲಿ ಪ್ರತಿಷ್ಠಾಪನೆಯಾಗಬೇಕು' ಎಂದರು.

ಎಂ.ಫಿಲ್, ಪಿಎಚ್.ಡಿ: 240 ಹೆರಿಗೆ ರಜೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ವಿಶ್ವವಿದ್ಯಾಲಯಗಳಲ್ಲಿ ಎಂ.ಫಿಲ್, ಪಿಎಚ್.ಡಿ ಸಂಶೋಧನೆ ಮಾಡುತ್ತಿರುವ ಮಹಿಳೆಯರಿಗೆ ಸಂಶೋಧನೆ ಅವಧಿಯಲ್ಲಿ 240 ದಿನಗಳವರೆಗೆ ಹೆರಿಗೆ ರಜೆ ಅಥವಾ ಮಕ್ಕಳ ಪೋಷಣಾ ರಜೆ ನೀಡಲು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಅವಕಾಶ ನೀಡಿದೆ.

ಈ ಸಂಬಂಧ ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳಿಗೆ ಪತ್ರ ಬರೆದಿರುವ ಯುಜಿಸಿ ಕಾರ್ಯದರ್ಶಿ ಪ್ರೊ. ರಜನೀಶ್ ಜೈನ್, 'ಈ ಸಂಬಂಧ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳು ಅಗತ್ಯ ನಿಯಮಗಳನ್ನು ರೂಪಿಸಬೇಕು. ಈ ಅವಧಿಯಲ್ಲಿ ಹಾಜರಾತಿಯಿಂದ ವಿನಾಯಿತಿ ನೀಡಬೇಕು. ಈ ರಜೆಯಲ್ಲಿರುವವರಿಗೆ ಪರೀಕ್ಷೆ ಫಾರಂಗಳನ್ನು ವಿತರಿಸುವ ದಿನಾಂಕ ವಿಸ್ತರಿಸಬೇಕು. ಈ ಮಾಹಿತಿಯನ್ನು ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆ ಹೊಂದಿದ ಕಾಲೇಜುಗಳಿಗೂ ತಿಳಿಸಬೇಕು' ಎಂದಿದ್ದಾರೆ.

ಹಳಿ ದ್ವಿಪಥ ಕಾಮಗಾರಿ ವಿರುದ್ಧ ಹೋರಾಟಕ್ಕೆ ಸಿದ್ಧತೆ

ಕಾರವಾರ: ಕ್ಯಾಸಲ್‌ರಾಕ್– ಕುಳೆಂ ನಡುವೆ ರೈಲು ಹಳಿ ದ್ವಿಪಥ ಕಾಮಗಾರಿ ಹಮ್ಮಿಕೊಳ್ಳಲು ಅನುಮತಿ ನೀಡುವಂತೆ ಕೋರಿ ರೈಲ್ವೆ ವಿಕಾಸ ನಿಗಮವು ರಾಜ್ಯದ ಹೈಕೋರ್ಟ್ ಮೊರೆ ಹೋಗಿದೆ. ಈ ಅರ್ಜಿಯು ಡಿ.20ರಂದು ವಿಚಾರಣೆಗೆ ಬರಲಿದೆ.

ಕಾಮಗಾರಿಗೆ ಅನುಮತಿ ನೀಡುವುದರ ವಿರುದ್ಧ ಮೇಲ್ಮನವಿ ಸಲ್ಲಿಸಲು ಪರಿಸರಪ್ರಿಯ ಸಂಘಟನೆಗಳು ಸಿದ್ಧತೆ ಮಾಡಿಕೊಂಡಿವೆ. ಈ ಯೋಜನೆಯು ಹುಲಿ ಸಂರಕ್ಷಿತ ವಲಯದಲ್ಲಿ ಸಾಗುತ್ತದೆ. ಅಲ್ಲದೇ ಪಶ್ಚಿಮ ಘಟ್ಟದ ಸೂಕ್ಷ್ಮ ಪ್ರದೇಶಗಳಲ್ಲಿ ಕಾಮಗಾರಿ ನಡೆಸಬೇಕಾಗುತ್ತದೆ. ಇದರಿಂದ ಹುಲಿ ಸಂತತಿಗೆ ತೊಂದರೆಯಾಗಬಹುದು ಎಂದು ರಾಷ್ಟ್ರೀಯ ಹುಲಿ ಸಂರಕ್ಷಣೆ ಪ್ರಾಧಿಕಾರವು ನಿರಾಕ್ಷೇಪಣಾ ಪತ್ರ ನೀಡಲು ನಿರಾಕರಿಸಿತ್ತು. ಅಲ್ಲದೇ ಕರ್ನಾಟಕ ಅರಣ್ಯ ಇಲಾಖೆಯೂ ಕಾಮಗಾರಿಗೆ ಹಸಿರು ನಿಶಾನೆ ತೋರಿಲ್ಲ. ಅಲ್ಲದೇ, ಇದು ಸುಪ್ರೀಂ ಕೋರ್ಟ್‌ನ ಆದೇಶವೊಂದರ ಉಲ್ಲಂಘನೆಯಾಗಲಿದೆ ಎಂದು 'ಯುನೈಟೆಡ್ ಕನ್ಸರ್ವೇಷನ್ ಮೂವ್‌ಮೆಂಟ್' ಸಂಘಟನೆ ತಿಳಿಸಿದೆ.

ಕಾಮಗಾರಿ ಆರಂಭಕ್ಕೂ ಮುನ್ನ ಸಂಬಂಧಿತ ಇಲಾಖೆಗಳ ಅನುಮತಿ ಪಡೆಯಬೇಕು ಎಂದು ಎನ್‌ಜಿಟಿ ಸೂಚಿಸಿತ್ತು. ಈ ವರ್ಷ ಮಳೆಗಾಲದಲ್ಲಿ ಕ್ಯಾಸಲ್‌ರಾಕ್ ಸಮೀಪದ ಅರಣ್ಯದ ನಡುವೆ ಹಳಿಗಳ ಮೇಲೆ ಗುಡ್ಡದ ಮಣ್ಣು ಕುಸಿದು, ರೈಲು ಹಳಿ ತಪ್ಪಿತ್ತು. ಪಶ್ಚಿಮ ಘಟ್ಟದ ಸೂಕ್ಷ್ಮ ಪ್ರದೇಶವಾಗಿರುವ ಇಲ್ಲಿ, ಹಳಿ ದ್ವಿಪಥ ಕಾಮಗಾರಿಗಾಗಿ ಮತ್ತಷ್ಟು ಗುಡ್ಡ ಕೊರೆಯಬೇಕು. ಮರಗಳನ್ನು ಕಡಿಯಬೇಕು. ಏಳು ದೊಡ್ಡ, 74 ಸಣ್ಣ ಸೇತುವೆಗಳನ್ನು ಹಾಗೂ 23 ಸುರಂಗಗಳನ್ನು ಮಾಡಬೇಕಾಗುತ್ತದೆ. ಇದರಿಂದ ಪರಿಸರ ಸಮತೋಲನದ ಮೇಲೆ ವ್ಯತಿರಿಕ್ತ ಪರಿಣಾಮ ಆಗಲಿದೆ ಎಂದು ಸಂಘಟನೆ ಆತಂಕ ವ್ಯಕ್ತಪಡಿಸಿದೆ.

ಪುರಸಭೆ ಚುನಾವಣೆ: ಗೊಂದಲ ಸೃಷ್ಟಿಸಿದ 'ಬಿ' ಫಾರ್ಮ್

ಪ್ರಜಾವಾಣಿ ವಾರ್ತೆ

ಮಲೇಬೆನ್ನೂರು: ಪಟ್ಟಣದ ಉನ್ನತೀಕರಿಸಿದ ಪುರಸಭೆಯ ಚುನಾವಣೆಗೆ ಜೆಡಿಎಸ್ ಪಕ್ಷದಿಂದ ಇಬ್ಬರು ಅಭ್ಯರ್ಥಿಗಳು 'ಬಿ' ಫಾರ್ಮ್ ಸಲ್ಲಿಸಿದ್ದು, ಗೊಂದಲ ಸೃಷ್ಟಿಯಾಗಿದೆ.

ಒಂದನೇ ವಿಭಾಗದಲ್ಲಿ ಇಬ್ಬರು ಅಭ್ಯರ್ಥಿಗಳು 'ಬಿ' ಫಾರ್ಮ್ ಸಲ್ಲಿಸಿದ್ದಾರೆ. ನಾಮಪತ್ರ ಪರಿಶೀಲನೆ ಕಾರ್ಯ ಗುರುವಾರ ಮುಕ್ತಾಯವಾಗಿದ್ದು, ನಾಮಪತ್ರ ಪರಿಶೀಲನೆ ವೇಳೆ ಒಬ್ಬ ಅಭ್ಯರ್ಥಿ ನಾಮಪತ್ರದಲ್ಲಿ ಅನುಮೋದಿತ ಅಭ್ಯರ್ಥಿ ಎಂದು, ಇನ್ನೊಂದು ನಾಮಪತ್ರದಲ್ಲಿ ಬದಲಿ ಅಭ್ಯರ್ಥಿ ಎಂದು ಬರೆದಿದ್ದಾರೆ. ಇದು ಗೊಂದಲಕ್ಕೆ ಕಾರಣವಾಗಿದೆ.

ಈ ವಿಷಯವನ್ನು ಚುನಾವಣಾ ಅಧಿಕಾರಿಯಾದ ತಹಶೀಲ್ದಾರ್ ಅವರು ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಸ್ಪಷ್ಟನೆ ಪಡೆಯಲು ಮುಂದಾಗಿದ್ದಾರೆ.

ನಾಮಪತ್ರಗಳ 'ಬಿ' ಫಾರ್ಮ್ ಸಮಸ್ಯೆ ಚುನಾವಣಾ ಕಣದಲ್ಲಿ ಸಂಚಲನ ಮೂಡಿಸಿದ್ದು, ಯಾವ ಅಭ್ಯರ್ಥಿಯ ನಾಮಪತ್ರ ಸ್ವೀಕೃತವಾಗಲಿದೆ ಅಥವಾ ಯಾರದ್ದು ತಿರಸ್ಕೃತವಾಗುವುದೋ ಎಂಬುದು ಡಿ.17ರಂದು ನಿರ್ಧಾರವಾಗಲಿದೆ.

ಒಟ್ಟು 68 ನಾಮಪತ್ರಗಳ ಪೈಕಿ 66 ನಾಮಪತ್ರ ಸ್ವೀಕೃತವಾಗಿದೆ.

ವಿಪಕ್ಷ ನಾಯಕನ ಅಮಾನತು ಇದೇ ಮೊದಲು: ಸರ್ಕಾರದ ನಡೆ ನಾಚಿಕೆಗೇಡು– ಎಸ್‌.ಆರ್‌. ಪಾಟೀಲ

ಪರಿಷತ್: ಧರಣಿಯಲ್ಲೇ ಮುಗಿದ ಅರ್ಧ ದಿನ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): 15 ಸದಸ್ಯರ ಅಮಾನತು ಮತ್ತು ಟ್ರ್ಯಾಕ್ಟರ್‌ನಲ್ಲಿ ಅಧಿವೇಶನಕ್ಕೆ ಬರಲು ಪೊಲೀಸರು ಅಡ್ಡಿಪಡಿಸಿದ್ದನ್ನು ವಿರೋಧಿಸಿ ಕಾಂಗ್ರೆಸ್ ಸದಸ್ಯರು ಧರಣಿ ನಡೆಸಿದ್ದರಿಂದ ಗುರುವಾರ ಮಧ್ಯಾಹ್ನ 3.30ರವರೆಗೂ ವಿಧಾನ ಪರಿಷತ್‌ನಲ್ಲಿ ಯಾವುದೇ ಕಲಾಪ ನಡೆಯಲಿಲ್ಲ.

ಬೆಳಿಗ್ಗೆ 11 ಗಂಟೆಗೆ ಕಲಾಪ ಆರಂಭವಾಗಬೇಕಿತ್ತು. 11.30ಕ್ಕೆ ಕೋರಂ ಬೆಲ್ ಹಾಕಲಾಯಿತು. ಸಭಾಪತಿ ಬಸವರಾಜ ಹೊರಟ್ಟಿ ಪೀಠಕ್ಕೆ ಬರುವಾಗ ಕೋರಂ ಇರಲಿಲ್ಲ. ಮತ್ತೆ ಕಲಾಪ ಮುಂದೂಡಲಾಯಿತು. ಕಾಂಗ್ರೆಸ್ ಸದಸ್ಯರು ಧರಣಿ ನಡೆಸುವ ಸುಳಿವು ಹೊಂದಿದ್ದ ಸಭಾಪತಿ ಸರಣಿ ಸಭೆಗಳನ್ನು ನಡೆಸಿದರು. ಆದರೆ, ಫಲಪ್ರದವಾಗಲಿಲ್ಲ.

ಅರ್ಧ ಗಂಟೆ ಬಳಿಕ ಕಲಾಪ ಆರಂಭವಾಗುತ್ತಿದ್ದಂತೆಯೇ ಕಾಂಗ್ರೆಸ್ ಸದಸ್ಯರು ಸಭಾಪತಿ ಪೀಠದ ಎದುರು ಧರಣಿ ಆರಂಭಿಸಿದರು. 15 ಸದಸ್ಯರನ್ನು ಬುಧವಾರ ದಿನದ ಮಟ್ಟಿಗೆ ಅಮಾನತು ಮಾಡಿದ್ದರ ಹಿಂದೆ ದುರುದ್ದೇಶವಿದೆ ಎಂದು ಆರೋಪಿಸಿದರು. ಗುರುವಾರ ಪ್ರತಿಭಟನೆಯ ಭಾಗವಾಗಿ ಟ್ರ್ಯಾಕ್ಟರ್‌ನಲ್ಲಿ ಸುವರ್ಣ ವಿಧಾನಸೌಧಕ್ಕೆ ಬರುತ್ತಿದ್ದ ತಮ್ಮನ್ನು ಮೂರು ಗಂಟೆಗಳ ಕಾಲ ಪೊಲೀಸರು ತಡೆ ಹಿಡಿದಿದ್ದರು ಎಂದು ಆರೋಪಿಸಿದರು.

ಇತಿಹಾಸದಲ್ಲೇ ಮೊದಲು: ‘ವಿಧಾನ ಪರಿಷತ್‌ಗೆ ಶತಮಾನದ ಇತಿಹಾಸವಿದೆ. ವಿರೋಧ ಪಕ್ಷದ ನಾಯಕರನ್ನು ಸದನದಿಂದ ಅಮಾನತು ಮಾಡಿದ ಉದಾಹರಣೆಯೇ ಇರಲಿಲ್ಲ. ಸಚಿವರ ವಿರುದ್ಧದ ಆರೋಪದ ಕುರಿತು ಚರ್ಚೆಗೆ ಆಗ್ರಹಿಸಿದ ವಿರೋಧ ಪಕ್ಷದ ಸದಸ್ಯರನ್ನು ಅಮಾನತು ಮಾಡುವ ಮೂಲಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ನಾಚಿಕೆಗೇಡಿನ ವರ್ತನೆ ಪ್ರದರ್ಶಿಸಿದೆ’ ಎಂದು ವಿರೋಧ ಪಕ್ಷದ ನಾಯಕ ಎಸ್‌.ಆರ್‌. ಪಾಟೀಲ ಆರೋಪಿಸಿದರು.

ಗುರುವಾರ ಸದನಕ್ಕೆ ಬರದಂತೆ ಪೊಲೀಸರು ತಡೆದಿದ್ದಾರೆ. ಕಾನೂನು ಸುವ್ಯವಸ್ಥೆ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರ ಸೂಚನೆಯಂತೆ ಇಲ್ಲಿನ ಐಜಿಪಿ, ನಗರ ಪೊಲೀಸ್ ಕಮಿಷನರ್ ಮತ್ತು ಎಸ್‌ಪಿ ಕಾಂಗ್ರೆಸ್ ಶಾಸಕರು ಸದನಕ್ಕೆ ಬರುವುದಕ್ಕೆ ಅಡ್ಡಿಪಡಿಸಿದ್ದಾರೆ. ಸದನದ ರಕ್ಷಕರಾದ ಸಭಾಪತಿ ಈ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ನಡುವೆ ಕೆಲಕಾಲ ವಾಕ್ಸಮರ ನಡೆಯಿತು. ಧರಣಿ ಕೈಬಿಡುವಂತೆ ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ಮನವಿ ಮಾಡಿದರು. ಅದಕ್ಕೆ ಕಾಂಗ್ರೆಸ್ ಸದಸ್ಯರು ಮಣಿಯಲಿಲ್ಲ.

‘ಪೊಲೀಸರು ನಿಮ್ಮನ್ನು ತಡೆದಿರುವ ಮಾಹಿತಿ ಇರಲಿಲ್ಲ. ನಮಗೆ ಮಾಹಿತಿ ಬರುತ್ತಿದ್ದಂತೆಯೇ ತಕ್ಷಣ ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇವೆ. ಸರ್ಕಾರದ ಅರಿವಿಗೆ ಬಾರದೇ ಹೀಗಾಗಿದೆ. ಪೊಲೀಸರು ಭದ್ರತಾ ದೃಷ್ಟಿಕೋನದಿಂದ ಹೀಗೆ ಮಾಡಿರಬಹುದು. ವಿಷಯವನ್ನು ಬೆಳೆಸದೇ ಧರಣಿ ಕೈಬಿಡಬೇಕು’ ಎಂದು ಮಾಧುಸ್ವಾಮಿ ಮನವಿ ಮಾಡಿದರು.

ಆದರೆ, ಕಾಂಗ್ರೆಸ್ ಸದಸ್ಯರು ಸರ್ಕಾರದ ಮನವಿಯನ್ನು ತಿರಸ್ಕರಿಸಿದರು. ಮತ್ತೆ ಸದನವನ್ನು ಮುಂದೂಡಲಾಯಿತು. ಮಧ್ಯಾಹ್ನ ಭೋಜನ ವಿರಾಮದ ಬಳಿಕ ಕಲಾಪ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್ ಸದಸ್ಯರು ಧರಣಿ ಮುಂದುವರಿಸಿದರು. ಸಚಿವರ ವಿರುದ್ಧದ ಭೂಕಬಳಿಕೆ ಆರೋಪದ ಕುರಿತು ಅನ್ಯ ರೂಪದಲ್ಲಿ ಚರ್ಚೆಗೆ ಅವಕಾಶ ನೀಡುವ ಸಭಾಪತಿಯವರ ಭರವಸೆ ಆಧರಿಸಿ ಧರಣಿ ಕೈಬಿಟ್ಟರು.



ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಗುರುವಾರ ವಿಧಾನ ಪರಿಷತ್ ಆವರಣದಲ್ಲಿ ಪರಿಷತ್ ಸದಸ್ಯರ ಅಮಾನತನ್ನು ವಿರೋಧಿಸಿ ಸಭಾಪತಿ ಪೀಠದ ಮುಂದೆ ಕಾಂಗ್ರೆಸ್ ಸದಸ್ಯರು ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ/ ರಂಜು ಪಿ

ವಿಷಾದ ವ್ಯಕ್ತಪಡಿಸಿದ ಸರ್ಕಾರ

ಸಚಿವರೊಬ್ಬರ ವಿರುದ್ಧದ ಭೂಕಬಳಿಕೆ ಆರೋಪದ ಕುರಿತು ಚರ್ಚೆಗೆ ಅವಕಾಶ ನೀಡುವಂತೆ ಆಗ್ರಹಿಸಿ ವಿಧಾನ ಪರಿಷತ್‌ನಲ್ಲಿ ಬುಧವಾರ ಧರಣಿ ನಡೆಸುತ್ತಿದ್ದ ಕಾಂಗ್ರೆಸ್ ಸದಸ್ಯರನ್ನು ಅಮಾನತುಗೊಳಿಸಿದ್ದ ನಿರ್ಧಾರಕ್ಕೆ ರಾಜ್ಯ ಸರ್ಕಾರ ಗುರುವಾರ ವಿಷಾದ ವ್ಯಕ್ತಪಡಿಸಿತು. ಸರ್ಕಾರದ ಪರವಾಗಿ ಮಾತನಾಡಿದ ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ, ‘ತರಾತುರಿಯಲ್ಲಿ ಸದಸ್ಯರನ್ನು ಅಮಾನತು ಮಾಡುವ ನಿರ್ಣಯ ಅಂಗೀಕರಿಸಬಾರದಿತ್ತು. ಇದಕ್ಕಾಗಿ ನಾವು ವಿಷಾದ ವ್ಯಕ್ತಪಡಿಸುತ್ತೇವೆ’ ಎಂದರು.

ವಿಧಾನಸಭೆಯಲ್ಲೂ ಧರಣಿ: ಟ್ರ್ಯಾಕ್ಟರ್‌ನಲ್ಲಿ ಗುರುವಾರ ಅಧಿವೇಶನಕ್ಕೆ ಬರುತ್ತಿದ್ದ ಕಾಂಗ್ರೆಸ್ ಶಾಸಕರನ್ನು ಪೊಲೀಸರು ತಡೆದು ನಿಲ್ಲಿಸಿದ್ದನ್ನು ವಿರೋಧಿಸಿ ವಿಧಾನಸಭೆಯಲ್ಲೂ ಕಾಂಗ್ರೆಸ್ ಸದಸ್ಯರು ಕೆಲಕಾಲ ಧರಣಿ ನಡೆಸಿದರು. ಪ್ರಿಯಾಂಕ್ ಖರ್ಗೆ, ಡಾ.ಅಜಯ್ ಸಿಂಗ್, ಈಶ್ವರ ಖಂಡ್ರೆ ಸೇರಿದಂತೆ ಕಾಂಗ್ರೆಸ್‌ನ ಹಲವು ಸದಸ್ಯರು ಸಭಾಧ್ಯಕ್ಷರ ಪೀಠದ ಎದುರು ಧರಣಿ ನಡೆಸಿ, ಪೊಲೀಸರ ವಿರುದ್ಧ ಕ್ರಮಕ್ಕೆ ಆಗ್ರಹಿಸಿದರು. ಪರಿಶೀಲಿಸುವುದಾಗಿ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಭರವಸೆ ನೀಡಿದರು. ಅಷ್ಟರಲ್ಲೇ ಮಹಾರಾಷ್ಟ್ರದಲ್ಲಿ ಕನ್ನಡ ಬಾವುಟ ಸುಟ್ಟ ಪ್ರಕರಣ ಪ್ರಸ್ತಾಪಿಸಿದ ಜೆಡಿಎಸ್‌ನ ಕೆ. ಅನ್ನದಾನಿ ಕೂಡ ಧರಣಿಗೆ ಬಂದರು. ಗದ್ದಲ ಜೋರಾಯಿತು. ಸಭಾಧ್ಯಕ್ಷರು ಕಲಾಪವನ್ನು ಹತ್ತು ನಿಮಿಷಗಳ ಕಾಲ ಮುಂದೂಡಿದರು.

ಸುದ್ದಿ 2 ನಿಮಿಷ


ಸರ್ಕಾರದ ವಿರುದ್ಧವೇ ಹರಿಹಾಯ್ದ ಬಿಜೆಪಿ ಶಾಸಕ

ಬೆಳಗಾವಿ (ಸುವರ್ಣ ವಿಧಾನಸೌಧ): ’ಇದ್ಯಾವ ಅಭಿವೃದ್ಧಿ, ಇದಾ ನಿಮ್ಮ ನೀತಿ‘ ಎಂದು ರಾಜ್ಯ ಸರ್ಕಾರದ ವಿರುದ್ಧವೇ ಬಿಜೆಪಿ ಸದಸ್ಯ ಸಿದ್ದು ಸವದಿ ವಿಧಾನಸಭೆಯಲ್ಲಿ ಗುರುವಾರ ಹರಿಹಾಯ್ದರು.

ಬನಹಟ್ಟಿಯ ಹಳೆಯಲ್ಲಮ್ಮ ದೇವಸ್ಥಾನಕ್ಕೆ ಮೂಲಸೌಕರ್ಯ ಒದಗಿಸುವ ಕಾಮಗಾರಿಗೆ ಸಂಬಂಧಿಸಿದಂತೆ ಪ್ರಶ್ನೋತ್ತರ ಅವಧಿಯಲ್ಲಿ ಸಿದ್ದು ಸವದಿ ಪ್ರಶ್ನೆ ಕೇಳಿದರು.’₹20 ಲಕ್ಷ ಮೊತ್ತದ ಕಾಮಗಾರಿ ಆರಂಭವಾಗಿ ಮೂರು ವರ್ಷವಾಗಿದ್ದು, ಕಾಮಗಾರಿ ಮುಗಿಸಲು ವಿಳಂಬ ಮಾಡಲಾಗುತ್ತಿದೆ. ಇದಾ ಅಭಿವೃದ್ಧಿ ನೀತಿ‘ ಎಂದೂ ಪ್ರಶ್ನಿಸಿದರು.

ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಪರವಾಗಿ ಉತ್ತರಿಸಿದ ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್.ಅಶ್ವತ್ಥನಾರಾಯಣ, ’ಯೋಜನೆಯ ಸ್ವರೂಪ ಬದಲಿಸಿ ಎಂದು ಸಿದ್ದು ಸವದಿ ಅವರೇ ಪತ್ರ ನೀಡಿದ ಕಾರಣಕ್ಕೆ ಸ್ವರೂಪ ಬದಲಿಸಲಾಗಿದೆ. ಹಾಗಾಗಿ, ಸ್ವಲ್ಪ ವಿಳಂಬವಾಗಿದೆ‘ ಎಂದರು.

ನೀವೇ ಪತ್ರ ನೀಡಿದ್ದೀರಲ್ಲ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು. ’ನಾನು ಪತ್ರ ಕೊಟ್ಟಿಲ್ಲ. ಅಧಿಕಾರಿಗಳೇ ನನ್ನಿಂದ ಪತ್ರ ಬರೆಸಿಕೊಂಡರು‘ ಎಂದು ಸಿದ್ದು ಸವದಿ ಸಮಜಾಯಿಷಿ ನೀಡಿದರು. ಅದು ನೀವು ಪತ್ರ ಕೊಟ್ಟಂತೆಯೇ ಎಂದು ಕಾಗೇರಿ ಹೇಳಿದರು.



‘ಶಿಶು’ಪಾಲನಾ ರಜೆ: ಸ್ವಾರಸ್ಯಕರ ಚರ್ಚೆ

ಬೆಳಗಾವಿ (ಸುವರ್ಣ ವಿಧಾನಸೌಧ): ಸರ್ಕಾರಿ ಮಹಿಳಾ ಅಧಿಕಾರಿ, ನೌಕರರಿಗೆ ಶಿಶುಪಾಲನಾ ರಜೆ ಮತ್ತು ಶಿಶು ಪದ ಕುರಿತು ವಿಧಾನಪರಿಷತ್‌ನಲ್ಲಿ ಗುರುವಾರ ಸ್ವಾರಸ್ಯಕರ ಚರ್ಚೆ ನಡೆಯಿತು.

ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಆಯನೂರು ಮಂಜುನಾಥ್, ‘ಕಾನೂನು ನಿಯಮಾವಳಿ ಪ್ರಕಾರ ಶಿಶು ಪಾಲನಾ ರಜೆಯನ್ನು ಮಹಿಳೆಗೆ ನೀಡಿದ ರೀತಿಯಲ್ಲಿಯೇ ಪುರುಷರಿಗೂ ನೀಡಬೇಕು. ಸರ್ಕಾರಿ ನೌಕರರಲ್ಲಿ ಶೇ 40ಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರಿದ್ದಾರೆ. ಒಂದೇ ಸಂದರ್ಭದಲ್ಲಿ ಹೆರಿಗೆಯಾಗಿ ಹೆಚ್ಚಿನ ಮಹಿಳೆಯರು ರಜೆ ಮೇಲೆ ಹೋದರೆ ಸಾರ್ವಜನಿಕರಿಗೆ ತೊಂದರೆ ಆಗುತ್ತದೆ. ಇದಕ್ಕೆ ಸರ್ಕಾರ ಸೂಚಿಸುವ ಪರಿಹಾರವೇನು’ ಎಂದು ಗಂಭೀರ ವಿಚಾರವನ್ನು ಹಾಸ್ಯ ಮಿಶ್ರಿತವಾಗಿ ಪ್ರಸ್ತಾಪಿಸಿದರು.

ಅದಕ್ಕೆ ಅದೇ ಧಾಟಿಯಲ್ಲಿ ಉತ್ತರಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಶಿಶು ಮತ್ತು ಯೌವ್ವನದ ಮಧ್ಯದ ವ್ಯತ್ಯಾಸವನ್ನು ನಿಸರ್ಗವೇ ಗುರುತಿಸುತ್ತದೆ. ಅಲ್ಲದೆ. ಒಂದೇ ಬಾರಿಗೆ ಹೆರಿಗೆಯಾಗುವ ಸಂದರ್ಭ ಉಂಟಾಗದು’ ಎಂದರು.

ಮಾತಿನ ಮಧ್ಯೆ ಮುಖ್ಯಮಂತ್ರಿ, ‘ಮಗು ಆಗುವುದು ದೇವರ ಕೃಪೆ’ ಎಂದರು. ಅದಕ್ಕೆ ಆಯನೂರು ಮಂಜುನಾಥ್, ‘ಇದು ದೇವರಲ್ಲ. ಪುರುಷರ ಕೃಪೆ’ ಎಂದರು. ಅದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ‘ಇದರಲ್ಲಿ ಅರ್ಧ ಪ್ರಯತ್ನ ಪುರುಷರದ್ದಾದರೆ ದೇವರ ಕೃಪೆ ದೊಡ್ಡದಿದೆ’ ಎಂದಾಗ ಇಡೀ ಸದನ ನಗೆಗಡಲಲ್ಲಿ ತೇಲಿತು. ‘ಶಿಶುಪಾಲನಾ ರಜೆ ಕೇಂದ್ರ ಸರ್ಕಾರದ ಆದೇಶ. ಈ ಬಗ್ಗೆ ಶೀಘ್ರವೇ ಮಂಜಣ್ಣ (ಆಯನೂರು ಮಂಜುನಾಥ್) ಜತೆ ವಿಶೇಷ ಸಭೆ ನಡೆಸಿ, ಮಾಹಿತಿ ಪಡೆದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುತ್ತೇನೆ’ ಎಂದೂ ಮುಖ್ಯಮಂತ್ರಿ ಹೇಳಿದರು.

ಲಲಿತ್ ಮೋದಿ ತಾಯಿ ನಡುವೆ ಆಸ್ತಿ ವಿವಾದ

ನವದೆಹಲಿ(ಪಿಟಿಐ): ಲಲಿತ್ ಮೋದಿ ಮತ್ತು ಅವರ ತಾಯಿ ಬೀನಾ ಮೋದಿ ನಡುವಿನ ಆಸ್ತಿ ವಿವಾದಕ್ಕೆ ಸಂಬಂಧಿಸಿದಂತೆ ಮಧ್ಯಸ್ಥಿಕೆದಾರರನ್ನಾಗಿ ಇಬ್ಬರು ವಿಶ್ರಾಂತ ನ್ಯಾಯಮೂರ್ತಿಗಳನ್ನು ಸುಪ್ರೀಂ ನೇಮಿಸಿದೆ. ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠವು ಸುಪ್ರೀಂ ನ ವಿಶ್ರಾಂತ ನ್ಯಾಯಮೂರ್ತಿಗಳಾದ ವಿಕ್ರಮ್‌ಜಿತ್ ಸೇನ್ ಮತ್ತು ಕುರಿಯನ್ ಜೋಸೆಫ್ ಅವರನ್ನು ಮಧ್ಯಸ್ಥಿಕೆದಾರರಾಗಿ ಪರಿಗಣಿಸಲು ಒಪ್ಪಿಗೆ ನೀಡಿದೆ.

ಪಿಯು: ‘ಶಿಕ್ಷಕರ ವರ್ಗಾವಣೆ ನಿಯಂತ್ರಣ ಕಾಯ್ದೆ’ಗೆ ತಿದ್ದುಪಡಿ

ಶೇಕಡ 10ರಷ್ಟು ವರ್ಗಾವಣೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಶಿಕ್ಷಕರ ವರ್ಗಾವಣೆ ಕಾಯ್ದೆಯಲ್ಲಿಯೇ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರು ಮತ್ತು ಉಪನ್ಯಾಸಕರ ವರ್ಗಾವಣೆಗೂ ಅವಕಾಶ ಕಲ್ಪಿಸಲು ‘ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆ’ಗೆ ತಿದ್ದುಪಡಿ ತರಲಾಗುತ್ತಿದೆ.

ಈ ಉದ್ದೇಶದಿಂದ ವಿಧಾನಸಭೆಯಲ್ಲಿ ಗುರುವಾರ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ತಿದ್ದುಪಡಿ ಮಸೂದೆ ಮಂಡಿಸಿದರು. ಹೀಗಾಗಿ, ಇನ್ನು ಮುಂದೆ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು ಮತ್ತು ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಒಂದೇ ಕಾಯ್ದೆಯಡಿ ನಡೆಯಲಿದೆ.

ಉಪನ್ಯಾಸಕರಿಗೆ ಈವರೆಗೆ ಶೇ 8ರಷ್ಟು ವರ್ಗಾವಣೆಗೆ ಅವಕಾಶವಿತ್ತು. ಈ ತಿದ್ದುಪಡಿ ಕಾಯ್ದೆಯ ಮೂಲಕ ಅದನ್ನು ಶೇ 10ಕ್ಕೆ ಏರಿಸಲಾಗಿದೆ. ಪ್ರಾಂಶುಪಾಲರ ಅಥವಾ ಉಪನ್ಯಾಸಕರ ಆರಂಭಿಕ ನೇಮಕಾತಿ ಅಥವಾ ಬಡ್ತಿಯು ವಲಯ ‘ಸಿ’ಯಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು ಆಗಿರಬೇಕು. ಆದರೆ, ಪದವಿ ಪೂರ್ವ ಶಿಕ್ಷಣ ಇಲಾಖೆಗೆ ರಾಜ್ಯವು ಏಕ ಘಟಕ ಆಗಿರುವುದರಿಂದ ಉಪನ್ಯಾಸಕರಿಗೆ ವಲಯ ವರ್ಗಾವಣೆ ಅನ್ವಯಿಸುವುದಿಲ್ಲ.

ಉಪನ್ಯಾಸಕರು ವರ್ಗಾವಣೆಗೆ ಅರ್ಹವಾಗಿರುವ ಮತ್ತು 5 ವರ್ಷಗಳ ಬಾಕಿ ಉಳಿದ ಸೇವೆಯನ್ನು ಹೊಂದಿರುವ ಅಥವಾ ಕನಿಷ್ಠ 7 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರುವ ಷರತ್ತಿಗೆ ಅನ್ವಯಿಸಿ ಒಮ್ಮೆ ಮಾತ್ರ ವರ್ಗಾವಣೆ ಅವಕಾಶ ಕಲ್ಪಿಸಲಾಗಿದೆ.

ಹಾಲಿ ಕಾಯ್ದೆಯ ಪ್ರಕಾರ, ನಿರ್ದಿಷ್ಟ ಹುದ್ದೆಗಳಿಗೆ ಶಿಕ್ಷಕರನ್ನು ವರ್ಗಾವಣೆ ಮಾಡುವಾಗ ಪರೀಕ್ಷೆ ನಡೆಸಿ, ಮೆರಿಟ್ ಆಧರಿಸಿ ಕೌನ್ಸೆಲಿಂಗ್ ಮೂಲಕ ಮಾತ್ರ ಸ್ಥಳ ನಿಯುಕ್ತಿಗೊಳಿಸಬೇಕು. ಅಂಥ ಹುದ್ದೆಗಳಿಗೆ ಕನಿಷ್ಠ ಮತ್ತು ಗರಿಷ್ಠ ಅವಧಿ ಕ್ರಮವಾಗಿ ಮೂರು ಮತ್ತು ಐದು ವರ್ಷಗಳು. ಆದರೆ, ಈ ನಿಯಮ ಉಪನ್ಯಾಸಕರಿಗೆ ಅನ್ವಯಿಸುವುದಿಲ್ಲ ಎಂದೂ ಮಸೂದೆಯಲ್ಲಿದೆ.

2018–19ರಲ್ಲಿ ಕಡ್ಡಾಯ ವರ್ಗಾವಣೆಯಾಗಿ ಪದವಿಪೂರ್ವ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರಿಗೆ, ಖಾಲಿ ಹುದ್ದೆಗಳ ಲಭ್ಯತೆ ಆಧರಿಸಿ ಅವರು ಕಾರ್ಯನಿರ್ವಹಿಸುತ್ತಿರುವ ಜ್ಯೇಷ್ಠತಾ ಘಟಕದೊಳಗೆ ಒಂದು ಬಾರಿ ವರ್ಗಾವಣೆಯ ಸ್ಥಳ ಆಯ್ಕೆ ಮಾಡಲು ಕೂಡಾ ಅವಕಾಶ ನೀಡಲಾಗಿದೆ.

ವರ್ಗಾವಣೆಗೆ ಸಂಬಂಧಿಸಿದ ಕುಂದುಕೊರತೆಗಳ ಪರಿಶೀಲನೆಗೆ ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು, ಜಂಟಿ ನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಆಡಳಿತ) ಅವರನ್ನು ಒಳಗೊಂಡ ಸಮಿತಿಯ ಮುಂದೆ ಅಂಥ ಕುಂದುಕೊರತೆಗಳ ನಿವಾರಣೆಗೆ ಅರ್ಜಿ ಸಲ್ಲಿಸಬಹುದು ಎಂದೂ ಮಸೂದೆಯಲ್ಲಿ ತಿಳಿಸಲಾಗಿದೆ.



ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಗುರುವಾರ ವಿಧಾನ ಪರಿಷತ್ ಆವರಣದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್‌ ಆರ್ ಪಾಟೀಲ್ ಮಾತುಕತೆಯಲ್ಲಿ ತೊಡಗಿದ್ದರು. ಸಚಿವ ಮುರುಗೇಶ್ ನಿರಾಣಿ, ವಿಧಾನ ಪರಿಷತ್ ಸದಸ್ಯ ಧರ್ಮಸೇನ, ಯು.ಬಿ ವೆಂಕಟೇಶ್ ಮತ್ತು ಎಂ ನಾರಾಯಣಸ್ವಾಮಿ ಇದ್ದರು ಪ್ರಜಾವಾಣಿ ಚಿತ್ರ

ಮುಂದಿನ ವರ್ಷ ಕೆಲ ಶಾಲೆಗಳಲ್ಲಿ ಎನ್‌ಇಪಿ ಜಾರಿ: ನಾಗೇಶ್

ಬೆಳಗಾವಿ (ಸುವರ್ಣ ವಿಧಾನಸೌಧ): ಶಿಕ್ಷಕರಿಗೆ ಹಾಗೂ ಅಂಗನವಾಡಿ ನೌಕರರಿಗೆ ತರಬೇತಿ ನೀಡಿ ಮುಂದಿನ ವರ್ಷ ಆಯ್ದ ಶಾಲೆಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಜಾರಿ ಮಾಡಲಾಗುವುದು ಎಂದು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.

ವಿಧಾನಸಭೆಯಲ್ಲಿ ಗುರುವಾರ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಮಹಾಂತೇಶ ಕೌಜಲಗಿ ಪ್ರಶ್ನೆಗೆ ಉತ್ತರಿಸಿ, ’ಈ ನೀತಿಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಪ್ರಕ್ರಿಯೆ ಈಗಾಗಲೇ ಚಾಲ್ತಿಯಲ್ಲಿದ್ದು, ಅನುಷ್ಠಾನ ಕಾರ್ಯಪಡೆಯ ಶಿಫಾರಸಿನಂತೆ ಹಂತ ಹಂತವಾಗಿ ಸಂಪೂರ್ಣವಾಗಿ ಜಾರಿಗೊಳಿಸಲಾಗುವುದು‘ ಎಂದರು. ’ಆರಂಭಿಕ ಹಂತದಲ್ಲಿ ಪೂರ್ವ ಪ್ರಾಥಮಿಕ ಹಂತದಲ್ಲಿ ಜಾರಿಗೊಳಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಅಂಗನವಾಡಿ ನೌಕರರಿಗೆ ತರಬೇತಿ ನೀಡಲಾಗುತ್ತದೆ. ರಾಜ್ಯದಲ್ಲಿನ ಪ್ರಸ್ತುತ ಸ್ಥಿತಿ ಅವಲೋಕಿಸಲು ರಾಜ್ಯ ಶಿಕ್ಷಣ ಕ್ಷೇತ್ರದ ಸ್ಥಿತಿಗತಿ ವರದಿ ಸಿದ್ಧಪಡಿಸಲು ವಿವಿಧ ಸಮಿತಿಗಳನ್ನು ರಚಿಸಲಾಗಿದೆ. ಈ ವರದಿ ಸಿದ್ಧಗೊಂಡ ಬಳಿಕ ಪಠ್ಯಕ್ರಮ ಹಾಗೂ ಪಠ್ಯಸೂಚಿ ರಚಿಸಲಾಗುವುದು‘ ಎಂದು ಅವರು ತಿಳಿಸಿದರು.

ಐಐಟಿ ಮಾದರಿಯಲ್ಲಿ ಯುವಿಸಿಇ: ಮಸೂದೆ ಮಂಡನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ(ಸುವರ್ಣ ವಿಧಾನಸೌಧ): ಬೆಂಗಳೂರಿನ ವಿಶ್ವವಿದ್ಯಾಲಯ ಎಂಜಿನಿಯರಿಂಗ್ ಕಾಲೇಜು (ಯುವಿಸಿಇ) ಅನ್ನು ಪುಣೆಯ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಐಐಟಿ ಮಾದರಿಯಲ್ಲಿ ಸ್ವಾಯತ್ತ ಸಂಸ್ಥೆಯನ್ನಾಗಿ ಪರಿವರ್ತಿಸುವ ಉದ್ದೇಶದಿಂದ ವಿಧಾನಸಭೆಯಲ್ಲಿ ‘ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ, ಮಸೂದೆ 2021’ ಅನ್ನು ಮಂಡಿಸಲಾಯಿತು.

ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್.ಅಶ್ವತ್ಥನಾರಾಯಣ ಅವರು ಮಸೂದೆಯನ್ನು ಮಂಡಿಸಿದರು.

ಎಂಜಿನಿಯರಿಂಗ್ ಹಾಗೂ ಸಂಬಂಧಿತ ಜ್ಞಾನ ಕ್ಷೇತ್ರಗಳಲ್ಲಿ ಜಾಗತಿಕ ಉತ್ಕೃಷ್ಟ ಗುಣಮಟ್ಟಗಳನ್ನು ಹೊಂದಲು ಸಂಸ್ಥೆಯನ್ನು ಸಶಕ್ತಗೊಳಿಸುವ ಉದ್ದೇಶದಿಂದ ಸ್ವಾಯತ್ತತೆ ನೀಡಲು ಉದ್ದೇಶಿಸಲಾಗಿದೆ. ಅದಕ್ಕೆ ಪೂರಕವಾಗಿ ಸಂಸ್ಥೆಯ ಹೆಸರನ್ನು ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ ಬದಲಿಸಲು ಮಸೂದೆಯಲ್ಲಿ ಪ್ರಸ್ತಾವಿಸಲಾಗಿದೆ.

ಈ ಸಂಸ್ಥೆಯನ್ನು ರಾಷ್ಟ್ರ ಮಟ್ಟದ ಎಂಜಿನಿಯರಿಂಗ್ ಕಾಲೇಜುಗಳಲ್ಲೇ ಅಗ್ರಸ್ಥಾನಕ್ಕೆ ಮೇಲ್ದರ್ಜೆಗೇರಿಸಲು ಸರ್ಕಾರ ಎಸ್.ವಿ.ರಂಗನಾಥ್ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಿ, ವರದಿ ಪಡೆದ ಆಧಾರದಲ್ಲಿ ಮಸೂದೆ ರೂಪಿಸಲಾಗಿದೆ.

ಮಸೂದೆಯ ಪ್ರಮುಖ ಅಂಶಗಳು:

- ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ, ಸಂಬಂಧಿತ ಕಲೆ, ವಿಜ್ಞಾನ (ಭೌತಿಕ, ಸಾಮಾಜಿಕ ಮತ್ತು ಜೀವವಿಜ್ಞಾನ), ಅಂತರ್ ಶಿಸ್ತೀಯ ಅಧ್ಯಯನಗಳ ಎಲ್ಲಾ ಕ್ಷೇತ್ರದಲ್ಲಿ ಮತ್ತು ವಿಶ್ವವಿದ್ಯಾಲಯದ ಪ್ರಮುಖ ಹಿತಾಸಕ್ತಿಯ ಕ್ಷೇತ್ರಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದು.
- ಈ ಎಲ್ಲಾ ಕ್ಷೇತ್ರಗಳಲ್ಲಿ ಹೊಸ ಜ್ಞಾನ ಹಾಗೂ ಆವಿಷ್ಕಾರಕ್ಕೆ ಉತ್ತೇಜನ ನೀಡಲು ಹಾಗೂ ಜಾಗತಿಕ ನಾಯಕತ್ವವನ್ನು ಕಲ್ಪಿಸಲು ಸಂಶೋಧನೆ, ಪ್ರಕಟಣೆ, ಸಮಾಲೋಚನೆ ಹಾಗೂ ಸಲಹಾತ್ಮಕ ಚಟುವಟಿಕೆಗಳನ್ನು ನಡೆಸುವುದು.
- ರಾಷ್ಟ್ರ ಮತ್ತು ಅಂತರರಾಷ್ಟ್ರೀಯವಾಗಿ ಉತ್ತಮ ಪ್ರತಿಭೆಯುಳ್ಳ ವಿದ್ಯಾರ್ಥಿಗಳನ್ನು ಮತ್ತು ವ್ಯಾಸಂಗ ವಿಭಾಗದವರನ್ನು(ಫ್ಯಾಕಲ್ಟಿ) ಸೆಳೆಯುವುದು.
- ಉದ್ಯಮ ಹಾಗೂ ಇತರೆ ಶೈಕ್ಷಣಿಕ ಸಂಸ್ಥೆಗಳೊಂದಿಗೆ ಮತ್ತು ಅಂತರರಾಷ್ಟ್ರೀಯವಾಗಿ ಸಹಯೋಗದ ಮೂಲಕ ಕಾರ್ಯಕ್ರಮಗಳನ್ನು ರೂಪಿಸುವುದು.
- ಆನ್‌ಲೈನ್ ಮತ್ತು ಡಿಜಿಟಲ್ ಶಿಕ್ಷಣಕ್ಕೆ ಒತ್ತು ನೀಡುವುದು.
- ಎಂಜಿನಿಯರಿಂಗ್, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಂಬಂಧಿತ ಅಧ್ಯಯನ ಕ್ಷೇತ್ರಗಳಿಗೆ ಕ್ಯಾಂಪಸ್ ಮತ್ತು ಕೇಂದ್ರಗಳನ್ನು ಸ್ಥಾಪಿಸುವುದು.
- ಕ್ರಿಯಾಶೀಲ ಜಾಗತಿಕ ಪದ್ಧತಿಗಳಿಗೆ ಸರಿ ಹೊಂದುವ ಆವಿಷ್ಕಾರ ಎಂಜಿನಿಯರಿಂಗ್, ವಿಜ್ಞಾನ ಮತ್ತು ತಂತ್ರಜ್ಞಾನ ಶಿಕ್ಷಣ ಕಲೆ ರೂಪಿಸುವುದು.
- ನವನವೀನ ಮಾದರಿಯ ವಿದ್ಯಾರ್ಥಿ, ವ್ಯಾಸಂಗ ವಿಭಾಗ,ಪಾಲುದಾರ ಒಪ್ಪಂದವನ್ನು ರೂಪಿಸುವುದು ಮತ್ತು ಅವಶ್ಯಕವಾದಂತೆ ಮತ್ತು ಅವಶ್ಯಕವಾದ ನವನವೀನ ಜ್ಞಾನ ಕ್ಷೇತ್ರಗಳನ್ನು ಅನ್ವೇಷಿಸುವುದು.

ಆಯುಷ್ ವಿ.ವಿ ಸ್ಥಾಪನೆಗೆ ಮಸೂದೆ

ಶಿವಮೊಗ್ಗದಲ್ಲಿ ಆಯುಷ್ ವಿಶ್ವವಿದ್ಯಾಲಯ ಸ್ಥಾಪನೆಗೆ ಅನುವು ಮಾಡಿಕೊಡುವ ಕರ್ನಾಟಕ ರಾಜ್ಯ ಆಯುಷ್ ವಿಶ್ವವಿದ್ಯಾಲಯ ಮಸೂದೆ–2021 ಅನ್ನು ವಿಧಾನಸಭೆಯಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ವಿಧಾನಸಭೆಯಲ್ಲಿ ಗುರುವಾರ ಮಂಡಿಸಿದರು. ಶಿವಮೊಗ್ಗದ ಆಯುಷ್ ಕಾಲೇಜಿನಲ್ಲಿ ಇರುವ ಸೌಕರ್ಯಗಳನ್ನು ಬಳಸಿಕೊಳ್ಳುವುದರಿಂದ ₹20 ಕೋಟಿ ಅಂದಾಜು ವೆಚ್ಚ ಉಂಟಾಗುತ್ತದೆ ಹಾಗೂ ಈ ಹಂತದಲ್ಲಿ ಯಾವುದೇ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ ಎಂದು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ಕಾಂಗ್ರೆಸ್ ಶಾಸಕರಿಂದ ಟ್ರ್ಯಾಕ್ಟರ್ ರ‍್ಯಾಲಿ

ಒಂದನೇ ಪುಟದಿಂದ

‘ಟ್ರ್ಯಾಕ್ಟರ್‌ಗೆ ಪಾಸ್ ಬೇಕು’ ಎಂಬ ಪೊಲೀಸರ ಮಾತಿಗೆ, ‘ನಾವು ಅಧಿವೇಶನಕ್ಕೆ ಹಾಜರಾಗಲು ಸರ್ಕಾರ ತೊಂದರೆ ನೀಡುತ್ತಿದೆ. ಟ್ರ್ಯಾಕ್ಟರ್‌ನಲ್ಲಿ ಹೋಗುತ್ತೀವೋ, ಬೇರೆ ವಾಹನದಲ್ಲೋ? ಕೇಳಲು ಅಥವಾ ತಡೆಯಲು ಇವರ‍್ಯಾರು? ವಿಧಾನಮಂಡಲ ಪ್ರವೇಶಿಸಲು ಬೇಕಾದ ಪಾಸ್ ಅನ್ನು ಜನರು ಕೊಟ್ಟಿದ್ದಾರೆ’ ಎಂದು ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರಕ್ಕೆ ಭಯ:

‘ವಿರೋಧ ಪಕ್ಷದವರನ್ನು ಹೊರಗಿಟ್ಟು ಮಸೂದೆಗಳನ್ನು ಪಾಸ್ ಮಾಡಿಕೊಳ್ಳಲು ಸರ್ಕಾರ ಹುನ್ನಾರ ನಡೆಸಿದೆ. ಹೀಗಾಗಿ ನಮ್ಮನ್ನು ತಡೆದಿದ್ದಾರೆ. ತಮ್ಮ ಭ್ರಷ್ಟಾಚಾರವನ್ನು ಮುಚ್ಚಿಟ್ಟುಕೊಳ್ಳಲು ವ್ಯವಸ್ಥಿತವಾದ ಷಡ್ಯಂತ್ರ ನಡೆಸುತ್ತಿದ್ದಾರೆ. ವಿರೋಧ ಪಕ್ಷದವರು ಕಲಾಪದಲ್ಲಿ ಪಾಲ್ಗೊಂಡರೆ, ಸರ್ಕಾರದ ಭ್ರಷ್ಟಾಚಾರವನ್ನು ಬಿಚ್ಚಿಡುತ್ತಾರೆ ಎಂದು ಸರ್ಕಾರ ಹೆದರುತ್ತಿದೆ’ ಎಂದು ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ವಾಗ್ದಾಳಿ ನಡೆಸಿದರು. ತಾಸಿನವರೆಗೂ ಗೇಟ್‌ನಲ್ಲೇ ಪ್ರತಿಭಟನೆ ನಡೆಸಿದರು.

ಈ ನಡುವೆ, ಕಲಾಪದಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್ ಶಾಸಕರಾದ ತನ್ವೀರ್ ಸೇಠ್, ಡಾ.ಅಂಜಲಿ ನಿಂಬಾಳ್ಕರ್, ಮೊದಲಾದವರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕಾಂಗ್ರೆಸ್‌ನ ಹಲವು ಶಾಸಕರು ಬಾರದಿರುವುದರಿಂದ 10 ನಿಮಿಷಗಳವರೆಗೆ ಕಲಾಪ ಮುಂದೂಡಿರುವುದಾಗಿ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರಕಟಿಸಿದರು. ಬಳಿಕ ಅವರ ಸೂಚನೆ ಮೇರೆಗೆ ಪೊಲೀಸರು ಟ್ರ್ಯಾಕ್ಟರ್ ಪ್ರವೇಶಕ್ಕೆ ಅವಕಾಶ ನೀಡಿದರು.

ಈ ರ‍್ಯಾಲಿಯಿಂದಾಗಿ ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ಸಂಚಾರಕ್ಕೆ ಅಡ್ಡಿಯಾಯಿತು.

ತನಿಖೆಗೆ ಸಿದ್ದರಾಮಯ್ಯ ಆಗ್ರಹ

ಬೆಳಗಾವಿ: ‘ಶೇ 40ರಷ್ಟು ಲಂಚ ಬೇಡಿಕೆ ವಿಚಾರವಾಗಿ ಗುತ್ತಿಗೆದಾರರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು ಅಥವಾ ಸದನ ಸಮಿತಿ ರಚಿಸಬೇಕು’ ಎಂದು ಸಿದ್ದರಾಮಯ್ಯ ಆಗ್ರಹಿಸಿದರು.

‘ನಮ್ಮದು (ಕಾಂಗ್ರೆಸ್) 10 ಪರ್ಸೆಂಟ್ ಸರ್ಕಾರ ಎಂದು ಮೋದಿ ದೂರಿದ್ದರು. ಅದನ್ನೂ ಸೇರಿಸಿ ಮೋದಿ ತನಿಖೆ ಮಾಡಿಸಲಿ’ ಎಂದು ಸವಾಲು ಹಾಕಿದ ಸಿದ್ದರಾಮಯ್ಯ, ‘ಟ್ರ್ಯಾಕ್ಟರ್ ಪ್ರತಿಭಟನೆ ಮೂಲಕ ಸರ್ಕಾರದ ಮತ್ತು ಸಾರ್ವಜನಿಕರ ಗಮನಸೆಳೆದಿದ್ದೇವೆ. ರಾಜ್ಯ ಸರ್ಕಾರ ಭ್ರಷ್ಟಾಚಾರದಿಂದ ತುಂಬಿ ಹೋಗಿದೆ. ಅದಕ್ಕೆ ಪೂರಕವಾಗಿ ಗುತ್ತಿಗೆದಾರರು ಆರೋಪ ಮಾಡಿದ್ದಾರೆ’ ಎಂದರು.

‘ರಾಜ್ಯದಲ್ಲಿ ಎಲ್ಲ ಅಭಿವೃದ್ಧಿ ಕೆಲಸಗಳೂ ಸ್ಥಗಿತಗೊಂಡಿವೆ. ನೆರೆ ಮತ್ತು ಅತಿವೃಷ್ಟಿ ಸಂತ್ರಸ್ತರಿಗೆ ಪರಿಹಾರ ನೀಡಿಲ್ಲ. ಕೇಂದ್ರದಿಂದ ಒಂದು ರೂಪಾಯಿಯೂ ಬಂದಿಲ್ಲ. ಕೋವಿಡ್‌ನಿಂದ ಮೃತಪಟ್ಟವರಿಗೆ, ಪ್ರವಾಹದಿಂದ ಮನೆ ಕಳೆದುಕೊಂಡವರಿಗೆ ಪರಿಹಾರ ಕೊಟ್ಟಿಲ್ಲ’ ಎಂದು ದೂರಿದ ಅವರು, ‘ಬೆಳೆ ಪರಿಹಾರ ಮೊತ್ತವನ್ನು 3 ಪಟ್ಟು ಹೆಚ್ಚಿಸಬೇಕು’ ಎಂದು ಒತ್ತಾಯಿಸಿದರು.

‘ಕೇಂದ್ರ ಸರ್ಕಾರದ ಪರಿಹಾರಕ್ಕೆ ಕಾಯದೆ ನೀವೇ ಕೊಡಿ ಎಂದು ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ’ ಎಂದರು.

‘ಮೇಕೆದಾಟು ಯೋಜನಾ ವರದಿ ಕೇಂದ್ರಕ್ಕೆ ಸಲ್ಲಿಕೆ’

ಬೆಳಗಾವಿ (ಸುವರ್ಣ ವಿಧಾನಸೌಧ): ‘ಮೇಕೆದಾಟು ಯೋಜನೆಯ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗಿದ್ದು, ಅದು ಈಗ ಕೇಂದ್ರ ಸರ್ಕಾರದ ವಿವಿಧ ನಿರ್ದೇಶನಾಲಯಗಳಲ್ಲಿ ಪರಿಶೀಲನೆಯಲ್ಲಿದೆ’ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದರು.

ಗುರುವಾರ ವಿಧಾನಪರಿಷತ್ತಿನಲ್ಲಿ ಬಿಜೆಪಿಯ ತೇಜಸ್ವಿನಿಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಮೇಕೆದಾಟು ಸಮತೋಲನ ಜಲಾಶಯ ಹಾಗೂ ಕುಡಿಯುವ ನೀರಿನ ಯೋಜನೆಯನ್ನು ಕಾವೇರಿ ನದಿಗೆ ಅಡ್ಡಲಾಗಿ ಅರ್ಕಾವತಿ ಹಾಗೂ ಕಾವೇರಿ ನದಿಯ ಸಂಗಮದ ಸಮೀಪದಲ್ಲಿ ನಿರ್ಮಿಸಿ, 67.16 ಟಿಎಂಸಿ ಅಡಿ ನೀರು ಶೇಖರಿಸಲು ₹ 9 ಸಾವಿರ ಕೋಟಿ ಅಂದಾಜು ವೆಚ್ಚದ ಡಿಪಿಆರ್ ತಯಾರಿಸಿ ಕೇಂದ್ರಕ್ಕೆ ಸಲ್ಲಿಸಲಾಗಿದೆ’ ಎಂದರು. ‘ಸುಪ್ರೀಂ ಕೋರ್ಟ್‌ನಿಂದ ಈ ಯೋಜನೆಯ ಮೂಲಕ ಹಂಚಿಕೆಯಾಗಿರುವ 4.75 ಟಿಎಂಸಿ ಅಡಿ ನೀರನ್ನು ಬೆಂಗಳೂರು ನಗರವೂ ಸೇರಿದಂತೆ ಕುಡಿಯುವ ಹಾಗೂ ಗೃಹೋಪಯೋಗಿ ಉದ್ದೇಶಕ್ಕೆ ಬಳಸಲು ಉದ್ದೇಶಿಸಲಾಗಿದೆ. 400 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸಲು ಕೂಡಾ ಈ ಯೋಜನೆ ಕೈಗೆತ್ತಿಕೊಳ್ಳಲಾಗಿದೆ’ ಎಂದರು.

ವಿದ್ಯುತ್ ಕೇಂದ್ರಗಳ ಆಧುನೀಕರಣಕ್ಕೆ ₹8,298 ಕೋಟಿ

ಬೆಳಗಾವಿ (ಸುವರ್ಣ ವಿಧಾನಸೌಧ): ‘ವಿದ್ಯುತ್ ಪ್ರಸರಣ ಕೇಂದ್ರಗಳ ಆಧುನೀಕರಣ ಹಾಗೂ ನಷ್ಟ ಕಡಿಮೆ ಮಾಡಲು ₹8,298 ಕೋಟಿ ಮೊತ್ತದ ಯೋಜನೆಗೆ ಕೇಂದ್ರ ಸರ್ಕಾರ ತಾತ್ವಿಕ ಒಪ್ಪಿಗೆ ನೀಡಿದೆ‘ ಎಂದು ಇಂಧನ ಸಚಿವ ವಿ.ಸುನೀಲ್ ಕುಮಾರ್ ತಿಳಿಸಿದರು.

ವಿಧಾನಸಭೆಯಲ್ಲಿ ಗುರುವಾರ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಡಾ. ಅವಿನಾಶ್ ಜಾಧವ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ’ಕೇಂದ್ರ ಸರ್ಕಾರದ ಜತೆಗೆ ಸಭೆ ಶುಕ್ರವಾರ ನಿಗದಿಯಾಗಿದ್ದು, ರಾಜ್ಯ ಹಿರಿಯ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಈ ಸಭೆಯಲ್ಲಿ ಯೋಜನೆಗೆ ಒಪ್ಪಿಗೆ ಸಿಗುವ ನಿರೀಕ್ಷೆ ಇದೆ. ಜನವರಿ ಅಥವಾ ಫೆಬ್ರುವರಿಯಲ್ಲಿ ಟೆಂಡರ್ ಕರೆಯಲಾಗುವುದು‘ ಎಂದರು. ಜೆಸ್ಕಾಂ ಹಾಗೂ ಹೆಸ್ಕಾಂ ವ್ಯಾಪ್ತಿಯಲ್ಲಿ ₹3,089 ಕೋಟಿ ವೆಚ್ಚದಲ್ಲಿ ವಿದ್ಯುತ್ ಪ್ರಸರಣ ಕೇಂದ್ರಗಳ ಆಧುನೀಕರಣ ಮಾಡಲಾಗುತ್ತದೆ. 33 ಕೆ.ವಿ.ಯ 42 ವಿದ್ಯುತ್ ಕೇಂದ್ರಗಳನ್ನು ಹಾಗೂ 66 ಕೆ.ವಿ.ಯ 13 ಕೇಂದ್ರಗಳನ್ನು ಬಗೆಹರಿಸಲಾಗುವುದು. ಆಗ ವಿದ್ಯುತ್ ಕೇಂದ್ರದ ಬಹುತೇಕ ಸಮಸ್ಯೆ ಬಗೆಹರಿಯಲಿದೆ ಎಂದು ಅವರು ಹೇಳಿದರು.

‘ಬಿಜೆಪಿಯ ಸಂಸ್ಕೃತಿ ತೋರ್ಪಡಿಕೆಗಷ್ಟೇ’

ಪಣಜಿ: ‘ಬಿಜೆಪಿಯಲ್ಲಿ ಸಂಸ್ಕೃತಿ ಎಂಬುದು ಕೇವಲ ತೋರ್ಪಡಿಕೆ ಮತ್ತು ಮತಗಳನ್ನು ಸೆಳೆಯಲಷ್ಟೇ ಉಳಿದುಕೊಂಡಿದೆ’ ಎಂದು ಗೋವಾದಲ್ಲಿ ಕಾಂಗ್ರೆಸ್ ಪಕ್ಷದ ಉಸ್ತುವಾರಿಯಾಗಿರುವ ದಿನೇಶ್ ಗುಂಡೂರಾವ್ ಟೀಕಿಸಿದ್ದಾರೆ.

ಮಹಿಳೆಗೆ ಲೈಂಗಿಕ ದೌರ್ಜನ್ಯ ನೀಡಿದ್ದ ಆರೋಪದಡಿ ಗೋವಾದ ನಗರಾಭಿವೃದ್ಧಿ ಸಚಿವ ಮಿಲಿಂದ್ ನಾಯಕ್ ರಾಜೀನಾಮೆ ನೀಡಿದ ಘಟನೆ ಉಲ್ಲೇಖಿಸಿ ಪ್ರತಿಕ್ರಿಯಿಸಿದ ಅವರು, ಕರ್ನಾಟಕದಲ್ಲಿಯೂ ಆ ಪಕ್ಷದ ಕೆಲ ಮುಖಂಡರು ವಿಧಾನಸಭೆಯಲ್ಲಿಯೇ ನೀಲಿಚಿತ್ರ ನೋಡಿ ಸಿಕ್ಕಿಬಿದ್ದಿದ್ದರು ಎಂದರು.

‘2012ರಲ್ಲಿ ಕರ್ನಾಟಕದಲ್ಲಿ ಬಿಜೆಪಿಯ ಹಲವರು ನೀಲಿಚಿತ್ರ ವೀಕ್ಷಿಸಿ ಸಿಕ್ಕಿ ಬಿದ್ದಿದ್ದರು. ಆ ವಿಡಿಯೊಗಳು ಬಹಿರಂಗ ಆಗಿದ್ದವು. ಎಲ್ಲರೂ ಶುದ್ಧರು ಎಂದು ನಾನು ಹೇಳುವುದಿಲ್ಲ. ಪ್ರತಿಯೊಬ್ಬರಿಗೂ ಒಂದು ಲೋಪ ಇರುತ್ತದೆ. ಆದರೆ, ಒಂದು ರಾಜಕೀಯ ಪಕ್ಷವಾಗಿ ಬಿಜೆಪಿಯು ಇಂತಹವರನ್ನೇ ರಕ್ಷಿಸಲಿದೆ. ಅವರು ಇನ್ನಷ್ಟು ಬಲಗೊಳ್ಳಲು ನೆರವಾಗುತ್ತದೆ. ಇದು, ಬಿಜೆಪಿಯ ಸಮಸ್ಯೆಯೂ ಹೌದು‘ ಎಂದು ದಿನೇಶ್ ಪ್ರತಿಕ್ರಿಯಿಸಿದರು.

2012ರಲ್ಲಿ ಬಿಜೆಪಿಯ ಲಕ್ಷ್ಮಣ ಸವದಿ, ಸಿ.ಸಿ.ಪಾಟೀಲ ಮತ್ತು ಕೃಷ್ಣ ಪಾಲೇಮಾರ್ ವಿಧಾನಸಭೆಯಲ್ಲಿ ನೀಲಿಚಿತ್ರ ನೋಡುತ್ತಿದ್ದಾಗ ಸಿಕ್ಕಿಬಿದ್ದರು. ಇದು, ವಿವಾದಕ್ಕೆ ಕಾರಣವಾಗಿತ್ತು. 2019ರಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದಾಗ ಸವದಿ (ಈಗ ಮಾಜಿ) ಮತ್ತು ಸಿ.ಸಿ.ಪಾಟೀಲ ಅವರು ಸಚಿವರಾಗಿ ಅಧಿಕಾರ ಸ್ವೀಕರಿಸಿದ್ದರು.

ಇನ್ನೊಂದೆಡೆ, ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ‘ತಮ್ಮ ವಿರುದ್ಧದ ಆರೋಪ ಕುರಿತಂತೆ ಮುಕ್ತ, ನ್ಯಾಯಸಮ್ಮತ ವಿಚಾರಣೆಗೆ ನೆರವಾಗಲು ಸಚಿವರು ರಾಜೀನಾಮೆ ನೀಡಿದ್ದಾರೆ’ ಎಂದು ಸಮರ್ಥಿಸಿಕೊಂಡಿದ್ದರು. ಇದಕ್ಕೆ ವ್ಯಂಗ್ಯವಾಡಿದ ದಿನೇಶ್ ಗುಂಡೂರಾವ್, ‘ಸರ್ಕಾರ ಮುಕ್ತ ಮತ್ತು ನ್ಯಾಯಸಮ್ಮತ ವಿಚಾರಣೆ ನಡೆಸುತ್ತಿದೆಯೇ? ಇಂತಹ ಎಷ್ಟೊಂದು ಪ್ರಕರಣಗಳಿವೆ. ಎಷ್ಟು ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ’ ಎಂದು ಪ್ರಶ್ನಿಸಿದರು.

ಸರ್ಕಾರದ ಅಂದಾಜಿಗಿಂತ ಹೆಚ್ಚು ಹಾನಿ: ಕೃಷ್ಣಬೈರೇಗೌಡ

ಎಲ್ಲ ಬೆಳೆಗಳಿಗೂ ಕಡ್ಡಾಯ ವಿಮೆ: ರವಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಳಗಾವಿ(ಸುವರ್ಣ ವಿಧಾನಸೌಧ): ಎಲ್ಲ ಬೆಳೆಗಳಿಗೂ ವಿಮೆ ಕಡ್ಡಾಯ ಮಾಡುವುದರ ಜತೆಗೆ ಅದರ ವಿಮಾ ಕಂತುಗಳನ್ನೂ ಸರ್ಕಾರವೇ ಪಾವತಿಸಬೇಕು ಎಂದು ಬಿಜೆಪಿ ಶಾಸಕ ಸಿ.ಟಿ.ರವಿ ಸರ್ಕಾರವನ್ನು ಆಗ್ರಹಿಸಿದರು.

ವಿಧಾನಸಭೆಯಲ್ಲಿ ಗುರುವಾರ ಅತಿವೃಷ್ಟಿಯ ಕುರಿತು ಮಾತನಾಡಿದ ಅವರು, ರಾಜ್ಯದಲ್ಲಿ ಮಳೆ ಮತ್ತು ಪ್ರವಾಹದಿಂದ ರೈತರ ಬದುಕು ಗಾಳಿಗೆ ಒಡ್ಡಿದ ದೀಪದಂತೆ ಆಗಿದೆ. ಮಲೆನಾಡು ಭಾಗದಲ್ಲಿ ಕಾಫಿ, ಮೆಣಸು, ಅಡಿಕೆ, ಏಲಕ್ಕಿ ಬೆಳೆಗಳು ನಾಶವಾಗಿವೆ ಎಂದು ಸರ್ಕಾರದ ಗಮನ ಸೆಳೆದರು.

ಕಾಫಿ ಬೆಳೆಗಾರರಿಗೆ ಎನ್‌ಡಿಆರ್‌ಎಫ್ ಅಡಿ ಎರಡು ಹೆಕ್ಟೇರ್‌ಗೆ ₹18 ಸಾವಿರ ಪರಿಹಾರ ನೀಡಲಾಗುತ್ತದೆ. ಇದು ಏನೇನೂ ಸಾಲದು. ಆದ್ದರಿಂದ ಕಾಫಿಯನ್ನು ಫಸಲ್ ಭಿಮಾ ಯೋಜನೆ ವ್ಯಾಪ್ತಿ ಅಡಿ ತರಬೇಕು. ಮತ್ತೊಂದು ಕಡೆ ಟೊಮೇಟೋ ಬೆಳೆದವರೂ ಕಣ್ಣೀರು ಹಾಕುವ ಸ್ಥಿತಿ ಬಂದಿದೆ. ಒಂದು ಕಿ.ಲೋ ಟೊಮೇಟೊಗೆ ₹104 ಕೊಟ್ಟು ಗ್ರಾಹಕ ಖರೀದಿಸುತ್ತಾನೆ. ಆದರೆ ರೈತನಿಗೆ ಕೇವಲ ₹6 ಸಿಗುತ್ತದೆ. ಉಳಿದ ₹98 ಎಲ್ಲಿ ಹೋಗುತ್ತಿದೆ ಎಂದು ರವಿ ಪ್ರಶ್ನಿಸಿದರು.

ರಾಜ್ಯದಲ್ಲಿ ಬೆಳೆ ನೀತಿಯನ್ನು ರೂಪಿಸುವುದರ ಜತೆಗೆ ಬೆಳೆ ನೀತಿಯನ್ನೂ ಜಾರಿಗೆ ತರಬೇಕು ಎಂದೂ ಅವರು ಸಲಹೆ ನೀಡಿದರು.

ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ ಮಾತನಾಡಿ, ಕೋಲಾರ ಭಾಗದಲ್ಲಿ ಮಳೆಯಿಂದ ಇದೇ ಮೊದಲ ಬಾರಿಗೆ ಎಷ್ಟೋ ಕೆರೆಗಳು ತುಂಬಿವೆ. ಬಹಳಷ್ಟು ಕರೆಗಳ ದಂಡೆಗಳು ಒಡೆದು ಹೋಗಿವೆ. ಮತ್ತೊಂದೆಡೆ, ಹೊಲಗಳಲ್ಲಿ ನೀರು ನಿಂತು ಬೆಳೆಗಳು ಹಾಳಾಗಿ ಹೋಗಿವೆ. ಆದರೆ ಬೆಳೆ ನಷ್ಟದ ಪ್ರಮಾಣವನ್ನು ಸರಿಯಾಗಿ ಅಂದಾಜು ಮಾಡುವ ಕೆಲಸ ಆಗುತ್ತಿಲ್ಲ ಎಂದು ಹೇಳಿದರು.

ಸರ್ಕಾರ ಮಾಡಿರುವ ಅಂದಾಜಿಗಿಂತ ಹೆಚ್ಚು ಪ್ರಮಾಣದಲ್ಲಿ ಹಾನಿ ಆಗಿದೆ. ಆದ್ದರಿಂದ ಸರ್ಕಾರ ಮತ್ತೊಮ್ಮೆ ಸರಿಯಾದ ರೀತಿಯಲ್ಲಿ ಬೆಳೆ ಹಾನಿ ಸಮೀಕ್ಷೆ ನಡೆಸಬೇಕು ಎಂದು ಅವರು ಆಗ್ರಹಿಸಿದರು.

ಚರ್ಚೆಯಲ್ಲಿ ಬಿಜೆಪಿಯ ಸಿದ್ದು ಸವದಿ, ಗೂಳಿಹಟ್ಟಿ ಶೇಖರ್, ಕಾಂಗ್ರೆಸ್‌ನ ರೂಪಕಲಾ, ನಂಜೇಗೌಡ, ಈಶ್ವರ ಖಂಡ್ರೆ, ಅಜಯ್‌ಸಿಂಗ್, ಜೆಡಿಎಸ್‌ನ ಸುರೇಶ್ ಗೌಡ, ಕೆ.ಮಹದೇವ್, ಅಶ್ವಿನ್, ಪಕ್ಷೇತರ ಸದಸ್ಯ ಶರತ್ ಬಚ್ಚೇಗೌಡ ಮತ್ತು ಇತರ ಸದಸ್ಯರು ಮಾತನಾಡಿದರು.

‘ಗೋಮಾಂಸ ರಫ್ತು: ಪರವಾನಗಿ ರದ್ದು ಮಾಡಿ’

ರಾಜ್ಯದಿಂದ ಗೋಮಾಂಸ ರಫ್ತು ಮಾಡುವ ಕಂಪನಿಗಳ ಪರವಾನಗಿ ರದ್ದು ಮಾಡಿ ಎಂದು ಕಾಂಗ್ರೆಸ್‌ನ ಯು.ಟಿ.ಖಾದರ್ ಸರ್ಕಾರವನ್ನು ಆಗ್ರಹಿಸಿದರು.

‘ಎಲ್ಲಿಯವರೆಗೆ ಗೋಮಾಂಸ ರಫ್ತುದಾರರ ಲೈಸೆನ್ಸ್ ರದ್ದು ಮಾಡುವುದಿಲ್ಲವೋ ಅಲ್ಲಿಯವರೆಗೆ, ಗೋಕಳ್ಳರು ಹಸುಗಳನ್ನು ಕದ್ದು ಅವರಿಗೆ ಪೂರೈಕೆ ಮಾಡುವುದು ನಿಲ್ಲುವುದಿಲ್ಲ’ ಎಂದರು.

ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೆ ತಂದ ಬಳಿಕ, ಎಲ್ಲೂ ಸರಿಯಾದ ಗೋಶಾಲೆಗಳನ್ನು ತೆರೆದಿಲ್ಲ. ಸರ್ಕಾರದ ಕೈಯಲ್ಲಿ ಆ ಕೆಲಸ ಸಾಧ್ಯವಾಗದೇ ಇದ್ದರೆ, ಖಾಸಗಿಯಾಗಿ ಗೋಶಾಲೆ ನಡೆಸುವವರಿಗೆ ಮೂರು ಪಟ್ಟು ಹೆಚ್ಚಿನ ಅನುದಾನವನ್ನಾದರೂ ನೀಡಿ ಎಂದು ಒತ್ತಾಯಿಸಿದರು.

ದಕ್ಷಿಣ ಕನ್ನಡದಲ್ಲಿ ಮಳೆಯಿಂದಾಗಿ ಭತ್ತ, ತೆಂಗು, ಅಡಿಕೆ ಬೆಳೆಗಳು ನಾಶವಾಗಿವೆ. ಅಡಿಕೆ ಕೊಳೆ ರೋಗಕ್ಕೆ ಔಷಧವನ್ನು ಕಂಡು ಹಿಡಿಯಬೇಕು. ಮಳೆಗಾಲದಲ್ಲಿ ನೇತ್ರಾವತಿ ನದಿಗೆ ಸಮುದ್ರದ ಉಪ್ಪು ನೀರು ನುಗ್ಗಿ ಸುತ್ತಮುತ್ತಲಿನ ಕೃಷಿ ಭೂಮಿಯಲ್ಲಿ ಸಾಗುವಳಿ ನಡೆಸಲು ಸಾಧ್ಯವಾಗುತ್ತಿಲ್ಲ. ಇದಕ್ಕೊಂದು ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಎಂದು ಖಾದರ್ ಒತ್ತಾಯಿಸಿದರು.

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆ: ಬ್ರಾಹ್ಮಣ ಸಮುದಾಯವನ್ನು ಒಲೈಸಲು ಬಿಜೆಪಿ ತಂತ್ರ

ಮಿಶ್ರಾ ಸಚಿವ ಸ್ಥಾನಕ್ಕೆ ಜಾತಿಯ ರಕ್ಷಣೆ

• ಸಂಜಯ್ ಪಾಂಡೆ

ಪ್ರಜಾ ಮತ ಜನತಂತ್ರದ ಹಬ್ಬ 2021

ಲಖನೌ: ಉತ್ತರ ಪ್ರದೇಶದ ಲಖಿಂಪುರ ಖೇರಿಯಲ್ಲಿ ನಡೆದ ರೈತರ ಹತ್ಯೆ ಪ್ರಕರಣದಲ್ಲಿ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಮಗ ಸಿಲುಕಿರುವ ಕಾರಣ ವಿಪಕ್ಷಗಳು ಅಜಯ್ ಅವರ ರಾಜೀನಾಮೆ ಪಡೆಯುವಂತೆ ಸರ್ಕಾರವನ್ನು ಆಗ್ರಹಿಸುತ್ತಿವೆ. ಆದರೂ ಅಜಯ್ ಮಿಶ್ರಾ ಅವರು ಸಚಿವರಾಗಿಯೇ ಮುಂದುವರಿದಿದ್ದಾರೆ. ಅವರ ಜಾತಿಯೇ ಅವರ ಸ್ಥಾನವನ್ನು ಉಳಿಸಿದೆ.



ಅಜಯ್

ಅದಲ್ಲದೇ, ಮಿಶ್ರಾ ಈ ವರ್ಷ ಜುಲೈನಲ್ಲಿ ಎರಡನೇ ಬಾರಿ ಕೇಂದ್ರ ಸಂಪುಟ ವಿಸ್ತರಣೆ ನಡೆದ ವೇಳೆ ಅಜಯ್ ಮಿಶ್ರಾ ಅವರು ಸಚಿವ ಸ್ಥಾನ ಪಡೆದರು. ಅವರು 'ಬ್ರಾಹ್ಮಣ' ಜಾತಿಯವರು ಎಂಬುದೇ ಸಚಿವ ಸ್ಥಾನಕ್ಕೆ ಅವರ ಆಯ್ಕೆಯ ಹಿಂದೆ ಕೆಲಸ ಮಾಡಿದೆ.

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆ ಹತ್ತಿರ ಆಗುತ್ತಿದೆ. ಉತ್ತರ ಪ್ರದೇಶದ ಚುನಾವಣೆಯಲ್ಲಿ ಹಲವು ಕ್ಷೇತ್ರಗಳಲ್ಲಿ ಬ್ರಾಹ್ಮಣ ಸಮುದಾಯ ನಿರ್ಣಾಯಕ. ಬಿಜೆಪಿಯ ಬಗ್ಗೆ ಉತ್ತರ ಪ್ರದೇಶದ ಬ್ರಾಹ್ಮಣರಲ್ಲಿ ಇದ್ದ ಅಸಮಾಧಾನವನ್ನು ತಣ್ಣಗಾಗಿಸುವ ಸಲುವಾಗಿಯೇ 'ಬ್ರಾಹ್ಮಣ' ಸಮುದಾಯದವರಾದ ಮಿಶ್ರಾ ಅವರಿಗೆ ಕೇಂದ್ರ ಸಂಪುಟದಲ್ಲಿ ಸ್ಥಾನ ನೀಡಲಾಯಿತು.

ಲಖಿಂಪುರ ಖೇರಿಯಲ್ಲಿ ಮಿಶ್ರಾ ಅವರನ್ನು 'ಮಹಾರಾಜ' ಎಂದು ಕರೆಯಲಾಗುತ್ತದೆ. ಶಕ್ತಿಶಾಲಿ ವ್ಯಕ್ತಿ ಎಂದೂ ಪರಿಗಣಿಸಲಾಗುತ್ತದೆ. ಅವರ ರಾಜೀನಾಮೆ ಪಡೆಯುವುದರಿಂದ ಬ್ರಾಹ್ಮಣ ಸಮುದಾಯದಲ್ಲಿ ಅಸಮಾಧಾನ ಉಂಟಾಗುತ್ತದೆ. ಬಿಜೆಪಿಯ ಪ್ರಮುಖ ಮತ ಬ್ಯಾಂಕ್ ಆಗಿರುವ ಬ್ರಾಹ್ಮಣರನ್ನು ಎದುರು ಹಾಕಿಕೊಳ್ಳುವುದರಿಂದ ಬಿಜೆಪಿಗೆ ನಷ್ಟ ಉಂಟಾಗುತ್ತದೆ.

'ವಿಧಾನಸಭೆ ಚುನಾವಣೆ ಸನ್ನಿಹಿತವಾಗುತ್ತಿರುವುದರಿಂದ ಬ್ರಾಹ್ಮಣರನ್ನು ಕೆರಳಿಸುವಂತಹ ಯಾವ ಕೆಲಸವನ್ನೂ ನಮಗೆ ಮಾಡಲಾಗುವುದಿಲ್ಲ. ಅದರಿಂದ ನಮಗೆ ನಷ್ಟವಾಗಬಹುದು. ಮಿಶ್ರಾ ವಿರುದ್ಧ ವಿಪಕ್ಷಗಳು ನಡೆಸುತ್ತಿರುವ ದಾಳಿ ಬಿಜೆಪಿಗೆ ವರದಾನ ಆಗಲೂಬಹುದು. ನಾವು ವಿಪಕ್ಷಗಳನ್ನು ಬ್ರಾಹ್ಮಣ ವಿರೋಧಿ ಎಂದು ಬಿಂಬಿಸಲು ಇದರಿಂದ ಅನುಕೂಲವಾಗುತ್ತದೆ ಎಂದು ಬಿಜೆಪಿಯ ಹಲವರು ಭಾವಿಸಿದ್ದಾರೆ' ಎಂದು ಬಿಜೆಪಿ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಯೋಗಿ ಆದಿತ್ಯನಾಥ ನೇತೃತ್ವದ ಸರ್ಕಾರ ಬ್ರಾಹ್ಮಣರನ್ನು ಸರಿಯಾಗಿ ನಡೆಸಿಕೊಂಡಿಲ್ಲ ಎಂಬ ಹತಾಶೆಯನ್ನು ಶಾಸಕರೂ ಸೇರಿ ಹಲವು ಬಿಜೆಪಿ ಮುಖಂಡರು ಹೊಂದಿದ್ದಾರೆ. ಇದರಿಂದಾಗಿ ತಮ್ಮ ಪಕ್ಷದೊಳಗಿನ ಬ್ರಾಹ್ಮಣ ಸದಸ್ಯರೇ ಪಕ್ಷದ ವಿರುದ್ಧ ತಿರುಗಿ ಬೀಳಬಹುದು ಎಂಬ ಭಯವೂ ಬಿಜೆಪಿಗೆ ಇದೆ. ಉತ್ತರ ಪ್ರದೇಶದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಎಷ್ಟು ಜನ ಬ್ರಾಹ್ಮಣರ ಹತ್ಯೆಗಳು ರಾಜ್ಯದಲ್ಲಿ ನಡೆದಿವೆ ಮತ್ತು ಎಷ್ಟು ಪ್ರಕರಣಗಳಲ್ಲಿ ಪೊಲೀಸರು ಅಪರಾಧಿಗಳನ್ನು ಬಂಧಿಸಿದ್ದಾರೆ ಎಂಬ ಕುರಿತು ಲೆಕ್ಕ ನೀಡುವಂತೆ ಲಂಭುವ ವಿಧಾನಸಭೆ ಕ್ಷೇತ್ರದ ಶಾಸಕ ದೇವಮಣಿ ದ್ವಿವೇದಿ ಸರ್ಕಾರವನ್ನು ಆಗ್ರಹಿಸಿದ್ದರು.

ಉತ್ತರ ಪ್ರದೇಶದ ಮತದಾರರಲ್ಲಿ ಶೇ 10ರಷ್ಟು ಮತದಾರರು ಬ್ರಾಹ್ಮಣ ಸಮುದಾಯಕ್ಕೆ ಸೇರಿದವರು. 12ಕ್ಕಿಂತಲೂ ಹೆಚ್ಚು ಲೋಕಸಭಾ ಕ್ಷೇತ್ರಗಳಲ್ಲಿ ಮತ್ತು 50ಕ್ಕೂ ಹೆಚ್ಚು ವಿಧಾನಸಭೆ ಕ್ಷೇತ್ರಗಳಲ್ಲಿ ಅವರು ನಿರ್ಣಾಯಕ ಪಾತ್ರವಹಿಸುತ್ತಾರೆ.

ಕಾಂಗ್ರೆಸ್‌ನಿಂದ ಬಿಜೆಪಿಗೆ ಇತ್ತೀಚೆಗಷ್ಟೇ ಬಂದಿರುವ ಬ್ರಾಹ್ಮಣ ಸಮುದಾಯದ ಪ್ರಮುಖ ನಾಯಕ ಜಿತಿನ್ ಪ್ರಸಾದ ಅವರಿಗೆ, ವಿಧಾನಸಭೆ ಚುನಾವಣೆಯಲ್ಲಿ ಬ್ರಾಹ್ಮಣ ಸಮುದಾಯದ ಮತ ಸೆಳೆಯುವ ಉದ್ದೇಶದಿಂದ ಉತ್ತರ ಪ್ರದೇಶ ಸಚಿವ ಸಂಪುಟದಲ್ಲಿ ಸ್ಥಾನ ಕೊಡಲಾಗಿದೆ.



ಶಿವಪಾಲ್ ಸಿಂಗ್ ಯಾದವ್ ಅವರನ್ನು ಅಖಿಲೇಶ್ ಯಾದವ್ ಅವರು ಗುರುವಾರ ಭೇಟಿಯಾದರು ಪಿಟಿಐ ಚಿತ್ರ

ಶಿವಪಾಲ್–ಅಖಿಲೇಶ್ ಯಾದವ್ ಮೈತ್ರಿ

ಲಖನೌ: ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸುವ ಕನಸು ಕಾಣುತ್ತಿರುವ ಸಮಾಜವಾದಿ ಪಕ್ಷದ (ಎಸ್‌ಪಿ) ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ತಮ್ಮ ಪಕ್ಷದಿಂದ ದೂರಾಗಿದ್ದ ತಮ್ಮ ಚಿಕ್ಕಪ್ಪ ಶಿವ್‌ಪಾಲ್ ಸಿಂಗ್ ಯಾದವ್ ಅವರು ಎಸ್‌ಪಿ ಜೊತೆ ಮೈತ್ರಿ ಮಾಡಿಕೊಳ್ಳುವಂತೆ ಮನವೊಲಿಸಿದ್ದಾರೆ.

ಶಿವ್‌ಪಾಲ್ ಸಿಂಗ್ ಯಾದವ್ ಅವರ ಮನೆಗೆ ಗುರುವಾರ ಮಧ್ಯಾಹ್ನ ಅಖಿಲೇಶ್ ತೆರಳಿದ್ದರು. ಅವರ ಜೊತೆ ಮಾತುಕತೆ ನಡೆಸಿದ ಬಳಿಕ ಶಿವ್‌ಪಾಲ್ ಜೊತೆ ಇರುವ ಚಿತ್ರವನ್ನು ಟ್ವೀಟ್ ಮಾಡಿದ ಅವರು, 'ಪ್ರಗತಿಶೀಲ ಸಮಾಜವಾದಿ ಪಕ್ಷದ ಅಧ್ಯಕ್ಷರನ್ನು ಭೇಟಿ ಆಗಿ, ಮೈತ್ರಿ ಮಾಡಿಕೊಳ್ಳುವ ಕುರಿತು ಚರ್ಚೆ ನಡೆಸಿದೆ. ಪ್ರಾದೇಶಿಕ ಪಕ್ಷಗಳ ಜೊತೆಗಿನ ಮೈತ್ರಿಯಿಂದ ಎಸ್‌ಪಿಗೆ ಬಲ ಬರುತ್ತಿದೆ. ಚುನಾವಣೆಯಲ್ಲಿ ಐತಿಹಾಸಿಕ ಗೆಲುವು ಪಡೆಯುವುದರತ್ತ ನಾವು ಸಾಗುತ್ತಿದ್ದೇವೆ' ಎಂದಿದ್ದಾರೆ.

2017ರ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಗೆ ಕೆಲವೇ ತಿಂಗಳುಗಳು ಬಾಕಿ ಇರುವಂತೆ ಎಸ್‌ಪಿಯಿಂದ ಶಿವ್‌ಪಾಲ್ ಸಿಂಗ್ ಅವರನ್ನು ಉಚ್ಚಾಟಿಸಲಾಗಿತ್ತು. ಬಳಿಕ ಅವರು ಪ್ರಗತಿಶೀಲ ಸಮಾಜವಾದಿ ಪಕ್ಷವನ್ನು (ಪಿಎಸ್‌ಪಿ) ಸ್ಥಾಪಿಸಿದ್ದರು.

ಶಿವ್‌ಪಾಲ್ ಮತ್ತು ಅಖಿಲೇಶ್‌ರನ್ನು ಒಗ್ಗೂಡಿಸುವಲ್ಲಿ ಎಸ್‌ಪಿ ಸಂಸ್ಥಾಪಕ ಮುಲಾಯಂ ಸಿಂಗ್ ಅವರ ಪಾತ್ರ ಇದೆ ಎಂದು ಮೂಲಗಳು ತಿಳಿಸಿವೆ.

ಅಖಿಲೇಶ್ ಅವರು ರಾಷ್ಟ್ರೀಯ ಲೋಕ ದಳ (ಆರ್‌ಎಲ್‌ಡಿ), ಸುಹೆಲ್‌ದೇವ್ ಭಾರತೀಯ ಸಮಾಜ ಪಕ್ಷ (ಎಸ್‌ಬಿಎಸ್‌ಪಿ) ಮತ್ತಿತರ ಪ್ರಾದೇಶಿಕ ಪಕ್ಷಗಳ ಜೊತೆ ಮೈತ್ರಿ ಮಾಡಿಕೊಂಡಿದ್ದಾರೆ.

ಮುಲಾಯಂ ಸಿಂಗ್ ಅವರ ಜೊತೆ ಎಸ್‌ಪಿ ಕಟ್ಟಿದ್ದ ಶಿವ್‌ಪಾಲ್ ಸಿಂಗ್, ಎಸ್‌ಪಿಯನ್ನು ಬುಡಮಟ್ಟದಿಂದ ಬಲಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. 2019ರ ಲೋಕಸಭೆ ಚುನಾವಣೆಯಲ್ಲಿ ಯಾವುದೇ ಕ್ಷೇತ್ರದಲ್ಲೂ ಪಿಎಸ್‌ಪಿ ಗೆದ್ದಿರಲಿಲ್ಲ. ಆದರೆ, ನಾಲ್ಕರಿಂದ ಆರು ಕ್ಷೇತ್ರಗಳಲ್ಲಿ ಎಸ್‌ಪಿ ಸೋಲಲು ಕಾರಣವಾಗಿತ್ತು.

ಗೋವಾ: ಕಾಂಗ್ರೆಸ್‌ನ ಮೊದಲ ಪಟ್ಟಿ ಪ್ರಕಟ

ನವದೆಹಲಿ (ಪಿಟಿಐ): ಗೋವಾ ವಿಧಾನಸಭೆಗೆ ಕೆಲವೇ ತಿಂಗಳಲ್ಲಿ ನಡೆಯಲಿರುವ ಚುನಾವಣೆಗೆ ಕಾಂಗ್ರೆಸ್ ಪಕ್ಷವು ಎಂಟು ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಮಾಜಿ ಮುಖ್ಯಮಂತ್ರಿ ದಿಗಂಬರ ಕಾಮತ್ ಅವರಿಗೆ ಮಾರ್ಗೋವಾ ಕ್ಷೇತ್ರದಿಂದ ಟಿಕೆಟ್ ನೀಡಲಾಗಿದೆ.

ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ನೇತೃತ್ವದ ಕೇಂದ್ರ ಚುನಾವಣಾ ಸಮಿತಿಯು ಅಭ್ಯರ್ಥಿಗಳನ್ನು ಆಯ್ಕೆ ಮಾಡಿದೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಗೋವಾ ವಿಧಾನಸಭೆ ಚುನಾವಣಾ ದಿನಾಂಕ ಇನ್ನಷ್ಟೇ ಘೋಷಣೆ ಆಗಬೇಕಿದೆ. ಬೇರೆ ಯಾವ ಪಕ್ಷವೂ ಅಭ್ಯರ್ಥಿಗಳ ಪಟ್ಟಿಯನ್ನು ಈವರೆಗೆ ಪ್ರಕಟಿಸಿಲ್ಲ.

ಜಮ್ಮು–ಕಾಶ್ಮೀರದ ಮುಖ್ಯ ನ್ಯಾಯಮೂರ್ತಿ ವಜಾಗೊಳಿಸಲು ಸಿಪಿಎಂ ಆಗ್ರಹ

ನವದೆಹಲಿ: ಪ್ರಮಾಣವಚನವನ್ನು ಉಲ್ಲಂಘಿಸಿ, ಸಂವಿಧಾನದ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಜಮ್ಮು–ಕಾಶ್ಮೀರ ಮತ್ತು ಲಡಾಖ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪಂಕಜ್ ಮಿಥಾಲ್ ಅವರನ್ನು ವಜಾಗೊಳಿಸಬೇಕೆಂದು ಸಿಪಿಎಂನ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅವರು ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರನ್ನು ಒತ್ತಾಯಿಸಿದ್ದಾರೆ.

ಜಾತ್ಯತೀತತೆ ಮತ್ತು ಸಮಾಜವಾದಿ ಅಂಶಗಳನ್ನು ತನ್ನ ಪೀಠಿಕೆಯಲ್ಲಿ ಸೇರಿಸುವ ಮೂಲಕ ಸಂವಿಧಾನವು ದೇಶದ ಧಾರ್ಮಿಕ ಚಿತ್ರಣವನ್ನು ಸಂಕುಚಿತಗೊಳಿಸಿದೆ ಎಂದು ಪಂಕಜ್ ಹೇಳಿಕೆ ನೀಡಿದ್ದರು.

ಈ ಬಗ್ಗೆ ಯೆಚೂರಿ ಅವರು ರಾಮನಾಥ್ ಕೋವಿಂದ್ ಅವರಿಗೆ ಪತ್ರ ಬರೆದಿದ್ದಾರೆ. ನ್ಯಾಯಮೂರ್ತಿ ಮಿಥಾಲ್ ಅವರು ಗಂಭೀರವಾದ ದುರ್ನಡತೆಯನ್ನು ಪ್ರದರ್ಶಿಸಿದ್ದಾರೆ. ಅವರ ವಿರುದ್ಧದ ಗಂಭೀರ ಆರೋಪವನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ' ಎಂದು ಪತ್ರದಲ್ಲಿ ಹೇಳಿದ್ದಾರೆ.

'ಸಂವಿಧಾನವು ಜಾತ್ಯತೀತತೆ ಮತ್ತು ಸಮಾಜವಾದವನ್ನು ತನ್ನ ಪೀಠಿಕೆಯಲ್ಲಿ ಅಳವಡಿಸಿಕೊಳ್ಳುವ ಮೂಲಕ ದೇಶದ ಧಾರ್ಮಿಕ ಚಿತ್ರಣವನ್ನು ಸಂಕುಚಿತಗೊಳಿಸಿದೆ. ನಾವು ಕೆಲವೊಮ್ಮೆ ನಮ್ಮ ಹಠಮಾರಿತನದಿಂದಾಗಿ ಸಂವಿಧಾನದಲ್ಲಿ ತಿದ್ದುಪಡಿಯನ್ನು ತರುತ್ತೇವ' ಎಂದು ನ್ಯಾಯಮೂರ್ತಿ ಮಿಥಾಲ್ ಅವರು ಜಮ್ಮುವಿನಲ್ಲಿ ಡಿಸೆಂಬರ್ 5 ರಂದು ಆರ್‌ಎಸ್‌ಎಸ್ ಸಂಯೋಜಿತ ಅಖಿಲ ಭಾರತೀಯ ಆದಿವಕ್ತ ಪರಿಷತ್ ಆಯೋಜಿಸಿದ ಕಾರ್ಯಕ್ರಮದಲ್ಲಿ ನೀಡಿರುವ ಹೇಳಿಕೆಯನ್ನು ಯೆಚೂರಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಮಹಾರಾಷ್ಟ್ರ: ಎತ್ತಿನಗಾಡಿ ಓಟಕ್ಕೆ 'ಸುಪ್ರೀಂ' ಅಸ್ತು

ನವದೆಹಲಿ (ಪಿಟಿಐ): ಮಹಾರಾಷ್ಟ್ರದಲ್ಲಿ ಎತ್ತಿನಗಾಡಿ ಓಟದ ಸ್ಪರ್ಧೆಯನ್ನು ಆಯೋಜಿಸಲು ಸುಪ್ರೀಂ ಕೋರ್ಟ್ ಗುರುವಾರ ಅನುಮತಿ ನೀಡಿದೆ. ರಾಜ್ಯದಲ್ಲಿ 2017ರಿಂದ ಈ ಸ್ಪರ್ಧೆಯನ್ನು ನಿಷೇಧಿಸಲಾಗಿದೆ.

ಈ ಕುರಿತು ಬಾಕಿ ಇದ್ದ ಎಲ್ಲ ಅರ್ಜಿಗಳನ್ನು ಸಂವಿಧಾನ ಪೀಠದ ಪರಾಮರ್ಶೆಗೆ ಪೀಠ ಒಪ್ಪಿಸಿತು. 'ಪ್ರಾಣಿ ಹಿಂಸೆ ತಡೆ ಕಾಯ್ದೆ 1960'ಕ್ಕೆ ತಂದಿರುವ ತಿದ್ದುಪಡಿ ಮತ್ತು ಈ ಸಂಬಂಧ ಮಹಾರಾಷ್ಟ್ರ ಸರ್ಕಾರ ರೂಪಿಸಿರುವ ನಿಯಮಗಳು ವಿಚಾರಣೆ ಬಾಕಿ ಉಳಿದಿರುವ ಅವಧಿಯಲ್ಲಿ ಚಾಲ್ತಿಯಲ್ಲಿರುತ್ತವೆ ಎಂದೂ ಕೋರ್ಟ್ ತಿಳಿಸಿತು.

ನ್ಯಾಯಮೂರ್ತಿ ಎ.ಎಂ.ಖಾನ್ವಿಲ್ಕರ್ ನೇತೃತ್ವದ ತ್ರಿಸದಸ್ಯ ಪೀಠವು, 'ಇದೇ ರೀತಿಯ ಸ್ಪರ್ಧೆಗಳು ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ನಡೆಯುತ್ತಿವೆ. ಆ ರಾಜ್ಯಗಳಲ್ಲಿ ಕಾಯ್ದೆಗೆ ತಂದಿರುವ ತಿದ್ದುಪಡಿ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಯಾವುದೇ ಮಧ್ಯಂತರ ಆದೇಶ ನೀಡಿಲ್ಲ' ಎಂದು ಉಲ್ಲೇಖಿಸಿತು.

ಆ ಎರಡು ರಾಜ್ಯಗಳಂತೇ ಮಹಾರಾಷ್ಟ್ರದಲ್ಲಿಯೂ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಹೀಗಾಗಿ, ಅದೇ ಮಾನದಂಡವನ್ನು ಇಲ್ಲೂ ಅಳವಡಿಸಬೇಕು ಎಂದು ಪೀಠ ಅಭಿಪ್ರಾಯ ಪಟ್ಟಿತು.

'ಶೀನಾ ಬೋರಾ ಬದುಕಿದ್ದಾಳೆ!'

ಮುಂಬೈ: ತೀವ್ರ ಕುತೂಹಲ ಕೆರಳಿಸಿದ್ದ ಶೀನಾ ಬೋರಾ ಹತ್ಯೆ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದೆ. ಅಚ್ಚರಿಯ ಬೆಳವಣಿಗೆಯಲ್ಲಿ 'ಶೀನಾ ಬೋರಾ ಜೀವಂತವಾಗಿದ್ದಾಳೆ, ಕಾಶ್ಮೀರದಲ್ಲಿ ಇದ್ದಾಳೆ' ಎಂದು ಆಕೆಯ ತಾಯಿ ಇಂದ್ರಾಣಿ ಮುಖರ್ಜಿ ಹೇಳಿದ್ದಾರೆ.

ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ಇಂದ್ರಾಣಿ ಮುಖರ್ಜಿ ಅವರು ಈ ಬಗ್ಗೆ ಪತ್ರ ಬರೆದಿದ್ದಾರೆ. 'ಬೈಕುಲ್ಲಾ ಜೈಲಿನಲ್ಲಿ ಇರುವ ಸಹ-ಕೈದಿಯೊಬ್ಬರು ಕಾಶ್ಮೀರದಲ್ಲಿ ಶೀನಾಳನ್ನು ನೋಡಿದ್ದಾಗಿ ಹೇಳಿದ್ದಾರೆ. ಕೂಡಲೇ ಶೀನಾಳನ್ನು ಹುಡುಕಬೇಕು' ಎಂದೂ ಕೋರಿದ್ದಾರೆ.

ಈ ಪತ್ರ ಕುರಿತಂತೆ ಸಿಬಿಐ ಇನ್ನೂ ದೃಢೀಕರಿಸಿಲ್ಲ. ಇಂದ್ರಾಣಿ ಅವರ ವಕೀಲರಾದ ಸಾನಾ ರಾಯಿಸ್ ಖಾನ್ ಅವರೂ ಈ ಬಗ್ಗೆ ಮಾತನಾಡಲು ನಿರಾಕರಿಸಿದ್ದಾರೆ.



ಇಂದ್ರಾಣಿ

'ಸದ್ಯ ನನ್ನ ಬಳಿ ಪತ್ರ ಇಲ್ಲ. ಸಹ ಕೈದಿಯ ಮಾತು ಆಧರಿಸಿ ಸಿಬಿಐಗೆ ಪತ್ರ ಬರೆದಿದ್ದೇನೆ ಎಂದು ಕಕ್ಷಿದಾರರು ತಿಳಿಸಿದ್ದಾರೆ. ಸಹ ಕೈದಿಯ ಮುದ್ರಿತ ಹೇಳಿಕೆ ನೀಡಲು ಕೋರಿ ಅರ್ಜಿ ಸಲ್ಲಿಸಲಿದ್ದೇನೆ. ಇಂದ್ರಾಣಿ ಅವರು ಪತ್ರ ಬರೆದಿದ್ದಾರೆ ಎಂದಷ್ಟೇ ನಾನು ದೃಢೀಕರಿಸಬಲ್ಲೆ' ಎಂದು ತಿಳಿಸಿದರು.

ಇಂದ್ರಾಣಿ ಅವರಿಗೆ ಜಾಮೀನು ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಿದ್ದೇನೆ ಎಂದು ವಕೀಲರಾದ ಸಾನಾ ರಾಯಿಸ್ ಖಾನ್ ತಿಳಿಸಿದರು.

ಇಂದ್ರಾಣಿ, ಆಕೆಯ ಮೊದಲ ಪತಿ ಸಂಜೀವ್ ಖನ್ನಾ, ಎರಡನೇ ಪತಿ ಮತ್ತು ಮಾಧ್ಯಮ ಕ್ಷೇತ್ರದ ಉದ್ಯಮಿ ಪೀಟರ್ ಮುಖರ್ಜಿ ಪ್ರಕರಣದ ಆರೋಪಿಗಳು. ಶೀನಾ ಅವರು ಇಂದ್ರಾಣಿ ಮತ್ತು ಅವರೊಂದಿಗೆ ಸಹಜೀವನ ನಡೆಸುತ್ತಿದ್ದ, ಕೋಲ್ಕತ್ತ ಮೂಲದ ಸಿದ್ಧಾರ್ಥ ದಾಸ್ ಅವರ ಪುತ್ರಿ.

ಶೀನಾ ಬೋರಾ ತನ್ನ ಮಲ ಸೋದರ ರಾಹುಲ್ ಜೊತೆಗೆ ಲಿವ್ ಇನ್ ಸಂಬಂಧ ಹೊಂದಿದ್ದರು. ಆದರೆ, ರಾಹುಲ್ ಅವರು ಇಂದ್ರಾಣಿ ಮುಖರ್ಜಿ ಅವರ ಎರಡನೇ ಪತಿ ಪೀಟರ್ ಅವರ ಮೊದಲ ಪತ್ನಿ ಶಬನಮ್ ಸಿಂಗ್ ಅವರ ಮಗ! ಮಲ ಸೋದರನೊಂದಿಗೆ ಸಂಬಂಧ ಹೊಂದಿದ್ದ ಕಾರಣಕ್ಕೆ ಶೀನಾ ಬೋರಾಳನ್ನು ಹತ್ಯೆ ಮಾಡಲಾಗಿದೆ ಎಂದು ಈವರೆಗೆ ನಂಬಲಾಗಿದೆ.

24 ವರ್ಷದ ಶೀನಾ ಬೋರಾ ಹತ್ಯೆಗೀಡಾಗಿದ್ದರು. 2012ರ ಮೇ 23ರಂದು ಮಹಾರಾಷ್ಟ್ರದ ರಾಯಗಡ ಜಿಲ್ಲೆ ಪೆನ್ ತಾಲೂಕಿನಲ್ಲಿ ಶವ ಪತ್ತೆಯಾಗಿತ್ತು.

ಡ್ರಗ್ಸ್ ನಂಟು: 'ಪ್ರೆಸ್ಟೀಜ್' ನಿರ್ದೇಶಕಿಗೆ ವೈದ್ಯಕೀಯ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಪೆಡ್ಲರ್ ಜೊತೆ ನಂಟು ಹೊಂದಿದ್ದ ಆರೋಪದಡಿ 'ಪ್ರೆಸ್ಟೀಜ್ ಗ್ರೂಪ್' ಕಂಪನಿ ಕಾರ್ಯನಿರ್ವಾಹಕ ನಿರ್ದೇಶಕಿ ಅಂಜುಮ್ ಜುಂಗ್ ಅವರನ್ನು ಗೋವಿಂದಪುರ ಠಾಣೆ ಪೊಲೀಸರು ಗುರುವಾರ ವಿಚಾರಣೆ ನಡೆಸಿದರು.

'ಡ್ರಗ್ಸ್ ಸಾಗಣೆ ಹಾಗೂ ಮಾರಾಟ ಆರೋಪದಡಿ ನೈಜೀರಿಯಾ ಪ್ರಜೆ ಥಾಮಸ್ ಕಾಲು ಎಂಬಾತನನ್ನು ಇತ್ತೀಚೆಗಷ್ಟೇ ಬಂಧಿಸಲಾಗಿದೆ. ಹಾಲಿನ ಪುಡಿ ಪೊಟ್ಟಣ ಹಾಗೂ ಡಬ್ಬಿಗಳಲ್ಲಿ ಡ್ರಗ್ಸ್ ಬಚ್ಚಿಟ್ಟು ಆತ ಡ್ರಗ್ಸ್ ಸಾಗಿಸುತ್ತಿದ್ದ. ಆತನಿಂದ ₹ 10 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿತ್ತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಕಾಲೂನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದಾಗ, ಅಂಜುಮ್ ಜುಂಗ್ ಹೆಸರು ಪ್ರಸ್ತಾಪಿಸಿದ್ದ. ಅವರಿಗೆ ಹಲವು ಬಾರಿ ಡ್ರಗ್ಸ್ ಪೂರೈಸಿದ್ದ ಮಾಹಿತಿ ಬಾಯ್ಬಿಟ್ಟಿದ್ದ. ಅದರನ್ವಯವೇ ಅಂಜುಮ್ ಅವರಿಗೆ ವಿಚಾರಣೆಗೆ ಬರುವಂತೆ ನೋಟಿಸ್ ನೀಡಲಾಗಿತ್ತು.'



ಅಂಜುಮ್ ಜಂಗ್

'ಗುರುವಾರ ಮಧ್ಯಾಹ್ನ 3 ಗಂಟೆ ಸುಮಾರಿಗೆ ವಿಚಾರಣೆಗಾಗಿ ಅಂಜುಮ್ ಅವರು ಠಾಣೆಗೆ ಬಂದಿದ್ದರು. ಪ್ರಕರಣ ಸಂಬಂಧ ಅವರಿಂದ ಲಿಖಿತ ಹೇಳಿಕೆ ಪಡೆಯಲಾಯಿತು. ಸಂಜೆ 5 ಗಂಟೆ ಸುಮಾರಿಗೆ ಅವರನ್ನು ಆಸ್ಪತ್ರೆಯೊಂದಕ್ಕೆ ಕರೆದೊಯ್ದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ವಾಪಸು ಕಳುಹಿಸಲಾಗಿದೆ' ಎಂದೂ ತಿಳಿಸಿದರು.

'ಅಂಜುಮ್ ಅವರ ರಕ್ತ, ಮೂತ್ರ ಮಾದರಿಯನ್ನು ವೈದ್ಯರು ಪಡೆದುಕೊಂಡಿದ್ದಾರೆ. ವರದಿ ಬಂದ ಬಳಿಕವೇ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ' ಎಂದೂ ಅಧಿಕಾರಿ ವಿವರಿಸಿದರು.

ಮೊಬೈಲ್ ಕರೆ ವಿವರ ಸಂಗ್ರಹ: 'ಡ್ರಗ್ಸ್ ಪೆಡ್ಲರ್ ಕಾಲೂ ಹಲವು ಗ್ರಾಹಕರ ಜೊತೆ ವಾಟ್ಸ್‌ಆ್ಯಪ್ ಚಾಟಿಂಗ್ ಮಾಡುತ್ತಿದ್ದ. ಕೆಲವರ ಮೊಬೈಲ್‌ಗೆ ಕರೆ ಮಾಡಿ, ಡ್ರಗ್ಸ್ ಆರ್ಡರ್ ಪಡೆಯುತ್ತಿದ್ದ. ಈ ಎಲ್ಲ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಅಂಜುಮ್ ಅವರಿಗೂ ಆರೋಪಿ ಥಾಮಸ್ ಕರೆ ಮಾಡುತ್ತಿದ್ದ ಮಾಹಿತಿ ಲಭ್ಯವಾಗಿದೆ. ಈ ಬಗ್ಗೆಯೂ ಅವರು ಹೇಳಿಕೆಯಲ್ಲಿ ಉಲ್ಲೇಖಿಸಿದ್ದಾರೆ. ಹೇಳಿಕೆ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದೂ ತಿಳಿಸಿದರು.

'ಸಾವಯವ, ಸಹಜ ಕೃಷಿಗೆ ಒತ್ತು ನೀಡಿ'

ಆನಂದ್, ಗುಜರಾತ್ (ಪಿಟಿಐ): 'ಕೃಷಿಯನ್ನು ಪ್ರಯೋಗಾಲಯಗಳಿಂದ ಹೊರಗೆ ತಂದು ಪ್ರಕೃತಿಯ ಜೊತೆಗೆ ಮರುಜೋಡಿಸುವ ಕೆಲಸ ಆಗಬೇಕು. ಸಾವಯವ ಮತ್ತು ಸಹಜ ಕೃಷಿಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಕೃಷಿಕರಿಗೆ ಸಲಹೆ ನೀಡಿದರು.

ಸಹಜ ಕೃಷಿ ಕುರಿತು ಇಲ್ಲಿ ನಡೆದ ರಾಷ್ಟ್ರ ಮಟ್ಟದ ಸಮಾವೇಶದಲ್ಲಿ ವರ್ಚುಯಲ್ ವೇದಿಕೆಯಲ್ಲಿ ಮಾತನಾಡಿದ ಅವರು, ಹೊಲದಲ್ಲಿಯೇ ಒಣಹುಲ್ಲು ಸುಡುವ ಪದ್ಧತಿ ಕುರಿತಂತೆಯೂ ಕಳವಳ ವ್ಯಕ್ತಪಡಿಸಿದರು. ಇಂಥ ಕ್ರಮಗಳು ಕೃಷಿಭೂಮಿ ಗುಣಮಟ್ಟದ ಮೇಲೆ ಪ್ರತಿಕೂಲ ಪರಿಣಾಮ ಬೀರಲಿವೆ' ಎಂದು ಎಚ್ಚರಿಸಿದರು.

'ಆಗಿರುವ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಇದು ಸಕಾಲ. ಹಸಿರುಕ್ರಾಂತಿಯಲ್ಲಿ ರಾಸಾಯನಿಕ ಮತ್ತು ರಸಗೊಬ್ಬರಗಳ ಪಾತ್ರ ಮುಖ್ಯವಾಗಿತ್ತು ಎಂಬುದು ನಿಜ. ಈಗ, ಅವುಗಳಿಗೆ ಪರ್ಯಾಯವನ್ನು ಹುಡುಕುವ ಕಾಲ ಹತ್ತಿರವಾಗಿದೆ' ಎಂದರು.

ವಿಜಯ್ ದಿವಸ್: 'ಸಣ್ಣತನದ ರಾಜಕಾರಣ' ಎಂದ ಕಾಂಗ್ರೆಸ್

ಇಂದಿರಾಗಾಂಧಿ ಕಡೆಗಣನೆಗೆ ಆಕ್ರೋಶ

ನವದೆಹಲಿ (ಪಿಟಿಐ): ಪಾಕಿಸ್ತಾನ ವಿರುದ್ಧದ 1971ರ ಯುದ್ಧದ ಗೆಲುವಿನ 50ನೇ ವರ್ಷಾಚರಣೆ 'ವಿಜಯ್ ದಿವಸ್' ಸಂದರ್ಭದಲ್ಲಿ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರನ್ನು ಸ್ಮರಿಸದಿರುವುದು ವಿವಾದಕ್ಕೆ ಕಾರಣವಾಗಿದೆ.

1971ರಲ್ಲಿ ಇಂದಿರಾಗಾಂಧಿ ಪ್ರಧಾನಿ ಆಗಿದ್ದರು. ಯುದ್ಧದಲ್ಲಿ ಭಾರತೀಯ ಸೇನೆ ಪಾಕ್ ಅನ್ನು ಹಿಮ್ಮೆಟ್ಟಿಸಿತ್ತು. ಪಾಕಿಸ್ತಾನದ ಭಾಗವಾಗಿದ್ದ ಬಾಂಗ್ಲಾದೇಶ ಆ ಯುದ್ಧದ ನಂತರ ಪ್ರತ್ಯೇಕ ರಾಷ್ಟ್ರವಾಗಿ ಅಸ್ತಿತ್ವಕ್ಕೆ ಬಂದಿತ್ತು.

ವಿಜಯ್ ದಿವಸ್ ಆಚರಣೆ ಸಂದರ್ಭದಲ್ಲಿ ಇಂದಿರಾಗಾಂಧಿ ಅವರನ್ನು ಸ್ಮರಿಸದ ಕ್ರಮವನ್ನು ಖಂಡಿಸಿರುವ ಕಾಂಗ್ರೆಸ್ ಪಕ್ಷ, ಕೇಂದ್ರ ಸರ್ಕಾರವು ಸಣ್ಣತನದ ರಾಜಕಾರಣದಲ್ಲಿ ತೊಡಗಿದೆ ಎಂದು ಟೀಕಿಸಿದೆ.

ಬಾಂಗ್ಲಾದೇಶದ ಮುಕ್ತಿಯಲ್ಲಿ ಇಂದಿರಾಗಾಂಧಿ ಮುಖ್ಯ ಪಾತ್ರ ವಹಿಸಿದ್ದನ್ನು ಸರ್ಕಾರ ಗುರುತಿಸದಿರುವುದು ದುರದೃಷ್ಟಕರ ಎಂದು ರಾಜ್ಯಸಭೆಯ ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದಾರೆ.

ಯುದ್ಧದಲ್ಲಿ ಉನ್ನತ ನಾಯಕತ್ವ ತೋರಿದ್ದ ಇಂದಿರಾಗಾಂಧಿ ಅವರ ಹೆಸರನ್ನು ಉಲ್ಲೇಖಿಸದೇ ಕೇಂದ್ರ ಸರ್ಕಾರ ಸಣ್ಣತನದ ರಾಜಕಾರಣ ಮಾಡುತ್ತಿದೆ ಎಂದು ಪಕ್ಷದ ವಕ್ತಾರ ರಣದೀಪ್ ಸುರ್ಜೇವಾಲಾ ಆರೋಪಿಸಿದ್ದಾರೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾಗಾಂಧಿ, 'ದೇಶದ ಪ್ರಥಮ, ಏಕೈಕ ಮಹಿಳಾ ಪ್ರಧಾನಿ ಇಂದಿರಾಗಾಂಧಿ ಅವರನ್ನು ವಿಜಯ್ ದಿವಸ್ ವೇಳೆ 'ಸ್ತ್ರೀದ್ವೇಷಿಯಾದ ಬಿಜೆಪಿ ಸರ್ಕಾರ ಮರೆತಿದೆ' ಎಂದು ವ್ಯಂಗ್ಯವಾಡಿದ್ದಾರೆ.

ಲೋಕಸಭೆಯಲ್ಲಿ ಕಾಂಗ್ರೆಸ್ ಉಪನಾಯಕ ಗೌರವ್ ಗೊಗೋಯಿ ಅವರು, ಸರ್ಕಾರದ ಕ್ರಮವನ್ನು ಖಂಡಿಸಿದ್ದು ಬಾಂಗ್ಲಾ ಮುಕ್ತಿಗೆ ನಡೆದಿದ್ದ ಯುದ್ಧದಲ್ಲಿ ಇಂದಿರಾ ಗಾಂಧಿ ಕೊಡುಗೆ ಏನು ಎಂಬುದು ಜನರಿಗೆ ತಿಳಿದಿದೆ ಎಂದಿದ್ದಾರೆ.



ವಿಜಯ್ ದಿವಸ್ ಆಚರಣೆ ಸಂದರ್ಭದಲ್ಲಿ ಗುರುವಾರ ಪ್ರಧಾನಿ ನರೇಂದ್ರ ಮೋದಿ ಅವರು ನವದೆಹಲಿಯಲ್ಲಿರುವ ರಾಷ್ಟ್ರೀಯ ಯುದ್ಧ ಸ್ಮಾರಕಕ್ಕೆ ಪುಷ್ಪನಮನ ಸಲ್ಲಿಸಿದರು –ಪಿಟಿಐ ಚಿತ್ರ

ಪ್ರಧಾನಿಯಿಂದ ಹುತಾತ್ಮರ ಸ್ಮರಣೆ

ನವದೆಹಲಿ (ಪಿಟಿಐ): 1971ರಲ್ಲಿ ಪಾಕ್ ವಿರುದ್ಧದ ಯುದ್ಧದಲ್ಲಿ ಹುತಾತ್ಮರಾಗಿದ್ದ ಬಾಂಗ್ಲಾದ ಸ್ವಾತಂತ್ರ್ಯ ಹೋರಾಟಗಾರರು, ಭಾರತೀಯ ಸೇನಾ ಸಿಬ್ಬಂದಿಗೆ ಪ್ರಧಾನಿ ನರೇಂದ್ರ ಮೋದಿ ಗೌರವನಮನ ಸಲ್ಲಿಸಿದರು.

ಈ ಕುರಿತು ಟ್ವೀಟ್ ಮಾಡಿರುವ ಅವರು, ನಾನು ಸೇನಾ ಸಿಬ್ಬಂದಿ ಮತ್ತು ಬಾಂಗ್ಲಾದ ಸ್ವಾತಂತ್ರ್ಯ ಹೋರಾಟಗಾರರ ಸೇವೆ, ತ್ಯಾಗವನ್ನು ಸ್ಮರಿಸುತ್ತೇನೆ. ಒಟ್ಟಾಗಿ ನಾವು ವೈರಿ ದೇಶವನ್ನು ಸೋಲಿಸಿದ್ದೆವು. ಢಾಕಾದಲ್ಲಿ ನಡೆಯುತ್ತಿರುವ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಅವರೂ ಉಪಸ್ಥಿತರಿರುವುದು ಪ್ರತಿ ಭಾರತೀಯನಿಗೆ ಹೆಮ್ಮೆಯ ಕ್ಷಣ ಎಂದಿದ್ದಾರೆ.

'32 ಗುಂಡಿನೇಟು ತಿಂದಿದ್ದವರನ್ನೇ ಮರೆತರು'

ಡೆಹ್ರಾಡೂನ್ (ಪಿಟಿಐ): 'ಇಂದಿರಾಗಾಂಧಿ ದೇಶಕ್ಕಾಗಿ 32 ಗುಂಡಿನೇಟು ತಿಂದಿದ್ದರು. ಆದರೆ, 1971 ಯುದ್ಧದ 50ನೇ ವರ್ಷಾಚರಣೆಯಲ್ಲಿ ಅವರನ್ನೇ ಮರೆತರು' ಎಂದು ರಾಹುಲ್‌ಗಾಂಧಿ ಟೀಕಿಸಿದ್ದಾರೆ.

'ಅವರನ್ನು ಸ್ಮರಿಸಲಿಲ್ಲ ಎಂಬುದರಿಂದ ವ್ಯತ್ಯಾಸವೇನೂ ಆಗದು. ಏಕೆಂದರೆ ಅವರು ದೇಶಕ್ಕಾಗಿ ಪ್ರಾಣ ತೆತ್ತರು. ಆಗ ದೇಶ ಒಟ್ಟಾಗಿದ್ದರಿಂದ ಯುದ್ಧದಲ್ಲಿ ಸಾಧನೆ ಸಾಧ್ಯವಾಗಿತ್ತು' ಎಂದರು.

ಉತ್ತರಾಖಂಡ ವಿಧಾನಸಭೆ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಚರ್ಮಕ್ಕೆ ಚರ್ಮ ತಾಗಿಲ್ಲ' ತೀರ್ಪು ಕೊಟ್ಟ ನ್ಯಾಯಮೂರ್ತಿಗೆ ಹಿಂಬಡ್ತಿ?

ಪ್ರಜಾವಾಣಿ ವಾರ್ತೆ

ನವದೆಹಲಿ: ಚರ್ಮಕ್ಕೆ ಚರ್ಮ ತಾಗಿದರೆ ಮಾತ್ರ ಲೈಂಗಿಕ ದೌರ್ಜನ್ಯ ಎಂದು ಪರಿಗಣಿಸಲು ಸಾಧ್ಯ ಎಂಬ ತೀರ್ಪು ನೀಡಿದ್ದ ಬಾಂಬೆ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿ ಪುಷ್ಪಾ ಗನೆಡೀವಾಲಾ ಅವರ ಕಾಯಂ ನೇಮಕಕ್ಕೆ ಸುಪ್ರೀಂ ಕೋರ್ಟ್ ಕೊಲಿಜಿಯಂ ನಿರಾಕರಿಸಿದೆ ಎಂದು ತಿಳಿದು ಬಂದಿದೆ.

ಹೆಣ್ಣು ಮಗುವಿನ ಮೈ ಸವರಿದ ಆರೋಪಿಗೆ ಪುಷ್ಪಾ ಅವರು ಜಾಮೀನು ಮಂಜೂರು ಮಾಡಿದ್ದರು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯ ಅಡಿಯಲ್ಲಿನ ಪ್ರಕರಣದ ವಿಚಾರಣೆಯನ್ನು ಅವರು ನಡೆಸಿದ್ದರು. ಚರ್ಮಕ್ಕೆ ಚರ್ಮ ತಾಗಿಲ್ಲ. ಹಾಗಾಗಿ, ಈ ಪ್ರಕರಣವನ್ನು ಲೈಂಗಿಕ ದೌರ್ಜನ್ಯ ಎಂದು ಹೇಳಲಾಗದು ಎಂದು ಪುಷ್ಪಾ ತೀರ್ಪು ನೀಡಿದ್ದರು. ಈ ತೀರ್ಪು ವ್ಯಾಪಕ ಟೀಕೆಗೆ ಒಳಗಾಗಿತ್ತು. ಬಳಿಕ, ಈ ತೀರ್ಪನ್ನು ಸುಪ್ರೀಂ ಕೋರ್ಟ್ ರದ್ದು ಮಾಡಿತ್ತು.

ಬಾಂಬೆ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಗಳಾಗಿದ್ದ ಮಾಧವ್ ಜಯಾಜಿರಾವ್ ಜಾಮದಾರ್, ಅಮಿತ್ ಬಾಲಚಂದ್ರ ಬೋರ್ಕರ್ ಮತ್ತು ಶ್ರೀಕಾಂತ್‌ರ ದತ್ತಾತ್ರೇಯ ಕುಲಕರ್ಣಿ ಅವರನ್ನು ಕಾಯಂ ನ್ಯಾಯಮೂರ್ತಿಗಳಾಗಿ ನೇಮಿಸಲು ಕೊಲಿಜಿಯಂ ಶಿಫಾರಸು ಮಾಡಿದೆ. ಹೆಚ್ಚುವರಿ ನ್ಯಾಯಮೂರ್ತಿ ಅಭಯ್ ಅಹುಜಾ ಅವರ ಅವಧಿಯನ್ನು ಮತ್ತೊಂದು ವರ್ಷಕ್ಕೆ ವಿಸ್ತರಿಸಲಾಗಿದೆ.

ಆದರೆ, ಪುಷ್ಪಾ ಅವರ ಅವಧಿಯನ್ನು ವಿಸ್ತರಿಸಲಾಗಿಲ್ಲ ಅಥವಾ ಕಾಯಂ ಆಗಿ ನೇಮಿಸುವ ಶಿಫಾರಸನ್ನೂ ಮಾಡಿಲ್ಲ. 2022ರ ಫೆಬ್ರುವರಿಯಲ್ಲಿ ಅವರ ಅವಧಿ ಪೂರ್ಣಗೊಳ್ಳುತ್ತದೆ. ನಂತರ, ಅವರು ಈ ಹಿಂದೆ ಇದ್ದ ಜಿಲ್ಲಾ ನ್ಯಾಯಮೂರ್ತಿ ಸ್ಥಾನಕ್ಕೆ ಮರಳಬೇಕಾಗುತ್ತದೆ.

ಜಾನುವಾರು ಹತ್ಯೆ ನಿಷೇಧ: ಕಲಂ 5ರ ಜಾರಿಗೆ ಅನುಮತಿ ಕೋರಿದ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ-2020ರ ಕಲಂ 5 ಅನ್ನು ಜಾರಿಗೊಳಿಸಲು ಅನುಮತಿ ನೀಡುವಂತೆ ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಮನವಿ ಮಾಡಿದೆ.

ಗೋಹತ್ಯೆ ನಿಷೇಧ ಕಾಯ್ದೆ ಪ್ರಶ್ನಿಸಿ ಸಾಮಾಜಿಕ ಕಾರ್ಯಕರ್ತ ಮೊಹಮದ್ ಆರೀಫ್ ಜಮೀಲ್ ಮತ್ತು ಕರ್ನಾಟಕ ರಾಜ್ಯ ರೈತ ಸಂಘ ಸೇರಿದಂತೆ ಒಟ್ಟು 10 ಜನರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಹಾಗೂ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಹಾಜರಿದ್ದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ ಅವರನ್ನು ನ್ಯಾಯಪೀಠವು, 'ಕಲಂ 5ಕ್ಕೆ ನಿಯಮಗಳನ್ನು ರೂಪಿಸಲಾಗಿದೆಯೇ' ಎಂದು ಪ್ರಶ್ನಿಸಿತು.

ಇದಕ್ಕೆ ಉತ್ತರಿಸಿದ ನಾವದಗಿ, 'ಈ ಹಿಂದೆ ಕಲಂ 5ಕ್ಕೆ ನಿಯಮಗಳನ್ನು ರೂಪಿಸುವವರೆಗೆ ಕಾಯ್ದೆ ಜಾರಿ ಮಾಡುವುದಿಲ್ಲ ಎಂದು ಸರ್ಕಾರ ಭರವಸೆ ನೀಡಿತ್ತು. ಸುಗ್ರೀವಾಜ್ಞೆ ಈಗ ಕಾಯ್ದೆಯಾಗಿದ್ದು, ಕಲಂ 5ಕ್ಕೆ ಪೂರಕ ನಿಯಮಗಳನ್ನು ರೂಪಿಸಲಾಗಿದೆ. ಅವುಗಳನ್ನು ನ್ಯಾಯಾಲಯಕ್ಕೆ ಈಗಾಗಲೇ ಸಲ್ಲಿಸಲಾಗಿದ್ದು, ಕಾಯ್ದೆ ಜಾರಿಗೆ ಸಮ್ಮತಿ ನೀಡಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಕಲಂ 5ಕ್ಕೆ ರೂಪಿಸಲಾಗಿರುವ ನಿಯಮಗಳ ಕುರಿತು ಆಕ್ಷೇಪಣೆ ಏನಾದರೂ ಇದ್ದಲ್ಲಿ ಮೂರು ವಾರಗಳ ಒಳಗಾಗಿ ಸಲ್ಲಿಸಿ' ಎಂದು ಅರ್ಜಿದಾರರ ಪರ ಹಿರಿಯ ವಕೀಲ ಪ್ರೊ.ರವಿವರ್ಮ ಕುಮಾರ್ ಅವರಿಗೆ ಸೂಚಿಸಿ, ವಿಚಾರಣೆ ಮುಂದೂಡಿದೆ.

ಕಲಂ 5ರಲ್ಲಿ ಏನಿದೆ ?:

ಯಾವುದೇ ಒಬ್ಬ ವ್ಯಕ್ತಿ ಯಾವುದೇ ಜಾನುವಾರನ್ನು ರಾಜ್ಯದೊಳಗಿನ ಒಂದು ಸ್ಥಳದಿಂದ ರಾಜ್ಯಗೊಳಗಿನ ಮತ್ತೊಂದು ಸ್ಥಳಕ್ಕೆ ಹತ್ಯೆ ಮಾಡುವ ಉದ್ದೇಶದಿಂದ ಸಾಗಾಣಿಕೆ ಮಾಡತಕ್ಕದ್ದಲ್ಲ ಅಥವಾ ಸಾಗಾಣಿಕೆಗೆ ಕೊಡತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲೂ ಸಾಗಿಸುವಂತೆ ಮಾಡತಕ್ಕದ್ದಲ್ಲ. ಆದರೆ, ಈ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು ನಿಯಮಿಸಿದ ವಿಧಾನದಲ್ಲಿ ನಂಬಿಕಸ್ಥ ಕೃಷಿ ಮತ್ತು ಪಶುಸಂಗೋಪನೆಯ ಉದ್ದೇಶಕ್ಕಾಗಿ ಯಾವುದೇ ಜಾನುವಾರು ಸಾಗಾಣಿಕೆಯನ್ನು ಅಪರಾಧವೆಂದು ಅರ್ಥೈಸತಕ್ಕದ್ದಲ್ಲ.

ಸಂಕ್ಷಿಪ್ತ ಸುದ್ದಿ

ಕೇರಳ ಸಿ.ಎಂಗೆ ತರೂರ್ ಪ್ರಶಂಸೆ: ಕಾಂಗ್ರೆಸ್‌ಗೆ ಮುಜುಗರ

ತಿರುವನಂತಪುರ: ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಅಭಿವೃದ್ಧಿ ದೃಷ್ಟಿಕೋನವನ್ನು ಕಾಂಗ್ರೆಸ್ ಸಂಸದ ಶಶಿ ತರೂರ್ ಅವರು ಪ್ರಶಂಸಿಸಿರುವುದು ಕೇರಳದಲ್ಲಿನ ವಿರೋಧ ಪಕ್ಷ ಕಾಂಗ್ರೆಸ್‌ಗೆ ಮುಜುಗರ ಉಂಟುಮಾಡಿದೆ.



ಶಶಿ ತರೂರ್

ತಿರುವನಂತಪುರದಲ್ಲಿ ಗುರುವಾರ ಶಾಪಿಂಗ್ ಮಾಲ್‌ವೊಂದರ ಉದ್ಘಾಟನೆ ನೆರವೇರಿಸಿ ಮಾತನಾಡಿದ ತರೂರ್, 'ಪಿಣರಾಯಿ ವಿಜಯನ್ ಅವರು ಕೇರಳದ ಅಭಿವೃದ್ಧಿಯಲ್ಲಿನ ಅಡೆತಡೆಗಳನ್ನು ನಿವಾರಿಸಲು ಮತ್ತು ರಾಜ್ಯವನ್ನು ಹೂಡಿಕೆದಾರರ ಸ್ನೇಹಿಯಾಗಿಸಲು ಪ್ರಯತ್ನಿಸುತ್ತಿದ್ದಾರೆ. ಅಭಿವೃದ್ಧಿಯನ್ನು ಸ್ವಾಗತಿಸುವವರು ಇದನ್ನು ಪ್ರಶಂಸಿಸಲಿದ್ದಾರೆ' ಎಂದು ಹೇಳಿದ್ದಾರೆ.

ಕೇರಳ ಸರ್ಕಾರದ ಸೆಮಿ ಹೈಸ್ಪೀಡ್ ರೈಲು ಯೋಜನೆ ವಿರೋಧಿಸಿ, ಕೇರಳದ ಕಾಂಗ್ರೆಸ್ ಸಂಸದರು ಈಚೆಗೆ ಕೇಂದ್ರ ರೈಲ್ವೆ ಸಚಿವರಿಗೆ ಸಲ್ಲಿಸಿದ್ದ ಮನವಿಗೂ ಶಶಿ ತರೂರು ಅವರು ಸಹಿ ಹಾಕಿರಲಿಲ್ಲ. ಬಳಿಕ ಸ್ಪಷ್ಟನೆ ನೀಡಿದ್ದ ಅವರು, ಯೋಜನೆ ಬಗ್ಗೆ ಹೆಚ್ಚಿನ ಮಾಹಿತಿ ತಿಳಿದುಕೊಳ್ಳುವ ಅಗತ್ಯ ಇದೆ ಎಂದಿದ್ದರು.

ಪುದುಚೇರಿ: ಲಾಕ್‌ಡೌನ್ ವಿಸ್ತರಣೆ

ಪುದುಚೇರಿ(ಪಿಟಿಐ): ಪುದುಚೇರಿಯಲ್ಲಿ ಜನವರಿ 2ರವರೆಗೆ ಲಾಕ್‌ಡೌನ್ ಮುಂದುವರಿಸಲಾಗುವುದು ಎಂದು ವಿಪತ್ತು ನಿರ್ವಹಣಾ ಸಮಿತಿಯ ರಾಜ್ಯ ಕಾರ್ಯಕಾರಿ ಸಮಿತಿ (ಎಸ್‌ಇಸಿ) ಪ್ರಕಟಣೆ ತಿಳಿಸಿದೆ.

ಕೋವಿಡ್-19 ಪ್ರಕರಣಗಳ ಸಂಖ್ಯೆ ಇಳಿಮುಖವಾಗುತ್ತಿದ್ದರೂ, ವೈರಸ್ ಹರಡುವುದನ್ನು ತಡೆಯಲು ಇನ್ನೂ ನಿಗಾ ಇಡುವ ಅವಶ್ಯಕತೆಯಿದೆ. ಹೀಗಾಗಿ ಜನವರಿ 2ರವರೆಗೆ ಲಾಕ್‌ಡೌನ್ ವಿಸ್ತರಿಸಲಾಗಿದೆ ಎಂದು ತಿಳಿಸಲಾಗಿದೆ.

ರಾಜಕೀಯಕ್ಕೆ ಶ್ರೀಧರನ್ ವಿದಾಯ

ತಿರುವನಂತಪುರ: 'ಮೆಟ್ರೊ ಮ್ಯಾನ್' ಎಂದೇ ಖ್ಯಾತರಾಗಿರುವ ಇ.ಶ್ರೀಧರನ್ ಅವರು ಸಕ್ರಿಯ ರಾಜಕಾರಣದಿಂದ ದೂರವಿರಲು ನಿರ್ಧರಿಸಿದ್ದಾರೆ.

ಶ್ರೀಧರನ್ ಅವರು ಈ ವರ್ಷದ ಏಪ್ರಿಲ್‌ನಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಕೇರಳದ ಪಾಲಕ್ಕಾಡ್‌ನಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದರು.

'ಇನ್ನು ಮುಂದೆ ಸಕ್ರಿಯ ರಾಜಕಾರಣದಲ್ಲಿ ತೊಡಗುವುದಿಲ್ಲ. ರಾಜಕೀಯದಲ್ಲಿ ತೊಡಗಿಸಿಕೊಳ್ಳದೆ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುವೆ. ಕೇವಲ ಅಧಿಕಾರಶಾಹಿಯಾಗಿ ರಾಜಕೀಯಕ್ಕೆ ಸೇರಿದ್ದೆ. ಈಗ ನನಗೆ ವಯಸ್ಸಾಗಿದೆ. ಹೀಗಾಗಿ ಇನ್ನು ಮುಂದೆ ಸಕ್ರಿಯ ರಾಜಕಾರಣದಲ್ಲಿ ಇರುವುದು ಸೂಕ್ತವಲ್ಲ' ಎಂದು 89 ವರ್ಷ ವಯಸ್ಸಿನ ಶ್ರೀಧರನ್ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಬಿಜೆಪಿ ಶಾಸಕಿ ಅಲಿನಾ ಸಾಲ್ಡಾನಾ ರಾಜೀನಾಮೆ

ಪಣಜಿ: ಗೋವಾದ ಬಿಜೆಪಿ ಶಾಸಕಿ, ಅರಣ್ಯ ಖಾತೆ ಮಾಜಿ ಸಚಿವೆ ಅಲಿನಾ ಸಾಲ್ಡಾನಾ ಅವರು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

'ಪಕ್ಷವು ತನ್ನ ನೀತಿ–ನಿಯಮಗಳನ್ನು ಗಾಳಿಗೆ ತೂರಿದೆ. ಪಶ್ಚಿಮ ಘಟ್ಟದಲ್ಲಿ ಗೋವಾ–ಕರ್ನಾಟಕ ಗಡಿಯಲ್ಲಿ ವಿವಾದಾತ್ಮಕ ರಸ್ತೆ ಮತ್ತು ರೈಲು ಮಾರ್ಗಗಳ ವಿಸ್ತರಣೆ ಯೋಜನೆಗಳಿಗೆ ಸಂಬಂಧಿಸಿದಂತೆ ಕೈಗೊಂಡ ನಿರ್ಧಾರಗಳಿಂದ ಬೇಸತ್ತು ರಾಜೀನಾಮೆ ನೀಡಿದ್ದೇನೆ. ನಾಯಕರು ಪಕ್ಷದ ತತ್ವವನ್ನು ಅನುಸರಿಸುತ್ತಿಲ್ಲ. ಯಾರು ಬೇಕಾದರೂ, ಯಾವುದೇ ಪಕ್ಷಕ್ಕದರೂ ಜಿಗಿಯಬಹುದು. ಚುನಾಯಿತ ಪ್ರತಿನಿಧಿಯು ಜನರಿಗೆ ಜವಾಬ್ದಾರನಾಗಿರುತ್ತಾನೆ.' ಎಂದು ಸಾಲ್ಡಾನಾ ತಿಳಿಸಿದರು.

75 ದೇಶಗಳಲ್ಲಿ ಸದ್ಯ ಸೋಂಕು ದೃಢ ; ನಿಯಮ ಬಿಗಿಗೊಳಿಸಿದ ಫ್ರಾನ್ಸ್

ಅಮೆರಿಕ, ಇಂಗ್ಲೆಂಡ್‌ನಲ್ಲಿ ಹೆಚ್ಚುತ್ತಿದೆ ಓಮೈಕ್ರಾನ್ ಭೀತಿ

ವಾಷಿಂಗ್ಟನ್ (ಎ.ಪಿ): ಕೋವಿಡ್‌ನ ರೂಪಾಂತರ ತಳಿ ಓಮೈಕ್ರಾನ್ ವಿವಿಧ ರಾಷ್ಟ್ರಗಳಲ್ಲಿ ತ್ವರಿತಗತಿಯಲ್ಲಿ ಏರುತ್ತಿದೆ. ಡೆಲ್ಟಾ ಪ್ರಕರಣಗಳಿಂದ ಈಗಾಗಲೇ ತತ್ತರಿಸಿರುವ ವೈದ್ಯಕೀಯ ಕ್ಷೇತ್ರದ ಸಿಬ್ಬಂದಿ ಸತತ ಎರಡನೇ ವರ್ಷವೂ ಒತ್ತಡ ಎದುರಿಸುವ ಸ್ಥಿತಿಯಲ್ಲಿದ್ದಾರೆ.

ಅಮೆರಿಕ ಮತ್ತು ಇಂಗ್ಲೆಂಡ್‌ನಲ್ಲಿ ರೂಪಾಂತರ ತಳಿ ಓಮೈಕ್ರಾನ್‌ನ ಜೊತೆಗೆ, ಕೋವಿಡ್‌ನ ಡೆಲ್ಟಾ ಸೋಂಕು ಪ್ರಕರಣಗಳೂ ಗಣನೀಯವಾಗಿ ಏರಿಕೆ ಕಾಣುತ್ತಿವೆ.

ಈ ಮಧ್ಯೆ ಶ್ವೇತಭವನವು, ಸೋಂಕು ಹೆಚ್ಚುತ್ತಿದ್ದರೂ ಲಾಕ್‌ಡೌನ್ ಘೋಷಿಸುವ ಅಗತ್ಯವಿಲ್ಲ. ಲಸಿಕೆ ಲಭ್ಯವಿದೆ. ಗಂಭೀರ ಪರಿಣಾಮಗಳ ವಿರುದ್ಧ ರಕ್ಷಣೆ ಒದಗಿಸಲಿದೆ ಎಂದು ಪ್ರತಿಪಾದಿಸಿದೆ.

ನಮ್ಮಲ್ಲಿ ಡೆಲ್ಟಾ ಸೋಂಕು ಪ್ರಕರಣಗಳು ಹೆಚ್ಚುತ್ತಿವೆ. ಈಗ ಹೆಚ್ಚುವರಿಯಾಗಿ ಓಮೈಕ್ರಾನ್ ಪ್ರಕರಣಗಳು ಕೂಡ ಕಾಣಿಸಿಕೊಳ್ಳುತ್ತಿವೆ ಎಂದು ಹಾರ್ವರ್ಡ್ ಮೆಡಿಕಲ್ ಸ್ಕೂಲ್‌ನ ಡಾ. ಜಾಕೋಬ್ ಲೆಮಿಯಕ್ಸ್ ಅವರು ಪ್ರತಿಕ್ರಿಯಿಸಿದರು.

ಸೋಂಕು ಏರಿಕೆಯು ಎಚ್ಚರಿಕೆ ಗಂಟೆ. ಆಸ್ಪತ್ರೆಗಳು ಈಗಾಗಲೇ ಭರ್ತಿ ಆಗಿವೆ. ಸಿಬ್ಬಂದಿ ಬಸವಳಿದಿದ್ದಾರೆ. ಡೆಲ್ಟಾವನ್ನು ಮೀರಿ ಓಮೈಕ್ರಾನ್ ಪ್ರಕರಣಗಳು ಹೆಚ್ಚುತ್ತಿವೆ. ಇದು ತ್ವರಿತಗತಿಯಲ್ಲಿ ಹಬ್ಬುತ್ತಿರುವ ಕಾರಣ ಅದರ ಅಂದಾಜು ಕಷ್ಟವಾಗುತ್ತಿದೆ ಎಂದು ತಜ್ಞರು ಹೇಳಿದ್ದಾರೆ.

ಅಮೆರಿಕದಲ್ಲಿ 36 ರಾಷ್ಟ್ರಗಳಲ್ಲಿ ಸೋಂಕು ಪತ್ತೆಯಾಗಿದೆ. ನ್ಯೂ ಹ್ಯಾಂಪ್‌ಶೈರ್, ರೋಡೆ ಐಲ್ಯಾಂಡ್, ಮಿಚಿಗನ್, ಮಿನೆಸೊಟಾ ಮತ್ತು ವೆರ್ಮಂಟ್‌ನಲ್ಲಿ ಕಳೆದ ಎರಡು ವಾರದಲ್ಲಿ 1 ಲಕ್ಷ ಡೆಲ್ಟಾ ಸೋಂಕು ಪ್ರಕರಣಗಳು ದೃಢಪಟ್ಟಿವೆ.


ವರ್ಷ, ವಾರಾಂತ್ಯದ ಯೋಜನೆ ಏರುಪೇರು?

ಲಂಡನ್: ಇಂಗ್ಲೆಂಡ್‌ನಲ್ಲಿಯೂ ಓಮೈಕ್ರಾನ್ ಸೋಂಕು ಪ್ರಕರಣಗಳು ಗಣನೀಯವಾಗಿ ಏರಿಕೆ ಕಾಣುತ್ತಿದ್ದು, ವರ್ಷಾಂತ್ಯದ ರಜೆ ಯೋಜನೆಗಳನ್ನು ಏರುಪೇರಾಗಿಸುವ ಸೂಚನೆ ನೀಡಿದೆ.

ಓಮೈಕ್ರಾನ್ ಪರಿಣಾಮ ಕುರಿತು ಖಚಿತ ಮಾಹಿತಿ ಇಲ್ಲವಾದರೂ ಅಧಿಕಾರಿಗಳು, ಇದು ಡೆಲ್ಟಾ ತಳಿಗಿಂತಲೂ ವೇಗವಾಗಿ ಹಬ್ಬಲಿದೆ. ಡೆಲ್ಟಾ ಪರಿಣಾಮದಿಂದಾಗಿ ಈಗಾಗಲೇ ಅಮೆರಿಕದಿಂದ ನೆದರ್‌ಲ್ಯಾಂಡ್‌ವರೆಗೂ ಆಸ್ಪತ್ರೆಗಳ ಮೇಲಿನ ಒತ್ತಡ ಹೆಚ್ಚಾಗಿದೆ.

ಕೋವಿಡ್ ಸ್ಥಿತಿ ಆರಂಭವಾದ ಬಳಿಕ ಇಂಗ್ಲೆಂಡ್‌ನಲ್ಲಿ ಇದೇ ಮೊದಲ ಬಾರಿಗೆ ಬುಧವಾರ ಅತ್ಯಧಿಕ ಪ್ರಕರಣಗಳು ದಾಖಲಾಗಿವೆ. ಇದರ ಹಿಂದೆಯೇ ಫ್ರಾನ್ಸ್, ಬ್ರಿಟನ್‌ನಿಂದ ಬರುವವರಿಗೆ ಪ್ರವೇಶದ ಮೇಲಿನ ನಿರ್ಬಂಧವನ್ನು ಇನ್ನಷ್ಟು ಕಠಿಣಗೊಳಿಸಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,221
ಇಂದಿನ ಅಂತ್ಯ	17,248
▲	27
ದಿನದ ಗರಿಷ್ಠ	17,379

ವಿನಿಮಯ ದರ

$ ಡಾಲರ್	76.09
£ ಪೌಂಡ್	101.17
€ ಯೂರೊ	86.10
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹515

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1300 (1300)
ಸೋಯಾ (ರಿಫೈನ್ಡ್)	₹1190 (1185)
ಸೂರ್ಯಕಾಂತಿ (ರಿಫೈನ್ಡ್)	₹1250 (1260)
ಪಾಮೋಲಿನ್	₹1155 (1152)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದೊಡ್ಡ	₹2500-3000
ಮಧ್ಯಮ	₹1500-2000
ಸಣ್ಣ	₹500-1500

ಕೊಬ್ಬರಿ ಧಾರಣೆ

ಬೆಂಗಳೂರು	₹19000-20000
ಮಂಗಳೂರು	₹8000-14760
ತುರುವೇಕೆರೆ	₹17500-17500

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹20000-27000
2ನೇ ದರ್ಜೆ	₹10000-18000

ಚಿನ್ನ ₹ 209, ಬೆಳ್ಳಿ ₹ 617 ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನ, ಬೆಳ್ಳಿ ಧಾರಣೆ ಏರಿಕೆ ಕಂಡಿದೆ. 10 ಗ್ರಾಂ ಚಿನ್ನದ ದರ ₹ 209ರಷ್ಟು ಹೆಚ್ಚಾಗಿ ₹ 47,405ಕ್ಕೆ ತಲುಪಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 617ರಷ್ಟು ಹೆಚ್ಚಾಗಿ ₹ 60,179ರಂತೆ ಮಾರಾಟವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಆಗಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪರಿಣಾಮ ಉಂಟಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಎಲ್ಲ ಧಾರಣೆ ಸಕಲೇಶಪುರ		ಹಳತು	47900-50539	ಬೆಟ್ಟೆ	40810-46599
ಕೊಳೆ	500-550	ಬಿಳೆಗೋಟು	36769-42829	ಬಿಳೆಗೋಟು	16899-44899
ನಡುಗೋಲು	600-650	ಪುತ್ತೂರು		ಚಾಲಿ	42899-51208
ರಾಶಿ	700-800	ಕೋಕ	11000-26000	ರಾಶಿ	45689-49508
ರಾಶಿ ಉತ್ತಮ	800-900	ಹೊಸತು	27500-45000	ಸಿದ್ದಾಪುರ	
ಜಡಿ	1000-1050	ಸಿದ್ದಾಪುರ		ಬಿಳೆಗೋಟು	30661-39012
ಹರಕಲು	1200-1300	ಬಿಳೆಗೋಟು	31599-39099	ಚಾಲಿ	40899-50890
ಹಸಿರು ಸಾಧಾರಣ	750-850	ಚಾಲಿ	46477-50509	ಕೋಕ	23100-31899
ಹಸಿರು ಉತ್ತಮ	900-1000	ಕೋಕ	26699-36499	ಕೆಂಪುಗೋಟು	30879-33069
ಹಸಿರು ಅತಿ ಉತ್ತಮ	1300-1400	ಹೊಸ ಚಾಲಿ	32099-39599	ರಾಶಿ	45951-52129
ಕಾಳು ಮೆಣಸು	500	ಕೆಂಪುಗೋಟು	31299-36000	ತಟ್ಟಿಬೆಟ್ಟೆ	38042-45269
ಅಡಿಕೆ ಬಂಟ್ವಾಳ		ರಾಶಿ	46699-48689	ರಾಮನಗರ ರೇಷ್ಮೆ	
ಕೋಕ	12500-25000	ತಟ್ಟಿಬೆಟ್ಟೆ	33809-38090	ಮಿಶ್ರತಳಿ	350-680
ಹೊಸತು	27500-45000	ಶಿರಸಿ		ದ್ವಿತಳಿ	685-866
ಹಳತು	46000-53000				
ಕಾರ್ಕಳ					
ಹೊಸತು	40000-45000				
ಹಳತು	46000-53000				
ಕುಮಟ					
ಚಿಪ್ಪು	24109-41288				
ಕೋಕ	20100-35088				

ಕಾಫಿ (50 ಕೆ.ಜಿ.ಗೆ ₹ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15450	15300	15250	237.30ಸೆಂಟ್ಸ್
ಎಸಿ	6900	6600	6450	
ಆರ್‌ಪಿ	6300	---	---	ಲಂಡನ್
ಆರ್‌ಸಿ	3875	3650	---	2437 ಡಾಲರ್ಸ್

ಐಎಂಎಫ್‌ನ ಮುಖ್ಯ ಅರ್ಥಶಾಸ್ತ್ರಜ್ಞೆ ಗೀತಾ ಗೋಪಿನಾಥ್ ಪ್ರತಿಪಾದನೆ

ಕ್ರಿಪ್ಟೊಕರೆನ್ಸಿ ನಿಯಂತ್ರಣ ಅಗತ್ಯ

ನವದೆಹಲಿ (ಪಿಟಿಐ): ಕ್ರಿಪ್ಟೊಕರೆನ್ಸಿಗಳನ್ನು ನಿಯಂತ್ರಣಕ್ಕೆ ಒಳಪಡಿಸಬೇಕಾದ ಅಗತ್ಯ ಇದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಮುಖ್ಯ ಅರ್ಥಶಾಸ್ತ್ರಜ್ಞೆ ಗೀತಾ ಗೋಪಿನಾಥ್ ಪ್ರತಿಪಾದಿಸಿದರು.

'ಪ್ರವರ್ಧಮಾನಕ್ಕೆ ಬರುತ್ತಿರುವ ಅರ್ಥ ವ್ಯವಸ್ಥೆಗಳ ಪಾಲಿಗೆ ಕ್ರಿಪ್ಟೊಕರೆನ್ಸಿಗಳು ಒಂದು ಸವಾಲು. ಅಲ್ಲಿ ಕ್ರಿಪ್ಟೊಕರೆನ್ಸಿಗಳ ಬಳಕೆಯು ಹೆಚ್ಚು ಆಕರ್ಷಕವಾಗಿ 'ಇರುತ್ತದೆ' ಎಂದು ಗೀತಾ ಅವರು ರಾಷ್ಟ್ರೀಯ ಅನ್ವಯಿಕ ಆರ್ಥಶಾಸ್ತ್ರ ಸಂಶೋಧನಾ ಮಂಡಳಿ (ಎನ್‌ಸಿಎಇಆರ್) ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹೇಳಿದರು.

ಕ್ರಿಪ್ಟೊ ಕರೆನ್ಸಿಗಳನ್ನು ಕಾನೂನಿನ ನಿಯಂತ್ರಣಕ್ಕೆ ಒಳಪಡಿಸಲು ಮಸೂದೆಯೊಂದನ್ನು ಸಂಸತ್ತಿನಲ್ಲಿ ಮಂಡಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ದೇಶದಲ್ಲಿ ಈಗ ಕ್ರಿಪ್ಟೊ ಕರೆನ್ಸಿಗಳಿಗೆ ನಿಷೇಧವೂ ಇಲ್ಲ, ಅವುಗಳನ್ನು ನಿಯಂತ್ರಿಸುವ ಕಾನೂನು ಸಹ ಇಲ್ಲ.

'ಈ ಕರೆನ್ಸಿಗಳನ್ನು ನಿಯಂತ್ರಿಸಬೇಕಾದ ಅಗತ್ಯ ಖಂಡಿತ ಇದೆ. ವಿಶ್ವದಾದ್ಯಂತ ಬೇರೆ ಬೇರೆ ದೇಶಗಳು ಬಗೆಬಗೆಯ ಕ್ರಮಗಳನ್ನು ಕೈಗೊಳ್ಳಲು ಮುಂದಾಗುತ್ತಿವೆ. ಇವುಗಳನ್ನು ನಿಷೇಧಿಸುವುದರಲ್ಲಿಯೂ ಸವಾಲುಗಳು ಇವೆ' ಎಂದು ಗೀತಾ ಅವರು ಹೇಳಿದರು.

ಕ್ರಿಪ್ಟೊಕರೆನ್ಸಿ ವಹಿವಾಟುಗಳು ದೇಶಗಳ ಗಡಿಗಳನ್ನು ಮೀರಿ ನಡೆಯುವ ಕಾರಣ, ಕ್ರಿಪ್ಟೊಕರೆನ್ಸಿಗಳಿಂದ ಸೃಷ್ಟಿಯಾಗುವ ಸಮಸ್ಯೆಗಳನ್ನು ಬಗೆಹರಿಸುವುದು ಯಾವುದೇ ಒಂದು ದೇಶದಿಂದ ಸಾಧ್ಯವಿಲ್ಲ. ಹೀಗಾಗಿ, ಈ ವಿಚಾರವಾಗಿ ಜಾಗತಿಕ ಮಟ್ಟದಲ್ಲಿ ನೀತಿಯೊಂದನ್ನು ತುರ್ತಾಗಿ ರೂಪಿಸಬೇಕು ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಭಾರತದಲ್ಲಿ ಹಣದುಬ್ಬರ ಪ್ರಮಾಣವು ಹೆಚ್ಚಿನ ಮಟ್ಟದಲ್ಲಿ ಇದೆ. ಈ ಸಂದರ್ಭದಲ್ಲಿ ಹೊಂದಾಣಿಕೆಯ ಹಣಕಾಸು ನೀತಿಯನ್ನು ಇನ್ನೂ ಕೆಲವು ಕಾಲ ತೃಪ್ತಿಕರವಾಗಿ ಮುಂದುವರಿಸಬಹುದು. ನಂತರದಲ್ಲಿ ಹಂತ ಹಂತವಾಗಿ ಈ ನೀತಿಯಿಂದ ಹಿಂದಕ್ಕೆ ಸರಿಯಬಹುದು ಎಂದು ಅವರು ಹೇಳಿದರು. ದೇಶದ ಸಗಟು ಹಣದುಬ್ಬರ ದರವು ನವೆಂಬರ್‌ನಲ್ಲಿ ಶೇಕಡ 14.23ಕ್ಕೆ ತಲುಪಿದ್ದು, ಇದು 12 ವರ್ಷಗಳ ಗರಿಷ್ಠ ಮಟ್ಟ.

ಹೊಂದಾಣಿಕೆಯ ಹಣಕಾಸು ನೀತಿಯನ್ನು ಮುಂದುವರಿಸಿಕೊಳ್ಳುವುದರ ಜೊತೆಯಲ್ಲೇ ಹಣದುಬ್ಬರ ಪ್ರಮಾಣದ ಮೇಲೆಯೂ ಗಮನ ಇರಿಸಬೇಕು ಎಂದು ಹೇಳಿದರು.


ಗೀತಾ ಗೋಪಿನಾಥ್

ಮುಖ್ಯಾಂಶಗಳು
- ಪ್ರವರ್ಧಮಾನಕ್ಕೆ ಬರುತ್ತಿರುವ ಆರ್ಥಿಕತೆಗಳಿಗೆ ಕ್ರಿಪ್ಟೊಕರೆನ್ಸಿ ಸವಾಲು
- ಜಾಗತಿಕ ಮಟ್ಟದ ನೀತಿ ಅಗತ್ಯ
- ಹೊಂದಾಣಿಕೆಯ ಹಣಕಾಸು ನೀತಿ ಮುಂದುವರಿಯಲಿ

ಬನೆಲಿ ಹೊಸ ಬೈಕ್

ನವದೆಹಲಿ (ಪಿಟಿಐ): ಸೂಪರ್‌ಬೈಕ್‌ಗಳನ್ನು ತಯಾರಿಸುವ ಬನೆಲಿ ಕಂಪನಿಯು ಸಾಹಸಮಯ ಪ್ರವಾಸಕ್ಕೆ ಅನುಕೂಲ ಆಗುವ ಹೊಸ ಮಾದರಿ ಟಿಆರ್‌ಕೆ 251 ದ್ವಿಚಕ್ರ ವಾಹನವನ್ನು ಭಾರತದ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದರ ಎಕ್ಸ್ ಷೋರೂಂ ಬೆಲೆ ₹ 2.51 ಲಕ್ಷ ಇದೆ. ಈ ಬೈಕ್ 250ಸಿಸಿ ಸಿಂಗಲ್ ಸಿಲಿಂಡರ್ ಎಂಜಿನ್ ಹೊಂದಿದೆ.

ಮುಂಬೈ ಧಾರಣೆ

ಶೇಂಗಾ

16-12-2021

ಜಾವಾ 70/80(ಹೊಸ)	10650-10700
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	8600-8700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1310 (1310)
ಒಂದು ವಾರದ ಡೆಲಿವರಿ	1305 (1305)
ಸೋಯಾ ಕಚ್ಚಾ	1150 (1140)
ಪಾಮ್ ವಾರದ ಡೆಲಿವರಿ	1153 (1150)
ಸೂರ್ಯಕಾಂತಿ ಎಣ್ಣೆ ಕಚ್ಚಾ	1170 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	48,250 (47,900)
ಬೆಳ್ಳಿ ಕೆ.ಜಿ	61,075 (60,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಇಡ್ಲಿ, ದೋಸೆ ಹಿಟ್ಟು ಮಾರುಕಟ್ಟೆಗೆ ಎಂಟಿಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಡ್ಲಿ ಮತ್ತು ದೋಸೆ ಹಿಟ್ಟು ಮಾರುಕಟ್ಟೆಯಲ್ಲಿ ಐಡಿ, ರಿಷ್ತಾ, ಅಸಲ್‌ನಂತಹ ಬ್ರ್ಯಾಂಡ್‌ಗಳಿಗೆ ಸ್ಪರ್ಧೆ ಒಡ್ಡಲು ಎಂಟಿಆರ್ ಫುಡ್ಸ್ ಮುಂದಾಗಿದೆ. ಆರಂಭಿಕ ಹಂತದಲ್ಲಿ ಇಡ್ಲಿ ಮತ್ತು ದೋಸೆಗೆ ಪ್ರತ್ಯೇಕವಾದ ಹಿಟ್ಟುಗಳನ್ನು ಬೆಂಗಳೂರಿನ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಕೆಲವು ಬ್ರ್ಯಾಂಡ್‌ಗಳು ಇಡ್ಲಿ ಹಾಗೂ ದೋಸೆಗೆ ಪ್ರತ್ಯೇಕ ಹಿಟ್ಟು ಮಾರಾಟ ಮಾಡುವುದಿಲ್ಲ. ಒಂದೇ ಹಿಟ್ಟನ್ನು ಇಡ್ಲಿಗೂ ದೋಸೆಗೂ ಬಳಸಬಹುದು ಎಂದು ಹೇಳುತ್ತವೆ. ಎಂಟಿಆರ್ ಫುಡ್ಸ್, ಇಡ್ಲಿ ಮತ್ತು ದೋಸೆ ಹಿಟ್ಟಿನ ಪ್ರತಿ ಪ್ಯಾಕ್‌ಗೆ ₹ 75 ಬೆಲೆ ನಿಗದಿ ಮಾಡಿದೆ. ಒಂದು ಪ್ಯಾಕ್ ಇಡ್ಲಿ ಹಿಟ್ಟು ಬಳಸಿ 16 ಇಡ್ಲಿಗಳನ್ನು, ಒಂದು ಪ್ಯಾಕ್ ದೋಸೆ ಹಿಟ್ಟು ಬಳಸಿ 12 ದೋಸೆಗಳನ್ನು ಮಾಡಬಹುದು ಎಂದು ಕಂಪನಿ ಹೇಳಿದೆ.

ಈ ಉತ್ಪನ್ನಗಳಿಗಾಗಿ ಕಂಪನಿಯು ₹ 25 ಕೋಟಿಯನ್ನು ಬಂಡವಾಳ ವೆಚ್ಚವಾಗಿ ತೊಡಗಿಸಿದೆ. ಉತ್ಪನ್ನಗಳ ಪ್ರಚಾರಕ್ಕೆ ಪ್ರತ್ಯೇಕವಾಗಿ ಹಣ ಹೂಡಿಕೆ ಮಾಡಲಾಗುತ್ತದೆ ಎಂದು ಎಂಟಿಆರ್ ಫುಡ್ಸ್ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಸಂಜಯ್ ಶರ್ಮ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸುದ್ದಿ 2 ನಿಮಿಷ

ಲಾಂಛನ ದುರ್ಬಳಕೆ ವಿರುದ್ಧ ಎಲ್‌ಐಸಿ ಕ್ರಮ

ನವದೆಹಲಿ (ಪಿಟಿಐ): ಗ್ರಾಹಕರನ್ನು ಆಕರ್ಷಿಸುವ ಉದ್ದೇಶದಿಂದ ಸಾಮಾಜಿಕ ಜಾಲತಾಣಗಳಲ್ಲಿ ತನ್ನ ಲಾಂಛನವನ್ನು ಅಕ್ರಮವಾಗಿ ಬಳಸಿಕೊಳ್ಳುತ್ತಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸುವುದಾಗಿ ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ಗುರುವಾರ ಹೇಳಿದೆ.

ಟ್ವಿಟರ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ ಮತ್ತು ಯೂಟ್ಯೂಬ್‌ನಂತಹ ಸಾಮಾಜಿಕ ಜಾಲತಾಣಗಳಲ್ಲಿ ತನ್ನ ಲಾಂಛನವನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವವರು ಕಳುಹಿಸುವ ವಿಮಾ ಪ್ರಸ್ತಾವನೆಗಳಿಗೆ ತುತ್ತಾಗಬಾರದು ಎಂದು ಎಲ್‌ಐಸಿ ಸಾರ್ವಜನಿಕರಲ್ಲಿ ಮನವಿ ಮಾಡಿದೆ.

'ಕೆಲವರು ನಮ್ಮ ಲಾಂಛನ ಹೋಲುವ ಲಾಂಛನ ಬಳಸಿಕೊಂಡು ವೆಬ್‌ಸೈಟ್ ಮತ್ತು ಆ್ಯಪ್‌ಗಳನ್ನು ಆರಂಭಿಸಿರುವುದು, ಅವುಗಳ ಮೂಲಕ ವಿಮೆ ಮತ್ತು ವಿಮಾ ಸಲಹೆ ಸೇವೆಗಳನ್ನು ನೀಡುವ ಯತ್ನ ನಡೆಸಿರುವುದು ನಮ್ಮ ಗಮನಕ್ಕೆ ಬಂದಿದೆ. ನಮ್ಮ ವೆಬ್‌ಸೈಟ್ ವಿಳಾಸವನ್ನು ಹೋಲುವ ವೆಬ್‌ಸೈಟ್ ವಿಳಾಸ ಬಳಸಿಯೂ ಅವರು ಈ ಕೆಲಸ ಮಾಡುತ್ತಿದ್ದಾರೆ' ಎಂದು ಎಲ್‌ಐಸಿ ಹೇಳಿದೆ.

'ಚ್ಯವನಪ್ರಾಶ್‌ಗೆ ವೈಜ್ಞಾನಿಕ ಆಧಾರ'

ಬೆಂಗಳೂರು: ಆಯುರ್ವೇದ ಔಷಧಗಳಲ್ಲಿ ಒಂದಾಗಿರುವ ಚ್ಯವನಪ್ರಾಶ್‌ಗೆ ವೈಜ್ಞಾನಿಕ ಆಧಾರವನ್ನು ಪತಂಜಲಿ ಸಂಶೋಧನಾ ಸಂಸ್ಥೆಯ (ಪಿಆರ್‌ಐ) ವಿಜ್ಞಾನಿಗಳ ತಂಡ ನೀಡಿದೆ ಎಂದು ಪತಂಜಲಿ ಯೋಗಪೀಠ ಹೇಳಿದೆ. ಪುರಾತನ ಆಯುರ್ವೇದ ಜ್ಞಾನವನ್ನು ಆಧುನಿಕ ವಿಜ್ಞಾನದ ಬೆಳಕಿನಲ್ಲಿ ಅರ್ಥೈಸುವ ಪ್ರಕ್ರಿಯೆಯಲ್ಲಿ ಇದು ಇನ್ನೊಂದು ಮೈಲಿಗಲ್ಲು ಎಂದು ಪತಂಜಲಿ ಸಂಶೋಧನಾ ಪ್ರತಿಷ್ಠಾನ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಆಚಾರ್ಯ ಬಾಲಕೃಷ್ಣ ಹೇಳಿದ್ದಾರೆ.

ಚ್ಯವನಪ್ರಾಶ್‌ಅನ್ನು ಕೆಲವರು ಪ್ರತಿನಿತ್ಯ ಬಳಸುತ್ತಾರೆ. 'ನಾವು ಕೆಮ್ಮು, ನೆಗಡಿ ಮತ್ತು ಜ್ವರಕ್ಕೆ ಹೆಚ್ಚು ತುತ್ತಾಗುವ ಸಾಧ್ಯತೆ ಇರುವ ಚಳಿಗಾಲದಲ್ಲಿ ಚ್ಯವನಪ್ರಾಶ್ ಸೇವಿಸುವಂತೆ ಸೂಚಿಸುವುದು ಇದೆ. ಇದುವರೆಗೆ ಚ್ಯವನಪ್ರಾಶ್‌ನ ಆರೋಗ್ಯ ಪ್ರಯೋಜನಗಳ ಬಗ್ಗೆ ವೈಜ್ಞಾನಿಕ ಆಧಾರ ಇರಲಿಲ್ಲ. ಉರಿಯೂತ, ಜ್ವರ, ಕೆಮ್ಮು ಮತ್ತು ನೆಗಡಿ ವಿರುದ್ಧದ ಹೋರಾಟದಲ್ಲಿ ಚ್ಯವನಪ್ರಾಶ್‌ಗೆ ದೇಹಕ್ಕೆ ಹೇಗೆ ನೆರವಾಗುತ್ತದೆ ಎಂಬುದನ್ನು ಪಿಆರ್‌ಐನ ವಿಜ್ಞಾನಿಗಳು ಈಗ ಕಂಡುಕೊಂಡಿದ್ದಾರೆ. ಅಧ್ಯಯನದ ಮೂಲಕ ಕಂಡುಕೊಂಡಿದ್ದನ್ನು ಫ್ರಂಟಿಯರ್ಸ್ ಇನ್ ಫಾರ್ಮಕಾಲಜಿ ನಿಯತಕಾಲಿಕೆಯಲ್ಲಿ ಪ್ರಕಟಿಸಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

₹2400 ಕೋಟಿ ಮೊತ್ತದ ಯೋಜನೆ: ತೇಜಸ್‌ಗೆ ವಿವಿಧ ಸಾಮಗ್ರಿ ಪೂರೈಕೆ

ಬಿಇಎಲ್–ಎಚ್‌ಎಎಲ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಘು ಯುದ್ಧ ವಿಮಾನಗಳನ್ನು ಅಭಿವೃದ್ಧಿಪಡಿಸುವ ಮಹತ್ವಾಕಾಂಕ್ಷಿ ಯೋಜನೆಗೆ ಸಂಬಂಧಿಸಿದಂತೆ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಜತೆ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ₹2400 ಕೋಟಿ ಮೊತ್ತದ ಒಪ್ಪಂದಕ್ಕೆ ಗುರುವಾರ ಸಹಿ ಹಾಕಿದೆ.

'ತೇಜಸ್ ಎಂಕೆ1ಎ' ಲಘು ಯುದ್ಧ ವಿಮಾನಗಳಿಗೆ ಅಳವಡಿಸಲು 20 ರೀತಿಯ ವೈಮಾನಿಕ ವಿದ್ಯುನ್ಮಾನ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸಿ ಪೂರೈಸುವ ಕಾರ್ಯಾದೇಶವನ್ನು ಬಿಇಎಲ್‌ಗೆ ನೀಡಲಾಗಿದೆ.

ಈ ಕಾರ್ಯಾದೇಶವನ್ನು 2023 ರಿಂದ 2028ರ ಅವಧಿಗೆ ನಿಗದಿಪಡಿಸಲಾಗಿದೆ. ಉಭಯ ಸಂಸ್ಥೆಗಳು ಮಾಡಿಕೊಂಡಿರುವ ಒಪ್ಪಂದದ ಅನ್ವಯ 'ಲೈನ್ ರಿಪ್ಲೇಸಬಲ್ ಯುನಿಟ್ (ಎಲ್‌ಆರ್‌ಯು), ಡಿಜಿಟಲ್ ವೈಮಾನಿಕ ನಿಯಂತ್ರಣ ಕಂಪ್ಯೂಟರ್‌ಗಳು ಸೇರಿದಂತೆ ವಿವಿಧ ವೈಮಾನಿಕ ಉಪಕರಣಗಳನ್ನು ತಯಾರಿಸಲು ಸೂಚಿಸಲಾಗಿದೆ.

ಬಿಇಎಲ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಆನಂದಿ ರಾಮಲಿಂಗಪ್ಪ ಹಾಗೂ ಎಚ್‌ಎಎಲ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಆರ್. ಮಾಧವನ್ ಅವರ ಸಮ್ಮುಖದಲ್ಲಿ ಬಿಇಎಲ್ ಪ್ರಧಾನ ವ್ಯವಸ್ಥಾಪಕ ಮನೋಜ್ ಜೈನ್ ಮತ್ತು ಎಚ್‌ಎಎಲ್‌ನ ಪ್ರಧಾನ ವ್ಯವಸ್ಥಾಪಕ ಇ.ಪಿ. ಜಯದೇವ್ ಈ ಬಗ್ಗೆ ಒಪ್ಪಂದಕ್ಕೆ ಸಹಿ ಹಾಕಿದರು.

'ವೈಮಾನಿಕ ವ್ಯವಸ್ಥೆಗಳ ಉಪಕರಣಗಳ ಅಭಿವೃದ್ಧಿಪಡಿಗೆ ಸಂಬಂಧಿಸಿದಂತೆ ಬೃಹತ್ ಪ್ರಮಾಣದ ಕಾರ್ಯಾದೇಶವನ್ನು ಬಿಇಎಲ್ ಪಡೆದಿದೆ. ಆತ್ಮನಿರ್ಭರ ಭಾರತ ಅಭಿಯಾನವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಅತಿ ದೊಡ್ಡ ಒಪ್ಪಂದ ಇದಾಗಿದೆ' ಎಂದು ಬಿಇಎಲ್ ಪ್ರಕಟಣೆ ತಿಳಿಸಿದೆ.

83 ತೇಜಸ್ ಎಂಕೆ1ಎ ಲಘು ಯುದ್ಧ ವಿಮಾನಗಳಿಗೆ ಈ ಎಲ್ಲ ಉಪಕರಣಗಳನ್ನು ಬಿಇಎಲ್‌ನ ಬೆಂಗಳೂರು ಮತ್ತು ಹರಿಯಾಣದ ಪಂಚಕುಲಾ ಘಟಕಗಳಿಂದ ಪೂರೈಸಲು ಉದ್ದೇಶಿಸಲಾಗಿದೆ.


ಬೆಂಗಳೂರಿನಲ್ಲಿ ಗುರುವಾರ ಬಿಇಎಲ್ ಪ್ರಧಾನ ವ್ಯವಸ್ಥಾಪಕ ಮನೋಜ್ ಜೈನ್ ಮತ್ತು ಎಚ್‌ಎಎಲ್‌ನ ಪ್ರಧಾನ ವ್ಯವಸ್ಥಾಪಕ ಇ.ಪಿ. ಜಯದೇವ್ ಒಪ್ಪಂದಕ್ಕೆ ಸಂಬಂಧಿಸಿದ ಕಡತಗಳನ್ನು ಪಡೆದರು. ಬಿಇಎಲ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಆನಂದಿ ರಾಮಲಿಂಗಂ ಹಾಗೂ ಎಚ್‌ಎಎಲ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಆರ್. ಮಾಧವನ್ ಇದ್ದರು

ಬೆಂಗಳೂರಿನಿಂದ ಕೊಡಗು, ಕಬಿನಿಗೆ ಹೆಲಿಕಾಪ್ಟರ್ ಸೇವೆ

ಮುಂಬೈ (ಪಿಟಿಐ): ಅಮೆರಿಕದ ಸಂಸ್ಥೆಯ ಭಾರತದ ಅಧೀನ ಸಂಸ್ಥೆ 'ಬ್ಲೇಡ್ ಇಂಡಿಯಾ' ಈಗ ಬೆಂಗಳೂರಿನಿಂದ ಕೊಡಗು ಮತ್ತು ಕಬಿನಿಗೆ ಹೆಲಿಕಾಪ್ಟರ್ ಪ್ರಯಾಣ ಸೇವೆಯನ್ನು ಆರಂಭಿಸಿದೆ.

ಈ ಎರಡೂ ಮಾರ್ಗದಲ್ಲಿ ಸೇವೆ ಆರಂಭದೊಂದಿಗೆ ಉಭಯ ಸ್ಥಳಗಳಿಗೆ ಬೆಂಗಳೂರಿನಿಂದ ಪ್ರಯಾಣದ ಅವಧಿ 6-7 ಗಂಟೆ ಕುಗ್ಗಲಿದೆ ಎಂದು ಕಂಪನಿಯ ಹೇಳಿಕೆ ತಿಳಿಸಿದೆ.

ಸಂಚಾರದಟ್ಟಣೆ ಇರುವ ಹಾಗೂ ರಸ್ತೆಯ ಮೂಲಕ ಸುಲಭ ಮತ್ತು ತ್ವರಿತವಾಗಿ ತಲುಪಲಾಗದ ಸ್ಥಳಗಳಿಗೆ ಹೆಲಿಕಾಪ್ಟರ್ ಸೇವೆಯನ್ನು ಒದಗಿಸಲು ಸಂಸ್ಥೆಯು ಉದ್ದೇಶಿಸಿದೆ ಎಂದು ತಿಳಿಸಿದೆ.

ಬ್ಲೇಡ್ ಇಂಡಿಯಾ ವ್ಯವಸ್ಥಾಪಕ ನಿರ್ದೇಶಕ ಅಮಿತ್ ದತ್ತಾ, 'ಕರ್ನಾಟಕದಲ್ಲಿ ಕೆಲ ಅತ್ಯುತ್ತಮ ತಾಣಗಳಿವೆ. ಆದರೆ, ಅಲ್ಲಿಗೆ ತಲುಪುವುದೇ ಕಷ್ಟ. ರಸ್ತೆ ಮೂಲಕ ತೆರಳಲು 6 ಗಂಟೆ ಬೇಕಿತ್ತು. ಈಗ ಜನತೆ ಬಯಸಿದ ತಾಣದಲ್ಲಿ ಹೆಚ್ಚು ಕಾಲ ಕಳೆಯಬಹುದಾಗಿದೆ' ಎಂದರು.

ಚೀನಾ: ಕಲ್ಲಿದ್ದಲು ಗಣಿಯಲ್ಲಿ ಪ್ರವಾಹ, 22 ಮಂದಿಗೆ ಶೋಧ

ಬೀಜಿಂಗ್ (ಪಿಟಿಐ): ಚೀನಾದ ಶಾಂಕ್ಸಿ ಪ್ರಾಂತ್ಯದ ಕ್ಸಿಯಾವೊಯಿ ನಗರವೊಂದರ ಕಲ್ಲಿದ್ದಲು ಗಣಿಯಲ್ಲಿ ಅಕ್ರಮ ಗಣಿಗಾರಿಕೆಯಿಂದಾಗಿ ಉಂಟಾದ ಪ್ರವಾಹದಲ್ಲಿ 22 ಮಂದಿ ಸಿಲುಕಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ. ಬುಧವಾರ ರಾತ್ರಿ 11 ಗಂಟೆಗೆ ಈ ಅವಘಡ ಸಂಭವಿಸಿದೆ ಎಂದು ಮಾಹಿತಿ ನೀಡಿದ್ದಾರೆ.

ಢಾಕಾ: ಇಂದು ನವೀಕೃತ ಕಾಳಿಮಂದಿರ ಉದ್ಘಾಟನೆ

ಬಾಂಗ್ಲಾ ರಾಷ್ಟ್ರಪತಿಗೆ ಮಿಗ್ 21 ವಿಮಾನದ ಪ್ರತಿಕೃತಿ ನೀಡಿದ ಕೋವಿಂದ್

ಢಾಕಾ (ಪಿಟಿಐ): ಬಾಂಗ್ಲಾದೇಶದ ವಿಮೋಚನೆಗಾಗಿ ಪಾಕಿಸ್ತಾನದ ವಿರುದ್ಧ 1971ರಲ್ಲಿ ಯುದ್ಧ ಗೆದ್ದ 50ನೇ ವರ್ಷಾಚರಣೆ ಅಂಗವಾಗಿ ಭಾರತದ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು, ಬಾಂಗ್ಲಾದೇಶದ ರಾಷ್ಟ್ರಪತಿ ಅಬ್ದುಲ್ ಹಮೀದ್ ಅವರಿಗೆ 1971ರ ಜಮಾನದ ಮಿಗ್–21 ವಿಮಾನದ ಪ್ರತಿಕೃತಿಯನ್ನು ನೀಡಿದ್ದಾರೆ. ಉಭಯ ದೇಶಗಳ ಯೋಧರ ಬಲಿದಾನದ ಸ್ಮರಣೆಗಾಗಿ ಉಡುಗೊರೆ ನೀಡಲಾಗಿದೆ.

ಮೂರು ದಿನಗಳ ಪ್ರವಾಸಕ್ಕಾಗಿ ಬಾಂಗ್ಲಾದೇಶಕ್ಕೆ ಬಂದಿರುವ ರಾಷ್ಟ್ರಪತಿ ರಾಮನಾಥ್ ಕೋವಿಂದ ಅವರು, ಪಾಕಿಸ್ತಾನದ ವಿರುದ್ಧ 1971ರಲ್ಲಿ ಯುದ್ಧ ಗೆದ್ದ 50ನೇ ವರ್ಷಾಚರಣೆಯ 'ವಿಜಯ ದಿವಸ' ಕಾರ್ಯಕ್ರಮದಲ್ಲಿ ಗೌರವ ಅತಿಥಿಯಾಗಿ ಭಾಗವಹಿಸಿದ್ದರು. ಈ ವೇಳೆ ಸೇನೆಯು ವೈಮಾನಿಕ ಪ್ರದರ್ಶನ ಮತ್ತು ರಕ್ಷಣಾ ಸಾಮಗ್ರಿಗಳನ್ನು ಪ್ರದರ್ಶಿಸಿತು.

ರಾಷ್ಟ್ರೀಯ ಪರೇಡ್ ಮೈದಾನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಾಂಗ್ಲಾದೇಶದ ಅಧ್ಯಕ್ಷ ಅಬ್ದುಲ್ ಹಮೀದ್, ಪ್ರಧಾನಿ ಶೇಖ್ ಹಸೀನಾ, ಸಚಿವರು, ರಾಜತಾಂತ್ರಿಕರು ಮತ್ತು ಇತರ ಗಣ್ಯರು ಭಾಗವಹಿಸಿದ್ದರು. ಬಾಂಗ್ಲಾದೊಂದಿಗಿನ ಮೈತ್ರಿಗೆ ಭಾರತ ಯಾವಾಗಲೂ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತದೆ ಕೋವಿಂದ ಹೇಳಿದರು.

ಜೀರ್ಣೋದ್ಧಾರಗೊಳಿಸಲಾಗಿರುವ ಇಲ್ಲಿನ ರಮನಾ ಕಾಳಿ ಮಂದಿರವನ್ನು ರಾಷ್ಟ್ರಪತಿ ರಾಮನಾಥ್ ಕೋವಿಂದ ಅವರು ಶುಕ್ರವಾರ (ಡಿ.17) ಉದ್ಘಾಟಿಸಲಿದ್ದಾರೆ.

1971ರಲ್ಲಿ ಯುದ್ಧದ ಸಂದರ್ಭದಲ್ಲಿ ಪಾಕಿಸ್ತಾನ ಪಡೆಗಳು 'ಆಪರೇಷನ್ ಸರ್ಚ್‌ಲೈಟ್' ಹೆಸರಿನಲ್ಲಿ ನಡೆಸಿದ ಕಾರ್ಯಾಚರಣೆ ವೇಳೆ ಈ ದೇವಸ್ಥಾನವನ್ನು ನಾಶಪಡಿಸಿದ್ದವು. ದೇವಸ್ಥಾನಕ್ಕೆ ಬೆಂಕಿ ಹಚ್ಚಿದ್ದ ಪಾಕಿಸ್ತಾನ ಪಡೆಗಳು, ನೂರಾರು ಜನ ಭಕ್ತರು ಹಾಗೂ ದೇಗುಲದಲ್ಲಿದ್ದವರನ್ನು ಹತ್ಯೆ ಮಾಡಿದ್ದವು.


ರಾಮನಾಥ್ ಕೋವಿಂದ

ಲಂಡನ್: ಲಸಿಕೆ ಸಂಶೋಧನಾ ಕೇಂದ್ರಕ್ಕೆ ಪೂನಾವಾಲಾ ಕುಟುಂಬದ ನೆರವು

ಲಂಡನ್ (ಪಿಟಿಐ): ವಿವಿಧ ಲಸಿಕೆಗಳ ಕುರಿತು ಸಂಶೋಧನೆ ಕೈಗೊಳ್ಳುವ ಸಂಬಂಧ ಭಾರತದ ಸೀರಂ ಲೈಫ್ ಸೈನ್ಸಸ್ ಸಂಸ್ಥೆಯ ಆರ್ಥಿಕ ನೆರವಿನೊಂದಿಗೆ ಇಲ್ಲಿ 'ಪೂನಾವಾಲಾ ವ್ಯಾಕ್ಸಿನ್ಸ್ ರಿಸರ್ಚ್ ಬಿಲ್ಡಿಂಗ್' ಎಂಬ ನೂತನ ಕೇಂದ್ರವನ್ನು ಸ್ಥಾಪಿಸಲಾಗುವುದು ಎಂದು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಘೋಷಿಸಿದೆ.

'ವಿಶ್ವವಿದ್ಯಾಲಯದ ಓಲ್ಡ್ ರೋಡ್ ಕ್ಯಾಂಪಸ್‌ನಲ್ಲಿ ಈ ಕೇಂದ್ರವನ್ನು ಸ್ಥಾಪಿಸಲಾಗುವುದು. 300ಕ್ಕೂ ಅಧಿಕ ವಿಜ್ಞಾನಿಗಳು ಸಂಶೋಧನೆ–ಅಧ್ಯಯನ ನಡೆಸಲು ಬೇಕಾದ ಸೌಲಭ್ಯಗಳು ಈ ಕೇಂದ್ರದಲ್ಲಿ ಇರಲಿವೆ. ಈ ಯೋಜನೆಗೆ ಸೀರಂ ಲೈಫ್ ಸೈನ್ಸಸ್ ₹ 505 ಕೋಟಿ (50 ಮಿಲಿಯನ್ ಪೌಂಡ್) ನೆರವು ನೀಡಲಿದೆ' ಎಂದು ವಿಶ್ವವಿದ್ಯಾಲಯ ತಿಳಿಸಿದೆ.

ಸೀರಂ ಲೈಫ್ ಸೈನ್ಸಸ್ ಸಂಸ್ಥೆ ಅದಾರ್ ಪೂನಾವಾಲಾ ಕುಟುಂಬದ ಒಡೆತನದಲ್ಲಿದೆ. ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ಕೂಡ ಇದೇ ಕುಟುಂಬಕ್ಕೆ ಸೇರಿದ್ದು.

'ಲಸಿಕೆಗಳ ಕುರಿತು ಸಂಶೋಧನೆ ಕೈಗೊಳ್ಳಲು ಈ ಉದಾರ ಕೊಡುಗೆ ಲಭಿಸಿರುವುದಕ್ಕೆ ನನಗೆ ಸಂತಸವಾಗಿದೆ. ಜಾಗತಿಕವಾಗಿ ಅಗತ್ಯವಿರುವ ಲಸಿಕೆಗಳ ಅಭಿವೃದ್ಧಿಗೆ ಶ್ರಮಿಸಲು ಇದರಿಂದ ನಮಗೆ ಮತ್ತಷ್ಟು ಶಕ್ತಿ ಸಿಗಲಿದೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಲೂಯಿಸ್ ರಿಚರ್ಡ್‌ಸನ್ ಪ್ರತಿಕ್ರಿಯಿಸಿದ್ದಾರೆ.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾಗಿರುವ ಕೋವಿಡ್ ಲಸಿಕೆ ಕೋವಿಶೀಲ್ಡ್ ಅನ್ನು ಪುಣೆಯಲ್ಲಿರುವ ಸಿಐಐ ಉತ್ಪಾದಿಸುತ್ತಿದೆ.


ಆದಾರ್ ಪೂನಾವಾಲಾ

ಸಿಂಧು–ತೈಜು ಮುಖಾಮುಖಿ

ವಿಶ್ವ ಬ್ಯಾಡ್ಮಿಂಟನ್: ಎಂಟರ ಘಟ್ಟಕ್ಕೆ ಭಾರತದ ಆಟಗಾರ್ತಿ

ವೆಲ್ವಾ, ಸ್ಪೇನ್ (ಪಿಟಿಐ): ಹಾಲಿ ಚಾಂಪಿಯನ್, ಭಾರತದ ಪಿ.ವಿ. ಸಿಂಧು ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಎಂಟರ ಘಟ್ಟಕ್ಕೆ ಲಗ್ಗೆ ಇಟ್ಟಿದ್ದಾರೆ. ಕ್ವಾರ್ಟರ್‌ಫೈನಲ್‌ನಲ್ಲಿ ಅವರು ಚೈನಿಸ್ ತೈಪೆಯ ತೈ ಜು ಯಿಂಗ್ ವಿರುದ್ಧ ಸೆಣಸುವರು.




ಪಿ.ವಿ. ಸಿಂಧು –ಎಪಿ/ಪಿಟಿಐ ಚಿತ್ರ

ಗುರುವಾರ ನಡೆದ ಪ್ರಿಕ್ವಾರ್ಟರ್ ಫೈನಲ್‌ನಲ್ಲಿ 21–14, 21–18ರಲ್ಲಿ ಥಾಯ್ಲೆಂಡ್‌ನ ಪಾರ್ನ್‌ಪಾವಿ ಚೊಚುವಾಂಗ್ ವಿರುದ್ಧ ಗೆದ್ದರು.

48 ನಿಮಿಷ ನಡೆದ ಹಣಾಹಣಿಯಲ್ಲಿ ಸಿಂಧು ಆಟ ಉತ್ಕೃಷ್ಟ ಗುಣಮಟ್ಟದ್ದಾಗಿತ್ತು. ಆರನೇ ಶ್ರೇಯಾಂಕದ ಸಿಂಧು ಯಾವುದೇ ಹಂತದಲ್ಲಿಯೂ ಚೊಚುವಾಂಗ್ ಅವರು ಮೇಲುಗೈ ಸಾಧಿಸಲು ಅವಕಾಶ ನೀಡಲಿಲ್ಲ. ಮೊದಲ ಗೇಮ್‌ನಲ್ಲಿ ಆರಂಭದಲ್ಲಿಯೇ 5–1ರಿಂದ ಮುನ್ನಡೆ ಪಡೆಯುವ ಮೂಲಕ ಸರಳ ಜಯದತ್ತ ಮುನ್ನಡೆದರು.

ಆದರೆ, ಎರಡನೇ ಗೇಮ್‌ನಲ್ಲಿ ಥಾಯ್ಲೆಂಡ್ ಆಟಗಾರ್ತಿ ಸ್ವಲ್ಪ ಪೈಪೋಟಿಯೊಡ್ಡಿದರು. ಆರಂಭದಲ್ಲಿ 3–0 ಮುನ್ನಡೆ ಪಡೆ ಸಿಂಧುಗೆ ನಂತರದ ಹಂತದಲ್ಲಿ ತುಸು ಪೈಪೋಟಿ ಎದುರಾಯಿತು. ಆದರೂ 16–10ರವರೆಗೂ ಸಿಂಧು ಮುನ್ನಡೆಯಲಿದ್ದರು. ಈ ಹಂತದಲ್ಲಿ ಪುಟಿದೆದ್ದ ಥಾಯ್ ಆಟಗಾರ್ತಿಯ ಹೋರಾಟದಿಂದಾಗಿ 19–18ರವರೆಗಿನ ಅಂತರಕ್ಕೆ ಗೇಮ್ ಬೆಳೆಯಿತು. ಆದರೆ ಈ ಹಂತದಲ್ಲಿ ಸಿಂಧು ತಡ ಮಾಡದೇ, ತಮ್ಮ ಗೆಲುವಿನ ಹಾದಿಯನ್ನು ಕಂಡುಕೊಂಡರು.


ತೈ ಜು ಯಿಂಗ್


ಈ ಗೆಲುವಿನೊಂದಿಗೆ ಸಿಂಧು ಚೊಚುವಾಂಗ್ ವಿರುದ್ಧ ಆಡಿದ ಪಂದ್ಯಗಳಲ್ಲಿ 5–3ರಿಂದ ಮುನ್ನಡೆ ಸಾಧಿಸಿದರು. ಈ ಋತುವಿನ ಕಳೆದೆರಡು ಟೂರ್ನಿಗಳಲ್ಲಿ ಸಿಂಧು ಚೊಚುವಾಂಗ್ ವಿರುದ್ಧ ಸೋತಿದ್ದರು. ಈ ತಿಂಗಳ ಆರಂಭದಲ್ಲಿ ಬಿಡಬ್ಲ್ಯುಎಫ್ ವಿಶ್ವ ಟೂರ್ ಫೈನಲ್ಸ್ ಗುಂಪು ಹಂತದ ಪಂದ್ಯ ಮತ್ತು ಹೋದ ಮಾರ್ಚ್‌ನಲ್ಲಿ ನಡೆದಿದ್ದ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನಲ್ಲಿ ಸಿಂಧುಗೆ ಚೋಚುವಾಂಗ್ ಆಘಾತ ನೀಡಿದ್ದರು.

ಈ ಟೂರ್ನಿಯ ಮೊದಲ ಪಂದ್ಯದಲ್ಲಿ ಸಿಂಧುಗೆ ಬೈ ಲಭಿಸಿತ್ತು. ಎರಡನೇ ಪಂದ್ಯದಲ್ಲಿ ಮಾರ್ಟಿನಾ ರೆಪಿಸ್ಕಾ ವಿರುದ್ಧ ಜಯಿಸಿದ್ದರು. ಇನ್ನೊಂದು ಪಂದ್ಯದಲ್ಲಿ ಅಗ್ರಶ್ರೇಯಾಂಕದ ಆಟಗಾರ್ತಿ ತೈ ಜು ಯಿಂಗ್ 21–10, 19–21, 21–11ರಿಂದ ಸ್ಕಾಟ್ಲೆಂಡ್‌ನ ಕ್ರಿಸ್ಟಿ ಗಿಲ್ಮೋರ್ ವಿರುದ್ಧ ಜಯಿಸಿ ಎಂಟರ ಘಟ್ಟಕ್ಕೆ ಲಗ್ಗೆಯಿಟ್ಟರು.

ವಿವಾದಗಳನ್ನು ಬಿಸಿಸಿಐ ನಿಭಾಯಿಸಿಕೊಳ್ಳಲಿದೆ: ಸೌರವ್ ಗಂಗೂಲಿ ವಿವರಣೆ

ಕೊಹ್ಲಿ ಹೇಳಿಕೆಗೆ ಪ್ರತಿಕ್ರಿಯೆ ಇಲ್ಲ

ಕೋಲ್ಕತ್ತ (ಪಿಟಿಐ): ಭಾರತ ಏಕದಿನ ಕ್ರಿಕೆಟ್ ತಂಡದ ನಾಯಕತ್ವ ಬದಲಾವಣೆ ಕುರಿತು ವಿರಾಟ್ ಕೊಹ್ಲಿ ನೀಡಿರುವ ಹೇಳಿಕೆಯ ಕುರಿತು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಈ ವಿಷಯವನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯೇ ನೋಡಿಕೊಳ್ಳಲಿದೆ ಎಂದು ಅಧ್ಯಕ್ಷ ಸೌರವ್ ಗಂಗೂಲಿ ಹೇಳಿದ್ದಾರೆ.


ಸೌರವ್ ಗಂಗೂಲಿ

ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ತೆರಳುವ ಮುನ್ನ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ವಿರಾಟ್, ತಮ್ಮನ್ನು ಏಕದಿನ ತಂಡದ ನಾಯಕತ್ವದಿಂದ ಕೈಬಿಡುವ ಕುರಿತು ಮಂಡಳಿಯು ಕೇವಲ 90 ನಿಮಿಷಗಳ ಮುನ್ನ ಸಂಪರ್ಕಿಸಿತ್ತು ಎಂದು ಹೇಳಿದ್ದರು. ಈ ಹಿಂದೆ ಗಂಗೂಲಿ ನೀಡಿದ್ದ ಹೇಳಿಕೆಗೆ ಕೊಹ್ಲಿಯ ಮಾತುಗಳು ತದ್ವಿರುದ್ಧವಾಗಿದ್ದವು. ಇದೀಗ ಸಾಮಾಜಿಕ ಜಾಲತಾಣ ಮತ್ತು ಕ್ರಿಕೆಟ್ ವಲಯದಲ್ಲಿ ಈ ಕುರಿತು ಚರ್ಚೆ ನಡೆಯುತ್ತಿದೆ.

ಈ ಬಗ್ಗೆ ಪ್ರತಿಕ್ರಿಯೆಗಾಗಿ ತಮ್ಮನ್ನು ಸಂಪರ್ಕಿಸಿದ ಸ್ಥಳೀಯ ಮಾಧ್ಯಮಗಳಿಗೆ ಗಂಗೂಲಿ, 'ಯಾವುದೇ ಹೇಳಿಕೆ ಕೊಡುವುದಿಲ್ಲ. ಪ್ರಕಟಣೆಯನ್ನೂ ನೀಡುವುದಿಲ್ಲ ಮತ್ತು ಸುದ್ದಿಗೋಷ್ಠಿಯನ್ನೂ ಮಾಡುವುದಿಲ್ಲ. ಬಿಸಿಸಿಐಗೇ ಇದನ್ನು ಬಿಟ್ಟುಬಿಡುತ್ತೇನೆ' ಎಂದರು.

'ನಾನು ಟಿ20 ನಾಯಕತ್ವವನ್ನು ಬಿಡಲು ನಿರ್ಧರಿಸಿದಾಗ ಮೊಟ್ಟಮೊದಲಿಗೆ ಮಂಡಳಿಗೆ ವಿಷಯ ತಿಳಿಸಿದ್ದೆ. ನನ್ನ ತೀರ್ಮಾನದ ಕುರಿತು ಅವರಿಗೆ (ಪದಾಧಿಕಾರಿಗಳಿಗೆ) ಕೂಲಂಕಷವಾಗಿ ಅರುಹಿದ್ದೆ. ನಾಯಕತ್ವ ಬಿಡಲು ಕಾರಣಗಳನ್ನೂ ಸ್ಪಷ್ಟಪಡಿಸಿದ್ದೆ' ಎಂದು ಕೊಹ್ಲಿ ತಿಳಿಸಿದ್ದರು.

ಆದರೆ ಈಚೆಗೆ ಮಾತನಾಡಿದ್ದ ಗಂಗೂಲಿ, 'ಕೊಹ್ಲಿಗೆ ಟಿ20 ನಾಯಕತ್ವ ಬಿಡದಿರಲು ಹೇಳಿದ್ದೆವು. ಏಕದಿನ ನಾಯಕತ್ವ ಬದಲಾವಣೆಯ ಕುರಿತು ಅವರೊಂದಿಗೆ ನಾವು ಮಾತನಾಡಿದ್ದೆವು. ಆಯ್ಕೆ ಸಮಿತಿ ಮುಖ್ಯಸ್ಥ ಚೇತನ್ ಶರ್ಮಾ ಕೂಡ ಮಾತನಾಡಿದ್ದರು. ಬಿಳಿಚೆಂಡಿನ ಕ್ರಿಕೆಟ್ ವಿಭಾಗಕ್ಕೆ ಒಬ್ಬರೇ ನಾಯಕರಿರುವುದು ಉತ್ತಮವೆಂಬ ಕಾರಣದಿಂದ ಆಯ್ಕೆ ಸಮಿತಿ ಈ ನಿರ್ಧಾರ ಕೈಗೊಂಡಿದೆ' ಎಂದಿದ್ದರು.

ಕೊಹ್ಲಿಯ ಹೇಳಿಕೆಯ ಕುರಿತು ಗಂಗೂಲಿ ಪ್ರತಿಕ್ರಿಯೆ ನೀಡಬೇಕು. ಗೊಂದಲದ ವಾತಾವರಣ ನಿವಾರಿಸಬೇಕು ಎಂದು ಗುರುವಾರ ಮಾಜಿ ಕ್ರಿಕೆಟಿಗ ಸುನೀಲ್ ಗಾವಸ್ಕರ್ ಹೇಳಿದ್ದರು.

ದಕ್ಷಿಣ ಆಫ್ರಿಕಾ ತಲುಪಿದ ವಿರಾಟ್ ಬಳಗ

ಜೋಹಾನ್ಸ್‌ಬರ್ಗ್: ವಿರಾಟ್ ಕೊಹ್ಲಿ ನಾಯಕತ್ವದ ಭಾರತ ಟೆಸ್ಟ್ ಕ್ರಿಕೆಟ್ ತಂಡದ ಆಟಗಾರರು ಗುರುವಾರ ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್ ತಲುಪಿದರು.

ಮುಂಬೈನಿಂದ ಬೆಳಗಿನ ಜಾವ ಹೊರಟ ತಂಡವು ಸುರಕ್ಷಿತವಾಗಿ ತಲುಪಿದೆ ಎಂದು ಬಿಸಿಸಿಐ ಟ್ವಿಟರ್‌ನಲ್ಲಿ ಚಿತ್ರಗಳನ್ನು ಪ್ರಕಟಿಸಿದೆ. ಮುಖ್ಯ ಕೋಚ್ ರಾಹುಲ್ ದ್ರಾವಿಡ್, ನಾಯಕ ವಿರಾಟ್, ಕರ್ನಾಟಕದ ಆಟಗಾರರಾದ ಮಯಂಕ್ ಅಗರವಾಲ್, ಕೆ.ಎಲ್. ರಾಹುಲ್, ಬೌಲರ್ ಶಾರ್ದೂಲ್ ಠಾಕೂರ್, ಚೇತೇಶ್ವರ್ ಪೂಜಾರ ಮತ್ತು ರೋಹಿತ್ ಶರ್ಮಾ ಬದಲು ಸ್ಥಾನ ಪಡೆದಿರುವ ಪ್ರಿಯಾಂಕ್ ಪಾಂಚಾಲ್ ಸೇರಿದಂತೆ ತಂಡವು ಇಲ್ಲಿಗೆ ಬಂದಿಳಿದಿದೆ.

ಸ್ಥಳೀಯ ಕೋವಿಡ್ ತಡೆ ಮಾರ್ಗಸೂಚಿಯ ಪ್ರಕಾರ ಆಟಗಾರರು ಕ್ವಾರಂಟೈನ್‌ಗೆ ಒಳಗಾಗಲಿದ್ದಾರೆ. ಇದೇ 26ರಿಂದ ಮೊದಲ ಟೆಸ್ಟ್ ಪಂದ್ಯ ಆರಂಭವಾಗಲಿದೆ.



ವಿರಾಟ್ ಕೊಹ್ಲಿ (ಎಡದಿಂದ ಎರಡನೆಯವರು) ಮತ್ತು ಪತ್ನಿ ಅನುಷ್ಕಾ ಶರ್ಮಾ ಅವರು ಭಾರತ ಕ್ರಿಕೆಟ್ ತಂಡದ ಆಟಗಾರರು ಹಾಗೂ ಸಿಬ್ಬಂದಿ ಜೊತೆ ಗುರುವಾರ ಜೊಹಾನ್ಸ್‌ಬರ್ಗ್ ವಿಮಾನ ನಿಲ್ದಾಣದಲ್ಲಿ ಇಳಿದರು –ಎಎಫ್‌ಪಿ ಚಿತ್ರ

'ಪ್ರಮುಖ ಪ್ರವಾಸದ ಹೊಸ್ತಿಲಲ್ಲಿ ವಿವಾದ ಸಲ್ಲದು'

ನವದೆಹಲಿ (ಪಿಟಿಐ): ವಿರಾಟ್ ಕೊಹ್ಲಿ ನೀಡಿರುವ ಹೇಳಿಕೆಗಳ ಕುರಿತು ಭಾರತ ತಂಡದ ಮಾಜಿ ನಾಯಕ ಕಪಿಲ್ ದೇವ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.


ಕಪಿಲ್ ದೇವ್

'ದಕ್ಷಿಣ ಆಫ್ರಿಕಾದಂತಹ ತಂಡದ ಎದುರು ಆಡಲು ಪ್ರವಾಸಕ್ಕೆ ತೆರಳುತ್ತಿರುವ ಸಂದರ್ಭದಲ್ಲಿ ಇಂತಹದೊಂದು ವಿವಾದಾತ್ಮಕ ಹೇಳಿಕೆ ನೀಡುವುದು ಸರಿಯಲ್ಲ. ವಿರಾಟ್‌ಗೆ ಮತ್ತು ಬಿಸಿಸಿಐ ನಡುವೆ ಭಿನ್ನಾಭಿಪ್ರಾಯಗಳಿರಬಹುದು. ಆದರೆ, ಇದು ಸೂಕ್ತ ಸಮಯವಾಗಿರಲಿಲ್ಲ' ಎಂದು ಕಪಿಲ್ ಹೇಳಿದ್ದಾರೆ.

'ಮಂಡಳಿ ಅಧ್ಯಕ್ಷ ಸ್ಥಾನವೂ ದೊಡ್ಡದು ಮತ್ತು ತಂಡದ ನಾಯಕನ ಸ್ಥಾನವೂ ದೊಡ್ಡದು. ಆದ್ದರಿಂದ ಒಬ್ಬರಿನ್ನೊಬ್ಬರತ್ತ ಬೆರಳು ತೋರಿಸುವುದು ಸರಿಯಲ್ಲ. ಇದು ಇಬ್ಬರಿಗೂ ಅನ್ವಯಿಸುತ್ತದೆ. ಸರಣಿಗೆ ಆದ್ಯತೆ ನೀಡುವುದು ಒಳ್ಳೆಯದು. ಪ್ರವಾಸದ ಹೊಸ್ತಿಲಲ್ಲಿ ವಿವಾದ ಮೈಮೇಲೆ ಎಳೆದುಕೊಂಡಿರುವುದು ಅಸೂಕ್ಷ್ಮ ನಡವಳಿಕೆ' ಎಂದು ಕಪಿಲ್ ಹೇಳಿದ್ದಾರೆ.

'ದಯವಿಟ್ಟು ನೀವು ಪರಿಸ್ಥಿತಿಯನ್ನು ನಿಯಂತ್ರಿಸಿ. ಮೊದಲು ದೇಶದ ಬಗ್ಗೆ ಯೋಚಿಸಿ. ಯಾವುದು ತಪ್ಪಿದೆಯೋ ಅದು ಇಂದಲ್ಲಾ ನಾಳೆ ಹೊರಗೆ ಬಂದೇ ಬರುತ್ತದೆ. ಆಗ ಆ ಕುರಿತು ಮಾತನಾಡಬಹುದು' ಎಂದು ಕಪಿಲ್ ಸಲಹೆ ನೀಡಿದ್ದಾರೆ.

ಕೂಚ್ ಬೆಹಾರ್: ಡ್ರಾ ಪಂದ್ಯದಲ್ಲಿ ಕರ್ನಾಟಕ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ತಂಡ ಮತ್ತು ಬರೋಡಾ ಕ್ರಿಕೆಟ್ ಸಂಸ್ಥೆ ತಂಡಗಳ ನಡುವೆ ನಡೆದ 19 ವರ್ಷದೊಳಗಿನವರ ಕೂಚ್ ಬೆಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯವು ಗುರುವಾರ ಡ್ರಾದಲ್ಲಿ ಮುಕ್ತಾಯವಾಯಿತು.

ಕರ್ನಾಟಕ ತಂಡವು ಮೊದಲ ಇನಿಂಗ್ಸ್‌ನಲ್ಲಿ 6 ವಿಕೆಟ್‌ಗಳಿಗೆ 607 ಗಳಿಸಿ ಡಿಕ್ಲೇರ್ ಮಾಡಿತ್ತು. ಬ್ಯಾಟಿಂಗ್ ಆರಂಭಿಸಿದ ಬರೋಡಾ ತಂಡವು 144.5 ಓವರ್‌ಗಳಲ್ಲಿ 330 ರನ್ ಗಳಿಸಿ ಆಲೌಟ್ ಆಯಿತು. ಕರ್ನಾಟಕದ ಶಶಿಕುಮಾರ್ ಐದು ವಿಕೆಟ್ ಗಳಿಸಿದರು. ಬರೋಡಾ ಮೇಲೆ ಫಾಲೋ ಆನ್ ಹೇರಲಾಯಿತು. ನಾಲ್ಕನೇ ದಿನದಾಟದ ಕೊನೆಗೆ ತಂಡವು ಹರ್ಷ ದೇಸಾಯಿ (111; 178ಎಸೆತ, 21ಬೌಂಡರಿ, 2 ಸಿಕ್ಸರ್) ಶತಕದ ಬಲದಿಂದ 68. 1 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 217 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಕೆಎಸ್‌ಸಿಎ: 133.4 ಓವರ್‌ಗಳಲ್ಲಿ 6ಕ್ಕೆ607 ಡಿಕ್ಲೆರ್ಡ್, **ಬರೋಡಾ ಸಿಎ:** 144.5 ಓವರ್‌ಗಳಲ್ಲಿ 330 (ಎಡಿ ಪಟೇಲ್ ಔಟಾಗದೆ 24, ಶಶಿಕುಮಾರ್ 82ಕ್ಕೆ5), ಎರಡನೇ ಇನಿಂಗ್ಸ್: 68.1 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 217 (ಹರ್ಷ ದೇಸಾಯಿ 111). **ಫಲಿತಾಂಶ:** ಡ್ರಾ.

ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ: ಸೆಮಿಫೈನಲ್ ಕನಸಿನಲ್ಲಿ ಭಾರತ

ಭಾರತ–ಪಾಕಿಸ್ತಾನ ಹಣಾಹಣಿ

ಢಾಕಾ (ಪಿಟಿಐ): ಆರಂಭದ ಎರಡು ಪಂದ್ಯಗಳಲ್ಲಿ ಏಳುಬೀಳು ಕಂಡಿರುವ ಭಾರತ ತಂಡ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಶುಕ್ರವಾರ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು ಎದುರಿಸಲಿದೆ. ರೌಂಡ್ ರಾಬಿನ್ ಮೂರನೇ ಪಂದ್ಯದಲ್ಲಿ ಗೆದ್ದರೆ ಹಾಲಿ ಚಾಂಪಿಯನ್ ಭಾರತದ ಸೆಮಿಫೈನಲ್ ಹಾದಿ ಸುಗಮವಾಗಲಿದೆ.



ಭಾರತ ತಂಡದ ಆಟಗಾರರು ಪಾಕಿಸ್ತಾನದ ವಿರುದ್ಧ ಗೆಲುವಿನ ವಿಶ್ವಾಸದಲ್ಲಿದ್ದಾರೆ –ಟ್ವಿಟರ್ ಚಿತ್ರ

ಮೊದಲ ಪಂದ್ಯವನ್ನು ಕೊರಿಯಾ ಜೊತೆ 2–2ರಲ್ಲಿ ಡ್ರಾ ಮಾಡಿಕೊಂಡ ಭಾರತ ಎರಡನೇ ಪಂದ್ಯದಲ್ಲಿ ಪುಟಿದೆದ್ದು ಬಾಂಗ್ಲಾದೇಶವನ್ನು 9–0ಯಿಂದ ಮಣಿಸಿತ್ತು. ಹೀಗಾಗಿ ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಜಯ ಗಳಿಸುವ ವಿಶ್ವಾಸದಲ್ಲಿದೆ.

ಹ್ಯಾಟ್ರಿಕ್ ಫೀಲ್ಡ್‌ಗೋಲುಗಳನ್ನು ಗಳಿಸಿರುವ ದಿಲ್‌ಪ್ರೀತ್ ಸಿಂಗ್ ಮತ್ತು ಎರಡು ಗೋಲು ಗಳಿಸಿದ್ದ ಜರ್ಮನ್‌ಪ್ರೀತ್ ಸಿಂಗ್ ಬಾಂಗ್ಲಾ ಎದುರಿನ ಪಂದ್ಯದಲ್ಲಿ ಮಿಂಚಿದ್ದರು. ಈ ಪಂದ್ಯದಲ್ಲಿ ಪೆನಾಲ್ಟಿ ಕಾರ್ನರ್ ಅವಕಾಶಗಳಲ್ಲಿ ನೇರವಾಗಿ ಫ್ಲಿಕ್ ಮಾಡಲು ಮುಂದಾಗದೆ ವಿಭಿನ್ನ ಮಾರ್ಗವನ್ನು ತುಳಿಯಲು ಗ್ರಹಾಂ ರೀಡ್ ತರಬೇತಿ ನೀಡಿರುವ ಭಾರತ ತಂಡ ಮುಂದಾಗಿತ್ತು. ಉಪನಾಯಕ ಹರ್ಮನ್‌ಪ್ರೀತ್ ಸಿಂಗ್ ಮತ್ತು ವರುಣ್ ಕುಮಾರ್ ಅವರು ಈ ಪ್ರಯೋಗವನ್ನು ಯಶಸ್ವಿಗೊಳಿಸಿದ್ದರು. ಹರ್ಮನ್‌ಪ್ರೀತ್ ನೇತೃತ್ವದ ರಕ್ಷಣಾ ವಿಭಾಗ ಮತ್ತು ನಾಯಕ ಮನ್‌ಪ್ರೀತ್ ಸಿಂಗ್ ಮುಂದಾಳತ್ವದವರು ಮಿಡ್‌ಫೀಲ್ಡ್ ವಿಭಾಗ ಬಾಂಗ್ಲಾ ವಿರುದ್ಧದ ಪಂದ್ಯದಲ್ಲಿ ಸಂಪೂರ್ಣ ಆಧಿಪತ್ಯ ಸ್ಥಾಪಿಸಲು ನೆರವಾಗಿದ್ದರು. ಲಲಿತ್ ಉಪಾಧ್ಯಾಯ ಮತ್ತು ಆಕಾಶ್‌ದೀಪ್ ಸಿಂಗ್ ಫಾರ್ವರ್ಡ್ ವಿಭಾಗದ ಶಕ್ತಿಯಾಗಿದ್ದಾರೆ. ಲಲಿತ್ ಎರಡು ಪಂದ್ಯಗಳಲ್ಲಿ ಮೂರು ಗೋಲು ದಾಖಲಿಸಿದ್ದಾರೆ. ಪಾಕಿಸ್ತಾನವೂ ಬಲಿಷ್ಠ ತಂಡವಾಗಿರುವುದರಿಂದ ಭಾರತ ಶುಕ್ರವಾರ ಎಚ್ಚರಿಕೆಯಿಂದ ಆಡಲು ಪ್ರಯತ್ನಿಸಲಿದೆ. ಒಲಿಂಪಿಕ್ಸ್‌ನಲ್ಲಿ ಒಟ್ಟಾರೆ ತಲಾ ಮೂರು ಚಿನ್ನ ಮತ್ತು ಬೆಳ್ಳಿ, ಎರಡು ಕಂಚಿನ ಪದಕ ಗೆದ್ದಿರುವ ಪಾಕಿಸ್ತಾನ ಈ ಬಾರಿ ಟೋಕಿಯೊ ಟಿಕೆಟ್ ಗಿಟ್ಟಿಸಿಕೊಳ್ಳಲು ವಿಫಲವಾಗಿತ್ತು. ಹಾಕಿಯ ಗತವೈಭವ ಮರಳಿ ತರಲು ಪ್ರಯತ್ನಿಸುತ್ತಿರುವ ತಂಡಕ್ಕೆ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಉತ್ತಮ ವೇದಿಕೆಯಾಗಿದೆ. ಕಳೆದ ಬಾರಿ ಪಾಕಿಸ್ತಾನ ತಂಡ ಭಾರತದ ಜೊತೆ ಪ್ರಶಸ್ತಿ ಹಂಚಿಕೊಂಡಿತ್ತು. ಆ ಟೂರ್ನಿಯ ಲೀಗ್ ಹಂತದ ಪಂದ್ಯ, ಭಾರತ ಮತ್ತು ಪಾಕಿಸ್ತಾನ ತಂಡಗಳ ಕೊನೆಯ ಮುಖಾಮುಖಿಯಾಗಿತ್ತು. ಆ ಪಂದ್ಯದಲ್ಲಿ ಭಾರತ 3–1ರಲ್ಲಿ ಜಯ ಗಳಿಸಿತ್ತು. ಮಳೆಯಿಂದಾಗಿ ಫೈನಲ್ ಪಂದ್ಯ ನಡೆದಿರಲಿಲ್ಲ.

ಟೆನಿಸ್: ದಕ್ಷಿಶ್, ತನು ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಶ್ ಆರ್ಯನ್ ಮತ್ತು ತನು ವಿಶ್ವಾಸ್ ಅವರು ಎಎಸ್‌ಟಿಎ ಎಐಟಿಎ ಸಿಎಸ್3 12 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಅಮೋಘ ಸ್ಪೋರ್ಟ್ಸ್ ಅಕಾಡೆಮಿ ಅಂಗಣದಲ್ಲಿ ನಡೆದ ಟೂರ್ನಿಯ ಬಾಲಕರ ವಿಭಾಗದ ಫೈನಲ್‌ನಲ್ಲಿ ಅನುರಾಗ್ ಶೌರ್ಯ ಅವರ ಪ್ರಬಲ ಪೈಪೋಟಿ ಮೆಟ್ಟಿನಿಂತ ದಕ್ಷಿಶ್ 6–2, 7–5ರಲ್ಲಿ ಜಯ ಗಳಿಸಿದರು. ಐರಿನ್ ಮಿರಿಯನ್ ಕಾರ್ನೆಲಿಯೊ ಎದುರಿನ ಫೈನಲ್ ಪಂದ್ಯದಲ್ಲಿ ತನು 5–7, 6–2, 6–2ರಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿದರು.


ದಕ್ಷಿಶ್ ಆರ್ಯನ್


ತನು ವಿಶ್ವಾಸ್

ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿ

ಎಟಿಕೆ–ಬೆಂಗಳೂರು ಪಂದ್ಯ ಡ್ರಾ

ಬ್ಯಾಂಬೊಲಿಮ್: ಜಿದ್ದಾಜಿದ್ದಿಯ ಹೋರಾಟ ಪ್ರದರ್ಶಿಸಿದ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಎಟಿಕೆ ಮೋಹನ್ ಬಾಗನ್ (ಎಟಿಕೆ ಎಂಬಿ) ಎದುರಿನ ಪಂದ್ಯವನ್ನು 3–3ರಲ್ಲಿ ಡ್ರಾ ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು.

ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದ ಆರಂಭದಲ್ಲೇ ಎಟಿಕೆ ಎಂಬಿ ಆಕ್ರಮಣಕ್ಕೆ ಮುಂದಾಯಿತು. 13ನೇ ನಿಮಿಷದಲ್ಲಿ ಸುಭಾಶಿಷ್ ಬೋಸ್ ತಂಡಕ್ಕೆ ಮುನ್ನಡೆ ಗಳಿಸಿಕೊಟ್ಟರು. ಬಲಭಾಗದಲ್ಲಿ ಕಾರ್ನರ್ ಕಿಕ್ ತೆಗೆದ ಹ್ಯೂಗೊ ಬೌಮೋಸ್ ಗೋಲುಪೆಟ್ಟಿಗೆಯ ಕಂಬದ ಸಮೀಪವನ್ನು ಗುರಿಯಾಗಿರಿಸಿಕೊಂಡು ಚೆಂಡನ್ನು ಗಾಳಿಯಲ್ಲಿ ತೇಲಿಬಿಟ್ಟರು. ಸುಭಾಶಿಷ್ ಹೆಡರ್ ಮೂಲಕ ಮೋಹಕವಾಗಿ ಗುರಿ ಮುಟ್ಟಿಸಿದರು. ಗೋಲ್ ಕೀಪರ್ ಗುರುಪ್ರೀತ್ ಸಿಂಗ್ ಸಂಧು ತಡೆಯಲು ಪ್ರಯತ್ನಿಸಿದರೂ ಅವರನ್ನು ದಾಟಿ ಶರವೇಗದಲ್ಲಿ ಚೆಂಡು ಸಾಗಿತು.


ಗೋಲು ಗಳಿಸಿದ ಕ್ಲೀಟನ್ ಸಿಲ್ವಾ ಸಂಭ್ರಮಿಸಿದ ಪರಿ –ಐಎಸ್‌ಎಲ್ ಚಿತ್ರ

ಐದೇ ನಿಮಿಷಗಳಲ್ಲಿ ಕ್ಲೀಟನ್ ಮೂಲಕ ಬಿಎಫ್‌ಸಿ ತಿರುಗೇಟು ನೀಡಿತು. ಗೋಲು ಆವರಣದಲ್ಲಿ ಬಿಎಫ್‌ಸಿ ಆಟಗಾರನನ್ನು ಲಿಸ್ಟನ್ ಕೊಲ್ಯಾಕೊ ನೆಲಕ್ಕೆ ಬೀಳಿಸಿದರು. ಪೆನಾಲ್ಟಿ ಅವಕಾಶದಲ್ಲಿ ಕ್ಲೀಟನ್ ಸಿಲ್ವಾ ಯಶಸ್ಸು ಗಳಿಸಿದರು. ಗೋಲ್ ಕೀಪರ್ ಅಮರಿಂದರ್ ಸಿಂಗ್ ಎಡಕ್ಕೆ ಜಿಗಿದು ತಡೆಯಲು ಯತ್ನಿಸಿದರೂ ಫಲ ಕಾಣಲಿಲ್ಲ.

26ನೇ ನಿಮಿಷದಲ್ಲಿ ಕ್ಲೀಟನ್ ಸಿಲ್ವಾ ಅವರ ನೆರವಿನಿಂದ ಡ್ಯಾನಿಷ್ ಫಾರೂಕಿ ಗಳಿಸಿದ ಗೋಲಿನೊಂದಿಗೆ ಬಿಎಫ್‌ಸಿ ಮುನ್ನಡೆ ಗಳಿಸಿತು. ಆದರೆ 38ನೇ ನಿಮಿಷದಲ್ಲಿ ಹ್ಯುಗೊ ಬೌಮೋಸ್ ಮೂಲಕ ಎಟಿಕೆಎಂಬಿ ತಿರುಗೇಟು ನೀಡಿತು. 58ನೇ ನಿಮಿಷದಲ್ಲಿ ರಾಯ್ ಕೃಷ್ಣ ಗಳಿಸಿದ ಗೋಲು ತಂಡಕ್ಕೆ ಮುನ್ನಡೆ ತಂದುಕೊಟ್ಟಿತು. 72ನೇ ನಿಮಿಷದಲ್ಲಿ ಪ್ರಿನ್ಸ್ ಇಬಾರ ಅವರು ಬಿಎಫ್‌ಸಿಗೆ ಸಮಬಲದ ಗೋಲು ತಂದುಕೊಟ್ಟರು.

ನಾರ್ತ್ ಈಸ್ಟ್–ಈಸ್ಟ್ ಬೆಂಗಾಲ್ ಹಣಾಹಣಿ: ಫತೋರ್ಡದ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಶುಕ್ರವಾರ ನಾರ್ತ್ ಈಸ್ಟ್ ಯುನೈಟೆಡ್ ಎಫ್‌ಸಿ ಮತ್ತು ಎಸ್‌ಸಿ ಈಸ್ಟ್ ಬೆಂಗಾಲ್ ತಂಡಗಳು ಸೆಣಸಲಿವೆ.

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಆ್ಯಷಸ್: ವಾರ್ನರ್, ಮಾರ್ನಸ್ ಜೊತೆಯಾಟದ ರಂಗು

ಅಡಿಲೇಡ್ (ಎಎಫ್‌ಪಿ): ಶತಕದಂಚಿನಲ್ಲಿ ಎಡವಿದ ಡೇವಿಡ್ ವಾರ್ನರ್ ಮತ್ತು ನೂರರತ್ತ ಸಾಗಿರುವ ಮಾರ್ನಸ್ ಲಾಬುಷೇನ್ ಗುರುವಾರ ಇಲ್ಲಿ ಆರಂಭವಾದ ಆ್ಯಷಸ್ ಸರಣಿಯ ಎರಡನೇ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾ ತಂಡಕ್ಕೆ ಉತ್ತಮ ಆರಂಭ ನೀಡಿದರು.

ಇಂಗ್ಲೆಂಡ್‌ನ ಅನುಭವಿ ವೇಗದ ಜೋಡಿ ಜಿಮ್ಮಿ ಆ್ಯಂಡರ್ಸನ್ ಮತ್ತು ಸ್ಟುವರ್ಟ್ ಬ್ರಾಡ್ ಅವರ ಬಿರುಗಾಳಿಯನ್ನು ದಿಟ್ಟತನದಿಂದ ಎದುರಿಸಿದ ವಾರ್ನರ್ ಮತ್ತು ಲಾಬುಷೇನ್ ತಲಾ 95 ರನ್ ಗಳಿಸಿದರು. ಇದರಿಂದಾಗಿ ದಿನದಾಟದ ಕೊನೆಗೆ ತಂಡವು 89 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 221 ರನ್ ಗಳಿಸಿದೆ. ಕ್ರೀಸ್‌ನಲ್ಲಿ ಲಾಬುಷೇನ್ ಮತ್ತು ಸ್ಟೀವನ್ ಸ್ಮಿತ್ (ಬ್ಯಾಟಿಂಗ್ 18) ಕ್ರೀಸ್‌ನಲ್ಲಿದ್ದಾರೆ.


ಡೇವಿಡ್ ವಾರ್ನರ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಹೊನಲು ಬೆಳಕಿನ ಟೆಸ್ಟ್‌ನಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆರಂಭಿಸಿದ ಆಸ್ಟ್ರೇಲಿಯಾ ತಂಡಕ್ಕೆ ಬ್ರಾಡ್ ಎಂಟನೇ ಓವರ್‌ನಲ್ಲಿಯೇ ಪೆಟ್ಟುಕೊಟ್ಟರು. ಮಾರ್ಕಸ್ ಹ್ಯಾರಿಸ್ ವಿಕೆಟ್ ಗಳಿಸಿದರು. ಈ ಆಘಾತದಿಂದ ತಂಡವನ್ನು ವಾರ್ನರ್ ಮತ್ತು ಲಾಬುಷೇನ್ ಜೋಡಿಯು ಹೊರತರುವಲ್ಲಿ ಯಶಸ್ವಿಯಾಯಿತು. ಎರಡನೇ ವಿಕೆಟ್ ಜೊತೆಯಾಟದಲ್ಲಿ 172 ರನ್ ಸೇರಿಸಿದರು.

ಇಬ್ಬರೂ ಅಪಾರ ತಾಳ್ಮೆಯಿಂದ ಇನಿಂಗ್ಸ್ ಕಟ್ಟಿದರು. ವಾರ್ನರ್‌ಗಿಂತಲೂ ಹೆಚ್ಚು ಎಸೆತಗಳನ್ನು ಲಾಬುಷೇನ್ ಆಡಿದರು. ಆದರೆ, ವಾರ್ನರ್ ಟೆಸ್ಟ್ ಕ್ರಿಕೆಟ್‌ನಲ್ಲಿ 25ನೇ ಶತಕ ಗಳಿಕೆಯ ಅಂಚಿನಲ್ಲಿ ಎಡವಿದರು. ಸತತ ಎರಡನೇ ಪಂದ್ಯದಲ್ಲಿ ಅವರು 'ನರ್ವಸ್ 90' ವಿಕೆಟ್ ಆದರು. ಲಾಬುಷೇನ್ ಕೂಡ 95 ರನ್ ಗಳಿಸಿದ್ದಾಗ ಔಟಾಗುವ ಆತಂಕ ಎದುರಿಸಿದ್ದರು. ಆ್ಯಂಡರ್ಸನ್ ಎಸೆತದಲ್ಲಿ ವಿಕೆಟ್ ಕೀಪರ್ ಜೋಸ್ ಬಟ್ಲರ್ ಕ್ಯಾಚ್ ಕೈಚೆಲ್ಲಿದ್ದರಿಂದ ಲಾಬುಷೇನ್ ಕ್ರೀಸ್‌ನಲ್ಲಿ ಉಳಿದರು. 35ನೇ ಓವರ್‌ನಲ್ಲಿಯೂ ಒಂದು ಬಾರಿ ಲಾಬುಷೇನ್ ಅವರಿಗೆ ಬಟ್ಲರ್ ಜೀವದಾನ ಕೊಟ್ಟಿದ್ದರು.

ಪ್ಯಾಟ್ ಕಮಿನ್ಸ್ ಅನುಪಸ್ಥಿತಿಯಲ್ಲಿ ತಂಡದ ನಾಯಕತ್ವ ವಹಿಸಿರುವ ಸ್ಮಿತ್ ಮತ್ತು ಲಾಬುಷೇನ್ ಮುರಿಯದ ಮೂರನೇ ವಿಕೆಟ್ ಜೊತೆಯಾಟದಲ್ಲಿ 45 ರನ್ ಗಳಿಸಿದ್ದಾರೆ.

ಬ್ರಿಸ್ಬೇನ್‌ನಲ್ಲಿ ನಡೆದಿದ್ದ ಮೊದಲ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾ ತಂಡವು ಇಂಗ್ಲೆಂಡ್ ಎದುರು ದೊಡ್ಡ ಅಂತರದಿಂದ ಜಯಿಸಿತ್ತು. ಆ ಪಂದ್ಯದಲ್ಲಿ ಆ್ಯಂಡರ್ಸನ್ ಮತ್ತು ಬ್ರಾಡ್ ಅವರಿಗೆ ಕಣಕ್ಕಿಳಿಯಲು ಅವಕಾಶ ಕೊಟ್ಟಿರಲಿಲ್ಲ.

ಸ್ಕೋರ್ ಕಾರ್ಡ್

ಆಸ್ಟ್ರೇಲಿಯಾ ಮೊದಲ ಇನಿಂಗ್ಸ್ 2ಕ್ಕೆ 221 (89 ಓವರ್)

ಹ್ಯಾರಿಸ್ ಸಿ ಬಟ್ಲರ್ ಬಿ ಬ್ರಾಡ್ 3 (28ಎ), ವಾರ್ನರ್ ಸಿ ಬ್ರಾಡ್ ಬಿ ಸ್ಟೋಕ್ಸ್ 95(167ಎ, 4X11), ಲಾಬುಷೇನ್ ಬ್ಯಾಟಿಂಗ್ 95 (275ಎ, 4X7), ಸ್ಮಿತ್ ಬ್ಯಾಟಿಂಗ್ 18 (71ಎ, 4X2)

ಇತರೆ (ಲೆಗ್‌ಬೈ 1, ವೈಡ್ 2, ನೋಬಾಲ್ 7) 10

ವಿಕೆಟ್ ಪತನ: 1–4 (ಮಾರ್ಕಸ್ ಹ್ಯಾರಿಸ್; 7.3), 2–176 (ಡೇವಿಡ್ ವಾರ್ನರ್; 64.2)

ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 18–9–29–0, ಸ್ಟುವರ್ಟ್ ಬ್ರಾಡ್ 16–5–34–1, ಕ್ರಿಸ್ ವೋಕ್ಸ್ 15–5–36–0, ಒಲಿ ರಾಬಿನ್ಸನ್ 16–7–34–0, ಬೆನ್ ಸ್ಟೋಕ್ಸ್ 13–1–50–1, ಜೋ ರೂಟ್ 11–1–37–0

ಲಯೊನೆಲ್ ಮೆಸ್ಸಿ, ಕ್ರಿಸ್ಟಿಯಾನೊ ರೊನಾಲ್ಡೊಗೂ ಗೌರವ

ನೆಚ್ಚಿನ ಕ್ರೀಡಾಪಟು: ಸಚಿನ್‌ಗೆ 3ನೇ ಸ್ಥಾನ

ಮುಂಬೈ (ಪಿಟಿಐ): ವಿಶ್ವದ ಅತ್ಯಂತ ಮೆಚ್ಚುಗೆಗೆ ಪಾತ್ರವಾದ ವ್ಯಕ್ತಿಗಳಲ್ಲಿ ಸಚಿನ್ ತೆಂಡೂಲ್ಕರ್ 12ನೇ ಸ್ಥಾನ ಗಳಿಸಿದ್ದಾರೆ. ಈ ಹೆಗ್ಗಳಿಕೆಗೆ ಪಾತ್ರವಾದ ಮೂರನೇ ಕ್ರೀಡಾಪಟು ಕೂಡ ಆಗಿದ್ದಾರೆ.

ಇದೇ ಪಟ್ಟಿಯಲ್ಲಿ ಫುಟ್‌ಬಾಲ್ ತಾರೆಯರಾದ ಲಯೊನೆಲ್ ಮೆಸ್ಸಿ ಮತ್ತು ಕ್ರಿಸ್ಟಿಯಾನೊ ರೊನಾಲ್ಡೊ ಸ್ಥಾನ ಪಡೆದಿರುವ ಮೊದಲ ಇಬ್ಬರು ಕ್ರೀಡಾಪಟುಗಳಾಗಿದ್ದಾರೆ.

ಯುವಗೊವ್ ಎಂಬ ಅಂತರ್ಜಾಲ ಆಧಾರಿತ ಮಾರುಕಟ್ಟೆ ಸಂಶೋಧನೆ ಮತ್ತು ದತ್ತಾಂಶ ವಿಶ್ಲೇಷಣೆ ಸಂಸ್ಥೆಯು ನಡೆಸಿದ ಸಮೀಕ್ಷೆ ಇದಾಗಿದೆ. 42 ಸಾವಿರ ಜನರಿಂದ ಅಭಿಪ್ರಾಯ ಸಂಗ್ರಹಿಸಲಾಗಿದೆ.


ಸಚಿನ್ ತೆಂಡೂಲ್ಕರ್

ಈ ಪಟ್ಟಿಯಲ್ಲಿ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಬಾಲಿವುಡ್ ತಾರೆಯರಾದ ಶಾರೂಕ್ ಖಾನ್, ಅಮಿತಾಭ್ ಬಚ್ಚನ್ ಮತ್ತು ಭಾರತ ಟೆಸ್ಟ್ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಕೂಡ ಇದ್ದಾರೆ.

ಬ್ಯಾಟಿಂಗ್ ಚಾಂಪಿಯನ್ ತೆಂಡೂಲ್ಕರ್ 2013ರಿಂದ ಯುನಿಸೆಫ್‌ನಲ್ಲಿ ದಕ್ಷಿಣ ಏಷ್ಯಾದ ರಾಯಭಾರಿಯಾಗಿದ್ದಾರೆ.

ಅವರು ಹಲವು ವರ್ಷಗಳಿಂದ ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಕ್ರೀಡಾ ಕ್ಷೇತ್ರಗಳಿಗೆ ತಮ್ಮದೇ ಆದ ಕಾಣಿಕೆ ನೀಡಿದ್ದಾರೆ. ಬೇರೆ ಬೇರೆ ರಾಜ್ಯಗಳ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸಮಾಜಕಾರ್ಯ ಕೈಗೊಂಡಿದ್ದಾರೆ. ಇವು ಅವರ ಕುರಿತು ಮೆಚ್ಚುಗೆಗೆ ಕಾರಣವಾಗಿವೆ.

ಈಜು: ಶ್ರೀಹರಿ ರಾಷ್ಟ್ರೀಯ ದಾಖಲೆ

ಅಬುಧಾಬಿ (ಪಿಟಿಐ): ಭಾರತದ ಶ್ರೀಹರಿ ನಟರಾಜ್, ಸಜನ್ ಪ್ರಕಾಶ್ ಮತ್ತು ಕುಶಾಗ್ರ ರಾವತ್ ಅವರು ಫಿನಾ ಶಾರ್ಟ್ ಕೋರ್ಸ್ ವಿಶ್ವ ಈಜು ಚಾಂಪಿಯನ್‌ಷಿಪ್‌ನಲ್ಲಿ ರಾಷ್ಟ್ರೀಯ ದಾಖಲೆ ನಿರ್ಮಿಸಿದರು. ಗುರುವಾರ ನಡೆದ ಪುರುಷರ 200 ಮೀಟರ್ಸ್ ಬಟರ್‌ಫ್ಲೈ ಸ್ಪರ್ಧೆಯ ಹೀಟ್ಸ್‌ನಲ್ಲಿ ಸಜನ್ 1 ನಿಮಿಷ 52.10ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಒಟ್ಟಾರೆ 10ನೇ ಸ್ಥಾನಕ್ಕೆ ಕುಸಿದ ಅವರು ಫೈನಲ್ ಪ್ರವೇಶಿಸಲು ವಿಫಲರಾದರು.

100 ಮೀ ಬ್ಯಾಕ್‌ಸ್ಟ್ರೋಕ್‌ನಲ್ಲಿ ಶ್ರೀಹರಿ ನಟರಾಜ್ 52.81 ಸೆಕೆಂಡುಗಳ ಸಾಧನೆಯೊಂದಿಗೆ ಹೀಟ್ಸ್‌ನಲ್ಲಿ 28ನೇ ಸ್ಥಾನ ಗಳಿಸಿದರು. ಕುಶಾಗ್ರ ರಾವತ್ 400 ಮೀ ಫ್ರೀಸ್ಟೈಲ್‌ನಲ್ಲಿ 3 ಮೀ 49.04 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.


ಶ್ರೀಹರಿ ನಟರಾಜ್

ರಿಧಿಮಾ ವೀರೇಂದ್ರ ಕುಮಾರ್ ಮಹಿಳೆಯರ 100 ಮೀ ಬ್ಯಾಕ್‌ಸ್ಟ್ರೋಕ್‌ನಲ್ಲಿ 1ನಿ 03.29 ಸೆಕೆಂಡುಗಳಲ್ಲಿ ಗುರಿ ತಲುಪಿ 34ನೇ ಸ್ಥಾನಕ್ಕೆ ಕುಸಿದರು.

ಪ್ರೊ ಕಬಡ್ಡಿ: ಯೋಧಾಗೆ ನಿತೇಶ್ ನಾಯಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೊ ಕಬಡ್ಡಿ ಲೀಗ್‌ನ ಪಾಯಿಂಟ್ ಗಳಿಕೆಯಲ್ಲಿ ಶತಕ ದಾಟಿದ ಮೊದಲ ಡಿಫೆಂಡರ್ ಎಂಬ ಹೆಗ್ಗಳಿಕೆ ಹೊಂದಿರುವ ನಿತೇಶ್ ಕುಮಾರ್ ಅವರು ಲೀಗ್‌ನ ಎಂಟನೇ ಆವೃತ್ತಿಯಲ್ಲೂ ಯು.ಪಿ.ಯೋಧಾ ತಂಡವನ್ನು ಮುನ್ನ-ಡೆಸಲಿದ್ದಾರೆ.

ಜಿ.ಎಂ.ಆರ್ ಗ್ರೂಪ್ ಮಾಲೀಕತ್ವದ ಯು.ಪಿ.ಯೋಧಾ ಫ್ರಾಂಚೈಸ್ ತಂಡದ ನಾಯಕನನ್ನು ಗುರುವಾರ ಆಯ್ಕೆ ಮಾಡಿದೆ. ಕಳೆದ ಬಾರಿ ನಿತೇಶ್ ಅವರು ಮೊದಲ ಬಾರಿ ನಾಯಕನ ಸ್ಥಾನ ವಹಿಸಿ-ಕೊಂಡಿದ್ದರು.



ನಿತೇಶ್ ಕುಮಾರ್

'ಮಾಸ್ಟರ್ ಆಫ್ ಆ್ಯಂಕಲ್ ಹೋಲ್ಡ್' ಎಂದು ಹೆಸರು ಗಳಿಸಿರುವ ನಿತೇಶ್ 67 ಪಂದ್ಯಗಳಲ್ಲಿ ಒಟ್ಟು 224 ಪಾಯಿಂಟ್ ಕಲೆ ಹಾಕಿದ್ದಾರೆ. ಈ ಮೂಲಕ ಪ್ರೊ ಕಬಡ್ಡಿ ಲೀಗ್‌ನ ಅಪರೂಪದ ಆಟಗಾರ ಎನಿಸಿಕೊಂಡಿದ್ದಾರೆ.

'ತಂಡವನ್ನು ಮುನ್ನಡೆಸಲು ಅವಕಾಶ ನೀಡಿರುವುದು ಅತ್ಯಂತ ಖುಷಿ ತಂದಿದೆ. ಇದರಿಂದ ಜವಾಬ್ದಾರಿ ಹೆಚ್ಚಾಗಿದೆ. ತಂಡವು ಈ ವರೆಗೆ ಬಲಿಷ್ಠ ರಕ್ಷಣಾ ವಿಭಾಗಕ್ಕೆ ಹೆಸರುವಾಸಿಯಾಗಿ-ತ್ತು. ಈ ಬಾರಿ ರೈಡಿಂಗ್ ವಿಭಾಗದಲ್ಲೂ ಬಲ ಪಡೆದುಕೊಂಡಿದೆ. ಪ್ರದೀಪ್ ನರ್ವಾಲ್, ಜೇಮ್ಸ್ ಮುಂತಾದವರು ತಂಡದ ಭರವಸೆ ಹೆಚ್ಚಿಸಿದ್ದಾರೆ' ಎಂದು ನಿತೇಶ್ ಹೇಳಿದರು. ಹಾಲಿ ಚಾಂಪಿಯನ್ ಬೆಂಗಾಲ್ ವಾರಿಯರ್ಸ್ ಎದುರಿನ ಪಂದ್ಯದ ಮೂಲಕ ಉದ್ಘಾಟನಾ ದಿನದಂದು ಯು.ಪಿ. ಯೋಧಾ ಈ ಬಾರಿಯ ಅಭಿಯಾನ ಆರಂಭಿಸಲಿದೆ. ಈ ಪಂದ್ಯ ರಾತ್ರಿ 9.30ಕ್ಕೆ ನಡೆಯಲಿದೆ.

ಕೋವಿಡ್‌ನಿಂದಾಗಿ ಎರಡು ವರ್ಷ ನಡೆಯದೇ ಇದ್ದ ಲೀಗ್‌ನ ಎಂಟನೇ ಆವೃತ್ತಿ ಇದೇ 22ರಂದು ಆರಂಭವಾಗಲಿದೆ. ಸುರಕ್ಷತೆಗೆ ಒತ್ತು ನೀಡಿ ಒಂದೇ ಸ್ಥಳದಲ್ಲಿ ಎಲ್ಲ ಪಂದ್ಯಗಳನ್ನು ಆಯೋಜಿಸಲು ನಿರ್ಧ-ರಿಸಲಾಗಿದೆ.ನಗರದ ವೈಟ್‌ಫೀಲ್ಡ್‌ನ ಹೋಟೆಲ್ ಶೆರಟಾನ್‌ನ ಸಭಾಂಗಣದಲ್ಲಿ 'ಮ್ಯಾಟ್' ಸಿದ್ಧಪಡಿಸಲಾಗಿದೆ. ತಂಡಗಳು ಈಗಾಗಲೇ ಇಲ್ಲಿಗೆ ಬಂದಿದ್ದು ಆಟಗಾರರು ಬಯೊಬಬಲ್‌ನಲ್ಲಿದ್ದಾರೆ.

ಪಾಕಿಸ್ತಾನಕ್ಕೆ ಟ್ವೆಂಟಿ20 ಸರಣಿ

ಕರಾಚಿ (ಪಿಟಿಐ): ವಿಕೆಟ್ ಕೀಪರ್ ಮೊಹಮ್ಮದ್ ರಿಜ್ವಾನ್ (87; 45 ಎಸೆತ, 10 ಬೌಂಡರಿ, 3 ಸಿಕ್ಸರ್) ಮತ್ತು ನಾಯಕ ಬಾಬರ್ ಆಜಂ (79; 53 ಎ, 9 ಬೌಂ, 2 ಸಿ) ಮೊದಲ ವಿಕೆಟ್‌ಗೆ ಶತಕದ (158) ಜೊತೆಯಾಟವಾಡಿ ಮಿಂಚಿದರು.

ಅವರ ಅಮೋಘ ಜೊತೆಯಾಟದ ಬಲದಿಂದ ಪಾಕಿಸ್ತಾನ ತಂಡ ವೆಸ್ಟ್ ಇಂಡೀಸ್ ಎದುರಿನ ಮೂರನೇ ಮತ್ತು ಅಂತಿಮ ಟ್ವೆಂಟಿ20 ಕ್ರಿಕೆಟ್ ಟೂರ್ನಿಯಲ್ಲಿ ಏಳು ವಿಕೆಟ್‌ಗಳ ಜಯ ಗಳಿಸಿತು. ಈ ಮೂಲಕ ಮೂರು ಪಂದ್ಯಗಳ ಸರಣಿಯನ್ನು 3–0ಯಿಂದ ತನ್ನದಾಗಿಸಿಕೊಂಡಿತು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ವೆಸ್ಟ್ ಇಂಡೀಸ್ ತಂಡದ ಪರ ಬ್ರೆಂಡನ್ ಕಿಂಗ್ (43; 21ಎ, 7ಬೌಂಡರಿ, 2ಸಿಕ್ಸರ್) ಮತ್ತು ಶಾಮ್ರಾ ಬ್ರೂಕ್ಸ್ (49; 31ಎ, 2ಬೌಂ, 4ಸಿ) ಮೊದಲ ವಿಕೆಟ್ ಜೊತೆಯಾಟದಲ್ಲಿ 66 ರನ್ ಸೇರಿಸಿದರು.

ಈ ಮೊತ್ತವು ಕೇವಲ ಆರು ಓವರ್‌ಗಳಲ್ಲಿ ಸೇರಿದವು. ಕಿಂಗ್ ಔಟಾದ ನಂತರ ಬ್ರೂಕ್ಸ್ ಮತ್ತು ಪೂರನ್ ಎರಡನೇ ವಿಕೆಟ್‌ಗೆ 33 ರನ್ ಸೇರಿಸಿದರು. ನಿಕೊಲಸ್ ಪೂರನ್



ಮೊಹಮ್ಮದ್ ರಿಜ್ವಾನ್ – ಎಎಫ್‌ಪಿ ಚಿತ್ರ

(64; 37ಎಸೆತ, 2 ಬೌಂಡರಿ, 6ಸಿಕ್ಸರ್) ಭರ್ಜರಿ ಅರ್ಧಶತಕ ದಾಖಲಿಸಿದರು.

ಪೂರನ್ ಜೊತೆಗೂಡಿದ ಡರೆನ್ ಬ್ರಾವೊ (ಅಜೇಯ 34) ಕೂಡ ಮಿಂಚಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ ಇವರಿಬ್ಬರು 93 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 20 ಓವರ್‌ಗಳಲ್ಲಿ 3ಕ್ಕೆ 207 (ಬ್ರೆಂಡನ್ ಕಿಂಗ್ 43, ಶಾಮ್ರಾ ಬ್ರೂಕ್ಸ್ 49, ನಿಕೊಲಸ್ ಪೂರನ್ 64, ಡರೆನ್ ಬ್ರಾವೊ ಔಟಾಗದೆ 34, ಮೊಹಮ್ಮದ್ ವಸೀಂ ಜೂನಿಯರ್ 44ಕ್ಕೆ2); **ಪಾಕಿಸ್ತಾನ:** 18.5 ಓವರ್‌ಗಳಲ್ಲಿ 3ಕ್ಕೆ 208 (ಮೊಹಮ್ಮದ್ ರಿಜ್ವಾನ್ 87, ಬಾಬರ್ ಆಜಂ 79, ಫಖ್ರ್ ಜಮಾನ್ 12, ಆಸಿಫ್ ಅಲಿ ಔಟಾಗದೆ 21; ರೊಮಾರಿಯೊ 53ಕ್ಕೆ1, ಡೊಮಿನಿಕ್ 37ಕ್ಕೆ1, ಒಡೀನ್ ಸ್ಮಿತ್ 34ಕ್ಕೆ1). **ಫಲಿತಾಂಶ:** ಪಾಕಿಸ್ತಾನಕ್ಕೆ 7 ವಿಕೆಟ್‌ಗಳ ಜಯ; 3 ಪಂದ್ಯಗಳ ಸರಣಿ 3–0ಯಿಂದ ಕೈವಶ.

ಏಕದಿನ ಸರಣಿ ಮುಂದೂಡಿಕೆ

ವೆಸ್ಟ್ ಇಂಡೀಸ್ ತಂಡದ ಒಂಬತ್ತು ಆಟಗಾರರಲ್ಲಿ ಕೋವಿಡ್ ಸೋಂಕು ಕಾಣಿಸಿಕೊಂಡ ಕಾರಣ ಉಭಯ ತಂಡಗಳ ನಡುವಿನ ಏಕದಿನ ಸರಣಿಯನ್ನು ಮುಂಡೂಡಲಾಗಿದೆ. ಮುಂದಿನ ವರ್ಷದ ಜೂನ್ ತಿಂಗಳಲ್ಲಿ ಸರಣಿ ಆಯೋಜಿಸಲು ನಿರ್ಧರಿಸಲಾಗಿದೆ ಎಂದು ಜಂಟಿ ಪತ್ರಿಕಾ ಹೇಳಿಕೆಯಲ್ಲಿ ಉಭಯ ದೇಶಗಳ ಕ್ರಿಕೆಟ್ ಮಂಡಳಿಗಳು ತಿಳಿಸಿವೆ.
ಪಾಕಿಸ್ತಾನ ಕ್ರಿಕೆಟ್ ಮಂಡಳಿಯು ನಿಯಮಾನುಸಾರ ಕೈಗೊಂಡ ಆರ್‌ಟಿ-ಪಿಸಿಆರ್ ಟೆಸ್ಟ್‌ನಲ್ಲಿ ವಿಕೆಟ್ ಕೀಪರ್ ಶಾಯ್ ಹೋಪ್, ಎಡಗೈ ಸ್ಪಿನ್ನರ್ ಅಕೀಲ್ ಹೊಸೀನ್ ಮತ್ತು ಆಲ್‌ರೌಂಡರ್ ಜಸ್ಟಿನ್ ಗ್ರೀವ್ಸ್, ಸಹಾಯಕ ಕೋಚ್ ರಾಡಿ ಎಸ್ಟವಿಕ್ ಮತ್ತು ಫಿಸಿಷಿಯನ್ ಅಕ್ಷಯ್ ಮಾನಸಿಂಗ್ ಅವರಿಗೆ ಕೋವಿಡ್ ಇರುವುದು ಖಚಿತವಾಗಿದೆ ಎಂದು ಸಂಜೆ ವೇಳೆ ತಿಳಿಸಲಾಗಿತ್ತು. ಇನ್ನಷ್ಟು ಆಟಗಾರರಿಗೆ ಕೋವಿಡ್ ಇರುವುದು ರಾತ್ರಿ ಖಚಿತವಾಗಿದೆ.

'ಸೋಂಕಿಗೊಳಗಾದವರನ್ನು ಪ್ರತ್ಯೇಕವಾಸಕ್ಕೆ ಒಳಪಡಿಸಲಾಗಿದೆ. ಹತ್ತು ದಿನ ಚಿಕಿತ್ಸೆ ನಡೆಯಲಿದ್ದು, ನೆಗೆಟಿವ್ ವರದಿ ಬಂದ ಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಕ್ರಿಕೆಟ್ ವೆಸ್ಟ್ ಇಂಡೀಸ್ ತಿಳಿಸಿದೆ.